ಗುರುವಾರ, ಜನವರಿ 18, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 18 | ಪುಟ 14

• www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ನಾಲ್ಕು ದಶಕಗಳ ನಂತರ ಹಾರುವ ಅಳಿಲು ಅರುಣಾಚಲ ಪ್ರದೇಶದಲ್ಲಿ ಮತ್ತೆ ಪತ್ತೆಯಾಗಿದ್ದು, ಪರಿಸರಪ್ರಿಯರಲ್ಲಿ ಸಂಭ್ರಮ ಮೂಡಿಸಿದೆ.

ಆಳ-ಅಗಲ
ನವೋದ್ಯಮಗಳ ಸ್ಥಿತಿಗತಿ ಏನು, ಎತ್ತ...

ಮುಖ್ಯಮಂತ್ರಿ ಪುತ್ರನ ಸ್ಪರ್ಧೆ ಚರ್ಚೆ ಬಿರುಸು 8

ಕೇರಳ: ಹಲವು ಯೋಜನೆಗಳಿಗೆ ಚಾಲನೆ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,500	21,571	₹64,230 (ಬೆಂಗಳೂರು)	₹73,200 (ಬೆಂಗಳೂರು)	83.14

Government of India

cbc 22201/13/0169/2324

ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿ

ನಮ್ಮ ಸಂಕಲ್ಪ
ವಿಕಸಿತ ಭಾರತ

ಮೋದಿ ಸರ್ಕಾರದ ಗ್ಯಾರಂಟಿ

ಹೈನುಗಾರಿಕೆ ಕ್ಷೇತ್ರಕ್ಕೆ ಅಭೂತಪೂರ್ವ ಉತ್ತೇಜನ

ಭಾರತವು ವಿಶ್ವದಲ್ಲೇ ಅತಿ ದೊಡ್ಡ ಹಾಲು ಉತ್ಪಾದಕ ರಾಷ್ಟ್ರವಾಗಿದೆ, ಕಳೆದ 10 ವರ್ಷಗಳಲ್ಲಿ ಹಾಲಿನ ಉತ್ಪಾದನೆಯಲ್ಲಿ ದಾಖಲೆಯ ಶೇ. 58 ರಷ್ಟು ಹೆಚ್ಚಳ; 8 ಕೋಟಿ ಪಶುಪಾಲನಾ ಕುಟುಂಬಗಳ ಕಲ್ಯಾಣ ಖಾತ್ರಿಯಾಗಿದೆ

ಸಂವಿಧಾನಕ್ಕೆ ತಿದ್ದುಪಡಿ ತರುವಂತೆ ಶಿಫಾರಸಿಗೆ ಮುಂದು • ಚುನಾವಣೆ ಹೊತ್ತಿಗೆ ಕಾಂಗ್ರೆಸ್ ಹೆಜ್ಜೆ?

ಒಳಮೀಸಲು: ಕೇಂದ್ರದ ಹೆಗಲಿಗೆ?

• ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ವಿವಿಧ ಸಮುದಾಯಗಳಿಗೆ ಒಳ ಮೀಸಲಾತಿಯನ್ನು ಕಲ್ಪಿಸಲು ಸಂವಿಧಾನಕ್ಕೆ ತಿದ್ದುಪಡಿ ತರುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ. ಗುರುವಾರ ನಡೆಯುವ ಸಂಪುಟ ಸಭೆಯಲ್ಲಿ ಈ ಪ್ರಸ್ತಾವ ಚರ್ಚೆಗೆ ಬರಲಿದೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ರಚಿಸಲಾಗಿದ್ದ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸಬೇಕೆಂದು ಮಾದಿಗ (ಪರಿಶಿಷ್ಟ ಎಡಗೈ) ಸಮುದಾಯದ ಸಚಿವರು, ಮುಖಂಡರು ಪಟ್ಟು ಹಿಡಿದಿದ್ದಾರೆ. ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಒಳ ಮೀಸಲಾತಿ ಜಾರಿ ಮಾಡಲಾಗುವುದು ಎಂದು ಪಕ್ಷದ ನಾಯಕರು ಭರವಸೆ ನೀಡಿದ್ದರು. ಲೋಕಸಭೆ ಚುನಾವಣೆಯಲ್ಲಿ ಇದು ಪ್ರಮುಖ ವಿಷಯವಾಗುವ ಸಂಭವ ಇದೆ. ಈ ಹಿನ್ನೆಲೆಯೊಳಗೆ, ಒಳ ಮೀಸಲಾತಿ ವಿಷಯವನ್ನು ಕೇಂದ್ರದ ಹೆಗಲಿಗೆ ಹೊರಿಸುವ ದಾಳ ಉರುಳಿಸುವತ್ತ ಕಾಂಗ್ರೆಸ್ ಸರ್ಕಾರ ಹೆಜ್ಜೆ ಇಟ್ಟಿದೆ.

ಸಂವಿಧಾನದ 341ನೇ ವಿಧಿಗೆ ಮೂರನೇ ಖಂಡವನ್ನು ಸೇರಿಸುವ ಮೂಲಕ ಪರಿಶಿಷ್ಟರಲ್ಲಿ ಒಳ ಮೀಸಲು ಅನುಷ್ಠಾನಕ್ಕೆ ತರುವಂತೆ ಶಿಫಾರಸು ಮಾಡುವ ಪ್ರಸ್ತಾವವನ್ನು ಸಮಾಜ ಕಲ್ಯಾಣ ಇಲಾಖೆ ಸಿದ್ಧಪಡಿಸಿದೆ.

ಒಳ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರಗಳಿಗೆ ಯಾವುದೇ ಅಧಿಕಾರ ಇಲ್ಲ. ಕೇಂದ್ರ ಸರ್ಕಾರವು ಸಂವಿಧಾನದ 341ನೇ ವಿಧಿಗೆ ಹೊಸತಾಗಿ ಖಂಡ (3) ಅನ್ನು ಸೇರಿಸಿದರೆ ಮಾತ್ರ ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸಲು ಅವಕಾಶವಿದೆ. ಒಳ ಮೀಸಲಾತಿ ಕೇಂದ್ರದ ಅಧಿಕಾರ ವ್ಯಾಪ್ತಿಯಲ್ಲಿದೆ ಎಂದು ಪ್ರತಿಪಾದಿಸಲು ರಾಜ್ಯ ಸರ್ಕಾರ ಮುಂದಾಗಿದೆ.

6.10 ಕೋಟಿ	1.05 ಕೋಟಿ	101
ರಾಜ್ಯದ ಒಟ್ಟು ಜನಸಂಖ್ಯೆ	ಪರಿಶಿಷ್ಟ ಜಾತಿಗಳ ಜನಸಂಖ್ಯೆ (17.15%)	ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಜಾತಿಗಳು

341(3) ಖಂಡ ಏನು?

ಪರಿಶಿಷ್ಟ ಜಾತಿಗಳಲ್ಲಿ ವರ್ಗೀಕರಣದ ಬಗ್ಗೆ ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಉಷಾ ಮೆಹ್ರಾ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರ ರಚಿಸಿದ ರಾಷ್ಟ್ರೀಯ ಆಯೋಗವು ಸಂವಿಧಾನದ ಅನುಚ್ಛೇದ 341ರಲ್ಲಿ ಹೊಸತಾಗಿ ಖಂಡ (3)ನ್ನು ಸೇರಿಸುವ ಕುರಿತಂತೆ ಶಿಫಾರಸು ಮಾಡಿದೆ. ಅದನ್ನು ಯಥಾವತ್ ಸೇರಿಸುವಂತೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡಲು ಮುಂದಾಗಿದೆ. 341(1)ನೇ ಖಂಡದಲ್ಲಿ ಅಧಿಸೂಚಿಸಲಾದ ಅಥವಾ 341(2)ನೇ ಖಂಡದ ಪ್ರಕಾರ ಸಂಸತ್ತು ರೂಪಿಸಿದ ಪಟ್ಟಿಯಲ್ಲಿರುವ ಯಾವುದೇ ಜಾತಿ, ಜನಾಂಗ ಅಥವಾ ಬುಡಕಟ್ಟು ಅಥವಾ ಜನರ ಗುಂಪುಗಳಿಗೆ ಸಂಬಂಧಿಸಿದಂತೆ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಂದ ನೀಡಿದ ಶಿಫಾರಸಿನ ಆಧಾರದಲ್ಲಿ ಕೇಂದ್ರ ಸರ್ಕಾರವು ಉಪ ವರ್ಗೀಕರಣವನ್ನು ಮಾಡಬಹುದು ಅಥವಾ ಉಪ ವರ್ಗೀಕರಣವನ್ನು ತೆಗೆದುಹಾಕಲು 341(3) ಖಂಡವು ಅವಕಾಶ ಕಲ್ಪಿಸುತ್ತದೆ.

‘ಸದಾಶಿವ ಆಯೋಗದ ವರದಿ ಮುಕ್ತಾಯ’

‘ಸಚಿವ ಸಂಪುಟ ಉಪ ಸಮಿತಿಯು ಪರಿಶಿಷ್ಟ ಜಾತಿಗಳನ್ನು 4 ಉಪ ಗುಂಪುಗಳಾಗಿ ವರ್ಗೀಕರಿಸಿ ಶೇಕಡವಾರು ಮೀಸಲಾತಿ ನಿಗದಿಪಡಿಸಿದೆ. ಅದಕ್ಕೆ ಅನುಮೋದನೆ ನೀಡಿದೆ. ಹೀಗಾಗಿ, ಇನ್ನು ಮುಂದೆ ಎ.ಜೆ. ಸದಾಶಿವ ಆಯೋಗದ ವರದಿಯು ಅಪ್ರಸ್ತುತ. ಆ ಮೂಲಕ, ಈ ವರದಿಯು ಮುಕ್ತಾಯಗೊಂಡಿದೆ’ ಎಂದೂ ಬೊಮ್ಮಾಯಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಮಾರ್ಚ್ 24ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಸಚಿವ ಸಂಪುಟ ಸಭೆ ನೀಡಿದ್ದ ಅನುಮೋದನೆಯಂತೆ ಸಮಾಜ ಕಲ್ಯಾಣ ಇಲಾಖೆಯು 2023ರ ಮಾರ್ಚ್ 27ರಂದು ‘ಎ.ಜೆ. ಸದಾಶಿವ ಆಯೋಗದ ಶಿಫಾರಸುಗಳು ಇನ್ನು ಮುಂದೆ ಅಪ್ರಸ್ತುತ. ಹೀಗಾಗಿ, ಈ ವರದಿಯನ್ನು ಮುಕ್ತಾಯಗೊಳಿಸಲಾಗಿದೆ’ ಎಂದು ಆದೇಶವನ್ನೂ ಹೊರಡಿಸಿತ್ತು.

‘ಪರಿಶಿಷ್ಟ ಜಾತಿಗಳಿಗೆ ಸಂವಿಧಾನದ ವಿಧಿ 15 ಮತ್ತು 16ರಂತೆ ಮೀಸಲಾತಿ ಮತ್ತು ಇತರ ಸೌಲಭ್ಯ ನೀಡಲಾಗಿದೆ. ಈ ಪಟ್ಟಿಯಲ್ಲಿರುವ ಎಲ್ಲರಿಗೂ ಮೀಸಲಾತಿ ಮತ್ತು ಸೌಲಭ್ಯಗಳಲ್ಲಿ ಸಮಾನ ಅವಕಾಶ ಕಲ್ಪಿಸಲು ಜನಸಂಖ್ಯೆ ಆಧಾರದಲ್ಲಿ ವರ್ಗೀಕರಣ ಮಾಡುವುದು ಸೂಕ್ತ. ಆದ್ದರಿಂದ, ಸಂವಿಧಾನದ ವಿಧಿ 341ಕ್ಕೆ ಹೊಸತಾಗಿ ಖಂಡ 3 ಅನ್ನು ಸೇರ್ಪಡೆ ಮಾಡಬೇಕಿದೆ’ ಎಂದು ಪ್ರಸ್ತಾವದಲ್ಲಿ ಸಮರ್ಥನೆಯನ್ನು ನೀಡಲಾಗಿದೆ.

ಬೊಮ್ಮಾಯಿ ಸರ್ಕಾರದ ತೀರ್ಮಾನ: ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಒಳ ಮೀಸಲಾತಿ ಕುರಿತು ಪರಿಶೀಲಿಸಿ ಶಿಫಾರಸು ಮಾಡಲು ಅಂದಿನ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಿತ್ತು. ಒಳ ಮೀಸಲಾತಿ ಕಲ್ಪಿಸುವ ಪ್ರಕ್ರಿಯೆಯು ಪರಿಶೀಲನೆಯಲ್ಲಿರುವಾಗಲೇ, 2022ರಲ್ಲಿ ‘ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಕಾಯ್ದೆ ರೂಪಿಸಿದ ಸರ್ಕಾರ, ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 15ರಿಂದ ಶೇ 17ಕ್ಕೆ ಹೆಚ್ಚಿಸಿತು.

8ನೇ ಪುಟ ನೋಡಿ

ಆಹಾರದ ಸೂರೆ ಉಡುಪಿಯ ಕೃಷ್ಣಾಪುರ ಮಠದ ಪರ್ಯಾಯದ ಕೊನೆಯ ದಿನವಾದ ಬುಧವಾರ ಮಠದ ಸಂಪ್ರದಾಯದಂತೆ ಪಾಕಶಾಲೆಯಲ್ಲಿ ಉಳಿಕೆಯಾದ ಆಹಾರ ಪದಾರ್ಥಗಳನ್ನು ಭಕ್ತರು ಸೂರೆ ಮಾಡಲು ಅವಕಾಶ ನೀಡಲಾಗಿತ್ತು. ಆಗ ಮುಗಿಬಿದ್ದಿದ್ದ ಭಕ್ತರ ದಂಡು ಪ್ರಜಾವಾಣಿ ಚಿತ್ರ

ಲಾರಿ ಮುಷ್ಕರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಮೈಸೂರು: ‘ಅಪಘಾತ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಚಾಲಕರಿಗೆ ಮಾರಕವಾಗುವ ರೀತಿಯಲ್ಲಿ ಕಾಯ್ದೆಗೆ ತಂದಿರುವ ತಿದ್ದುಪಡಿಯನ್ನು ಹಿಂಪಡೆಯಬೇಕು’ ಎಂದು ಆಗ್ರಹಿಸಿ ಬುಧವಾರ ಮಧ್ಯರಾತ್ರಿಯಿಂದ ಲಾರಿ ಮುಷ್ಕರ ಆರಂಭಗೊಂಡಿದೆ. ಆದರೆ, ಈ ಮುಷ್ಕರದ ಕರೆಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಫೆಡರೇಷನ್ ಆಫ್ ಕರ್ನಾಟಕ ಲಾರಿ ಓನರ್ಸ್ ಅಸೋಸಿಯೇಶನ್ ಮುಷ್ಕರ ಆರಂಭಿಸಿದ್ದರೆ, ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಆ್ಯಂಡ್ ಏಜೆಂಟ್ಸ್ ಅಸೋಸಿಯೇಷನ್ ಮುಷ್ಕರದಿಂದ ಹೊರಗುಳಿದಿದೆ.

‘ಭಾರತೀಯ ನ್ಯಾಯಸಂಹಿತೆಯ ಕಲಂ 106ರ ಉಪವಿಧಿ 1 ಮತ್ತು 2 ತಿದ್ದುಪಡಿಯು ಸರಕು ಸಾಗಾಟದ ವಾಹನಗಳಿಗೆ ಚಾಲಕರು ಬರಲು ಹಿಂಜರಿಯುವಂತೆ ಮಾಡಿದೆ. ಯಾರೂ ಅಪಘಾತವನ್ನು ಬೇಕಂತಲೇ ಮಾಡುವುದಿಲ್ಲ. ಸಣ್ಣ ವಾಹನಗಳು ಬಂದು ಲಾರಿಗೆ ಡಿಕ್ಕಿ ಹೊಡೆದರೂ ಲಾರಿ ಚಾಲಕನ ಮೇಲೆಯೇ ಪ್ರಕರಣ ದಾಖಲಾಗುತ್ತದೆ.

9ನೇ ಪುಟ ನೋಡಿ

‘ಮುಷ್ಕರಕ್ಕೆ ಬೆಂಬಲವಿಲ್ಲ’

‘ಅಪಘಾತ ನಡೆಸಿ ಪರಾರಿ ಪ್ರಕರಣಗಳಿಗೆ ಸಂಬಂಧಿಸಿದ ರಸ್ತೆ ಸಂಚಾರ ಕಾನೂನು ತಿದ್ದುಪಡಿಯನ್ನು ಕಾರ್ಯಗತಗೊಳಿಸುವುದಿಲ್ಲ ಎಂದು ಕೇಂದ್ರ ಸರ್ಕಾರ ಲಿಖಿತ ಭರವಸೆ ನೀಡಿದೆ. ಆದ್ದರಿಂದ ಚಾಲಕರು ಆತಂಕಕ್ಕೆ ಒಳಗಾಗಬೇಕಿಲ್ಲ. ಚಾಲಕರನ್ನು ತಪ್ಪು ದಾರಿಗೆ ಎಳೆಯಲು ಹಮ್ಮಿಕೊಂಡಿರುವ ಮುಷ್ಕರ ಅವೈಜ್ಞಾನಿಕವಾಗಿದೆ. ಈ ಮುಷ್ಕರಕ್ಕೆ ನಮ್ಮ ಬೆಂಬಲವಿಲ್ಲ’ ಎಂದು ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಆ್ಯಂಡ್ ಏಜೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷ ಜಿ.ಆರ್. ಷಣ್ಮುಗಪ್ಪ ತಿಳಿಸಿದ್ದಾರೆ.

ಆಲ್ ಇಂಡಿಯಾ ಮೋಟಾರ್ ಟ್ರಾನ್ಸ್‌ಪೋರ್ಟ್ ಕಾಂಗ್ರೆಸ್ (ಎಐಎಂಟಿಸಿ) ತಂಡವು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಸಿದೆ. ಗೃಹ ಸಚಿವಾಲಯದ ಕಾರ್ಯದರ್ಶಿ ಅವರ ನೇತೃತ್ವದಲ್ಲಿ ಸಭೆಯನ್ನೂ ನಡೆಸ ಲಾಗಿದ್ದು, ನಿಬಂಧನೆಗಳನ್ನು ವಿಧಿಸುವುದಿಲ್ಲವೆಂದು ಅವರು ಲಿಖಿತ ಭರವಸೆ ನೀಡಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಕಾರಂತ ಬಡಾವಣೆ 25ರಿಂದ ನಿವೇಶನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಡಾ. ಶಿವರಾಮ ಕಾರಂತ ಬಡಾವಣೆಯಲ್ಲಿ 10 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ನಾಗರಿಕರಿಗೆ ಹಂಚಿಕೆ ಮಾಡಲು ಜ.25ರಿಂದ ಅರ್ಜಿ ಆಹ್ವಾನಿಸಲಾಗುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. 3B

ವಿಮಾನದ ಶೌಚಾಲಯದಲ್ಲೇ ಪ್ರಯಾಣ!

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಮುಂಬೈನಿಂದ ಹೊರಟಿದ್ದ ವಿಮಾನದ ಶೌಚಾಲಯ ಬಾಗಿಲು ತೆರೆಯಲು ಸಾಧ್ಯವಾಗದ ಕಾರಣ ಪ್ರಯಾಣಿಕ ರೊಬ್ಬರು ಬೆಂಗಳೂರಿ ನವರೆಗೆ ಒಂದೂವರೆ ತಾಸು ಶೌಚಾಲಯದಲ್ಲಿಯೇ ಕುಳಿತು ಪ್ರಯಾಣ ಮಾಡಿದ್ದಾರೆ. 3

₹22,000 ಕೋಟಿ ಹೂಡಿಕೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗತ್ತಿನ ಪ್ರಮುಖ ಕಂಪನಿಗಳು ಕರ್ನಾಟಕದಲ್ಲಿ ₹22 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಲು ಮುಂದೆ ಬಂದಿವೆ.

ಸ್ವಿಟ್ಜರ್ಲೆಂಡ್‌ನ ದಾವೋಸ್ ನಗರದಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಸಮಾವೇಶದಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ನೇತೃತ್ವದ ಕರ್ನಾಟಕದ ನಿಯೋಗ ಪಾಲ್ಗೊಂಡಿದೆ. ಹಲವಾರು ಕಂಪನಿಗಳ ಮುಖ್ಯಸ್ಥರ ಜತೆ ಸಭೆ ನಡೆಸಿದ ನಿಯೋಗವು, ಬಂಡವಾಳ ಹೂಡಿಕೆಗೆ ಸಂಬಂಧಿಸಿದ ಹಲವು ಒಪ್ಪಂದಗಳಿಗೂ ಸಹಿ ಹಾಕಿದೆ.

ವೆಬ್‌ವರ್ಕ್ಸ್ ಕಂಪನಿಯು ಬೆಂಗಳೂರಿನಲ್ಲಿ ಸ್ಥಾಪಿಸಲಿರುವ 100 ಮೆಗಾವಾಟ್ ಸಾಮರ್ಥ್ಯದ ಡೇಟಾ ಸೆಂಟರ್ ಪಾರ್ಕ್‌ಗೆ ₹20 ಸಾವಿರ ಕೋಟಿ ಬಂಡವಾಳ ಹೂಡಲಿದೆ. ಮೈಕ್ರೋಸಾಫ್ಟ್, ಹಿಟಾಚಿ, ಲುಲು ಗ್ರೂಪ್, ಹ್ಯೂಲೆಟ್ ಪೆಕಾರ್ಡ್ (ಎಚ್‌.ಪಿ), ಹನಿವೆಲ್, ಐನಾಕ್ಸ್, ವೋಲ್ವೊ, ನೆಸ್ಲೆ, ಕಾಯಿನ್ ಬೇಸ್, ಟಕೇಡಾ ಫಾರ್ಮಾ, ಬಿ.ಎಲ್. ಆಗ್ರೋ ಕಂಪನಿಗಳು ₹2,000 ಕೋಟಿ ಹೂಡಿಕೆ ಮಾಡಲಿವೆ.

ಮೈಕ್ರೋಸಾಫ್ಟ್ ಕಂಪನಿ ಕೌಶಲಾಭಿವೃದ್ಧಿ ಮತ್ತು ಸುಗಮ ಆಡಳಿತ ಉಪಕ್ರಮಗಳ ತರಬೇತಿ ಕೊಡಲಿದೆ. ಹಿಟಾಚಿ ಕಂಪನಿ ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಆರೋಗ್ಯ ಸೇವೆ, ಶಿಕ್ಷಣ ಮತ್ತು ಇ-ಗವರ್ನೆನ್ಸ್ ಕ್ಷೇತ್ರಗಳಲ್ಲಿ ಬಂಡವಾಳ ತೊಡಗಿಸಲಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಹನಿವೆಲ್ ಕಂಪನಿಯು ಐಒಟಿ (ಇಂಟರ್ನೆಟ್ ಆಫ್ ಥಿಂಗ್ಸ್) ಮೂಲಕ ಸಂಚಾರ ನಿರ್ವಹಣೆ, ತ್ಯಾಜ್ಯ ನಿರ್ವಹಣೆ ನಿಭಾಯಿಸಲಿದೆ. ಟಕೇಡಾ ಫಾರ್ಮಾ ಬೆಂಗಳೂರಿನಲ್ಲಿ ಗ್ಲೋಬಲ್ ಕೆಪಾಸಿಟಿ ಸೆಂಟರ್ ತೆರೆಯಲಿದೆ ಎಂದು ಸಚಿವ ಪಾಟೀಲ ತಿಳಿಸಿದ್ದಾರೆ.

‘ವೆಬ್‌ವರ್ಕ್ಸ್ ಸಂಸ್ಥಾಪಕ ನಿಖಿಲ್ ರತಿ, ಐನಾಕ್ಸ್ ಕಂಪನಿಯ ಸಿದ್ಧಾರ್ಥ ಜೈನ್, ಹನಿವೆಲ್ ಕಂಪನಿಯ ಮುಖ್ಯಸ್ಥ ಅನಂತ್ ಮಹೇಶ್ವರಿ, ಲುಲು ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಯೂಸುಫ್ ಅಲಿ ಜತೆ ಮಾತುಕತೆ ನಡೆಸಲಾಗಿದೆ. ಹೂಡಿಕೆಯಿಂದಾಗಿ ಉತ್ತರ ಕರ್ನಾಟಕದ ವಿಜಯಪುರ, ಕಲಬುರಗಿ ಸೇರಿದಂತೆ ಹಲವು ಭಾಗಗಳು ಮುಂಚೂಣಿಗೆ ಬರಲಿವೆ’ ಎಂದು ಅವರು ವಿವರಿಸಿದ್ದಾರೆ.

ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಐಟಿಬಿಟಿ ಇಲಾಖೆ ಕಾರ್ಯದರ್ಶಿ ಏಕ್‌ರೂಪ್ ಕೌರ್ ಕೆಐಎಡಿಬಿ ಸಿಇಒ ಡಾ.ಮಹೇಶ್ ನಿಯೋಗದಲ್ಲಿದ್ದಾರೆ.

ಲುಲುನಿಂದ ₹300 ಕೋಟಿ ಹೂಡಿಕೆ

ಲುಲು ಸಮೂಹವು ಹಣ್ಣು ಮತ್ತು ತರಕಾರಿ ಸಂಸ್ಕರಣೆ ಕ್ಷೇತ್ರದಲ್ಲಿ ಹೂಡಿಕೆ ಮಾಡಲಿದ್ದು, ವಿಜಯಪುರ ಜಿಲ್ಲೆಯಲ್ಲಿ ₹300 ಕೋಟಿ ವೆಚ್ಚದಲ್ಲಿ ಆಹಾರ ಸಂಸ್ಕರಣಾ ಘಟಕ ತೆರೆಯಲಿದೆ. ಈ ಕುರಿತು ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ಮತ್ತು ಲುಲು ಕಂಪನಿ ವ್ಯವಸ್ಥಾಪಕ ನಿರ್ದೇಶಕ ಯೂಸುಫ್ ಅಲಿ ಅವರು ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ಲುಲು ಗ್ರೂಪ್ ಸದ್ಯಕ್ಕೆ ಪ್ರತಿ ತಿಂಗಳು 250 ಟನ್ನುಗಳಷ್ಟು ಸೀಬೆಹಣ್ಣು, ಸಪೋಟ, ಹಸಿ ಮೆಣಸಿನಕಾಯಿ, ಬೆಂಡೆಕಾಯಿ, ಬದನೆಕಾಯಿ ಖರೀದಿಸುತ್ತಿದೆ. ವಿಜಯಪುರದಲ್ಲಿ ಜೋಳ, ದ್ರಾಕ್ಷಿ, ಹತ್ತಿ, ಕುಸುಬೆ, ಎಳ್ಳು, ಲಿಂಬೆ ಇತ್ಯಾದಿಗಳ ಕಣಜವಾಗಿದೆ. ಲುಲು ಹೂಡಿಕೆಯಿಂದ ಸ್ಥಳೀಯ ರೈತರಿಗೆ ಅನುಕೂಲ ಆಗಲಿದೆ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ. ಉತ್ತರ ಪ್ರದೇಶ ಮೂಲದ ಬಿಎಲ್ ಗ್ರೂಪ್ ಕಂಪನಿಯೂ ಆಹಾರ ಸಂಸ್ಕರಣ ಘಟಕ ತೆರೆಯಲು ವಿಜಯಪುರವನ್ನು ಆಯ್ಕೆ ಮಾಡಿಕೊಂಡಿದೆ. ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದು ತಿಳಿಸಿದ್ದಾರೆ.

ದಾವೋಸ್ ಆರ್ಥಿಕ ಸಮಾವೇಶ

ಮಾ. 1ರಿಂದ ಪಿಯುಸಿ, 25ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಗಳ ಅಂತಿಮ ವೇಳಾಪಟ್ಟಿ ಪ್ರಕಟವಾಗಿದ್ದು, ಮಾರ್ಚ್ 1ರಿಂದ ಪಿಯುಸಿ, ಮಾರ್ಚ್ 25ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಆರಂಭವಾಗಲಿವೆ.

ದ್ವಿತೀಯ ಪಿಯುಸಿ ಪರೀಕ್ಷಾ ವೇಳಾಪಟ್ಟಿ: ಮಾರ್ಚ್ 1–ಕನ್ನಡ, ಅರೇಬಿಕ್, 4–ಗಣಿತ, ಶಿಕ್ಷಣಶಾಸ್ತ್ರ, 5–ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, 6–ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೊಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಆ್ಯಂಡ್ ವೆಲ್‌ನೆಸ್, 7–ಇತಿಹಾಸ, ಭೌತಶಾಸ್ತ್ರ, ಸಮಾಜಶಾಸ್ತ್ರ, 9–ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭಶಾಸ್ತ್ರ, ಗೃಹವಿಜ್ಞಾನ, 11–ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ, 13–ಇಂಗ್ಲಿಷ್, 15–ಹಿಂದೂಸ್ತಾನಿ ಸಂಗೀತ, ಮನಃಶಾಸ್ತ್ರ, ರಸಾಯನವಿಜ್ಞಾನ, ಮೂಲಗಣಿತ, 16–ಅರ್ಥಶಾಸ್ತ್ರ, 18– ಭೂಗೋಳಶಾಸ್ತ್ರ, ಜೀವಶಾಸ್ತ್ರ, 20–ಸಮಾಜಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕ ವಿಜ್ಞಾನ, 21–ತೆಲುಗು, ತಮಿಳು, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಲೆಯಾಳಂ, 22–ಹಿಂದಿ

ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ: ಮಾರ್ಚ್ 25–ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ, 27–ಸಮಾಜ ವಿಜ್ಞಾನ, 30–ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, ಏಪ್ರಿಲ್–2 ಗಣಿತ, 3–ಅರ್ಥಶಾಸ್ತ್ರ, ಎಂಜಿನಿಯರಿಂಗ್ ವಿಷಯಗಳು, 4–ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಎನ್‌ಎಸ್‌ಕ್ಯೂಎಫ್ ವಿಷಯಗಳು, 6–ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ.

ಮಾಹಿತಿಗೆ http://kseab.karnataka.gov.in ವೀಕ್ಷಿಸಬಹುದು.

ಒಳ ಪುಟಗಳು

ಸರಯೂ ತೀರದಿಂದ ರಾಮಮಂದಿರಕ್ಕೆ ಕಳಶಯಾತ್ರೆ 9

ಇಂಡಿಗೋ, ಎಂಐಎಎಲ್‌ಗೆ ₹1.80 ಕೋಟಿ ದಂಡ 10

ಚಿನಕುರಳಿ

ಪ್ರಕಾಶ್ ಶೆಟ್ಟಿ

‘ಹೆಚ್ಚು ಸ್ಥಾನ ಗೆದ್ದರೆ 5 ವರ್ಷ ಸಿದ್ದರಾಮಯ್ಯ ಮುಖ್ಯಮಂತ್ರಿ’

ಪ್ರಜಾವಾಣಿ ವಾರ್ತೆ

ಯತೀಂದ್ರ

ಹಾಸನ: ‘ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಗೆದ್ದರೆ ಐದು ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿರುತ್ತಾರೆ’ ಎಂದು ಅವರ ಪುತ್ರ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಹೊಳೆನರಸೀಪುರ ತಾಲ್ಲೂಕಿನ ಅಣ್ಣೇಚಾಕನಹಳ್ಳಿಯಲ್ಲಿ ಮಂಗಳವಾರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಉದ್ಘಾಟನೆ ವೇಳೆ ಮಾತನಾಡಿದ ಅವರು, ‘ಲೋಕಸಭೆ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆದ್ದರೆ ಯಾವುದೇ ಅಡೆತಡೆ ಇಲ್ಲದೇ ಮುಖ್ಯಮಂತ್ರಿಯಾಗಿ ಮುಂದುವರಿಯಲು ಸಾಧ್ಯವಾಗುತ್ತದೆ. ನಿಮ್ಮ ಆಶೀರ್ವಾದ ಅವರ ಮೇಲಿರಲಿ’ ಎಂದ ಮನವಿ ಮಾಡಿದರು.

‘ಸಿದ್ದರಾಮಯ್ಯ ಅವರು ಐದೂ ಗ್ಯಾರಂಟಿ ಜಾರಿ ಮಾಡಿದ್ದಾರೆ. ಬಡವರು, ಶೋಷಿತರ ಪರ ಕೆಲಸ ಮಾಡುವ ಹಂಬಲ ಅವರಿಗಿದೆ. ಮುಂದಿನ ಐದು ವರ್ಷ ಗ್ಯಾರಂಟಿ ಯೋಜನೆ ಮುಂದುವರಿಸುತ್ತಾರೆ’ ಎಂದು ಹೇಳಿದರು.

ನಾನು ಪೂರ್ಣಾವಧಿ ಮುಖ್ಯಮಂತ್ರಿ ಆಗಿರುತ್ತೇನೋ ಇಲ್ಲವೋ ಎಂಬುದನ್ನು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸುತ್ತದೆ. ನಾನು ಅಥವಾ ನನ್ನ ಮಗ ತೀರ್ಮಾನಿಸಲು ಆಗದು

ಸಿದ್ದರಾಮಯ್ಯ, ಮುಖ್ಯಮಂತ್ರಿ

‘ಯತೀಂದ್ರ ಜವಾಬ್ದಾರಿಯುತ ನಾಯಕ’

ಡಿ.ಕೆ. ಶಿವಕುಮಾರ್

ಬೆಂಗಳೂರು: ‘ಯತೀಂದ್ರ ಅವರು ಜವಾಬ್ದಾರಿಯುತ ನಾಯಕ. ತಮಗೆ ಶಕ್ತಿ ನೀಡುವಂತೆ ಜನರನ್ನು ಕೇಳುವುದು ಸ್ವಾಭಾವಿಕ. ಅವರ ಹೇಳಿಕೆ ತಿರುಚುವ ಅಗತ್ಯವಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಗೆದ್ದರೆ ಐದು ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ’ ಎಂಬ ಯತೀಂದ್ರ ಅವರ ಹೇಳಿಕೆ ಬಗ್ಗೆ ಸುದ್ದಿಗಾರರ ಕೇಳಿದಾಗ ಪ್ರತಿಕ್ರಿಯಿಸಿದ ಅವರು, ‘ಆಸೆ ಪಡುವುದು, ಜನರಿಗೆ ಶಕ್ತಿ ನೀಡುವಂತೆ ಕೇಳುವುದು ತಪ್ಪಲ್ಲ’ ಎಂದರು.

‘ನಮ್ಮ ಸರ್ಕಾರ ಐದು ವರ್ಷ ಬಲಿಷ್ಠವಾಗಿರುತ್ತದೆ. ಸಿದ್ದರಾಮಯ್ಯ ಅವರು ಈಗ ನಮ್ಮ ಮುಖ್ಯಮಂತ್ರಿ’ ಎಂದರು.

‘ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ, ಕಾಂಗ್ರೆಸ್ ಪಕ್ಷದ ರಾಜ್ಯ ಅಧ್ಯಕ್ಷನಾಗಿ ನಾನು ಸೇರಿ ಚುನಾವಣೆ ನಡೆಸುತ್ತೇವೆ. ಸಿದ್ದರಾಮಯ್ಯ ಅವರ ನಾಯಕತ್ವದಲ್ಲಿ ಚುನಾವಣೆ ನಡೆಯಲಿದೆ. ನಮ್ಮ ಭಾಗದಲ್ಲಿ ನಾನು ಕೂಡ ಶಕ್ತಿ ನೀಡುವಂತೆ ಜನರ ಬಳಿ ಕೇಳುತ್ತೇನೆ’ ಎಂದರು. ‘ಶಿವಕುಮಾರ್ ಅವರಿಗೆ ಅಧಿಕಾರ ಸಿಗಬಾರದು ಎಂಬ ಅಧಿಕಾರ ಹಂಚಿಕೆ ಸೂತ್ರ ಕಾಂಗ್ರೆಸ್‌ನಲ್ಲಿ ಆಗಿದೆ’ ಎಂದು ಬಿಜೆಪಿ ನಾಯಕರ ಟೀಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಬಿಜೆಪಿಯವರು ತಮ್ಮ ಪಕ್ಷದ ವಿಚಾರ ಸರಿ ಮಾಡಿಕೊಳ್ಳಲಿ’ ಎಂದರು.

ಸೌಲಭ್ಯಗಳಿಲ್ಲದೇ ಬಿಕ್ಕಟ್ಟಿಗೆ ನ್ಯಾ. ನಾಗಮೋಹನ್ ದಾಸ್ ಆಯೋಗ

ವಿಚಾರಣೆ ನಡೆಸಲು ಸಿಬ್ಬಂದಿ ಕೊರತೆ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ಐದು ಇಲಾಖೆಗಳಲ್ಲಿ ನಡೆದಿರುವ ಕಾಮಗಾರಿಗಳಲ್ಲಿ ಶೇಕಡ 40ರಷ್ಟು ಕಮಿಷನ್ ಪಡೆದ ಆರೋಪದ ಕುರಿತು ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನ್ ದಾಸ್ ಆಯೋಗವು ಸಿಬ್ಬಂದಿ ಕೊರತೆಯಿಂದ ಬಿಕ್ಕಟ್ಟಿಗೆ ಸಿಲುಕಿದೆ.

ಮೂರು ತಿಂಗಳಿನಿಂದ ಬೆರಳೆಣಿಕೆಯಷ್ಟು ಅಧಿಕಾರಿಗಳು ಮತ್ತು ಸಿಬ್ಬಂದಿಯೊಂದಿಗೆ ಕೆಲಸ ಮಾಡುತ್ತಿರುವ ಆಯೋಗಕ್ಕೆ ಹೆಚ್ಚಿನ ಸಿಬ್ಬಂದಿ ನೇಮಕಕ್ಕೆ ಆರ್ಥಿಕ ಇಲಾಖೆ ತಕರಾರು ಎತ್ತಿದೆ. 57 ಅಧಿಕಾರಿಗಳು, ಸಿಬ್ಬಂದಿಯನ್ನು ಹೊರ ಗುತ್ತಿಗೆ ಆಧಾರದಲ್ಲಿ ನೇಮಿಸಬೇಕೆಂಬ ಆಯೋಗದ ಬೇಡಿಕೆಗೆ ಮನ್ನಣೆ ನೀಡಿಲ್ಲ. ಅರ್ಧಕ್ಕಿಂತಲೂ ಕಡಿಮೆ ಸಂಖ್ಯೆಯ ಹುದ್ದೆಗಳಿಗಷ್ಟೇ ಮಂಜೂರಾತಿ ನೀಡಿದೆ.

ಲೋಕೋಪಯೋಗಿ, ಜಲ ಸಂಪನ್ಮೂಲ, ಸಣ್ಣ ನೀರಾವರಿ, ನಗರಾಭಿವೃದ್ಧಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಲ್ಲಿ 2019ರಿಂದ 2023ರ ಅವಧಿಯಲ್ಲಿ ನಡೆದಿರುವ ಕಾಮಗಾರಿಗಳಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಬಗ್ಗೆ ಆಯೋಗ ವಿಚಾರಣೆ ನಡೆಸುತ್ತಿದೆ. ಬಿಜೆಪಿ ಸರ್ಕಾರದ ವಿರುದ್ಧ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಮಾಡಿದ್ದ ಶೇ 40ರಷ್ಟು ಕಮಿಷನ್ ಆರೋಪವೂ ತನಿಖೆಯ ಭಾಗವಾಗಿದೆ.

ನಾಗಮೋಹನ್ ದಾಸ್ ನೇತೃತ್ವದ ವಿಚಾರಣಾ ಆಯೋಗವನ್ನು ನೇಮಿಸಿ 2023ರ ಆಗಸ್ಟ್ 25ರಂದು ಆದೇಶ ಹೊರಡಿಸಲಾಗಿತ್ತು. ಸೆಪ್ಟೆಂಬರ್ 2ರಿಂದ ಆಯೋಗವು ಕಾರ್ಯನಿರ್ವಹಿಸುತ್ತಿದೆ. ಆರಂಭದಲ್ಲಿ ಏಳು ಮಂದಿಯನ್ನು ಹೊರ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗಿತ್ತು. ಅಷ್ಟೇ ಸಿಬ್ಬಂದಿಯಲ್ಲಿ ಮೂರು ತಿಂಗಳಿನಿಂದ ಕಾರ್ಯನಿರ್ವಹಿಸುತ್ತಿರುವ ಆಯೋಗವು, ದೂರುಗಳ ಪರಿಶೀಲನೆ ಮತ್ತು ವಿಚಾರಣಾ ಕಡತಗಳನ್ನು ತಯಾರಿಸಲಾಗದ ಸ್ಥಿತಿಯಲ್ಲಿದೆ.

ವಿಷಯ ತಜ್ಞರು, ಕಾನೂನು ತಜ್ಞರು, ತನಿಖಾಧಿಕಾರಿ, ಲೆಕ್ಕಪತ್ರ ಅಧೀಕ್ಷಕರು, ಕಚೇರಿ ಸಹಾಯಕರು, ಡೇಟಾ ಎಂಟ್ರಿ ಆಪರೇಟರ್ಸ್, ಚಾಲಕರು, ಗುಮಾಸ್ತರು ಸೇರಿದಂತೆ 57 ಹುದ್ದೆಗಳನ್ನು ಸೃಜಿಸುವಂತೆ ನಾಗಮೋಹನ್ ದಾಸ್ ಅವರು ಸೆಪ್ಟೆಂಬರ್ 23ರಂದು ಲೋಕೋಪಯೋಗಿ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ಈ ಹುದ್ದೆಗಳ ಸೃಜನೆಗೆ ಮಂಜೂರಾತಿ ಕೋರಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಿದ್ದರು.

2024ರ ಜನವರಿ 8ರಂದು ಟಿಪ್ಪಣಿ ಹೊರಡಿಸಿರುವ ಆರ್ಥಿಕ ಇಲಾಖೆ, 24 ಹುದ್ದೆಗಳ ಸೃಜನೆಗೆ ಮಾತ್ರ ಒಪ್ಪಿಗೆ ನೀಡಿದೆ. ಅದರ ಅನುಸಾರ ಲೋಕೋಪಯೋಗಿ ಇಲಾಖೆಯು ಈ ಹುದ್ದೆಗಳನ್ನು ಸೃಜಿಸಿ ಜ. 12ರಂದು ಆದೇಶ ಹೊರಡಿಸಿದೆ. ಮೂವರು ನಿವೃತ್ತ ಮುಖ್ಯ ಎಂಜಿನಿಯರ್‌ಗಳು ಆಯೋಗದಲ್ಲಿ ಹಿರಿಯ ವಿಷಯ ತಜ್ಞರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

5ನೇ ಪುಟ ನೋಡಿ

40% ಕಮಿಷನ್ ಆರೋಪ

ಮೂರು ತಿಂಗಳಿನಿಂದ ವೇತನವಿಲ್ಲ

ಆಯೋಗದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಹಿರಿಯ ವಿಷಯತಜ್ಞರು, ರಿಜಿಸ್ಟ್ರಾರ್, ಗುಮಾಸ್ತರು, ಶೀಘ್ರಲಿಪಿಗಾರರು, ಡಿ ದರ್ಜೆ ನೌಕರರಿಗೆ ಮೂರು ತಿಂಗಳಿನಿಂದ ವೇತನ ಪಾವತಿಯಾಗಿಲ್ಲ. ಇದರಿಂದಾಗಿ ಆಯೋಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ.

‘ಆಯೋಗದ ಅಧಿಕಾರಿಗಳು, ಸಿಬ್ಬಂದಿ ವೇತನ ಪಾವತಿಗೆ ಎರಡು ಕಂತಿನಲ್ಲಿ ₹ 2.56 ಕೋಟಿ ಅನುದಾನ ಬಿಡುಗಡೆಯಾಗಿದೆ. ಈ ಮೊತ್ತವನ್ನು ಇಲಾಖೆಯ ನಂಬರ್ 2ನೇ ಕಟ್ಟಡಗಳ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿದೆ. ಶೀಘ್ರದಲ್ಲಿ ವೇತನ ಪಾವತಿಯಾಗಲಿದೆ’ ಎಂದು ವಿಚಾರಣಾ ಆಯೋಗದ ವೇತನ ಪಾವತಿ ಜವಾಬ್ದಾರಿ ಹೊಂದಿರುವ ಲೋಕೋಪಯೋಗಿ ಇಲಾಖೆಯ ದಕ್ಷಿಣ ವಲಯದ ಮುಖ್ಯ ಎಂಜಿನಿಯರ್ ಕೆ. ದುರುಗಪ್ಪ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಕಡತ ಎತ್ತಲೂ ಜನರಿಲ್ಲ

ವಿಚಾರಣಾ ವ್ಯಾಪ್ತಿಯಲ್ಲಿರುವ ಐದು ಇಲಾಖೆಗಳಿಂದ ಸಾವಿರಾರು ಕಡತಗಳನ್ನು ಆಯೋಗದ ಕಚೇರಿಗೆ ತರಲಾಗಿದೆ. ಆದರೆ, ಅಲ್ಲಿ ಸಿಬ್ಬಂದಿಯೇ ಇಲ್ಲದ ಕಾರಣದಿಂದ ಕಡತಗಳನ್ನು ಎತ್ತಿಡಲೂ ಸಾಧ್ಯವಾಗುತ್ತಿಲ್ಲ.

ಪ್ರಧಾನಿ ಭೇಟಿ: ಸಂಚಾರ ಮಾರ್ಗ ಬದಲಾವಣೆ

ನರೇಂದ್ರ ಮೋದಿ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಇದೇ 19ರಂದು ದೇವನಹಳ್ಳಿಗೆ ಭೇಟಿ ನೀಡುತ್ತಿದ್ದು, ಅವರು ಸಂಚರಿಸುವ ಮಾರ್ಗದಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಗೊಲ್ಲರಹಳ್ಳಿ ಗೇಟ್–ಹುಣಚೂರು ಗ್ರಾಮ (ಕೆಐಎಡಿಬಿ ಕೈಗಾರಿಕಾ ಪ್ರದೇಶ), ಡಾಬಾ ಗೇಟ್ (ಎನ್.ಎಚ್. 648)ನಿಂದ ವಿಮಾನ ನಿಲ್ದಾಣದ ಕಡೆಗೆ, ಹೆಣ್ಣೂರು ಬಾಗಲೂರು ಮುಖ್ಯರಸ್ತೆಯಿಂದ ವಿಮಾನ ನಿಲ್ದಾಣದ ಕಡೆಗೆ, ಚಿಕ್ಕಜಾಲ ಕೋಟೆ ಕಡೆಯಿಂದ ಕೆಂಪೇಗೌಡ ವಿಮಾನನಿಲ್ದಾಣ ವರೆಗೆ ಅಂದು ಬೆಳಿಗ್ಗೆ 8ರಿಂದ ಸಂಜೆ 6ರ ವರೆಗೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಕೆಂಪೇಗೌಡ ವಿಮಾನ ನಿಲ್ದಾಣ ಹಾಗೂ ಕೆಐಎಡಿಬಿ ಕೈಗಾರಿಕಾ ಪ್ರದೇಶಕ್ಕೆ ತೆರಳುವ ವಾಹನಗಳಿಗೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ.

ನಿಧನ ವಾರ್ತೆ

ಕೆ.ಮಿಂಚು ಶ್ರೀನಿವಾಸ್

ಬೆಂಗಳೂರು: ಮಿಂಚು ಪತ್ರಿಕೆಯ ಸಂಪಾದಕ ಕೆ.ಮಿಂಚು ಶ್ರೀನಿವಾಸ್ ಅವರು ಮಂಗಳವಾರ ರಾತ್ರಿ ನಿಧನರಾದರು. ಅವರಿಗೆ ಪತ್ನಿ, ತಾಯಿ ಇದ್ದಾರೆ.

ಬನಶಂಕರಿಯ ಚಿತಾಗಾರದಲ್ಲಿ ಬುಧವಾರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ವೆಂಕಟಪ್ಪ ಕಲಾ ಗ್ಯಾಲರಿ ದತ್ತು ಪಡೆದಿರುವ ಬ್ರಿಗೇಡ್ ಫೌಂಡೇಷನ್

ನವೀಕರಣ: 9 ತಿಂಗಳಲ್ಲಿ ಪೂರ್ಣ

ಪ್ರಜಾವಾಣಿ ವಾರ್ತೆ

ಕಲಾವಿದನ ಕಲ್ಪನೆಯಲ್ಲಿ ವೆಂಕಟಪ್ಪ ಕಲಾ ಗ್ಯಾಲರಿಯ ನವೀಕೃತ ಕಟ್ಟಡದ ನೋಟ

ಸರ್ಕಾರಿ ವಸ್ತು ಸಂಗ್ರಹಾಲಯ

ಬೆಂಗಳೂರು: ನಿರ್ವಹಣೆ ಕೊರತೆಯಿಂದ ಕಳೆಗುಂದಿದ್ದ ಕಸ್ತೂರ ಬಾ ರಸ್ತೆಯಲ್ಲಿರುವ ವೆಂಕಟಪ್ಪ ಕಲಾ ಗ್ಯಾಲರಿ, ಮುಂದಿನ ಒಂಬತ್ತು ತಿಂಗಳಲ್ಲಿ ಆಧುನಿಕ ಸ್ಪರ್ಶದೊಂದಿಗೆ ಕಲಾ ಪ್ರಪಂಚಕ್ಕೆ ತೆರೆದುಕೊಳ್ಳಲಿದೆ. 'ಸ್ಮಾರಕ ದತ್ತು' ಯೋಜನೆಯಡಿ ಬ್ರಿಗೇಡ್ ಫೌಂಡೇಷನ್ ಈ ಕಟ್ಟಡದ ನವೀಕರಣ ಕಾಮಗಾರಿ ಕೈಗೆತ್ತಿಕೊಂಡಿದೆ.

ಗ್ಯಾಲರಿಯ ಆವರಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಅವರು ನವೀಕರಣ ಕಾಮಗಾರಿಯ ಗುದ್ದಲಿ ಪೂಜೆಯನ್ನು ನೆರವೇರಿಸಿದರು. ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ಫೌಂಡೇಷನ್ ₹ 5 ಕೋಟಿಯಲ್ಲಿ ನವೀಕರಣ ಕಾರ್ಯವನ್ನು ಫೆಬ್ರುವರಿಯಲ್ಲಿ ಪ್ರಾರಂಭಿಸಲಿದ್ದು, ಈ ವರ್ಷದ ದಸರಾದೊಳಗೆ ಪೂರ್ಣಗೊಳಿಸುವುದಾಗಿ ಭರವಸೆ ನೀಡಿದೆ.

ನವೀಕರಣ ಕಾರ್ಯಯೋಜನೆಯ ನೀಲ ನಕ್ಷೆಯನ್ನು ವೀಕ್ಷಿಸಿ ಮಾತನಾಡಿದ ಎಚ್.ಕೆ. ಪಾಟೀಲ, 'ರಾಜ್ಯದಲ್ಲಿ ಸುಮಾರು 25 ಸಾವಿರ ಸ್ಮಾರಕಗಳಿವೆ. ಇವುಗಳಲ್ಲಿ ಸುಮಾರು 800 ಸ್ಮಾರಕಗಳನ್ನು ಗುರುತಿಸಲಾಗಿದ್ದು, 500 ಸ್ಮಾರಕಗಳನ್ನು ಮಾತ್ರ ಸಂರಕ್ಷಣೆ ಮಾಡಲಾಗಿದೆ. ಇವುಗಳಿಗೆ ಮೂಲಸೌಕರ್ಯ ಒದಗಿಸಲು ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಡಿ 'ಸ್ಮಾರಕ ದತ್ತು' ಯೋಜನೆ ಆರಂಭಿಸಿದ್ದು, ಇದಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಸ್ಮಾರಕಗಳ ಸಂರಕ್ಷಣೆ ಸರ್ಕಾರದ ಕೆಲಸವೆಂದು ಸುಮ್ಮನಾಗದೆ, ಸಮಾಜವೂ ಕೈಜೋಡಿಸಬೇಕು' ಎಂದು ಹೇಳಿದರು.

'ರಾಜ್ಯದಲ್ಲಿರುವ ಸ್ಮಾರಕಗಳಲ್ಲಿ ಶೇ 50ರಷ್ಟು ಸ್ಮಾರಕಗಳನ್ನಾದರೂ ಮುಂದಿನ ಐದು ವರ್ಷಗಳಲ್ಲಿ ಸಂರಕ್ಷಣೆ ಮಾಡಬೇಕು. ದತ್ತು ಪಡೆಯಲು ಹೆಚ್ಚಿನ ಸಂಖ್ಯೆಯಲ್ಲಿ ಸಂಸ್ಥೆಗಳು ಮುಂದೆ ಬಂದರೆ ಅದು ಸಾಧ್ಯವಾಗುತ್ತದೆ. ಮುಂದಿನ ಮೂರು ವರ್ಷಗಳಲ್ಲಿ 5 ಸಾವಿರ ಸ್ಮಾರಕಗಳಿಗೆ ಮೂಲಸೌಕರ್ಯ ಒದಗಿಸುವ ಚಿಂತನೆಯಿದೆ. ಐಹೊಳೆಯಲ್ಲಿ ಚಾಲುಕ್ಯರಿಗೆ ಸಂಬಂಧಿಸಿದ 125 ಸ್ಮಾರಕಗಳಿವೆ. ಇಲಾಖೆ ವ್ಯಾಪ್ತಿಯಲ್ಲಿ 75 ಸ್ಮಾರಕಗಳಿವೆ. ಕೆಲವು ಪಾಳುಬಿದ್ದು, ಕೃಷಿ ಚಟುವಟಿಕೆ ಗಳಿಗೆ ಬಳಕೆಯಾಗುತ್ತಿದ್ದವು. ಇದನ್ನು ಗಮನಿಸಿ, ಐಹೊಳೆಯಲ್ಲಿನ ಸ್ಮಾರಕಗಳಿಗೆ ಅಗತ್ಯ ಸೌಕರ್ಯ ಒದಗಿಸಿ, ಪ್ರವಾಸಿಗರನ್ನು ಆಕರ್ಷಿಸಲು ಕ್ರಮವಹಿಸಲಾಗಿದೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಅವರಿಂದ ಭೂಮಿ ಪೂಜೆ
- ₹ 5 ಕೋಟಿ ವೆಚ್ಚದಲ್ಲಿ ನವೀಕರಣ ಕಾರ್ಯ: ಫೆಬ್ರುವರಿಯಲ್ಲಿ ಆರಂಭ
- ಸ್ಮಾರಕ ದತ್ತು ಯೋಜನೆಗೆ ಉತ್ತಮ ಸ್ಪಂದನೆ

ಪರಂಪರೆಗೆ ಕೊಡುಗೆ: ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಸಲ್ಮಾ ಕೆ. ಫಾಹಿಮ್, 'ಕಲಾವಿದ ವೆಂಕಟಪ್ಪ ಅವರು ರಾಜ್ಯದ ಕಲಾ ಪರಂಪರೆಗೆ ಅಚ್ಚಳಿಯದ ಕೊಡುಗೆ ನೀಡಿದ್ದಾರೆ. ಅವರ ಹೆಸರಿನಲ್ಲಿರುವ ಈ ಗ್ಯಾಲರಿಯನ್ನು ಜೀರ್ಣೋದ್ಧಾರ ಮಾಡುತ್ತಿರುವುದು ಪರಂಪರೆ ಉಳಿಸುವ ಗಮನಾರ್ಹ ಹೆಜ್ಜೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬ್ರಿಗೇಡ್ ಫೌಂಡೇಷನ್ ಟ್ರಸ್ಟಿ ಎಂ.ಆರ್. ಜೈಶಂಕರ್, 'ಕಲಾವಿದರು ಹಾಗೂ ಕಲಾರಸಿಕರಿಗೆ ವೆಂಕಟಪ್ಪ ಕಲಾ ಗ್ಯಾಲರಿ ನೆಚ್ಚಿನ ತಾಣ. ಅಗತ್ಯ ಮೂಲ ಸೌಕರ್ಯ ಇಲ್ಲದಿರುವುದರಿಂದ ಕಲಾ ಚಟುವಟಿಕೆಗಳು ಇಲ್ಲಿ ಕಡಿಮೆಯಾಗಿವೆ. ಹೀಗಾಗಿ, ನವೀಕರಣ ಕಾರ್ಯವನ್ನು ಕೈಗೆತ್ತಿಕೊಂಡಿದ್ದು, ಮುಂಬರುವ ದಸರಾದೊಳಗೆ ಅಗತ್ಯ ಸೌಕರ್ಯಗಳನ್ನು ಒದಗಿಸುತ್ತೇವೆ. ಇಲ್ಲಿ ಉತ್ತಮ ಸ್ಥಳಾವಕಾಶವಿದ್ದು, ಕಲಾಕೃತಿಗಳ ರಚನೆ ಸೇರಿ ವಿವಿಧ ಕಲಾ ಚಟುವಟಿಕೆಗಳಿಗೆ ಸೌಲಭ್ಯ ಕಲ್ಪಿಸಲಾಗುತ್ತದೆ. ಎಲಿವೇಟರ್ ಅಳವಡಿಕೆ, ಕಾಫಿ ಶಾಪ್ ನಿರ್ಮಾಣ ಸೇರಿ ವಿವಿಧ ವ್ಯವಸ್ಥೆ ಕಲ್ಪಿಸುವುದು ಕಾರ್ಯಯೋಜನೆಯಲ್ಲಿದೆ. ಹೆಚ್ಚಿನ ಅನುದಾನ ಅಗತ್ಯವಿದ್ದರೆ ಅದನ್ನು ಭರಿಸಲಾಗುವುದು. ನವೀಕರಣ ಕಾರ್ಯ ಪೂರ್ಣಗೊಂಡ ಬಳಿಕ ಸರ್ಕಾರಕ್ಕೆ ಹಸ್ತಾಂತರಿಸಲಾಗುತ್ತದೆ' ಎಂದು ವಿವರಿಸಿದರು.

ಬೆಂಗಳೂರು ವಸ್ತು ಸಂಗ್ರಹಾಲಯ: ವರ್ಷಾಂತ್ಯಕ್ಕೆ ವೀಕ್ಷಣೆಗೆ ಲಭ್ಯ

ಬೆಂಗಳೂರು: ಕಸ್ತೂರ ಬಾ ರಸ್ತೆಯಲ್ಲಿರುವ ಬೆಂಗಳೂರು ವಸ್ತು ಸಂಗ್ರಹಾಲಯದ ನವೀಕರಣ ಕಾಮಗಾರಿ ಎಂಟು ತಿಂಗಳಲ್ಲಿ ಪೂರ್ಣಗೊಳ್ಳಲಿದ್ದು, ವರ್ಷಾಂತ್ಯಕ್ಕೆ ವೀಕ್ಷಣೆಗೆ ಲಭ್ಯವಾಗಲಿದೆ.

₹ 8.5 ಕೋಟಿಯಲ್ಲಿ ನವೀಕರಣ ಕಾಮಗಾರಿಯನ್ನು ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಕೈಗೆತ್ತಿಕೊಂಡಿದ್ದು, ಕಳೆದ ಒಂಬತ್ತು ತಿಂಗಳಿಂದ ಕಾಮಗಾರಿ ಪ್ರಗತಿಯಲ್ಲಿದೆ. ಹೀಗಾಗಿ, ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ. ಈ ವಸ್ತು ಸಂಗ್ರಹಾಲಯಕ್ಕೆ ಹೊಂದಿಕೊಂಡು ₹ 26 ಕೋಟಿಯಲ್ಲಿ ಪ್ರಾಚ್ಯವಸ್ತು ಸಂಗ್ರಹ ಕೇಂದ್ರ ನಿರ್ಮಿಸಲು ಇಲಾಖೆಯು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಸದ್ಯ ಪ್ರಾಚ್ಯವಸ್ತುಗಳನ್ನು ಇರಿಸಲು ಸೂಕ್ತ ವ್ಯವಸ್ಥೆ ಇಲ್ಲವಾದ್ದರಿಂದ ಸಮಸ್ಯೆಯಾಗಿದೆ.

ಬುಧವಾರ ಇಲ್ಲಿ ನಡೆದ ವೆಂಕಟಪ್ಪ ಕಲಾ ಗ್ಯಾಲರಿ ನವೀಕರಣದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಇಲಾಖೆಯ ಅಧಿಕಾರಿಗಳು ವಸ್ತು ಸಂಗ್ರಹಾಲಯ ನವೀಕರಣದ ಬಗ್ಗೆ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಅವರಿಗೆ ಮಾಹಿತಿ ನೀಡಿದರು. 'ಬೆಂಗಳೂರು ಸರ್ಕಾರಿ ವಸ್ತು ಸಂಗ್ರಹಾಲಯ ಕರ್ನಾಟಕದ ಹೆಮ್ಮೆ. 11 ಸಾವಿರ ಪ್ರಾಚ್ಯ ವಸ್ತುಗಳು ಸಂಗ್ರಹಾಲಯಕ್ಕೆ ಒಳಪಟ್ಟಿದ್ದು, ಸ್ಥಳಾವಕಾಶದ ಕೊರತೆಯಿಂದ ಎಲ್ಲ ವಸ್ತುಗಳನ್ನು ಪ್ರದರ್ಶನಕ್ಕೆ ಇರಿಸಿಲ್ಲ. ಸೂಕ್ತ ರೀತಿಯಲ್ಲಿ ಶೇಖರಿಸಿ ಇಡಲು ಸಂಗ್ರಹ ಕೇಂದ್ರ ಅಗತ್ಯ. ಕಟ್ಟಡದ ನವೀಕರಣ ಕಾಮಗಾರಿಯು ಎಂಟು ತಿಂಗಳಲ್ಲಿ ಪೂರ್ಣಗೊಳ್ಳುವ ಸಾಧ್ಯತೆಯಿದೆ' ಎಂದು ಇಲಾಖೆಯ ಪ್ರಾಚ್ಯವಸ್ತುಗಳ ಸಂರಕ್ಷಣಾ ವಾಸ್ತುಶಿಲ್ಪಿ ಶರತ್ ಚಂದ್ರ ತಿಳಿಸಿದರು. 'ಪಾರಂಪರಿಕ ಕಟ್ಟಡದ ಮೂಲ ವಾಸ್ತುಶಿಲ್ಪಕ್ಕೆ ಚ್ಯುತಿ ಬರದಂತೆ ನವೀಕರಣ ಕಾಮಗಾರಿ ನಡೆಸಲಾಗುತ್ತಿದೆ. ಕಲಾಕೃತಿಗಳಿಗೆ ಯಾವುದೇ ರೀತಿಯ ಹಾನಿಯಾಗದಂತೆ ಸಂರಕ್ಷಿಸಲಾಗಿದೆ. ಕಲಾಕೃತಿಗಳ ಬಗೆಗಿನ ಮಾಹಿತಿಯನ್ನೂ ಡಿಜಿಟಲೀಕರಣ ಮಾಡಲಾಗುತ್ತಿದೆ. ಪಾರ್ಕಿಂಗ್ ಸೇರಿ ವಿವಿಧ ಸಮಸ್ಯೆಗಳಿಗೆ ನವೀಕರಣದ ಬಳಿಕ ಪರಹಾರ ಸಿಗಲಿದೆ' ಎಂದರು.

ಸುದ್ದಿ 2 ನಿಮಿಷ

'ಬ್ಯಾಂಕ್‌ಗೆ ಪಾಸ್‌ಪೋರ್ಟ್ ವಶಕ್ಕೆ ಪಡೆಯುವ ಅಧಿಕಾರವಿಲ್ಲ'

ಬೆಂಗಳೂರು: 'ವಿದೇಶಿ ಪೌರತ್ವ ಹೊಂದಿರುವವರ ಪಾಸ್‌ಪೋರ್ಟ್ ಮತ್ತು ಸಾಗರೋತ್ತರ ಭಾರತೀಯ ನಾಗರಿಕ (ಒಸಿಐ) ಕಾರ್ಡ್ ಅನ್ನು ವಶಕ್ಕೆ ಪಡೆಯಲು ಬ್ಯಾಂಕ್‌ಗೆ ಅಧಿಕಾರ ಇಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ತಮ್ಮ ಪಾಸ್‌ಪೋರ್ಟ್ ಮತ್ತು ಒಸಿಐ ಕಾರ್ಡ್ ಅನ್ನು ವಶಕ್ಕೆ ಪಡೆದಿದ್ದ ಬ್ಯಾಂಕ್‌ನ ಕ್ರಮವನ್ನು ಪ್ರಶ್ನಿಸಿ ಯುಕೆ (ಯುನೈಟೆಡ್ ಕಿಂಗ್ಡಮ್) ಪೌರತ್ವ ಹೊಂದಿರುವ ಕೋಶಿ ವರ್ಗೀಸ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರ್ಜಿದಾರರು ಬ್ಯಾಂಕ್ ಅಧಿಕಾರಿಗಳಿಗೆ ತಮ್ಮ ಠೇವಣಿ ಬದಲು ಒಸಿಐ ಕಾರ್ಡ್ ಮತ್ತು ಪಾಸ್‌ಪೋರ್ಟ್ ನೀಡಿದ್ದಾರೆ. ಬ್ಯಾಂಕ್ 15 ದಿನಗಳಿಗಿಂತಲೂ ಹೆಚ್ಚು ಕಾಲ ಇದನ್ನು ತನ್ನ ವಶದಲ್ಲಿಟ್ಟುಕೊಳ್ಳಲು ಅವಕಾಶವಿಲ್ಲ. ಹೀಗಾಗಿ, 2022ರ ಅಕ್ಟೋಬರ್ 17ರಿಂದ ವಶದಲ್ಲಿಟ್ಟುಕೊಂಡಿರುವ ಅರ್ಜಿದಾರರ ಬ್ರಿಟಿಷ್ ಪಾಸ್‌ಪೋರ್ಟ್ ಮತ್ತು ಒಸಿಐ ಕಾರ್ಡ್ ಅನ್ನು ಹಿಂದಿರುಗಿಸಬೇಕು' ಎಂದು ನ್ಯಾಯಪೀಠ ಪ್ರತಿವಾದಿ ಬ್ಯಾಂಕ್‌ಗೆ ನಿರ್ದೇಶಿಸಿದೆ.

'ಎನ್‌ಇಪಿ ಮುಂದುವರಿಸಿ'

ಬೆಂಗಳೂರು: ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಮುಂದುವರಿಸಬೇಕೆಂದು ಪೀಪಲ್ಸ್ ಫೋರಂ ಫಾರ್ ಕರ್ನಾಟಕ ಎಜುಕೇಷನ್ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೋರಂ ಸಂಚಾಲಕ ಕೆ.ಎಲ್. ವೇಣುಗೋಪಾಲ್, 'ದೇಶದಲ್ಲಿ ಯಾವ ರಾಜ್ಯಗಳು ಎನ್‌ಇಪಿಯನ್ನು ತೆಗೆದು ಹಾಕಿದ ನಿದರ್ಶನಗಳಿಲ್ಲ. ಆದರೆ, ರಾಜ್ಯದಲ್ಲಿ ಮಾತ್ರ ಎನ್‌ಇಪಿಯನ್ನು ತೆಗೆದು ಹಾಕಿ ರಾಜ್ಯ ಶಿಕ್ಷಣ ನೀತಿ ತರಲಾಗುತ್ತಿದೆ. ಫೋರಂ ಮೂಲಕ ಎನ್‌ಇಪಿಯನ್ನು ಮುಂದುವರಿಸಬೇಕೆಂದು ರಾಜ್ಯದಾದ್ಯಂತ ಜಾಗೃತಿ ಹಾಗೂ ಸಹಿ ಸಂಗ್ರಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು' ಎಂದು ತಿಳಿಸಿದರು.

'ಜಾಗೃತಿ ಮತ್ತು ಸಹಿ ಸಂಗ್ರಹ ಕಾರ್ಯಕ್ರಮದಲ್ಲಿ ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳ 2,630 ಶಾಲಾ–ಕಾಲೇಜುಗಳ 86,600 ಶಿಕ್ಷಕರು ಹಾಗೂ ಆಡಳಿತ ಮಂಡಳಿ ಸಿಬ್ಬಂದಿ, 26,980 ಪೋಷಕರು, 8,88,173 ವಿದ್ಯಾರ್ಥಿಗಳು, ಆನ್‌ಲೈನ್ ಮೂಲಕ 19,327 ಜನ ಸೇರಿ ಒಟ್ಟು 10,16,080 ಮಂದಿ ಎನ್‌ಇಪಿ ಮುಂದುವರಿಸುವಂತೆ ಸಹಿ ಮಾಡಿದ್ದಾರೆ' ಎಂದು ಮಾಹಿತಿ ನೀಡಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ್, ರಾಷ್ಟ್ರೋತ್ಥಾನ ಪರಿಷತ್ತಿನ ಉಪಾಧ್ಯಕ್ಷ ದ್ವಾರಕಾನಾಥ್ ಪಾಲ್ಗೊಂಡಿದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020

ಸಂ: ಬೆಂಅಪ್ರಾ/ನಯೋಸ/CLU-57/2216/2023–24 ದಿನಾಂಕ: 12–01–2024

ಪ್ರಕಟಣೆ

ಶ್ರೀ.ರಾಜೇಂದ್ರ ಕುಮಾರ್ ಮತ್ತು ಶ್ರೀ ನರೇಶ್ ಕುಮಾರ್ ರವರು ಬೆಂಗಳೂರು, ವಾರ್ಡ್ ನಂ.143 ಸಿಟಿ ಸರ್ವೆ ನಂ. 1972, ಖಾತಾ ನಂ. 50–32–16ರ 13,330.00 ಚ.ಅಡಿ ವಿಸ್ತೀರ್ಣದ ಪ್ರದೇಶವನ್ನು ಸಾರ್ವಜನಿಕ / ಅರೆಸಾರ್ವಜನಿಕ ವಲಯಕ್ಕಾಗಿ RMP-2015 ಕಾಯ್ದಿರಿಸಿದ್ದು ಕೆಟಿಸಿಪಿ ಕಾಯ್ದೆ 1961 ರ ಕಲಂ 69(2) ರ ಅಡಿಯಲ್ಲಿ ಅನೂರ್ಜಿತವಾಗಿರುವುದರಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರಡಿಯಲ್ಲಿ ಭೂಉಪಯೋಗ ಮರುನಿಗದಿಪಡಿಸಲು ಕೋರಿರುತ್ತಾರೆ. ಭೂಉಪಯೋಗ ಮರುನಿಗದಿಪಡಿಸುವ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಮರುನಿಗದಿ ಪ್ರಸ್ತಾವನೆ ಬಗ್ಗೆ ಯಾವುದೇ ಸಲಹೆ ಮತ್ತು ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಸಲಹೆ ಮತ್ತು ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಮತ್ತು ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲಾ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ವಾರ್ಡ್	ಖಾತಾ ನಂ.	ಸಿಟಿ ಸರ್ವೆ ನಂ.	ವಿಸ್ತೀರ್ಣ	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	Sri. Rajendra Kumar & Sri. Naresh Kumar	ಬೆಂಗಳೂರು	ವಾರ್ಡ್ ನಂ. 143	ಖಾತಾ ನಂ. 50–32–16	1972	13,330 ಚ.ಅಡಿ	ಸಾರ್ವಜನಿಕ / ಅರೆಸಾರ್ವಜನಿಕ	ವಸತಿ
					ಒಟ್ಟು	13,330 ಚ.ಅಡಿ		

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಸಂಜಯ್ ಕುಮಾರ್ ಸಿಂಗ್ ಆಯ್ಕೆ

ಬೆಂಗಳೂರು: ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ (ಐಐಎಚ್‌ಆರ್) ನಿರ್ದೇಶಕರಾದ ಸಂಜಯ್ ಕುಮಾರ್ ಸಿಂಗ್ ಅವರು ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ ತೋಟಗಾರಿಕೆ ವಿಜ್ಞಾನ ವಿಭಾಗದ ಉಪಮಹಾ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಐಐಎಚ್‌ಆರ್ ಪ್ರಕಟಣೆ ತಿಳಿಸಿದೆ.

ಆಸ್ಪತ್ರೆಗೆ ನಿವೇಶನ: ಕೊನೆಗೂ ಹಣ ಪಾವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಪತ್ರೆ ನಿರ್ಮಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) 13 ವರ್ಷಗಳ ಹಿಂದೆ ಬಿಬಿಎಂಪಿಗೆ ನೀಡಿದ್ದ ನಾಗರಿಕ ಸೌಲಭ್ಯ ನಿವೇಶನಕ್ಕೆ ಕೊನೆಗೂ ಪಾಲಿಕೆ ಗುತ್ತಿಗೆ ಹಣವನ್ನು ಪಾವತಿಸಿದೆ.

ಬಿಡಿಎ, ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ 2ನೇ ಬ್ಲಾಕ್‌ನಲ್ಲಿ ನಾಗರಿಕ ಸೌಲಭ್ಯ ನಿವೇಶನವನ್ನು (ಸಿಎ) ಬಿಬಿಎಂಪಿಗೆ ಮಂಜೂರು ಮಾಡಿ 2011ರ ಜನವರಿ 6ರಂದು ಹಂಚಿಕೆ ಪತ್ರ ನೀಡಿತ್ತು. ಸಂಖ್ಯೆ 2ರ ನಿವೇಶನದ ಅಳತೆ 3,432 ಚದರ ಮೀಟರ್. ₹5 ಸಾವಿರದಂತೆ ₹1.71 ಕೋಟಿ ಗುತ್ತಿಗೆ ಹಣ ನೀಡಬೇಕು. ವಾರ್ಷಿಕವಾಗಿ ₹31.11 ಲಕ್ಷಗಳನ್ನು ಪಾವತಿಸಬೇಕು. ಆದರೆ, ಈ ನಿವೇಶನದ ಬಗ್ಗೆ ಬಿಬಿಎಂಪಿ ಮರೆತುಹೋಗಿತ್ತು.

'ಪ್ರಜಾವಾಣಿ'ಯಲ್ಲಿ 2022ರ ಅ. 7ರಂದು 'ಬಿಬಿಎಂಪಿ ಮರೆತ ಆಸ್ಪತ್ರೆ ನಿವೇಶನ' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು. ಇದಾದ ಮೇಲೆ ನಿವೇಶನವನ್ನು ಪಡೆದುಕೊಳ್ಳುವ ಪ್ರಕ್ರಿಯೆ ಆರಂಭಿಸಿದ್ದ ಬಿಬಿಎಂಪಿ, ಮತ್ತೆ ವಿಳಂಬಧೋರಣೆ ಅನುಸರಿಸಿತ್ತು. ಕಟ್ಟಕಡೆಯಲ್ಲಿ ಶಾಸಕ ಎಸ್.ಟಿ. ಸೋಮಶೇಖರ್ ಅವರು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರಿಗೂ ಪತ್ರ ಬರೆದು ನಿವೇಶನ ಪಡೆದುಕೊಳ್ಳುವಂತೆ ಒತ್ತಾಯಿಸಿದ್ದರು. ಇದರಿಂದ ಬಿಡಿಎಗೆ ₹1,71,60,000 ಮೊತ್ತದ ಡಿ.ಡಿಯನ್ನು ಬಿಬಿಎಂಪಿ ಜ.17ರಂದು ಪಾವತಿಸಿದೆ.

'ನಗರದ ಈ ಭಾಗದಲ್ಲಿ ಮಲ್ಟಿ ಸ್ಪೆಷಾಲಿಟಿ, ಹೆರಿಗೆ ಆಸ್ಪತ್ರೆಯ ಕೊರತೆ ಇದೆ. ಸುಮಾರು ಒಂದು ಎಕರೆ ಭೂಮಿ ಲಭ್ಯವಿದ್ದರೂ ಬಿಬಿಎಂಪಿ ಇದನ್ನು ಮರೆತುಹೋಗಿದೆ. ಈ ಜಾಗದಲ್ಲಿ ಆಸ್ಪತ್ರೆ ನಿರ್ಮಿಸಬೇಕು ಎಂಬ ಸ್ಥಳೀಯ ನಾಗರಿಕರ ಒತ್ತಾಯಕ್ಕೆ ಇದೀಗ ಫಲ ಸಿಕ್ಕಂತಾಗಿದೆ' ಎಂದು ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆಯ ಶಿವಕುಮಾರ್ ಹೇಳಿದರು.

'ಬಿಡಿಎಗೆ ಗುತ್ತಿಗೆ ಹಣವನ್ನು ಪಾವತಿಸಲಾಗಿದ್ದು, ಆ ಜಾಗದಲ್ಲಿ ಆಸ್ಪತ್ರೆ ನಿರ್ಮಿಸಲಾಗುತ್ತದೆ. ವಿಶಾಲ ಜಾಗವಿದ್ದು ಪ್ರಾಥಮಿಕ ಆರೋಗ್ಯ, ಹೆರಿಗೆ ಆಸ್ಪತ್ರೆಯ ಸೌಲಭ್ಯವನ್ನು ಕಲ್ಪಿಸಬಹುದು. ಸ್ಥಳೀಯ ಶಾಸಕರಾದ ಎಸ್.ಟಿ. ಸೋಮಶೇಖರ್ ಅವರ ಸಲಹೆ ಮೇರೆಗೆ ಆಸ್ಪತ್ರೆ ಯೋಜನೆಯನ್ನು ಮುಂದಿನ ದಿನಗಳಲ್ಲಿ ಅಂತಿಮಗೊಳಿಸಲಾಗುತ್ತದೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಲ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಮಹಾತ್ಮ ಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ, ಬೆಂಗಳೂರು – 560022.
ದೂರವಾಣಿ ಸಂಖ್ಯೆ: 080–23472850/23371695 ಇ–ಮೇಲ್: apmcbangalore22@gmail.com

ಸಂಖ್ಯೆ: ಕೃಮಾಇ/ಕೃಉಮಾಸ/ಬೆಂ/ಅಭಿವೃದ್ಧಿ/5916/2023–24 ದಿನಾಂಕ: 16–01–2024

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಈ ಕೆಳಕಾಣಿಸಿದ **ಶೌಚಾಲಯಗಳನ್ನು ಪ್ರತಿ 11 ತಿಂಗಳಿಗೊಮ್ಮೆ ನವೀಕರಿಸುವ, 33 ತಿಂಗಳ ನಂತರ ಶೇ. 5 ಲೀವ್ ಅಂಡ್ ಲೈಸನ್ಸ್** ಶುಲ್ಕವನ್ನು ಹೆಚ್ಚಿಸಿ ಗರಿಷ್ಠ 55 ತಿಂಗಳ ಅವಧಿಗೆ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ಆಧಾರದ ಮೇಲೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗಳು 2004 ರನ್ವಯ ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಕಟ್ಟಡದ ವಿವರ	ಮಾಸಿಕ ಲೀವ್ ಅಂಡ್ ಲೈಸೆನ್ಸ್ ಶುಲ್ಕ (ರೂ. ಗಳಲ್ಲಿ) +ಶೇ 18 ರಂತೆ ಜಿ.ಎಸ್.ಟಿ ಪ್ರತ್ಯೇಕ	ಭದ್ರತಾ ಠೇವಣಿ (ರೂ. ಗಳಲ್ಲಿ) 2 ತಿಂಗಳ ಮಾಸಿಕ ಲೀವ್ ಅಂಡ್ ಲೈಸೆನ್ಸ್ ಶುಲ್ಕ ಮಾಸಿಕ	ವಿಸ್ತೀರ್ಣ (ಚ. ಅಡಿಗಳಲ್ಲಿ)
ಎ – ಬ್ಲಾಕ್				
1	ಶೌಚಾಲಯ–1	22,254/-	44,508/-	387.5
2	ಶೌಚಾಲಯ–2	23,491/-	46,982/-	409.03
3	ಶೌಚಾಲಯ–3	23,491/-	46,982/-	409.03
ಬಿ – ಬ್ಲಾಕ್				
4	ಶೌಚಾಲಯ–1	16,073/-	32,146/-	279.86
5	ಶೌಚಾಲಯ–2	25,963/-	51,926/-	452.09
6	ಶೌಚಾಲಯ–3	25,963/-	51,926/-	452.09
ಸಿ – ಬ್ಲಾಕ್				
7	ಶೌಚಾಲಯ–1	40,181/-	80,362/-	699.66
8	ಶೌಚಾಲಯ–2	32,763/-	65,526/-	570.49
9	ಶೌಚಾಲಯ–3	38,945/-	77,890/-	678.13
10	ಶೌಚಾಲಯ–4	38,945/-	77,890/-	678.13
ಇ – ಬ್ಲಾಕ್				
11	ಶೌಚಾಲಯ–1	36,472/-	72,944/-	635.08
12	ಶೌಚಾಲಯ–2	41,418/-	83,836/-	721.19
13	ಶೌಚಾಲಯ–3	46,981/-	93,962/-	818.06
14	ಶೌಚಾಲಯ–4	44,509/-	89,018/-	775.01
15	ಶೌಚಾಲಯ–5	37,091/-	74,182/-	645.84

1) ಟೆಂಡರ್ ಕಂ ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು ಶೇ. 18 ಜಿ.ಎಸ್.ಟಿ ಯೊಂದಿಗೆ ಅರ್ಜಿ ಶುಲ್ಕ **ರೂ. 500/– ಸೇರಿ ಒಟ್ಟು ರೂ. 590/– ಗಳನ್ನು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಬೆಂಗಳೂರು** ಇವರ ಹೆಸರಿನಲ್ಲಿ ಈ ಕಛೇರಿಗೆ ಪಾವತಿಸಿ ಅರ್ಜಿ ನಮೂನೆ–3 ಹಾಗೂ ಷರತ್ತುಗಳ ವಿವರಗಳನ್ನು ಪಡೆಯುವ ಕೊನೆಯ ದಿನಾಂಕ: **31–01–2024 ರಂದು ಸಂಜೆ 5.00 ಗಂಟೆಯೊಳಗೆ ಪಡೆಯತಕ್ಕದ್ದು** (ಮರು ಪಾವತಿಸಲಾಗುವುದಿಲ್ಲ). ಭರ್ತಿ ಮಾಡಿದ ನಿಗಧಿತ ಟೆಂಡರ್ ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ: **03–02–2024 ರಂದು ಮಧ್ಯಾಹ್ನ 12.30 ಗಂಟೆಯವರೆಗೆ ಮಾತ್ರ.**

2) ಈ ಹಂಚಿಕೆಗೆ ನಿಗಧಿಪಡಿಸಿದ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ
ಕೃಉಮಾಸ, ಬೆಂಗಳೂರು

ವಾಸಾಸಂಇ/ವಾ.ಪ್ರ/3089/ಅಡ್ವಟೋರ್/2023–24

PUBLIC NOTICE

The General public are hereby notified that my client M/s. Morado Infrastructure Pvt Ltd A Company incorporated under the Companies Act of 1956, With its Registered Office at No.1032, Krishna Krupa, 3th Cross, Banashankari 2nd Stage, Bangalore 560 070 is proposing to develop and sell the property described in the Schedule herein on Joint Development basis with its owner Mr. Syed Khalandar Shah S/o. Mr. Syed Jaleel Shah. Any person or persons objecting for the proposed development and sale or ascertaining any right, title, Interest or claim /charge/lien over the Schedule Property or any part thereof, and in any manner whatsoever against the Schedule Property based on the documents pertaining to the Schedule Property or otherwise has any lawful objection for the development of the Schedule Property, should write to the undersigned within Seven Days from the date of issuance of this notice with all documentary proof on which they are basing and ascertaining their rights with regard to the Schedule Property or any part thereof and objections and/or claims received thereafter will not be binding on my client and my client will proceed to develop and sell the below mentioned property by entering into Joint Development Agreement with the owner as if there are no claimants/objections with regard to the Schedule Property.

SCHEDULE PROPERTY

ALL THAT PIECE AND PARCEL OF THE agricultural land bearing Sy. No.17/3,(old Sy.No. 17/1/1A, erstwhile Sy.No.17/1), Sy No. 17/4 (old Sy.No. 17/1/1A, erstwhile Sy.No.17/1), Sy No. 17/5,(old Sy.No. 17/1/1A, erstwhile Sy.No.17/1) and Sy No.17/6 (old Sy.No. 17/1/1A, erstwhile Sy.No.17/1), each measuring 0-20 Guntas totally measuring 02 Acres, situated at Uttarahalli Manavarthe Kaval Village, Uttarahalli Hobli, Bangalore South Taluk, Bangalore Urban District and bounded on the

East by : Land bearing Sy No. 17/2;
West by : Land bearing Sy No. 13;
North by : Road and Talaghattapura Village border;
South by : Land bearing Sy No Sy.No. 17/1A.

ROOPA SHETTY, Advocate
Lex Situs, No.810, 'BILWAPRIYA PLATINA', 2nd Floor,
27th Main Road, HSR Layout, Sector 1, Bangalore - 560102.
Phone: +91 9902026199 and 8088731020 ; Email:info@lexsitus.com

ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ನಂಎಫ್.ಬಿ.8, 1ನೇ ಮಹಡಿ, ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ
ದೂರವಾಣಿ ಸಂಖ್ಯೆ:08156-277113, ಇಮೇಲ್:dcpocbpur@gmail.com
ಸಂಖ್ಯೆ: ಜಿಮರಘ/ಚಿಪುರ/ಅ.ಮ.ಪ.ಪ್ರ/2023–24 ದಿನಾಂಕ:12.01.2024

ಪೋಷಕರ ಪತ್ತೆಗಾಗಿ ನೆರವು

ದಿನಾಂಕ: 12.01.2024 ರಂದು ಬೆಳಿಗ್ಗೆ ಸುಮಾರು 7.45 ರಿಂದ 8 ಗಂಟೆ ಸಮಯದಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕಿನ ದಿಬ್ಬೂರು ಗ್ರಾಮ ಪಂಚಾಯಿತಿ ಗ್ರಾಮದಿಂದ ಗಂಗರೆ ಕಾಲುವೆ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ದರ್ಗಾದ ನಂತರ ಮುನೇಶ್ವರ ಸ್ವಾಮಿ ದೇವಸ್ಥಾನದ ಬಳಿ ಅಪರಿಚಿತರು 01 ದಿನದ ನವಜಾತ ಗಂಡು ಶಿಶುವನ್ನು ಬಟ್ಟೆಯಲ್ಲಿ ಸುತ್ತಿ ಬಿಟ್ಟು ಹೋಗಿರುತ್ತಾರೆ. ಆದ್ದರಿಂದ ಸದರಿ ಮಗುವಿನ ವಿವರಗಳನ್ನು ಭಾವಚಿತ್ರದೊಂದಿಗೆ ನೀಡಲಾಗಿದೆ.

(1) ಮಗುವಿನ ಹೆಸರು : ವಿವೇಕಾನಂದ (ಮಕ್ಕಳ ಕಲ್ಯಾಣ ಸಮಿತಿ ಚಿಕ್ಕಬಳ್ಳಾಪುರ ರವರಿಂದ ನಾಮಕರಣ ಮಾಡಲಾಗಿದೆ). **(2)** ವಯಸ್ಸು ಮತ್ತು ಲಿಂಗ: 01 ದಿನ, ಗಂಡು ಮಗು. **(3)** ತಂದೆ ಅಥವಾ ತಾಯಿ ಹೆಸರು: ಗೊತ್ತಿಲ್ಲ. **(4)** ಧರ್ಮ ಮತ್ತು ಜಾತಿ :ಗೊತ್ತಿಲ್ಲ. **(5)** ತಿಳಿದಿರುವ ಭಾಷೆ : ಗೊತ್ತಿಲ್ಲ. **(6)** ದೇಹದ ಬಣ್ಣ ಮತ್ತು ಎತ್ತರ : ಗೋದಿ ಬಣ್ಣ, 50, ಸೆ.ಮೀ. **(7)** ತೂಕ: 1.8 ಕೆ.ಜಿ. ಸದರಿ ಮಗುವಿನ ಜೈವಿಕ ತಂದೆ–ತಾಯಿ ಅಥವಾ ಪೋಷಕರು ಅಥವಾ ವಾರಸುದಾರರು ಯಾರಾದರೂ ಇದ್ದರೆ ಸೂಕ್ತ ದಾಖಲಾತಿಗಳೊಂದಿಗೆ 60 ದಿವಸಗಳ ಒಳಗಡೆ ಕೆಳಕಂಡ ಕಛೇರಿಯನ್ನು ಸಂಪರ್ಕಿಸಲು ಕೋರಿದೆ. **ಸಂಪರ್ಕಿಸಬೇಕಾದ ಕಛೇರಿ:** ಜಿಲ್ಲಾ ಮಕ್ಕಳ ರಕ್ಷಣಾಘಟಕ, ಎಫ್.ಬಿ.8, 1ನೇ ಮಹಡಿ, ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ, **ದೂರವಾಣಿ ಸಂಖ್ಯೆ: 08156–277113** ಇಮೇಲ್–**dcpocbpur@gmail.com**

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:221/ಕೆಎಸ್‌ಎಂ.ಸಿ.ಎ/2023–24

ನಗರದಲ್ಲಿ ವಾಹನದಟ್ಟಣೆ ಕಡಿಮೆಗೊಳಿಸುವ, ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಕಲ್ಪಿಸುವ ಯೋಜನೆ

ಸರ್ಜಾಪುರ–ಹೆಬ್ಬಾಳ ಮೆಟ್ರೊ: ಡಿಪಿಆರ್ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಜಾಪುರ–ಹೆಬ್ಬಾಳ ಸಂಪರ್ಕಿಸುವ ಹೊಸ ಮೆಟ್ರೊ ರೈಲು ಮಾರ್ಗಕ್ಕಾಗಿ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಬಿಎಂಆರ್‌ಸಿಎಲ್ ಸಿದ್ಧಪಡಿಸಿದ್ದು, ಸರ್ಕಾರಕ್ಕೆ ಈ ತಿಂಗಳ ಅಂತ್ಯದೊಳಗೆ ಸಲ್ಲಿಸಲಿದೆ.

37 ಕಿಲೋ ಮೀಟರ್ ಉದ್ದದ ಈ ಮಾರ್ಗ ನಿರ್ಮಾಣಕ್ಕಾಗಿ ಭೂಸ್ವಾಧೀನ ಸೇರಿದಂತೆ ₹16,543 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜು ಮಾಡಲಾಗಿದೆ. ಯೋಜನೆ ಅನುಷ್ಠಾನಗೊಂಡರೆ ಟೆಕ್ ವಲಯ ಮತ್ತು ಹೊರಗೆ ಪ್ರಯಾಣಿಸುವವರಿಗೆ ಅನುಕೂಲವಾಗಲಿದೆ.

ವಿಸ್ತೃತ ಯೋಜನಾ ವರದಿಯ ಕರಡು ಪ್ರಕಾರ ಸರ್ಜಾಪುರದ ಐಟಿ ಕಾರಿಡಾರ್ ಬಳಿಯಿಂದ ಜಕ್ಕಸಂದ್ರವರೆಗೆ ಎತ್ತರಿಸಿದ ಮಾರ್ಗ ನಿರ್ಮಾಣಗೊಳ್ಳಲಿದೆ. ಕೋರಮಂಗಲದಲ್ಲಿ ಭೂಗತ ಮಾರ್ಗವಾಗಿ ಪರಿವರ್ತನೆಗೊಳ್ಳಲಿದೆ. ಅಲ್ಲಿಂದ ಸುರಂಗದ ಮೂಲಕ ನಗರದಲ್ಲಿ ಹಾದು ಹೋಗಲಿದೆ. ಬಳ್ಳಾರಿ ಮಾರ್ಗದಲ್ಲಿ ಗಂಗಾನಗರದಿಂದ ಹೆಬ್ಬಾಳದವರೆಗೆ ಮತ್ತೆ ಎತ್ತರಿಸಿದ ಮಾರ್ಗ ನಿರ್ಮಾಣಗೊಳ್ಳಲಿದೆ.

ಬಜೆಟ್‌ನಲ್ಲಿ ಘೋಷಣೆ?

ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗಿದೆ. ಎರಡು ವಾರದೊಳಗೆ ಸರ್ಕಾರಕ್ಕೆ ಸಲ್ಲಿಸಲಾಗುವುದು. ಸರ್ಕಾರವು ಈ ಬಜೆಟ್‌ನಲ್ಲಿ ಘೋಷಣೆ ಮಾಡುವ ಸಾಧ್ಯತೆ ಇದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸರ್ಜಾಪುರ ರಸ್ತೆ, ಬಳ್ಳಾರಿ ರಸ್ತೆ (ಬಸವೇಶ್ವರ ವೃತ್ತದಿಂದ ಹೆಬ್ಬಾಳದವರೆಗೆ) ಸಹಿತ ಹಲವು ಕಡೆಗಳಲ್ಲಿ ಉಂಟಾಗುತ್ತಿರುವ ವಾಹನದಟ್ಟಣೆಯನ್ನು ಈ ಯೋಜನೆ ನಿವಾರಿಸಲಿದೆ ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕಾಧಿಕಾರಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈಗಾಗಲೇ ಚಾಲನೆಯಲ್ಲಿರುವ ಮೆಟ್ರೊ ನೇರಳೆ ಮಾರ್ಗ ಮತ್ತು ಕಾಮಗಾರಿ ನಡೆಯುತ್ತಿರುವ ನೀಲಿ, ಗುಲಾಬಿ ಮಾರ್ಗಗಳೊಂದಿಗೆ ಪ್ರಸ್ತಾವಿತ ಸರ್ಜಾಪುರ–ಹೆಬ್ಬಾಳ ಮಾರ್ಗವು ಸಂಪರ್ಕಿಸುವುದರಿಂದ ಪ್ರಯಾಣಿಕರಿಗೆ ಮಾರ್ಗ ಬದಲಾವಣೆಗೆ ಸುಲಭವಾಗಲಿದೆ. ಹಾಗೆಯೇ, ಸಿಲ್ಕ್ ಬೋರ್ಡ್– ದೇವನಹಳ್ಳಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನೀಲಿ ಮಾರ್ಗವನ್ನು ಇಬ್ಲೂರಿನಲ್ಲಿ ಸಂಪರ್ಕಿಸಲಿದೆ. ಕಾಳೇನ ಅಗ್ರಹಾರ–ನಾಗವಾರ ನಡುವೆ ನಿರ್ಮಾಣಗೊಳ್ಳುತ್ತಿರುವ ಗುಲಾಬಿ ಮಾರ್ಗವನ್ನು ಡೇರಿ ಸರ್ಕಲ್‌ನಲ್ಲಿ ಕೂಡಲಿದೆ.

ಚಲ್ಲಘಟ್ಟ–ವೈಟ್‌ಫೀಲ್ಡ್ ನಡುವಿನ ನೇರಳೆ ಮಾರ್ಗವನ್ನು ಕೆ.ಆರ್. ಸರ್ಕಲ್ ಬಳಿ (ಸರ್.ಎಂ. ವಿಶ್ವೇಶ್ವರಯ್ಯ ನಿಲ್ದಾಣ) ಸಂಪರ್ಕಿಸಲಿದೆ.

ಅಲ್ಲದೇ ಉಪನಗರ ರೈಲು ಯೋಜನೆಯ ಚಿಕ್ಕಬಾಣಾವರ–ಬೈಯಪ್ಪನಹಳ್ಳಿ ಮಾರ್ಗವನ್ನು ಹೆಬ್ಬಾಳದಲ್ಲಿ ಸಂಪರ್ಕಿಸುತ್ತದೆ. ಈ ರೀತಿ ನಗರದ ಬಹುತೇಕ ಸಂಪರ್ಕ ಜಾಲಗಳೊಂದಿಗೆ ಕೊಂಡಿಯಾಗುವ ವಿಶಿಷ್ಟ ಯೋಜನೆ ಇದಾಗಿದ್ದು, ನಗರದಲ್ಲಿ ಜನದಟ್ಟಣೆಯನ್ನು ಕಡಿಮೆ ಮಾಡುವಲ್ಲಿ ಮಹತ್ವದ ಪಾತ್ರ ವಹಿಸಲಿದೆ.

ಇಂಟಿಗ್ರೇಟೆಡ್ ಟೌನ್‌ಶಿಪ್ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕುಣಿಗಲ್: ಪಟ್ಟಣದ ಕುದುರೆ ಫಾರಂ ಉಳಿವಿಗಾಗಿ ಅಸ್ತಿತ್ವಕ್ಕೆ ಬಂದಿರುವ ಹೋರಾಟ ಸಮಿತಿಯಿಂದ ಬುಧವಾರ ನಡೆದ ಪ್ರತಿಭಟನೆಯಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್‌ಗೆ ತೀವ್ರ ವಿರೋಧ ವ್ಯಕ್ತವಾಯಿತು.

ಪ್ರತಿಭಟನಕಾರರು ಕುದುರೆ ಫಾರಂ ಉಳಿವಿಗಾಗಿ ನಿರಂತರ ಹೋರಾಟಕ್ಕೆ ಸಿದ್ಧವಿರುವುದಾಗಿ ಘೋಷಣೆ ಕೂಗಿ, ಉಪವಿಭಾಗಾಧಿಕಾರಿ ಗೌರವ್ ಕುಮಾರ್ ಶೆಟ್ಟಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಸಾವಿರಾರು ಕಾರ್ಯಕರ್ತರು ಮೆರವಣಿಗೆಯಲ್ಲಿ ತೆರಳಿ ತಾಲ್ಲೂಕು ಕಚೇರಿ ಮುಂದೆ ಸಭೆ ನಡೆಸಿದರು.

ಸಭೆಯಲ್ಲಿ ನಟ ಚೇತನ್ ಅಹಿಂಸಾ ಮಾತನಾಡಿ, ಸಮಾಜವಾದಿ ಹೆಸರಿನಲ್ಲಿ ‘ಗ್ಯಾರಂಟಿ’ಗಳ ಮೇಲೆ ಅಧಿಕಾರಿಕ್ಕೆ ಬಂದ ಸರ್ಕಾರ ಬಂಡವಾಳಶಾಹಿಗಳ ಪರ ನಿಂತು ಪಾರಂಪರಿಕ ತಾಣ ಕುದುರೆ ಫಾರಂ ಅನ್ನು ಹಾಳುಮಾಡಿ ಟೌನ್‌ಶಿಪ್ ನಿರ್ಮಾಣಕ್ಕೆ ಸಂಚು ರೂಪಿಸುತ್ತಿದೆ. ನಾಡಿನ ಜನರಿಗೂ ಕುಣಿಗಲ್ ಕುದುರೆ ಫಾರಂಗೂ ಅವಿನಾಭಾವ ಸಂಬಂಧವಿದೆ. ಮುಖ್ಯಮಂತ್ರಿ ಈ ವಿಚಾರದಲ್ಲಿ ಮಧ್ಯಪ್ರವೇಶಿಸಬೇಕು’ ಎಂದು ಒತ್ತಾಯಿಸಿದರು.

ಸುಧಾ ಮಯೂರ ಓದಿರಿ

ಮಹಿಳೆ ‘ಬಂಧ ಮುಕ್ತ’ ಗೊಳಿಸಲು ಆದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ 25 ವರ್ಷದ ಮಹಿಳೆಯನ್ನು ಆಕೆಯ ಸೋದರ ಸಂಬಂಧಿ ಮನೆಯಲ್ಲಿ ಕೂಡಿ ಹಾಕಿರುವುದು ಕಾನೂನುಬಾಹಿರ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಮಹಿಳೆಯನ್ನು 48 ಗಂಟೆಗಳ ಒಳಗಾಗಿ ‘ಬಂಧ ಮುಕ್ತ’ ಮಾಡುವಂತೆ ಆಕೆಯ ಪಾಲಕರಿಗೆ ಬುಧವಾರ ನಿರ್ದೇಶನ ನೀಡಿದೆ.

ದುಬೈನಲ್ಲಿ ವಾಸಿಸುತ್ತಿರುವ, ಮಹಿಳೆಯ ಸಹಜೀವನ ಸಂಗಾತಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸಂದೀಪ್ ಮೆಹ್ತಾ ಅವರಿದ್ದ ನ್ಯಾಯಪೀಠ ಈ ನಿರ್ದೇಶನ ನೀಡಿದೆ. ‘ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿ ಪ್ರಶ್ನೆ ಉದ್ಭವಿಸಿದಾಗ, ಒಂದು ದಿನದ ವಿಳಂಬವೂ ಮುಖ್ಯವಾಗುತ್ತದೆ’ ಎಂದು ಹೇಳಿರುವ ನ್ಯಾಯಪೀಠ, ಆಕೆಯ ಸಹಜೀವನ ಸಂಗಾತಿಯ ಪಾಲಕರೊಂದಿಗೆ ಆಕೆ ತೆರಳಲು ಅನುಮತಿ ನೀಡಿದೆ.

ಮಹಿಳೆಯನ್ನು ‘ಬಂಧ ಮುಕ್ತ’ ಗೊಳಿಸುವ ಜೊತೆಗೆ, ಆಕೆಯ ಎಲ್ಲ ದಾಖಲೆಗಳು ಮತ್ತು ವೈಯಕ್ತಿಕ ಪರಿಕರಗಳನ್ನು ಹಿಂದಿರುಗಿಸಬೇಕು ಎಂದು ಪಾಲಕರಿಗೆ ನಿರ್ದೇಶನ ನೀಡಿದೆ.

ಮಹಿಳೆಯನ್ನು ಕೂಡಿ ಹಾಕಿರುವ ಪ್ರಕರಣಕ್ಕೆ ಸಂಬಂಧಿಸಿ ಕರ್ನಾಟಕ ಹೈಕೋರ್ಟ್ ಕಳೆದ ವರ್ಷ ನವೆಂಬರ್ 29ರಂದು ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ, ಆಕೆಯ ಸಂಗಾತಿ ಕೆವಿನ್ ಜಾಯ್ ವರ್ಗೀಸ್ ಎಂಬುವವರು ಸುಪ್ರೀಂ

ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ದುಬೈನಲ್ಲಿ ಇಬ್ಬರು ಒಟ್ಟಿಗೆ ವ್ಯಾಸಂಗ ಮಾಡುತ್ತಿದ್ದೆವು. 9 ವರ್ಷಗಳಿಂದ ಪರಿಚಯ ಇದ್ದು, 2022ರಿಂದ ಸಹಜೀವನ ನಡೆಸುತ್ತಿದ್ದೇವೆ. ಆಕೆಯನ್ನು ಪಾಲಕರು ದುಬೈನಿಂದ ಬಲವಂತದಿಂದ ಬೆಂಗಳೂರಿಗೆ ಕರೆದುಕೊಂಡು ಬಂದಿದ್ದು, ಸೋದರ ಸಂಬಂಧಿ ಮನೆಯಲ್ಲಿ ಕೂಡಿ ಹಾಕಿದ್ದಾರೆ ಎಂದು ಕೆವಿನ್ ಅವರು ಅರ್ಜಿಯಲ್ಲಿ ತಿಳಿಸಿದ್ದಾರೆ.

‘ಮಹಿಳೆಗೆ 25 ವರ್ಷ ವಯಸ್ಸು ಹಾಗೂ ಉನ್ನತ ಶಿಕ್ಷಣವನ್ನೂ ಪಡೆದಿದ್ದಾಳೆ. ಪ್ರತ್ಯೇಕವಾಗಿ ಮೂರು ಬಾರಿ ಆಕೆಯೊಂದಿಗೆ ಸಂವಾದ ನಡೆಸಿದ್ದೇವೆ. ಆಕೆ ಮತ್ತು ಆಕೆಯ ಸಹಜೀವನ ಸಂಗಾತಿಯ ಪಾಲಕರೊಂದಿಗೂ ಮಾತುಕತೆ ನಡೆಸಿದ್ದೇವೆ. ತನ್ನ ಜೀವನಕ್ಕೆ ಸಂಬಂಧಿಸಿ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಅರಿತುಕೊಳ್ಳುವಷ್ಟು ಪ್ರಬುದ್ಧತೆಯನ್ನು ಆಕೆ ಹೊಂದಿರುವುದು ಸ್ಪಷ್ಟವಾಗಿದೆ. ಯಾವುದೇ ಪ್ರಕರಣದಲ್ಲಿ, ಪ್ರೌಢಾವಸ್ಥೆ ತಲುಪಿರುವ ಸ್ತ್ರೀಯನ್ನು ಆಕೆಯ ಇಚ್ಛೆಗೆ ವಿರುದ್ಧವಾದುದನ್ನು ಮಾಡುವಂತೆ ಬಲವಂತ ಮಾಡಲಾಗದು’ ಎಂದು ನ್ಯಾಯಮೂರ್ತಿಗಳು ಹೇಳಿದ್ದಾರೆ.

‘ಮಗಳ ಇಚ್ಛೆಗೆ ನಮ್ಮ ವಿರೋಧ ಇಲ್ಲ. ಆದರೆ, ಪ್ರಸಕ್ತ ಸಾಮಾಜಿಕ ಪರಿಸ್ಥಿತಿ ಕಾರಣದಿಂದ ನಾವು ಹೀಗೆ ಮಾಡಿದೆವು. ನಮ್ಮ ಮಗಳು ತನ್ನ ಜೀವನದ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಮುನ್ನ ಆಕೆ ಆರ್ಥಿಕವಾಗಿ ಸದೃಢವಾಗಬೇಕು ಎಂಬ ಇಚ್ಛೆ ನಮ್ಮದಾಗಿತ್ತು’ ಎಂದು ಮಹಿಳೆಯ ತಂದೆ–ತಾಯಿ ನ್ಯಾಯಪೀಠಕ್ಕೆ ತಿಳಿಸಿದರು.

ಅಸಮಾಧಾನ: ಈ ಪ್ರಕರಣಕ್ಕೆ ಸಂಬಂಧಿಸಿ, ಕರ್ನಾಟಕ ಹೈಕೋರ್ಟ್ ಹೊರಡಿಸಿದ್ದ ಆದೇಶದ ಬಗ್ಗೆಯೂ ನ್ಯಾಯಪೀಠ ಅಸಮಾಧಾನ ಹೊರಹಾಕಿದೆ.

‘ಈ ಪ್ರಕರಣಕ್ಕೆ ಸಂಬಂಧಿಸಿದ ಹೇಬಿಯಸ್ ಕಾರ್ಪಸ್ ಅರ್ಜಿ ವಿಚಾರಣೆ ವೇಳೆ, ಉನ್ನತ ಶಿಕ್ಷಣ ಮುಂದುವರಿಸುವುದಕ್ಕಾಗಿ ದುಬೈಗೆ ಮರಳಲು ಇಚ್ಛಿಸಿದ್ದಾಗಿ ಮಹಿಳೆಯು ಹೈಕೋರ್ಟ್‌ಗೆ ಸ್ಪಷ್ಟವಾಗಿ ತಿಳಿಸಿದ್ದಳು. ಆಕೆಯನ್ನು ತಕ್ಷಣವೇ ಬಂಧಮುಕ್ತಗೊಳಿಸುವಂತೆ ಸೂಚಿಸಿ ಹೈಕೋರ್ಟ್ ಆದೇಶ ಹೊರಡಿಸಬೇಕಿತ್ತು. ಆದರೆ, ಅರ್ಜಿ ವಿಚಾರಣೆಯನ್ನು 14 ಬಾರಿ ಮುಂದೂಡಿದ್ದಲ್ಲದೇ, ವಿಚಾರಣೆಯನ್ನು 2025ಕ್ಕೆ ನಿಗದಿ ಮಾಡಿದೆ. ಇಂತಹ ವಿಷಯ ಕುರಿತು ಹೈಕೋರ್ಟ್‌ಗೆ ಸಂವೇದನೆ ಇಲ್ಲ ಎಂಬುದನ್ನು ಇದು ತೋರಿಸುತ್ತದೆ’ ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ.

‘ಹೈಕೋರ್ಟ್‌ನ ಇಂತಹ ಉದಾಸೀನ ಧೋರಣೆಯಿಂದಾಗಿ, ಮಹಿಳೆಯ ಯೋಗಕ್ಷೇಮ ವಿಚಾರಿಸುವುದಕ್ಕಾಗಿ ಅರ್ಜಿದಾರ ಮತ್ತು ಆತನ ಪಾಲಕರು ದುಬೈನಿಂದ ಬೆಂಗಳೂರಿಗೆ ಪದೇಪದೇ ಭೇಟಿ ನೀಡಬೇಕಾಗಿತ್ತು’ ಎಂದೂ ನ್ಯಾಯಪೀಠ ಹೇಳಿದೆ.

ಒಂದೂವರೆ ತಾಸು ವಿಮಾನ ಶೌಚಾಲಯದಲ್ಲೇ ಪ್ರಯಾಣ!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಮುಂಬೈನಿಂದ ಹೊರಟಿದ್ದ ವಿಮಾನದ ಶೌಚಾಲಯ ಬಾಗಿಲು ತೆರೆಯಲು ಸಾಧ್ಯವಾಗದ ಕಾರಣ ಪ್ರಯಾಣಿಕ ರೊಬ್ಬರು ಬೆಂಗಳೂರಿ ನವರೆಗೆ ಒಂದೂವರೆ ತಾಸು ಶೌಚಾಲಯದಲ್ಲಿಯೇ ಕುಳಿತು ಪ್ರಯಾಣ ಮಾಡಿದ್ದಾರೆ.

ಮುಂಬೈನಿಂದ ಮಂಗಳವಾರ ರಾತ್ರಿ 10.45ಕ್ಕೆ ಹೊರಡಬೇಕಿದ್ದ ಸ್ಪೈಸ್ ಜೆಟ್ ವಿಮಾನ ತಡವಾಗಿ ರಾತ್ರಿ 2ಕ್ಕೆ ಹೊರಟಿತ್ತು. ಸಂಚಾರ ಆರಂಭಿಸಿದ ತುಸು ಹೊತ್ತಿನಲ್ಲಿಯೇ ಪ್ರಯಾಣಿಕರೊಬ್ಬರು ಮೂತ್ರ ವಿಸರ್ಜನೆಗೆಂದು ಶೌಚಾಲಯಕ್ಕೆ ತೆರಳಿದ್ದರು. ಆದರೆ, ಹೊರಗೆ ಬರಲು ಶೌಚಾಲಯದ ಬಾಗಿಲಿನ ಚಿಲಕ ಬಿಗಿಯಾಗಿ ತೆರೆಯಲು ಸಾಧ್ಯವಾಗಲಿಲ್ಲ.

ಒಳಗೆ ಸಿಲುಕಿಕೊಂಡ ಪ್ರಯಾಣಿಕ ನೆರವಿಗಾಗಿ ಪ್ಯಾನಿಕ್ ಬಟನ್ ಒತ್ತಿದ್ದಾರೆ. ನೆರವಿಗೆ ಧಾವಿಸಿದ ವಿಮಾನ ಸಿಬ್ಬಂದಿಗೂ ಬಾಗಿಲು ತೆರೆಯಲು ಸಾಧ್ಯವಾಗಿಲ್ಲ ಎಂದು ವಿಮಾನ ನಿಲ್ದಾಣದ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

‘ನಮ್ಮಿಂದಲೂ ಬಾಗಿಲು ತೆರೆಯಲು ಆಗುತ್ತಿಲ್ಲ. ಕೆಲವೇ ನಿಮಿಷಗಳಲ್ಲಿ ವಿಮಾನ ಬೆಂಗಳೂರಿನಲ್ಲಿ ಇಳಿಯಲಿದೆ. ಶೌಚಾಲಯ ಕಮೋಡ್ ಮುಚ್ಚಿ ಅದರ ಮೇಲೆ ಕುಳಿತುಕೊಳ್ಳಿ. ವಿಮಾನ ಬೆಂಗಳೂರಿನಲ್ಲಿ ಲ್ಯಾಂಡ್ ಆಗುತ್ತಿದ್ದಂತೆಯೇ ಅಲ್ಲಿಯ ಸಿಬ್ಬಂದಿ ಬಂದು ಶೌಚಾಲಯ ಬಾಗಿಲು ತೆರೆಯಲಿದ್ದಾರೆ’ ಎಂದು ಗಗನಸಖಿ ಯೊಬ್ಬರು ಚೀಟಿ ಬರೆದು ಶೌಚಾಲಯ ಬಾಗಿಲಿನ ಸಂದಿ ಯಿಂದ ಪ್ರಯಾಣಿಕನಿಗೆ ನೀಡಿದ್ದಾರೆ.

ಈ ಬಗ್ಗೆ ಸಿಬ್ಬಂದಿ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಮಾಹಿತಿ ನೀಡಿದ್ದರು. ವಿಮಾನ ಬೆಳಗಿನ ಜಾವ 3.45ಕ್ಕೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದಿದೆ. ವಿಮಾನ ನಿಲ್ದಾಣದ ತಜ್ಞ ಸಿಬ್ಬಂದಿ ಶೌಚಾಲಯದ ಬಾಗಿಲು ಒಡೆದು ಪ್ರಯಾಣಿಕನನ್ನು ಸುರಕ್ಷಿತವಾಗಿ ಹೊರಗೆ ಕರೆತಂದಿದ್ದಾರೆ.

ಕಡತನಮಲೆ: 13 ಅಭ್ಯರ್ಥಿಗಳಿಗೆ ಜಯ

ಯಲಹಂಕ: ಕಡತನಮಲೆ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಯ ನೂತನ ನಿರ್ದೇಶಕರ ಆಯ್ಕೆಗಾಗಿ ಮಂಗಳವಾರ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಎಲ್ಲ 13 ಅಭ್ಯರ್ಥಿಗಳು ಗೆದ್ದಿದ್ದಾರೆ.

20ರಿಂದ ‘ಫ್ಯೂಷನ್ ಸಂಗೀತ ನೃತ್ಯೋತ್ಸವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಿದ್ಯಾಭವನ ಮತ್ತು ಇನ್ಫೊಸಿಸ್ ಪ್ರತಿಷ್ಠಾನ ಜಂಟಿಯಾಗಿ ಇದೇ 20 ರಿಂದ 26ರವರೆಗೆ ’ಫ್ಯೂಷನ್ ಸಂಗೀತ ನೃತ್ಯೋತ್ಸವ’ ಕಾರ್ಯಕ್ರಮ ಹಮ್ಮಿಕೊಂಡಿವೆ.

'ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್' ಮಾಧ್ಯಮ ಸಹಯೋಗದಲ್ಲಿ ಭಾರತೀಯ ವಿದ್ಯಾಭವನದ ‘ಖಿಂಚಾ ಸಭಾಂಗಣ’ದಲ್ಲಿ ಕಾರ್ಯಕ್ರಮ ನಡೆಯಲಿದೆ.

ಪ್ರತಿ ದಿನ ಸಂಜೆ 6 ರಿಂದ 8ರವರೆಗೆ 75 ವಿಶ್ವವಿಖ್ಯಾತ ಕಲಾವಿದರು 16 ವೈವಿಧ್ಯಮಯ ಪ್ರಕಾರದಲ್ಲಿ ನೃತ್ಯ ಮತ್ತು ಸಂಗೀತ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುತ್ತಾರೆ. ಈ ಪ್ರದರ್ಶನದ ಪ್ರವೇಶ ಸಾರ್ವಜನಿಕರಿಗೆ ಉಚಿತ ಇರಲಿದೆ.

ಕಾರ್ಯಕ್ರಮಗಳ ವಿವರ: 20ರಂದು ಸಂಜೆ 4ಗಂಟೆಗೆ ಜೈಪುರದ ರಘುವೇಂದ್ರ ಮತ್ತು ತಂಡದವರಿಂದ ಬ್ಯಾಗ್ ಪೈಪರ್ ಸಂಗೀತ ಕಾರ್ಯಕ್ರಮ ನಡೆಯಲಿದೆ. 5 ಗಂಟೆಗೆ ಇನ್ಫೊಸಿಸ್ ಪ್ರತಿಷ್ಠಾನದ ಕಾರ್ಯನಿರ್ವಾಹಕ ಉಪಾಧ್ಯಕ್ಷ ಸುನೀಲ್ ಕುಮಾರ್ ಧಾರೇಶ್ವರ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಪ್ರತಿಷ್ಠಾನದ ನಿರ್ದೇಶಕಿ ಶ್ರುತಿ ಖುರಾನ ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಾರೆ. ಲೇಖಕ ಮತ್ತು ಆರ್ಥಿಕ ವಿಶ್ಲೇಷಕ ಪದಮ್ ಖಿಂಚ ಅವರು ವಿಶೇಷ ಅತಿಥಿಯಾಗಿ ಭಾಗವಹಿಸುತ್ತಾರೆ. ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ. ಜಿ. ರಾಘವನ್ ಅಧ್ಯಕ್ಷತೆ ವಹಿಸುತ್ತಾರೆ.

ಸಂಜೆ 6 ಗಂಟೆಗೆ ಫ್ಯೂಷನ್ ಸಂಗೀತ: ‘ವಾದ್ಯವೈಭವ’ ಕಾರ್ಯಕ್ರಮದಲ್ಲಿ ವಿದ್ವಾನ್ ಶ್ರೀಧರ್ ಸಾಗರ್ ಮತ್ತು ತಂಡ - ಸ್ಯಾಕ್ಸೋಫೋನ್ ವಾದನ ಕಾರ್ಯಕ್ರಮ ಪ್ರಸ್ತುತಪಡಿಸಲಿದೆ. 7 ಗಂಟೆಗೆ ಮಧುಲಿಯಾ ಮಹಾಪಾತ್ರ, ಸಹನಾ ಆರ್. ಮಯ್ಯ, ಕೃಷ್ಣಮೂರ್ತಿ ತುಂಗಾ ಮತ್ತು ಚಿತ್ಕಲಾ ಕೆ. ತುಂಗಾ ಅವರಿಂದ `ಮೋಡಿ ಮಾಡುವ ಒಡಿಸ್ಸಿ ಯಕ್ಷಗಾನ’ ನಡೆಯಲಿದೆ.

21ರಂದು ಸಂಜೆ 6ಕ್ಕೆ ಸಂಗೀತಗಾರ ಪ್ರವೀಣ್ ಡಿ. ರಾವ್ ಅವರ ತಂಡದಿಂದ `ಚಕ್ರಫೋನಿಕ್ಸ್ ಟ್ರಿಯೋ’ ಸಂಗೀತ ಮತ್ತು 7ಕ್ಕೆ ಮಧು ನಟರಾಜ್ ತಂಡದಿಂದ `ಪಾಲಿಂಪ್ಸೆಟ್ ಅಂಡ್ ಸಂಯೋಗ್’ ನೃತ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

22ರಂದು ಸಂಜೆ 6ಕ್ಕೆ ರಾಘವೇಂದ್ರ ಹೆಗಡೆ ಮತ್ತು ವಿದ್ವಾನ್ ಮೌನ ರಾಮಚಂದ್ರ ಅವರ `ಮರಳಿನ ಮಾಧುರ್ಯ’ ಸಂಗೀತ ಕಾರ್ಯಕ್ರಮ ನಡೆಯಲಿದೆ. ಸಂಜೆ 7ಕ್ಕೆ ವಿದುಷಿ ಸಂಧ್ಯಾ ಉಡುಪ ಮತ್ತು ತಂಡದಿಂದ ‘ನವರಾತ್ರಿ ನೃತ್ಯ’ ಕಾರ್ಯಕ್ರಮ ಆಯೋಜಿಸಲಾಗಿದೆ. **23ರಂದು ಸಂಜೆ 6ಕ್ಕೆ ‘ಮಿಸ್ಟಿಕ್ ವೈಬ್ಸ್’:** ವಿದ್ವಾನ್ ಅಮಿತ್ ನಾಡಿಗ್ ಅವರ ಕೊಳಲು ವಾದನದ ವಿಶೇಷ ಕಾರ್ಯಕ್ರಮ ನಡೆಯಲಿದೆ. ಸಂಜೆ 7ಕ್ಕೆ `ಸಖಿ’ (ನಮ್ಮೊಳಗಿನ ಸಖಿತ್ವದ ಹುಡುಕಾಟ) ನೃತ್ಯಕಾರ್ಯಕ್ರಮವನ್ನು ವಿದುಷಿ ಚಿತ್ರಾ ಅರವಿಂದ್ ಮತ್ತು ತಂಡ ಪ್ರಸ್ತುತಪಡಿಸಲಿದೆ.

24ರಂದು ಸಂಜೆ 6ಕ್ಕೆ ವಿದ್ವಾನ್ ರವೀಂದ್ರ ಕಾಟೋಟಿ ಮತ್ತು ತಂಡ `ಧಾತ್ರಿ’ - ಹಿಂದೂಸ್ತಾನಿ ಫ್ಯೂಷನ್ ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಸಂಜೆ 7ಕ್ಕೆ `ವಿ ಮೂವ್ ಥಿಯೇಟರ್’ ತಂಡದ ಅಭಿಷೇಕ್ ಅಯ್ಯಂಗಾರ್ ಅವರು ರಚಿಸಿ ನಿರ್ದೇಶಿಸಿರುವ `ಬೈ ಟು ಕಾಫಿ’ ನಾಟಕ ಪ್ರದರ್ಶನವಿದೆ.

25ರಂದು ಸಂಜೆ 6 ಕ್ಕೆ ವಿದ್ವಾನ್ ಕೆ. ಜಿ. ದಿಲೀಪ್ ಅವರು `ಲಾಕ್ಷ್ಯಾ ಕ್ವಾರ್ಟೆಟ್’ ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಸಂಜೆ 7ಕ್ಕೆ ವಿದುಷಿ ವಿದ್ಯಾ ಅಂಗಾರ ಮತ್ತು ತಂಡದಿಂದ `ಸಂಯಾನ': ಜಯದೇವ ಗೀತಗೋವಿಂದ ಕೂಚುಪುಡಿ, ಒಡಿಸ್ಸಿ, ಭರತನಾಟ್ಯದ ಅಷ್ಟಪದಿ ನೃತ್ಯ ಕಾರ್ಯಕ್ರಮ ನಡೆಯಲಿದೆ.

26ರಂದು ಸಂಜೆ 6ಕ್ಕೆ ಸಮಾರೋಪ ಸಮಾರಂಭ. ಸಂಗೀತಗಾರ ಪ್ರವೀಣ್ ಡಿ. ರಾವ್ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ವಿದ್ಯಾಭವನದ ಉಪಾಧ್ಯಕ್ಷ ಚಿರಂಜೀವಿ ಸಿಂಘ್ ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಾರೆ. ಸಂಜೆ 7ಕ್ಕೆ ಪ್ರವೀಣ್ ಗೋಡ್ಖಿಂಡಿ ಅವರು ‘ರಾಗ ರಂಗ್’ ಕಾರ್ಯಕ್ರಮ ನಡೆಸಿಕೊಡುತ್ತಾರೆ.

ಸಂಗೀತ - ನೃತ್ಯ ಕಾರ್ಯಕ್ರಮಗಳ ಜೊತೆ ಪ್ರತಿ ದಿನ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ ಇರಲಿದೆ ಎಂದು ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್.ಸುರೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



FARNAZ

ದ್ವಿಪಥಕ್ಕೆ ಕಾರ್ಯ ಸಾಧ್ಯತಾ ಸಮೀಕ್ಷೆ

ಯಲಹಂಕ–ಬಂಗಾರಪೇಟೆ ಮಾರ್ಗದ ರೈಲ್ವೆ ಹಳಿ: ಸಮೀಕ್ಷೆಗೆ ₹8 ಕೋಟಿ ಬಿಡುಗಡೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಯಲಹಂಕ–ಬಂಗಾರಪೇಟೆ ಮಧ್ಯೆ ರೈಲ್ವೆ ಹಳಿಯನ್ನು ದ್ವಿಪಥಗೊಳಿಸುವ ಯೋಜನೆಗೆ ಕಾರ್ಯ ಸಾಧ್ಯತಾ ಸಮೀಕ್ಷೆಯ ಮೊದಲ ಹಂತವನ್ನು ನೈರುತ್ಯ ರೈಲ್ವೆ ಆರಂಭಿಸಿದೆ.

ಯಲಹಂಕ-ದೇವನಹಳ್ಳಿ ನಡುವಿನ 23 ಕಿಲೋಮೀಟರ್ ಸಮೀಕ್ಷೆಗೆ ₹ 8 ಕೋಟಿ ಬಿಡುಗಡೆಯಾಗಿದ್ದು, ಸಮೀಕ್ಷೆ ಆರಂಭಗೊಂಡಿದೆ. ಕಾರ್ಯಸಾಧ್ಯತಾ ವರದಿ ಸಲ್ಲಿಕೆಯಾಗಿ ಕಾಮಗಾರಿಗೆ ಅನುಮೋದನೆ ದೊರೆತರೆ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಸಂಪರ್ಕದ ಈ ಮಾರ್ಗ ದ್ವಿಪಥಗೊಳ್ಳುವುದರ ಜೊತೆಗೆ ಸಂಪೂರ್ಣ ವಿದ್ಯುದ್ದೀಕರಣಗೊಳ್ಳಲಿದೆ.

ದೇವನಹಳ್ಳಿಯಿಂದ ಕೋಲಾರ ಮೂಲಕ ಬಂಗಾರಪೇಟೆ ರೈಲು ನಿಲ್ದಾಣದವರೆಗೆ 125 ಕಿ.ಮೀ. ಸಮೀಕ್ಷೆ ಎರಡನೇ ಹಂತದಲ್ಲಿ ನಡೆಯಲಿದೆ. ಈ ಸಮೀಕ್ಷೆಗೆ ₹ 2.5 ಕೋಟಿ ಬಿಡುಗಡೆಯಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಸಮೀಕ್ಷೆ ಕಾರ್ಯ ಆರಂಭಗೊಳ್ಳಬೇಕಿದೆ.

ಏಕಪಥ ಹಳಿಯನ್ನು ಮೇಲ್ದರ್ಜೆಗೇರಿಸಿ ದ್ವಿಪಥಗೊಳಿಸುವ ಯೋಜನೆ ಅನುಷ್ಠಾನಗೊಂಡರೆ ಎಲೆಕ್ಟ್ರಿಕ್ ಮೆಮು ರೈಲುಗಳ ಸಂಖ್ಯೆ ಏರಿಕೆಯಾಗಲಿದೆ. ನಿತ್ಯ ಸಂಚರಿಸುವ ಐಟಿ ಉದ್ಯೋಗಿಗಳಿಗೆ, ವಿದ್ಯಾರ್ಥಿಗಳಿಗೆ, ವ್ಯಾಪಾರಸ್ಥರಿಗೆ ಅನುಕೂಲವಾಗಲಿದೆ.

ಬೆಂಗಳೂರು-ಕೋಲಾರ ಮಾರ್ಗದಲ್ಲಿ ಬೆಳಿಗ್ಗೆ ಒಂದು, ಸಂಜೆಯೊಂದು ರೈಲು ಸಂಚರಿಸುತ್ತಿವೆ. ಐಟಿ ಉದ್ಯೋಗಿಗಳು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ರೈಲುಗಳ ಓಡಾಟ ಕಡಿಮೆ ಇರುವುದರಿಂದ ಹೆಚ್ಚಿನವರು ಬಸ್, ಖಾಸಗಿ ವಾಹನಗಳಲ್ಲಿ ತೆರಳುತ್ತಿದ್ದಾರೆ. ಹಳಿ ದ್ವಿಪಥಗೊಂಡು ರೈಲುಗಳ ಸಂಖ್ಯೆ ಹೆಚ್ಚಳವಾದರೆ, ಪ್ರಯಾಣಿಕರು ರೈಲನ್ನು ನೆಚ್ಚಿಕೊಳ್ಳಲಿದ್ದಾರೆ ಎಂಬುದು ಸ್ಥಳೀಯರ ಅಭಿಪ್ರಾಯ.

‘ಈಗ ಯಲಹಂಕದಿಂದ ದೇವನಹಳ್ಳಿ ಕಡೆಗೆ ರೈಲು ಹೊರಟರೆ, ಆ ಕಡೆಯಿಂದ ಯಾವ ರೈಲು ಬರುವಂತಿಲ್ಲ. ದೇವನಹಳ್ಳಿ ತಲುಪಿದ ಮೇಲೆಯೇ ಬೇರೆ ರೈಲು ಯಲಹಂಕ ಕಡೆಗೆ ಬರಬೇಕು. ಈ ಕಾಯುವಿಕೆಯಿಂದಾಗಿಯೇ ಜನರು ಈ ಮಾರ್ಗದಲ್ಲಿ ರೈಲಿನ ಬದಲು ಬಸ್‌ಗಳನ್ನು ಅವಲಂಬಿಸಿದ್ದಾರೆ. ದ್ವಿಪಥಗೊಂಡರೆ ಈ ಸಮಸ್ಯೆ ತಪ್ಪಲಿದೆ’ ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ‘ಪ್ರಜಾವಾಣಿ’ಗೆ ತಿಳಿಸಿದರು.

ಆಟೊಮ್ಯಾಟಿಕ್ ಸಿಗ್ನಲಿಂಗ್ ವ್ಯವಸ್ಥೆ

ಕುಸುಮಾ

ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಯಲಹಂಕ-ದೇವನಹಳ್ಳಿ ಹಾಗೂ ದೇವನಹಳ್ಳಿ- ಕೋಲಾರ ಮಾರ್ಗದಲ್ಲಿ ರೈಲು ಹಳಿ ದ್ವಿಪಥಗೊಳಿಸುವ ಯೋಜನೆಗೆ ಸಂಬಂಧಿಸಿದಂತೆ ಕಾರ್ಯ ಸಾಧ್ಯತಾ ಸಮೀಕ್ಷೆಗೆ ಅನುದಾನ ಮಂಜೂರಾಗಿದೆ. ಸಮೀಕ್ಷೆ ಪೂರ್ಣಗೊಳಿಸಿ ಸಲ್ಲಿಸುವ ವರದಿ ಸ್ವೀಕಾರಗೊಂಡು ಸರ್ಕಾರ ಅನುಮೋದನೆ ನೀಡಿದರೆ, ಹಳಿ ದ್ವಿಪಥಗೊಳಿಸುವುದರ ಜೊತೆಗೆ ಆಟೊಮ್ಯಾಟಿಕ್ ಸಿಗ್ನಲಿಂಗ್ ಕೂಡಾ ಅನುಷ್ಠಾನಗೊಳ್ಳಲಿದೆ ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕಿ ಕುಸುಮಾ ಹರಿಪ್ರಸಾದ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ದ್ವಿಪಥಗೊಂಡಾಗ ರೈಲುಗಳ ಸಂಖ್ಯೆ ಹೆಚ್ಚಲಿದೆ. ಕೋಲಾರ ಸುತ್ತಮುತ್ತಲಿನ ರೈತರು ತಾವು ಬೆಳೆದ ಬೆಳೆಗಳನ್ನು ಬೆಂಗಳೂರಿಗೆ ತಂದು ಮಾರಾಟ ಮಾಡುವುದಕ್ಕೂ ಅನುಕೂಲವಾಗಲಿದೆ ಎಂದು ವಿವರಿಸಿದರು.

‘ಆದಷ್ಟು ಬೇಗ ದ್ವಿಪಥಗೊಳಿಸುವ ಯೋಜನೆ ಕಾರ್ಯಗತವಾಗಲಿ’

ರಾಜ್ಯದಲ್ಲಿ ಬಹುತೇಕ ರೈಲು ಮಾರ್ಗಗಳು ದ್ವಿಪಥಗೊಂಡಿವೆ. ಯಲಹಂಕ–ಬಂಗಾರಪೇಟೆ ಬಾಕಿ ಉಳಿದಿತ್ತು. ದೇವನಹಳ್ಳಿಯಲ್ಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುವ, ಅಲ್ಲಿಂದ ಬರುವವರಿಗೆ ಸರಿಯಾದ ಸಮಯಕ್ಕೆ ರೈಲುಗಳು ಸಿಗುವಂತಾಗಬೇಕು. ರೈಲುಗಳ ಸಂಖ್ಯೆ ಹೆಚ್ಚಿಸಬೇಕು. ರೈಲುಗಳ ಬಗ್ಗೆ ಪ್ರಯಾಣಿಕರಿಗೆ ವಿಶ್ವಾಸ ಮೂಡಿದರೆ ರೈಲನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ದೇವನಹಳ್ಳಿಗೆ ಮೆಟ್ರೊ ಸಂಪರ್ಕ ಕೂಡ ಆಗುತ್ತಿದೆ. ಆದರೆ, ಅದರ ಟಿಕೆಟ್ ದರ ದುಬಾರಿ ಇರುವುದರಿಂದ ಕಡಿಮೆ ಟಿಕೆಟ್ ದರ ಹೊಂದಿರುವ ರೈಲನ್ನೇ ಜನರು ಆಯ್ಕೆ ಮಾಡಿಕೊಳ್ಳಲಿದ್ದಾರೆ. ಆದಷ್ಟು ಬೇಗ ದ್ವಿಪಥಗೊಳಿಸುವ ಯೋಜನೆ ಕಾರ್ಯಗತವಾಗಲಿ

ಕೆ.ಎನ್. ಕೃಷ್ಣಪ್ರಸಾದ್, ರೈಲ್ವೆ ಹೋರಾಟಗಾರ

ಕಾರು ಚಾಲಕನ ಮೇಲೆ ಹಲ್ಲೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರು ಚಾಲಕನ ಮೇಲೆ ಹಲ್ಲೆ ನಡೆಸಿದ್ದ ಮೂವರು ಆರೋಪಿಗಳನ್ನು ಬೆಳ್ಳಂದೂರು ಪೊಲೀಸರು ಬಂಧಿಸಿದ್ದಾರೆ.

ಅರವಿಂದ್ ರಾಜ್ ಬಹರ್, ಅವನೀಶ್ ಕುಮಾರ್, ಚಂದನ್ ಚವಾಣ್ ಬಂಧಿತರು. ಕಾರು ಚಾಲಕ ಅನಿಲ್ ಅವರ ಮೇಲೆ ಆರೋಪಿಗಳು ಹಲ್ಲೆ ನಡೆಸಿದ್ದರು.

‘ಆರೋಪಿಗಳು, ತಮ್ಮ ಕಾರಿನಲ್ಲಿ ಬರುತ್ತಿದ್ದಾಗ ಯುವತಿ ಅಡ್ಡ ಬಂದಿದ್ದಾರೆ. ಇದೇ ಸಂದರ್ಭದಲ್ಲಿ ಕಾರಿನಲ್ಲಿ ಬಂದಿದ್ದ ಅನಿಲ್ ನೋಡಿಕೊಂಡು ವಾಹನ ಚಲಾಯಿಸುವಂತೆ ಬುದ್ಧಿಮಾತು ಹೇಳಿದ್ದಾರೆ. ಆಗ ಗಲಾಟೆ ನಡೆದು, ಅನಿಲ್ ಮೇಲೆ ತೀವ್ರವಾಗಿ ಹಲ್ಲೆ ನಡೆಸಲಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಸಾರ್ವಜನಿಕರು ಗಲಾಟೆಯನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿ, ಸಾಮಾಜಿಕ ಮಾಧ್ಯಮಕ್ಕೆ ಹಾಕಿದ್ದರು. ಅದನ್ನು ಗಮನಿಸಿ ಆರೋಪಿ ಪತ್ತೆ ಮಾಡಲಾಯಿತು. ಅಲ್ಲದೇ ಅನಿಲ್ ಸಹ ದೂರು ನೀಡಿದ್ದರು’ ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

‘ಶೀಘ್ರ ಅಂತಿಮ ವರದಿ ಸಲ್ಲಿಕೆ’

ಬೆಂಗಳೂರು: ‘ಬೆಳಗಾವಿ ಜಿಲ್ಲೆಯ ಹೊಸ ವಂಟಮೂರಿ ಗ್ರಾಮದ ಮಹಿಳೆಯನ್ನು ವಿವಸ್ತ್ರಗೊಳಿಸಿ ಥಳಿಸಲಾದ ಪ್ರಕರಣಕ್ಕೆ ಸಂಬಂಧಿಸಿದ ತನಿಖೆ ಪೂರ್ಣಗೊಳಿಸಿರುವ ಪೊಲೀಸರು ಈ ತಿಂಗಳಾಂತ್ಯದಲ್ಲಿ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸುವ ನಿರೀಕ್ಷೆ ಇದೆ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಈ ಕುರಿತ ಸವಿವರವಾದ ಮೆಮೊ ಅನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಮೂರು ವಾರಗಳ ಕಾಲ ಮುಂದೂಡಿದೆ.

‘ಡೇಟಿಂಗ್‌ಆ್ಯಪ್’ನಲ್ಲಿ ಪರಿಚಯ: ಯುವಕನಿಗೆ ಮಹಿಳೆ ಕಿರುಕುಳ

ಬೆಂಗಳೂರು: ‘ಆನ್‌ಲೈನ್ ಡೇಟಿಂಗ್’ ಆ್ಯಪ್ ಮೂಲಕ ಪರಿಚಯವಾದ ಯುವಕನಿಗೆ ಮಹಿಳೆಯೊಬ್ಬರು ಲೈಂಗಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ, ಬಾಲಿವುಡ್ ನಿರ್ದೇಶಕಿ ದೀಪಿಕಾ ನಾರಾಯಣ ಭಾರದ್ವಾಜ್ ಅವರು ‘ಎಕ್ಸ್’ ಖಾತೆಯಲ್ಲಿ ಬರಹ ಪ್ರಕಟಿಸಿ, ಅದನ್ನು ನಗರ ಪೊಲೀಸ್ ಕಮಿಷನರ್‌ಗೆ ಟ್ಯಾಗ್ ಮಾಡಿದ್ದಾರೆ. ಮಹಿಳೆ ವಿರುದ್ಧ ಸೂಕ್ತ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಇದಕ್ಕೆ ನಗರ ಪೊಲೀಸರು ಪ್ರತಿಕ್ರಿಯಿಸಿ, ಹತ್ತಿರದ ಪೊಲೀಸ್ ಠಾಣೆಗೆ ದೂರು ನೀಡಿ. ಜತೆಗೆ ತಮ್ಮ ಮೊಬೈಲ್ ನಂಬರ್ ನೀಡುವಂತೆ ಸೂಚಿಸಿದ್ದಾರೆ.

‘ಡೇಟಿಂಗ್ ಆ್ಯಪ್‌ನಲ್ಲಿ ಯುವಕನಿಗೆ ಪರಿಚಯವಾದ ಮಹಿಳೆ ಒಮ್ಮೆ ಭೇಟಿಯಾಗಿದ್ದಳು. ಕೆಲವು ದಿನಗಳ ಬಳಿಕ ಮಹಿಳೆ ಯುವಕನಿಗೆ ಹಣ ಕೇಳಲು ಆರಂಭಿಸಿದ್ದಳು. ಆಗ ಯುವಕ ಹಣ ನೀಡಲು ನಿರಾಕರಿಸಿದ್ದ. ಅದಾದ ಮೇಲೆ ಮಹಿಳೆ ಯುವಕನಿಗೆ ಅಶ್ಲೀಲ ಸಂದೇಶ ಕಳುಹಿಸಿದ್ದಳು. ಬೆದರಿಕೆ ಹಾಕಿದ್ದಳು’ ಎಂದು ಎಕ್ಸ್‌ನಲ್ಲಿ ಬರೆದಿದ್ದಾರೆ.

ಕುಶಲೋಪರಿ...

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಮಾಜಿ ಮುಖ್ಯಮಂತ್ರಿ ದಿವಂಗತ ರಾಮಕೃಷ್ಣ ಹೆಗಡೆಯವರ ಪತ್ನಿ ಶಕುಂತಲಾ ಹೆಗಡೆ ಅವರನ್ನು ಬೆಂಗಳೂರಿನ ಸದಾಶಿವನಗರದಲ್ಲಿರುವ ಅವರ ನಿವಾಸದಲ್ಲಿ ಮಂಗಳವಾರ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು

ಆಧಾರ್, ಬೆರಳಚ್ಚು ಬಳಸಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಧಾರ್ ಕಾರ್ಡ್ ಹಾಗೂ ಬೆರಳಚ್ಚು ಬಳಸಿ ಬ್ಯಾಂಕ್‌ನಲ್ಲಿದ್ದ ಸಾರ್ವಜನಿಕರ ಹಣ ಡ್ರಾ ಮಾಡಿ ವಂಚಿಸುತ್ತಿದ್ದ ಬಿಹಾರದ ನಾಲ್ವರು ಆರೋಪಿಗಳನ್ನು ವಿಶೇಷ ತನಿಖಾ ದಳದ ಪೊಲೀಸರು ಬಂಧಿಸಿದ್ದಾರೆ.

ಬಿಹಾರ ಮೂಲದ ರೆಹಮಾನ್, ಅಬುಜರ್, ಆರೀಫ್, ನಾಶೀರ್ ಅಹಮದ್ ಬಂಧಿತರು.

ಈ ವಂಚನೆ ಸಂಬಂಧ 120ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದವು. ಈ ಸಂಬಂಧ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಅವರು ಎಸ್‌ಐಟಿ ರಚಿಸಿ, ಈಶಾನ್ಯ ವಿಭಾಗದ ಡಿಸಿಪಿ ಲಕ್ಷ್ಮೀ ಪ್ರಸಾದ್ ಅವರಿಗೆ ಜವಾಬ್ದಾರಿ ನೀಡಲಾಗಿತ್ತು. ತನಿಖೆ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬ್ಯಾಂಕ್ ಹಾಗೂ ಎಟಿಎಂ ಕೇಂದ್ರಗಳಿಗೆ ಹೋಗದೇ ಕೇವಲ ಆಧಾರ್ ಬಳಸಿಕೊಂಡು ಹಣ ಪಡೆಯಲು ದೇಶದಲ್ಲಿ ಎಇಪಿಎಸ್ (ಆಧಾರ್ ಆಧಾರಿತ ಹಣ ಪಾವತಿ ವ್ಯವಸ್ಥೆ) ಜಾರಿಗೆ ತರಲಾಗಿತ್ತು. ಈ ವ್ಯವಸ್ಥೆಯನ್ನು ದುರುಪಯೋಗ ಮಾಡಿಕೊಂಡ ಸೈಬರ್ ವಂಚಕರು ಜನರ ಖಾತೆಗಳಲ್ಲಿರುವ ಹಣ ದೋಚುತ್ತಿದ್ದರು.

ಬಂಧಿತರು, ಸರ್ಕಾರದ ಕಂದಾಯ ಇಲಾಖೆ ವೆಬ್‌ಸೈಟ್‌ನಿಂದ ಮಾಹಿತಿ ಪಡೆಯುತ್ತಿದ್ದರು. ಹಣ ದೋಚುವ ಜತೆಗೆ ಆರೋಪಿಗಳು ವೆಬ್‌ಸೈಟ್‌ನಿಂದ ಮಾಹಿತಿ ಪಡೆದು, ₹5 ಸಾವಿರಕ್ಕೆ ಮಾರಾಟ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.

ಗ್ರಾಹಕರ ಮೊಬೈಲ್ ಸಂಖ್ಯೆ, ಇ-ಮೇಲ್ ವಿಳಾಸದ ಮೂಲಕ ವೆಬ್‌ಸೈಟ್‌ಗೆ ಪ್ರವೇಶಿಸುತ್ತಿದ್ದ ಆರೋಪಿಗಳು, ಅದರಲ್ಲಿದ್ದ ಸಾರ್ವಜನಿಕರ ನೋಂದಣಿ ಪತ್ರ ಡೌನ್‌ಲೋಡ್ ಮಾಡಿಕೊಳ್ಳುತ್ತಿದ್ದರು. ಬಳಿಕ, ಅದರಲ್ಲಿರುವ ಆಧಾರ್ ಸಂಖ್ಯೆ, ಬೆರಳಚ್ಚನ್ನು ಫೋಟೊ ಪ್ರಿಂಟ್ ಹಾಳೆ ಮೇಲೆ ನಕಲು ಮಾಡಿಕೊಳ್ಳುತ್ತಿದ್ದರು. ಎಇಪಿಎಸ್ (ಆಧಾರ್ ಎನೇಬಲ್ ಪೇಮೆಂಟ್ ಸಿಸ್ಟಂ) ಸೌಲಭ್ಯದ ಮೂಲಕ ಬ್ಯಾಂಕ್ ಖಾತೆಗಳಿಂದ ಹಣ ವರ್ಗಾವಣೆ ಮಾಡಿಕೊಳ್ಳುತ್ತಿದ್ದರು. ಗ್ರಾಹಕರು ಬ್ಯಾಂಕ್ ಖಾತೆಯ ಮಾಹಿತಿ, ಒಟಿಪಿ ನೀಡದಿದ್ದರೂ ಖಾತೆಯಿಂದ ಆರೋಪಿಗಳು ಹಣ ಪಡೆದುಕೊಳ್ಳುತ್ತಿದ್ದರು. ಯಾವುದೇ ಅಪರಿಚಿತರು ಲಿಂಕ್ ತೆರೆಯದೇ ಇದ್ದರೂ ವಂಚಿಸುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

ಬಂಧಿತ ಆರೋಪಿಗಳು, ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಸೇರಿದಂತೆ ಹಲವು ರಾಜ್ಯಗಳಲ್ಲಿ ವಂಚನೆ ಮಾಡಿದ್ದರು ಎಂದು ಪೊಲೀಸರು ಹೇಳಿದರು.

ವಂಚಕರು ಸ್ಥಳೀಯವಾಗಿ ಗ್ರಾಹಕರ ಸೇವಾ ಕೇಂದ್ರ ತೆರೆದಿದ್ದರು. ಅಲ್ಲಿ ಕರ್ನಾಟಕ, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳ ಸರ್ಕಾರಿ ಇಲಾಖೆಯ ವೆಬ್‌ಸೈಟ್‌ಗಳಲ್ಲಿ ಸಿಗುವ ಬೆರಳಚ್ಚು ಹಾಗೂ ಆಧಾರ್ ನಂಬರ್ ಇರುವ ದಾಖಲಾತಿ ಕಳವು ಮಾಡುತ್ತಿದ್ದರು.

ಎಇಪಿಎಸ್ ವ್ಯವಸ್ಥೆ ಮೂಲಕ ಹಣ ರವಾನೆ ಮಾಡುವಾಗ ಬ್ಯಾಂಕ್ ಖಾತೆದಾರರು ಯಾವುದೇ ಕಾರಣಕ್ಕೂ ಆಧಾರ್ ಕಾರ್ಡ್ ಸಂಖ್ಯೆ ಸೇರಿದಂತೆ ಇನ್ನಿತರ ಮಹತ್ವದ ಮಾಹಿತಿಗಳನ್ನು ಹಂಚಿಕೊಳ್ಳಬೇಡಿ ಎಂದು ಪೊಲೀಸರು ಮನವಿ ಮಾಡಿದ್ದಾರೆ.

ನಾಯಿ ಮರಿ ಸಾವು ಪ್ರಕರಣ: ದಂಡ ಹೆಚ್ಚಿಸಲು ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನಿಸಿ ಇಪ್ಪತ್ತು ದಿನಗಳಾಗಿದ್ದ ಎಂಟು ಬೀದಿ ನಾಯಿಯ ಮರಿಗಳ ಸಾವಿಗೆ ಕಾರಣವಾಗಿದ್ದಾರೆ’ ಎಂದು ಆರೋಪಿಸಲಾದ ಪ್ರಕರಣವೊಂದರಲ್ಲಿ ವಾಯುಪಡೆ ನೌಕರರೊಬ್ಬರ ಪತ್ನಿಗೆ ನಗರದ 47ನೇ ಹೆಚ್ಚುವರಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ವಿಧಿಸಿದ್ದ ₹ 1 ಸಾವಿರ ದಂಡದ ಮೊತ್ತ ಹೆಚ್ಚಿಸಲು ಕೋರಿದ್ದ ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಕೆ.ಬಿ.ಹರೀಶ್ ಸಲ್ಲಿಸಿದ್ದ ಕ್ರಿಮಿನಲ್ ಪುನರ್ ನಿರೀಕ್ಷಣಾ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜೈಬುನ್ನೀಸಾ ಮೊಯಿದ್ದೀನ್ ಖಾಜಿ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಈಗಾಗಲೇ ಆರೋಪಿಯು ವಿಚಾರಣಾ ನ್ಯಾಯಾಲಯದಲ್ಲಿ ತಪ್ಪೊಪ್ಪಿಕೊಂಡಿದ್ದಾರೆ. ಅಂತೆಯೇ, ಅವರಿಗೀಗ 72 ವರ್ಷವಾಗಿದ್ದು ಶಿಕ್ಷೆಯ ಪ್ರಮಾಣ ಹೆಚ್ಚಿಸಬೇಕೆಂಬ ಅರ್ಜಿದಾರರ ಮನವಿಯಲ್ಲಿ ಮಧ್ಯ ಪ್ರವೇಶಿಸುವುದಿಲ್ಲ’ ಎಂದು ಹೇಳಿದೆ.

ಪ್ರಕರಣವೇನು?: ನಗರದ ಪೀಣ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ಆರೋಪಿ ಮಹಿಳೆಯು, 2016ರ ಮಾರ್ಚ್ 15ರಂದು ತಮ್ಮ ಮನೆಯ ಮುಂದಿನ ಚರಂಡಿಯಲ್ಲಿದ್ದ ಎಂಟು ನಾಯಿ ಮರಿಗಳು ಕಿರಿಕಿರಿ ಉಂಟು ಮಾಡುತ್ತಿವೆ ಎಂಬ ಕಾರಣಕ್ಕಾಗಿ ಅವುಗಳನ್ನು ಚರಂಡಿಯಿಂದ ತೆಗೆದು ಹೊರಗೆ ಹಾಕಿದ್ದರು. ‘ಅವುಗಳು ಪುನಃ ಚರಂಡಿಯಲ್ಲಿ ಇಳಿದು ತಮ್ಮ ತಾಯಿಯ ಹಾಲು ಕುಡಿಯಲು ಸಾಧ್ಯವಾಗದೆ ಪರದಾಡಿ ಎರಡು ದಿನಗಳ ನಂತರ ಪ್ರಾಣ ಬಿಟ್ಟಿವೆ. ಈ ಮೂಲಕ ಮಹಿಳೆಯು ಇವುಗಳ ಸಾವಿಗೆ ಕಾರಣವಾಗಿದ್ದಾರೆ’ ಎಂದು ಆರೋಪಿಸಿ ಪ್ರಾಣಿ ಕಲ್ಯಾಣ ವಿಭಾಗದ ಅಧಿಕಾರಿ ಹರೀಶ್ ಪೊಲೀಸರಿಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಆರೋಪಿ ಮಹಿಳೆಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 429 ಮತ್ತು ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಯುವ ನಿಟ್ಟಿನಲ್ಲಿನ ಕರ್ನಾಟಕ ಪೊಲೀಸ್ ಕಾಯ್ದೆಯ ಕಲಂ 11ರ ಪ್ರಕಾರ ಎಫ್‌ಐಆರ್ ದಾಖಲಿಸಿದ್ದರು. ತನಿಖೆ ನಡೆಸಿ ವಿಚಾರಣಾ ನ್ಯಾಯಾಯಲಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಆರೋಪಿ ಮಹಿಳೆಯ ನ್ಯಾಯಿಕ ವಿಚಾರಣೆಯ ಆರಂಭದಲ್ಲೇ ತಪ್ಪು ಒಪ್ಪಿಕೊಂಡಿದ್ದರಿಂದ ನ್ಯಾಯಾಲಯ ₹ 1 ಸಾವಿರ ದಂಡ ವಿಧಿಸಿ ಆದೇಶಿಸಿತ್ತು.

ಬ್ಲ್ಯಾಕ್‌ಮೇಲ್ ಶಂಕೆ: ಆರೋಪಿ ಬಂಧನ

ಬೆಂಗಳೂರು: ವಿಧಾನಸೌಧ ಹಾಗೂ ಎಂ.ಎಸ್. ಬಿಲ್ಡಿಂಗ್‌ನಲ್ಲಿರುವ ಬೇರೆ ಬೇರೆ ಇಲಾಖೆಯ ಕಚೇರಿಗಳಿಗೆ ಕರೆ ಮಾಡಿ, ಅಧಿಕಾರಿಗಳ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದ ವ್ಯಕ್ತಿಯನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿಕ್ರಂ ಗೋಪಾಲಸ್ವಾಮಿ ಬಂಧಿತ ಆರೋಪಿ. ಈತ ನಿವೃತ್ತ ಅಧಿಕಾರಿಯೊಬ್ಬರ ಪುತ್ರ. ‘ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರ ಆಪ್ತ ಸಹಾಯಕ ಎಂದು ಹೇಳಿಕೊಂಡು ಕರೆ ಮಾಡಿ ಅಧಿಕಾರಿಗಳ ಮಾಹಿತಿ ಕಲೆ ಹಾಕುತ್ತಿದ್ದಾರೆ ಎಂದು ಆರೋಪಿಸಿ, ಮಹಿಳಾ ಅಧಿಕಾರಿಯೊಬ್ಬರು ದೂರು ನೀಡಿದ್ದರು. ಆರೋಪಿ ಬಂಧಿಸಲಾಗಿದೆ. ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರ ಹೆಸರು ಹೇಳಿದ್ದಕ್ಕೆ ಪುರಾವೆ ಲಭಿಸಿಲ್ಲ. ಅಧಿಕಾರಿಯೊಬ್ಬರ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ. ತನಿಖೆ ನಡೆಯುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಾರ್ಕಿಂಗ್ ವಿಚಾರಕ್ಕೆ ಗಲಾಟೆ: ಬಸ್ ಗಾಜು ಪುಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್ ಸಮೀಪ ಪಾರ್ಕಿಂಗ್ ವಿಚಾರಕ್ಕೆ ಮಂಗಳವಾರ ಮಧ್ಯರಾತ್ರಿ ನಡೆದ ಗಲಾಟೆಯಲ್ಲಿ ಎರಡು ಕೆಎಸ್‌ಆರ್‌ಟಿಸಿ ಬಸ್‌ಗಳ ಗಾಜುಗಳನ್ನು ಪುಡಿ ಮಾಡಲಾಗಿದೆ.

ಘಟನೆ ಸಂಬಂಧ ಗೋರಿಪಾಳ್ಯದ ರಿಯಾಜ್ ಹಾಗೂ ಇಮ್ರಾನ್ ಎಂಬುವರನ್ನು ಕಾಟನ್‌ಪೇಟೆ ಪೊಲೀಸರು ಬಂಧಿಸಿದ್ದಾರೆ. ಉಳಿದ ಮೂವರ ಬಂಧನಕ್ಕೆ ಶೋಧ ಮುಂದುವರಿದಿದೆ.

ಮೈಸೂರು ಡಿಪೊಗೆ ಸೇರಿದ ಎರಡು ಬಸ್‌ಗಳು ಮೈಸೂರಿನಿಂದ ನಗರಕ್ಕೆ ಬಂದಿದ್ದವು. ಮೆಜೆಸ್ಟಿಕ್‌ನ ಶಾಂತಲಾ ವೃತ್ತದ ಬಳಿ ಪಾರ್ಕಿಂಗ್ ಮಾಡುತ್ತಿದ್ದ ವೇಳೆ, ಅದೇ ಸಮಯಕ್ಕೆ ಒಂದು ಬೈಕ್ ಹಾಗೂ ಎರಡು ಆಟೊದಲ್ಲಿ ಐವರು ಆರೋಪಿಗಳ ನಡುವೆ ಪಾರ್ಕಿಂಗ್ ವಿಚಾರವಾಗಿ ಗಲಾಟೆ ನಡೆದಿದೆ. ಮಾತಿಗೆ ಮಾತು ಬೆಳೆದು ಬಸ್‌ಗಳ ಮೇಲೆ ದಾಳಿ ನಡೆಸಿ, ಗಾಜು ಪುಡಿ ಮಾಡಿದ್ದಾರೆ.

ಬಸ್‌ನಲ್ಲಿದ್ದ ಪ್ರಯಾಣಿಕರು ಮೊಬೈಲ್‌ನಲ್ಲಿ ಗಲಾಟೆ ದೃಶ್ಯ ಸೆರೆ ಹಿಡಿದಿದ್ದರು. ಅದನ್ನು ಆಧರಿಸಿ, ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳು ಮದ್ಯ ಸೇವಿಸಿ ಅದರ ಮತ್ತಿನಲ್ಲಿ ಪುಂಡಾಟ ನಡೆಸಿದ್ದಾರೆ ಎಂದು ಪೊಲೀಸರು ಹೇಳಿದರು.

‘ರಾತ್ರಿ 1.45ರ ಸುಮಾರಿಗೆ ಮೈಸೂರಿನಿಂದ ಬಂದಿದ್ದೆವು. ನಾವು ನಿಲ್ಲಿಸಿದ್ದ ಬಸ್ ಎದುರು ಹಾಗೂ ಹಿಂಬದಿ ಸಹ ಬಸ್‌ಗಳು ನಿಂತಿದ್ದವು. ಏಕಾಏಕಿ ದಾಳಿ ನಡೆಸಿದ ಆರೋಪಿಗಳು, ಗಾಜು ಪುಡಿ ಮಾಡಿದರು. ತಕ್ಷಣವೇ ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಲಾಯಿತು. ಪೊಲೀಸರು ಬರುವಷ್ಟರಲ್ಲಿ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು’ ಎಂದು ಬಸ್ ನಿರ್ವಾಹಕ ಸಿದ್ದೇಶ್ ಹೇಳಿದರು.

ಪ್ರಜ್ಞೆ ತಪ್ಪಿಸಿ ಚಿನ್ನ ಸುಲಿಗೆ: ಐವರ ಬಂಧನ

ಬೆಂಗಳೂರು: ಸಾಲ ತೀರಿಸಲು ಹಾಡಹಗಲೇ ಆಯುರ್ವೇದಿಕ್ ಸೆಂಟರ್‌ಗೆ ನುಗ್ಗಿ ಕೈ, ಕಾಲು ಕಟ್ಟಿ ಮಾಂಗಲ್ಯ ಸರ, ಚಿನ್ನಾಭರಣ ಹಾಗೂ ಮೊಬೈಲ್ ಸುಲಿಗೆ ಮಾಡಿದ್ದ ದಂಪತಿ ಸೇರಿ ಐವರನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಾರೋಹಳ್ಳಿ ನಿವಾಸಿಗಳಾದ ಗುರು, ಆತನ ಪತ್ನಿ ರೇಣುಕಾ, ಸ್ನೇಹಿತೆ ಪ್ರಭಾವತಿ ಹಾಗೂ ಈಕೆಯ ಸಂಬಂಧಿಕರಾದ ರುದ್ರೇಶ್, ಸಂದೀಪ್ ಬಂಧಿತ ಆರೋಪಿಗಳು.

ಭಾನುವಾರ (ಜ.14ರಂದು) ಕೊಡಿಗೇಹಳ್ಳಿ ಸಮೀಪದ ತಿಂಡ್ಲು ವೃತ್ತದಲ್ಲಿರುವ ಗಂಗಾ ಆಯುರ್ವೇದಿಕ್ ಸೆಂಟರ್‌ಗೆ ನುಗ್ಗಿ, ಸಿಬ್ಬಂದಿ ಅನುಶ್ರೀ ಎಂಬುವರ ಕೈ, ಕಾಲು ಕಟ್ಟಿಹಾಕಿ, 48 ಗ್ರಾಂ ಚಿನ್ನ ಹಾಗೂ ಐಫೋನ್ ಸುಲಿಗೆ ಮಾಡಿದ್ದರು.

‘ಆಯುರ್ವೇದಿಕ್ ಸೆಂಟರ್‌ನಲ್ಲಿ ರೇಣುಕಾ ಕೆಲಸ ಮಾಡುತ್ತಿದ್ದಳು. ಇದರಿಂದ ಅನುಶ್ರೀಯ ಪರಿಚಯವಾಗಿತ್ತು. ಅನುಶ್ರೀ ಬಳಿ ಚಿನ್ನಾಭರಣ, ನಗದು ಇರಬಹುದು ಎಂದು ಭಾವಿಸಿ ಸುಲಿಗೆಗೆ ಸಂಚು ರೂಪಿಸಿ, ಪ್ರಭಾವತಿಗೆ ತಿಳಿಸಿದ್ದಳು. ಜ.13ರಂದು ಸಂಜೆ ಪ್ರಭಾವತಿ ಸೆಂಟರ್‌ಗೆ ಹೋಗಿ ಬೆನ್ನು ನೋವಿಗೆ ಚಿಕಿತ್ಸೆ ಬೇಕೆಂದು ಕೇಳಿದ್ದಳು. ಆಗ ಅನುಶ್ರೀ, ಮರು ದಿನ ಬರುವಂತೆ ಸೂಚಿಸಿದ್ದರು. ಮರು ದಿನ ಬೆಳಿಗ್ಗೆಯೇ ಸೆಂಟರ್‌ಗೆ ಬಂದ ಪ್ರಭಾವತಿಗೆ, ಅನುಶ್ರೀ ಚಿಕಿತ್ಸೆ ಕೊಡಲು ಒಳಗಡೆ ಕರೆದೊಯ್ಯುವಾಗ ರುದ್ರೇಶ್, ಸಂದೀಪ್ ಮತ್ತು ಗುರು ಏಕಾಏಕಿ ಸೆಂಟರ್ ಒಳಕ್ಕೆ ನುಗ್ಗಿದ್ದಾರೆ. ಕರವಸ್ತ್ರದಲ್ಲಿದ್ದ ರಾಸಾಯನಿಕದಿಂದ ಅನುಶ್ರೀಯ ಪ್ರಜ್ಞೆ ತಪ್ಪಿಸಿ, ಚಿನ್ನಾಭರಣ ಹಾಗೂ ಮೊಬೈಲ್ ಸುಲಿಗೆ ಮಾಡಿದ್ದರು’ ಎಂದು ಪೊಲೀಸರು ಹೇಳಿದರು. ಆಯುರ್ವೇದಿಕ್ ಸೆಂಟರ್‌ನಲ್ಲಿದ್ದ ಸಿಸಿ ಟಿ.ವಿ ಕ್ಯಾಮೆರಾ ಪರಿಶೀಲಿಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮಂಜುವಿರಟ್ಟು: ಹೋರಿ ಇರಿದು ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಶಿವಗಂಗಾ ಜಿಲ್ಲೆಯಲ್ಲಿ ಬುಧವಾರ ಹೋರಿಗಳನ್ನು ಪಳಗಿಸುವ ಕ್ರೀಡೆ ‘ಮಂಜುವಿರಟ್ಟು’ ನಡೆಯುತ್ತಿದ್ದ ವೇಳೆ, ಹೋರಿ ಇರಿದ ಪರಿಣಾಮ 12 ವರ್ಷದ ಬಾಲಕ ಸೇರಿ ಇಬ್ಬರು ಮೃತಪಟ್ಟು, 70 ಜನರು ಗಾಯಗೊಂಡಿದ್ದಾರೆ.

ಕ್ರೀಡೆಯನ್ನು ನೋಡುವುದಕ್ಕಾಗಿ ಪ್ರೇಕ್ಷಕರ ಸಾಲಿನಲ್ಲಿ ಕುಳಿತಿದ್ದ ಬಾಲಕನಿಗೆ ಹೋರಿಯೊಂದು ಇರಿದಿದೆ. ಇದರ ಪರಿಣಾಮ ಬಾಲಕ ಮೃತಪಟ್ಟಿದ್ದಾನೆ. ಇದೇ ವೇಳೆ, ಹೋರಿಯು ಇರಿದು, 36 ವರ್ಷದ ವ್ಯಕ್ತಿ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಹಕಾರ ಸಚಿವ ಕೆ.ಆರ್. ಪೆರಿಯಕರುಪ್ಪನ್ ಹಾಗೂ ಶಿವಗಂಗಾ ಸಂಸದ ಕಾರ್ತಿ ಪಿ.ಚಿದಂಬರಂ ಅವರು ಈ ಘಟನೆ ನಡೆದಾಗ, ಪ್ರೇಕ್ಷಕರ ಸಾಲಿನಲ್ಲಿದ್ದರು.

ಜಲ್ಲಿಕಟ್ಟು ಹೋಲುವ ಮಂಜುವಿರಟ್ಟು ಕ್ರೀಡೆಯನ್ನು ಹೆಚ್ಚಾಗಿ ತಮಿಳುನಾಡಿನ ದಕ್ಷಿಣ ಭಾಗದಲ್ಲಿ ಆಯೋಜಿಸಲಾಗುತ್ತದೆ.

ಜಲ್ಲಿಕಟ್ಟು: 12ಕ್ಕೂ ಹೆಚ್ಚು ಜನರಿಗೆ ಗಾಯ

ರಾಜ್ಯದ ವಿವಿಧೆಡೆ, ಜಲ್ಲಿಕಟ್ಟು ಕೂಡ ನಡೆಯಿತು. ಹೋರಿಗಳನ್ನು ಪಳಗಿಸುವಲ್ಲಿ ನಿಷ್ಣಾತರಾದ 800ಕ್ಕೂ ಹೆಚ್ಚು ಮಂದಿ ಇದರಲ್ಲಿ ಪಾಲ್ಗೊಂಡಿದ್ದರು. ಮದುರೈ ಜಿಲ್ಲೆಯ ಅಲಂಗಾನಲ್ಲೂರಿನಲ್ಲಿ ನಡೆದ ಜಲ್ಲಿಕಟ್ಟು ವೇಳೆ 12ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದೂ ಪೊಲೀಸರು ತಿಳಿಸಿದ್ದಾರೆ.

EDUCATION SUCCESS

CONGRATULATIONS
Ph.D AWARDED

Bharathidasan University has awarded Ph.D to
Dr. HEMALATHA P
(Grand daughter of Late Shri K.Rajan)
Completed thesis on Financial Management
With best wishes from : Family members and friends

CONNECT ಕ್ಲಾಸಿಫೈಡ್ಸ್

ಇಂಡಿಯನ್ ಹಾತ್ ಫೆಸ್ಟಿವಲ್
Indian Haat Festival
A Shopping Fest
Arts, Crafts and Handlooms Exhibition
12th to 21st January 2024
Timings : 11:00 AM to 7:00 PM
10 Days Exhibition | Entry Free
Venue: Karnataka Chitrakala Parishath
Kumara Krupa Road, Near Shivananda Circle
Bengaluru - 560 001.
100+ Stalls | Live Performance | 10 Days Exhibition | Entry Free
Vishal Live Karaoke 20TH JANUARY 2024 5 PM to 7 PM Venue: Karnataka Chitrakala Parishath Kumara Krupa Road, Bengaluru
Djembe Live Performance 21st Jan 2024 Timings: 5pm - 7pm Venue: Karnataka Chitrakala Parishath Kumara Krupa Road, Bengaluru-01
Art & Craft | Jewellers | Clothings | Fashion Accessories | Home Decore & More
For Details Contact: 6364685716 / 9036658774

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

BUSINESS
Business Offers
Finance
WANTED BUSINESS Partners Gold Business 5, 10, 25 Lakhs Investment Monthly Income 1 Lakhs Contact: 8892501007/ 9606701007
WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

JOB OPPORTUNITIES
Wanted
WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798
Teachers/ Professors
WANTED TRAINED Female TEACHERS with B.A, B.Ed, M.A (English) B.Ed to Teach English, Social Studies and Kannada for Primary Classes and N.T.T Trained TEACHER for Pre-Primary Classes. Salary negotiable. Apply/ Contact in person immediately. PRINCIPAL, HOLY CHILD CONVENT 1133/44, 9th Cross, Ashoknagar, Near Vidyapeeta Circle, Bangalore- 560050. Ph: 26608485. Drop your resume or mail to: hcchs1371@yahoo.com

REQUIRED FULL TIME FACULTY with Ph.D/NET/SET & Experience for MBA (Accounting & Finance) Preference for SC/ST Candidates
St. Claret College Jalahalli Post, Bengaluru 560 013 Contact: 080-23454755 Mob: 9620912639 Send your resumes to: scc@claretcollege.edu.in www.claretcollege.edu.in

General
REQUIRED MANAGERIAL staff Male/ Female for Plywood Shop Lalbagh Road near Subbayya Circle. Staying nearby preferred. Age: 50+ Yrs. 9243120231, 9886750689

PERSONAL
Change of Name
CHANGE OF NAME
I, RICHIE PETER CHIRIANKANDATH Residing at #15, Shalom, 1st Cross, Annasandrapalya, Bengaluru- 560017 have changed my name to RICHIE PETER vide affidavit dated 17.1.2024 before notary Gangaraju B.N, Bengaluru. Henceforth I shall be called RICHIE PETER only.
I AZEEZ SHABANA ZAHEER residing at #44 first floor 1st main road Dharmanna garden, R.T.Nagar post, Bangalore-32 have changed my name to SHABANA vide affidavit dated 17-01-2024 Before notary Leela Bangalore.
I, VIJAYA DEVI R/a. #164, 4th floor, 5th main road, Bangalore -560018 Have Changed my Name To VIJAYA DEVI PRAKASHCHAND Vide Affidavit Dated 16/01/2024 before Notary Hegde Ganapati Venkatraman Bangalore.
CHANGE OF NAME
I, ROHIT KAKDE Residing at Gujjar Nilaya, 4th Cross, Bommanakatte, Shivmoga- 577204 have changed my name to ZAYN MALIK vide affidavit dated 17.1.2024 before notary N. Kanchivaradaraju, Bangalore. Henceforth I shall be called ZAYN MALIK only.
I, ROSHNI S V U, D/o Vijay E Uttarkar, age 21 years, declare that I have changed my name from SYEDA ROSHNI to ROSHNI S V U, affidavit dated 8-1-2024, sworn before Advocate and Notary CHANDRASHEKARAIAH .S, Bangalore.
KRANTI DEVI, Mother/o, 6494469L, NK/ASH, MUKESH KUMAR, Vill – Baghar, T.M. Baghar, Manihari, Katihar, Bihar changed name KRANTI DEVI to KANTI DEVI, 16/01/2024, Notary K.V. Mani, Bangalore
YOGENDRA PRASAD YADAV, Father/o, 6494469L, NK/ASH, MUKESH KUMAR, Vill– Baghar, T.M.Baghar, Manihari, Katihar, Bihar changed name YOGENDRA PRASAD YADAV to YOGENDRA YADAV, 16/01/2024, Notary K.V. Mani, Bangalore

Lost
DOCUMENT LOST
I, Abishek G S/o late Govindraj Residing at 111, Challaghatta Village, have lost my Gift deed No. INR-1-06275-2021-22 CD No. INRD920 located at Kodihalli, Village. While in transit. If found please Contact: or near by Police Station 8095933225

EDUCATIONAL
Training
NURSERY TEACHERS TRAINING Course at JNANABHARATHI,with in Class Training 6 Months/1 year (offline/online),100% Job Assurance. Call:6363032729

DH DECCAN HERALD Classifieds More value, more impact
ಪ್ರಜಾವಾಣಿ
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com BOOK NOW
Book your ad with us now!
For more details contact:
+91 9731810277 | +91 9900428036 | +91 9845114560 | +91 9901641752 | | +91 9886213331 | 080- 45557163/164

ಬಿಡಿಎ: ಆನ್‌ಲೈನ್, ಕಿಯೋಸ್ಕ್‌ಗಳಲ್ಲಿ ಒಂದು ತಿಂಗಳು ಅವಕಾಶ • ಪ್ರತಿ ಚದರ ಅಡಿಗೆ ₹4,900 ದರ ನಿಗದಿ

ಕಾರಂತ ಬಡಾವಣೆ: 25ರಿಂದ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ಶಿವರಾಮ ಕಾರಂತ ಬಡಾವಣೆಯಲ್ಲಿ 10 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ನಾಗರಿಕರಿಗೆ ಹಂಚಿಕೆ ಮಾಡಲು ಜ.25ರಿಂದ ಅರ್ಜಿ ಆಹ್ವಾನಿಸಲಾಗುತ್ತದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಡಿಎ ಅಧಿಕಾರಿಗಳೊಂದಿಗೆ ಬುಧವಾರ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ರತಿ ಚದರ ಅಡಿಗೆ ₹4,900 ದರದಲ್ಲಿ ನಿವೇಶನ ಹಂಚಿಕೆ ಮಾಡಲಾಗುತ್ತದೆ. ಜ.25ರಿಂದ ಒಂದು ತಿಂಗಳು ಆನ್‌ಲೈನ್ ಹಾಗೂ ಬಿಡಿಎ ಕಚೇರಿಗಳಲ್ಲಿನ ಕಿಯೋಸ್ಕ್‌ಗಳಲ್ಲಿ ಅರ್ಜಿ ಸಲ್ಲಿಸಬಹುದು' ಎಂದು ಹೇಳಿದರು.

ಅರ್ಜಿ ಸಲ್ಲಿಸುವಾಗ ಶೇ 12.5ರಷ್ಟು ಹಣವನ್ನು ಪ್ರಾರಂಭಿಕ ಠೇವಣಿಯಾಗಿ ಪಾವತಿಸಬೇಕು. ಎಸ್‌.ಸಿ, ಎಸ್‌.ಟಿಯವರು ಶೇ 5ರಷ್ಟು ಪಾವತಿಸಬೇಕು. ಇದಕ್ಕಾಗಿ ಒಂಬತ್ತು ಬ್ಯಾಂಕ್‌ಗಳನ್ನು ಗುರುತಿಸಲಾಗಿದೆ. ಪಾರದರ್ಶಕವಾಗಿ ಹಂಚಿಕೆ ಪ್ರಕ್ರಿಯೆ ನಡೆಯಲಿದೆ ಎಂದರು.

'ರೈತರಿಗೆ ಶೇ 40ರಷ್ಟು ಅಭಿವೃದ್ಧಿಗೊಂಡ ನಿವೇಶನಗಳನ್ನು ನೀಡಬೇಕಾಗಿದೆ. ಸ್ವಾಧೀನಕ್ಕೆ ಹಣ, ಅಭಿವೃದ್ಧಿ ವೆಚ್ಚವೆಲ್ಲವೂ ಹೆಚ್ಚಾಗಿದೆ. ಹೀಗಿದ್ದರೂ ಖಾಸಗಿಯವರಿಗಿಂತ ಕಡಿಮೆ ಬೆಲೆಯಲ್ಲೇ ನಿವೇಶನಗಳನ್ನು ಹಂಚಲಾಗುತ್ತಿದೆ. ಬಡಾವಣೆಯಲ್ಲಿರುವ 4,750ಕ್ಕೂ ಹೆಚ್ಚು ಮೂಲೆ ನಿವೇಶನಗಳನ್ನು ಇ-ಹರಾಜು ಮಾಡಲಾಗುತ್ತದೆ' ಎಂದರು.

ಕ್ರೀಡಾಂಗಣ: 'ಶಿವರಾಮ ಕಾರಂತ ಬಡಾವಣೆಯಲ್ಲಿ ಬೃಹತ್ ಕ್ರೀಡಾಂಗಣ ನಿರ್ಮಿಸಲು 25ರಿಂದ 30 ಎಕರೆ ಜಾಗವನ್ನು ಗುರುತಿಸಲಾಗಿದೆ. ಕಂಠೀರವ, ಚಿನ್ನಸ್ವಾಮಿ ಕ್ರೀಡಾಂಗಣ ಮಾದರಿಯಲ್ಲಿ ಉತ್ತರ ಭಾಗದಲ್ಲಿ ದೊಡ್ಡ ಕ್ರೀಡಾಂಗಣ ಇದಾಗಲಿದೆ' ಎಂದು ಡಿಸಿಎಂ ತಿಳಿಸಿದರು.

ರೈತರಿಗೆ ಮೊದಲು ನಿವೇಶನ

'ಶಿವರಾಮ ಕಾರಂತ ಬಡಾವಣೆಯಲ್ಲಿ ನಾಗರಿಕರಿಗೂ ಮುನ್ನ ಭೂಮಿ ಕಳೆದುಕೊಂಡ ರೈತರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ. ಅವರದೇ ಜಮೀನಿನಲ್ಲಿ ನಿವೇಶನ ನೀಡುವುದು ಮೊದಲ ಆದ್ಯತೆ. ಅದು ಸಾಧ್ಯವಾಗದಿದ್ದರೆ ಅವರದ್ದೇ ಊರಿನಲ್ಲಿ ನಿವೇಶನ ನೀಡಲಾಗುತ್ತದೆ. ರೈತರು ಇಂತಹದ್ದೇ ದಿಕ್ಕಿನ ನಿವೇಶನ ಬೇಕು ಎಂದು ಕೇಳುವಂತಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಡಿ.ಕೆ. ಶಿವಕುಮಾರ್

'17 ಗ್ರಾಮದಲ್ಲಿ ಒಟ್ಟು 18 ಸಾವಿರ ಮಂದಿ ಭೂಮಿ ಕಳೆದುಕೊಂಡಿದ್ದು, ಅವರಿಗೆ ಮೊದಲ ಆದ್ಯತೆಯಲ್ಲಿ 60:40ರ ಅನುಪಾತದಲ್ಲಿ ಅಭಿವೃದ್ಧಿಗೊಂಡ ನಿವೇಶನಗಳನ್ನು ನೀಡಲಾಗುವುದು' ಎಂದರು.

ನಾಡಪ್ರಭು ಕೆಂಪೇಗೌಡ ಬಡಾವಣೆಯ ಬಾಕಿ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲು ಸೂಚಿಸಲಾಗಿದೆ. ಹೆಬ್ಬಾಳ ಜಂಕ್ಷನ್‌ನಲ್ಲಿ ಹೊಸ ಲೂಪ್ ರಸ್ತೆ ಸೇರಿಸುವ ಕಾಮಗಾರಿಗೆ ವೇಗ ನೀಡಲಾಗಿದೆ. 3,278 ಮನೆಗಳನ್ನು ಆದಷ್ಟು ಬೇಗ ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುವುದು ಎಂದರು.

ಸಿಡಿಪಿ ತಯಾರು: 'ಸಮಗ್ರ ಅಭಿವೃದ್ಧಿ ಯೋಜನೆ (ಸಿಡಿಪಿ)- 2041 ತಯಾರಿಸಲು ನಿರ್ಧರಿಸಲಾಗಿದೆ. ಹೊಸ ಹಳ್ಳಿಗಳನ್ನು, ಬಿಎಂಆರ್‌ಡಿಎಯ ಪ್ರದೇಶಗಳನ್ನು ಸೇರಿಸಿಕೊಳ್ಳಲಾಗುತ್ತದೆ. ಬೆಂಗಳೂರನ್ನು ಮತ್ತಷ್ಟು ವಿಸ್ತರಿಸಿ ಯೋಜನೆ ತಯಾರಿಸಲಾಗುತ್ತದೆ' ಎಂದು ಶಿವಕುಮಾರ್ ಹೇಳಿದರು.

'ಬಿಡಿಎಯಿಂದ ಹೊಸ ಬಡಾವಣೆಗಳನ್ನು ವಿಸ್ತರಿಸಿದ ಪ್ರದೇಶಗಳಲ್ಲಿ ನಿರ್ಮಿಸಗುತ್ತಿದೆ. ಸುಮಾರು 10 ಸಾವಿರ ಎಕರೆಯನ್ನು ಗುರುತಿಸಲಾಗಿದೆ' ಎಂದರು.

'ಪಿಪಿಪಿ ಮಾದರಿಯಲ್ಲಿ ಬಿಡಿಎ ಕಾಂಪ್ಲೆಕ್ಸ್ ನಿರ್ಮಾಣದ ಯೋಜನೆ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತದೆ. ಹಿಂದೆ ನಮ್ಮ ಸರ್ಕಾರದ ನಿರ್ಧಾರದಂತೆ ಅದನ್ನು ಮುಂದುವರಿಸಲಾಗುತ್ತದೆ' ಎಂದು ಹೇಳಿದರು.

ಪಿಆರ್‌ಆರ್ ರಸ್ತೆ ಇನ್ನು 'ಬೆಂಗಳೂರು ಬಿಸಿನೆಸ್ ಕಾರಿಡಾರ್'

'ಉತ್ತರ ಭಾಗದಲ್ಲಿ ಪೆರಿಫೆರಲ್ ಹೊರವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಿಸಲು ತೀರ್ಮಾನಿಸಿದ್ದು, ಇದಕ್ಕೆ 'ಬೆಂಗಳೂರು ಬಿಸಿನೆಸ್ ಕಾರಿಡಾರ್' (ಬಿಬಿಸಿ) ಎಂದು ಹಸರಿಸಲಾಗಿದೆ. ಮುಂದಿನ ವಾರದಲ್ಲಿ ಈ ರಸ್ತೆಗೆ ಜಾಗತಿಕ ಟೆಂಡರ್ ಕರೆಯಲಾಗುತ್ತದೆ. ಒಂದು ಬಾರಿ ಭೂಸ್ವಾಧೀನ ಅಧಿಸೂಚನೆ ಮಾಡಿದರೆ ಡಿನೋಟಿಫಿಕೇಷನ್ ಮಾಡುವುದಿಲ್ಲ. ಭೂಮಿ ಕಳೆದುಕೊಳ್ಳುವವರಿಗೆ ಸುಪ್ರೀಂಕೋರ್ಟ್ ಆದೇಶದಂತೆ ಪರಿಹಾರ ನೀಡುತ್ತೇವೆ. ಬಿಡಿಎ ಕಾಯ್ದೆಗಿಂತ ರೈತರು ಹೆಚ್ಚಿನ ಹಣ ಕೇಳುತ್ತಿದ್ದು, ಆ ಬಗ್ಗೆ ಅವರಿಗೆ ಸಹಾಯ ಮಾಡಲು ಸಚಿವ ಸಂಪುಟದಲ್ಲಿ ಚರ್ಚಿಸಲಾಗುತ್ತದೆ ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಜೆಪಿ ಜಿಲ್ಲಾ ಘಟಕ ಪಟ್ಟಿ ಮಾದಿಗರ ಅಸಮಾಧಾನ

ಬೆಂಗಳೂರು: ರಾಜ್ಯ ಬಿಜೆಪಿಯಲ್ಲಿ ಮಾದಿಗ ಸಮುದಾಯಕ್ಕೆ ಮಾನ್ಯತೆ ಸಿಗುತ್ತಿಲ್ಲ. ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು. ಇಲ್ಲದೇ ಇದ್ದರೆ ಸಮುದಾಯದ ಎಲ್ಲ ಪದಾಧಿಕಾರಿಗಳು ರಾಜೀನಾಮೆ ಸಲ್ಲಿಸಿ ಹೊರಬರಬೇಕು ಎಂಬ ಧ್ವನಿ ಮಾದಿಗ ಸಮಾನ ಮನಸ್ಕರ ವೇದಿಕೆ ಬುಧವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಸಭೆಯಲ್ಲಿ ವ್ಯಕ್ತವಾಯಿತು.

ಮಾಜಿ ಸಚಿವ ಕೋಟೆ ಶಿವಣ್ಣ, ರಾಜ್ಯಸಭಾ ಮಾಜಿ ಸದಸ್ಯ ಕೃಷ್ಣಮೂರ್ತಿ, ರಾಜ್ಯ ಅಲೆಮಾರಿ, ಅರೆ ಮಲೆಮಾರಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ದೇವೇಂದ್ರನಾಥ್, ಬೆಳಗಾವಿ, ಚಿತ್ರದುರ್ಗ, ಕಲಬುರಗಿ, ಬೀದರ್, ಮೈಸೂರು ಸೇರಿದಂತೆ ವಿವಿಧ ಜಿಲ್ಲೆಗಳ ಮಾದಿಗ ಸಮುದಾಯದ ಮುಖಂಡರು ಸಭೆ ನಡೆಸಿ ಅಸಮಾಧಾನ ಹೊರಹಾಕಿದರು.

ಗೋವಿಂದ ಕಾರಜೋಳ ಉಪಮುಖ್ಯಮಂತ್ರಿಯಾಗಿದ್ದಾಗ ಸಮುದಾಯದ ಹಲವರಿಗೆ ರಾಜ್ಯ ಪ್ರಕೋಷ್ಠಗಳಲ್ಲಿ ಸ್ಥಾನ ನೀಡಲಾಗಿತ್ತು. ಆದರೆ ಈಗ ಛಲವಾದಿ ಸಮುದಾಯಕ್ಕೆ ಆದ್ಯತೆ ನೀಡಲಾಗುತ್ತಿದೆ. ಬಿಜೆಪಿ ಎಸ್ಸಿ-ಎಸ್ಟಿ ಮೋರ್ಚಾದ ಅಧ್ಯಕ್ಷರಾಗಿರುವ ಛಲವಾದಿ ನಾರಾಯಣಸ್ವಾಮಿ ಅವರ ಸಮುದಾಯಕ್ಕೆ ಮಾತ್ರ ಪ್ರಾಮುಖ್ಯ ನೀಡುತ್ತಿದ್ದಾರೆ. ಸಭೆಗಳಿಗೆ ಮಾದಿಗ ಸಮುದಾಯದ ಮುಖಂಡರಿಗೆ ಆಹ್ವಾನ ನೀಡುತ್ತಿಲ್ಲ ಎಂದು ಜಿಲ್ಲೆಗಳಿಂದ ಬಂದಿದ್ದ ಪ್ರತಿನಿಧಿಗಳು ದೂರಿದರು.

'ಈಗಾಗಲೇ ಬಿಡುಗಡೆಯಾಗಿರುವ ಬಿಜೆಪಿಯ ಜಿಲ್ಲಾವಾರು ಅಧ್ಯಕ್ಷರ ಪಟ್ಟಿಯಲ್ಲಿ ಮಾದಿಗ ಸಮುದಾಯದವರನ್ನು ಕಡೆಗಣಿಸಲಾಗಿದೆ. ಜಿಲ್ಲಾವಾರು ಇತರೆ ಪದಾಧಿಕಾರಿಗಳ ಪಟ್ಟಿ ಬಿಡುಗಡೆ ಮಾಡುವಾಗ ಆದ್ಯತೆ ನೀಡಬೇಕು' ಎಂದು ನಿವೃತ್ತ ಐಎಎಸ್ ಅಧಿಕಾರಿ ಅನಿಲ್ ಕುಮಾರ್ ಆಗ್ರಹಿಸಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಮಾದಿಗ ಸಮುದಾಯದ ನಿಯೋಗ ಭೇಟಿ ಮಾಡಿತು. ಜಿಲ್ಲಾವಾರು ಅಧ್ಯಕ್ಷರ ಆಯ್ಕೆ ಪಟ್ಟಿಯಲ್ಲಿ ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಅವರ ಗಮನಕ್ಕೆ ತರಲಾಯಿತು. ಗೊಂದಲಗಳನ್ನು ಸರಿಪಡಿಸುವುದಾಗಿ ಭರವಸೆ ನೀಡಿದರು.

ಕಾಂಗ್ರೆಸ್–ಬಿಜೆಪಿ ಮಧ್ಯೆ 'ನಿದ್ರೆ ಗದ್ದಲ'

ಮೋದಿ ನಿದ್ರೆಯಿಂದ ಅಭಿವೃದ್ಧಿಗೆ ತೊಂದರೆ ಎಂದ ಸಿದ್ದರಾಮಯ್ಯ • ಬಿಜೆಪಿ ನಾಯಕರ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿಯವರ ಗಾಢ ನಿದ್ರೆಯಿಂದ ಕರ್ನಾಟಕದ ಅಭಿವೃದ್ಧಿಗೆ ತೊಂದರೆ ಆಗಿದೆ. ಮೋದಿ ಅವರು ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗ್ಗೆ ಯಾವಾಗಲೂ ತೂಕಡಿಸುತ್ತಿರುತ್ತಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಡಿರುವ 'ಎಕ್ಸ್'ಗೆ ರಾಜ್ಯ ಬಿಜೆಪಿ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ವಿಮಾನ ನಿಲ್ದಾಣ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಆರಾಮವಾಗಿ ಗೊರಕೆ ಹೊಡೆಯುತ್ತಿದ್ದರು. ಇವರು ನಿದ್ರೆ ಮಾಡುವ ವ್ಯಂಗ್ಯ ಚಿತ್ರಗಳು ಹರಿದಾಡುತ್ತಿವೆ. ಬರ ಪ್ರದೇಶಕ್ಕೆ ಹೋಗಿ ಕೆಲಸ ಮಾಡದ ಇವರ ಹೆಸರೇ ನಿದ್ದೆರಾಮಯ್ಯ ಎಂದು ಬ್ರ್ಯಾಂಡ್ ಆಗಿದೆ' ಎಂದು ಕುಟುಕಿದರು. ಈ ಮೂಲಕ ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ 'ನಿದ್ರೆ ಗದ್ದಲ' ತಾರಕಕ್ಕೇರಿದೆ.

'ನಿದ್ರೆ ಸಾಮ್ರಾಜ್ಯದ ಸಿದ್ದರಾಮಯ್ಯ'

'ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುವ ನಿದ್ರೆ ಸಾಮ್ರಾಜ್ಯದ ಸಿದ್ದರಾಮಯ್ಯ ಅವರು ಮೋದಿಯವರ ಹೆಗಲ ಮೇಲೆ ತಮ್ಮ ನಿದ್ರೆ ಸುಖದ ಚಿತ್ರಣ ಸೃಷ್ಟಿಸಿ ವಿಕೃತ ಆನಂದ ಪಡೆಯಲು ಹೊರಟಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಟ್ವೀಟ್ ಮಾಡಿದ್ದಾರೆ.

'ಸೂರ್ಯ– ಚಂದ್ರರಿಬ್ಬರೂ ವಿಶ್ರಾಂತಿ, ಸುಖ–ನಿದ್ದೆಗಳನ್ನು ಅನುಭವಿಸಿರಬಹುದು. ಆದರೆ, ತಮ್ಮ ಬದುಕಿನ ಪುಟದಲ್ಲಿ ವಿರಮಿಸುವ ಪದವನ್ನೇ ಕಾಣದ, ನಿದ್ರೆ ಸುಖವೇನೆಂದು ಅರಿಯದ ಒಬ್ಬ ತಪಸ್ವಿ ಆಡಳಿತಗಾರನನ್ನು ಈ ದೇಶ ಕಂಡಿದ್ದರೆ ಅದು ನರೇಂದ್ರ ಮೋದಿ ಮಾತ್ರ' ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ಹೇಳಿದ್ದೇನು?: 'ತನಗೆ ತಾನೇ ಪ್ರಚಾರ ಕೊಟ್ಟುಕೊಳ್ಳಲು ಮತ್ತು ಬಿಜೆಪಿಗಾಗಿ ಪ್ರಚಾರ ಮಾಡಲು ಸದಾ ಎದ್ದಿರುವ ಮೋದಿ, ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗ್ಗೆ ಯಾವಾಗಲೂ ತೂಕಡಿಸುತ್ತಿರುತ್ತಾರೆ. ಕರ್ನಾಟಕದ ಕಟು ವಾಸ್ತವಕ್ಕೆ ಸ್ಪಂದಿಸದ ಮೋದಿಯಿಂದ ಸದಾ ಪಲಾಯನ' ಎಂದು ಹೇಳಿದ್ದಾರೆ.

'ಕೇಂದ್ರವು ಸರಿಯಾಗಿ ಅನುದಾನ ಕೊಡುತ್ತಿಲ್ಲ, ಕನ್ನಡಿಗರ ಮಹತ್ವಾಕಾಂಕ್ಷೆಗಳಿಗೆ ಕಿಂಚಿತ್ತು ಬೆಲೆ ನೀಡುತ್ತಿಲ್ಲ, ಕೇಂದ್ರದ ಪರಿಹಾರ ಹಣ ಇನ್ನೂ ರೈತರಿಗೆ ಸಿಗುತ್ತಿಲ್ಲ. ಮೋದಿ ಮಂತ್ರವಿಷ್ಟೇ ಕಡೆಗಣಿಸು, ನಿರ್ಲಕ್ಷಿಸು, ನಿದ್ರಿಸು, ಮತ್ತದನ್ನೇ ಪುನರಾವರ್ತಿಸು ಎಂಬುದಾಗಿದೆ' ಎಂದಿದ್ದಾರೆ.

'ಇನ್ನು ಬಿಜೆಪಿ ಸಂಸದರ ಮಂತ್ರ ಬಾಯಿಗೆ ಬೀಗ ಹಾಕಿಕೊಂಡಿರು. ಮೋದಿಯದ್ದೇ ಜಪ ಮಾಡಿಕೊಂಡಿರು. ಕನ್ನಡಿಗರ ನಂಬಿಕೆಗೆ ದ್ರೋಹ ಬಗೆಯುತ್ತಿರು. ಮೋದಿ ನಿಶ್ಚಿಂತೆಯಿಂದ ನಿದ್ರಿಸಲು ಮತ್ತದನ್ನೇ ಪುನರಾವರ್ತಿಸು. ಎದ್ದೇಳಿ, ಮೋದಿ ಕರ್ನಾಟಕ ನ್ಯಾಯಯುತ ಪಾಲು ಕೊಡಬೇಕಾದ ಸಮಯವಿದು' ಎಂದು ಹೇಳಿದ್ದಾರೆ.

'ನಿದ್ರೆಯಿಂದ ಎದ್ದ ಸಿದ್ದರಾಮಯ್ಯ'

'ದಿನಕ್ಕೆ 18 ತಾಸು ದೇಶಕ್ಕಾಗಿ ಕೆಲಸ ಮಾಡುವ, ಒಂಬತ್ತೂವರೆ ವರ್ಷದಲ್ಲಿ ಒಂದು ದಿನವೂ ರಜೆ ತೆಗೆದುಕೊಳ್ಳದ ಕಠಿಣ ಪರಿಶ್ರಮಿ, ಅಪ್ಪಟ ದೇಶಭಕ್ತ ಪ್ರಧಾನಿ ಮೋದಿ. ಇವರು ದೇಶದ ಇತಿಹಾಸದಲ್ಲೇ ದಾಖಲೆಯ ಅಭಿವೃದ್ಧಿ ಮಾಡಿದ್ದಾರೆ. ಅವರ ಬಗ್ಗೆ ಗಾಢ ನಿದ್ರೆ ಎಂದು ಹೇಳುವ ಸಿದ್ದರಾಮಯ್ಯ ಈಗ ತಮ್ಮ ಗಾಢ ನಿದ್ರೆಯಿಂದ ಎಚ್ಚೆತ್ತುಕೊಂಡಿದ್ದಾರೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಕಿಡಿಕಾರಿದ್ದಾರೆ.

'ಯುಪಿಎ ಅವಧಿಯ 2004–14 ರ 10 ವರ್ಷಗಳಲ್ಲಿ ರಾಜ್ಯಕ್ಕೆ ತೆರಿಗೆ ಹಂಚಿಕೆಯಲ್ಲಿ ₹81,795.19 ಕೋಟಿ, ಅನುದಾನ ಹಂಚಿಕೆಯಲ್ಲಿ ₹60,779.84 ಕೋಟಿ ಹಣ ಬಂದರೆ, 2014–2023 ರ ಡಿಸೆಂಬರ್‌ವರೆಗೆ ತೆರಿಗೆ ಹಂಚಿಕೆಯಲ್ಲಿ ₹2,82,791 ಕೋಟಿ, ಅನುದಾನ ಹಂಚಿಕೆಯಲ್ಲಿ ₹2,08,882.02 ಕೋಟಿ ಬಂದಿದೆ. ಕೇಂದ್ರ ನೀಡಿದ ಇಷ್ಟು ಬೃಹತ್ ಮೊತ್ತ ನಿದ್ರೆಯಲ್ಲಿರುವ ಸಿದ್ದರಾಮಯ್ಯ ಕಣ್ಣಿಗೆ ಕಾಣುತ್ತಿಲ್ಲ' ಎಂದಿದ್ದಾರೆ.

'ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಕೇಂದ್ರ ಬಜೆಟ್‌ನಲ್ಲಿ ಇಟ್ಟಿದ್ದನ್ನು ಪಡೆದುಕೊಳ್ಳಲಾಗದೇ ಗಾಢ ನಿದ್ರೆಯಲ್ಲಿರುವವರು ಯಾರು? ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗೆ ₹30 ಸಾವಿರ ಕೋಟಿ ಮೋದಿ ಸರ್ಕಾರ ಒದಗಿಸಿದೆ. ಸ್ಮಾರ್ಟ್ ಸಿಟಿ, ರೈಲ್ವೆ, ಬಂದರು, ಕಿಸಾನ್ ಸಮ್ಮಾನ್, ಆಯುಷ್ಮಾನ್ ಭಾರತ್ ಯೋಜನೆಗಳಿಗೆ ಒದಗಿಸಿದ ಅನುದಾನ, ಮೋದಿಯವರ ಪರಿಶ್ರಮ, ಕ್ರಿಯಾಶೀಲತೆಗೆ ಸಾಕ್ಷಿ' ಎಂದು ಹೇಳಿದ್ದಾರೆ.

ಪ್ರಧಾನಿ ಜೊತೆ ಬಹಿರಂಗ ಚರ್ಚೆಗೆ ಸಿದ್ಧ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರದ ಬಿಜೆಪಿ ಸರ್ಕಾರದಿಂದ ಕರ್ನಾಟಕ ಮತ್ತು ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯಗಳನ್ನು ಹೇಳುತ್ತಲೇ ಬಂದಿದ್ದೇನೆ. ಇದಕ್ಕೆ ಉತ್ತರ ನೀಡಬೇಕಾಗಿರುವವರು ಪ್ರಧಾನಿ ನರೇಂದ್ರ ಮೋದಿಯವರೇ ಹೊರತು, ಬಿಜೆಪಿಯ ಐಟಿ ಸೆಲ್ ಅಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ.

ಈ ಬಗ್ಗೆ 'ಎಕ್ಸ್' ಮಾಡಿರುವ ಅವರು, 'ಪ್ರಧಾನಿಯವರು ಒಪ್ಪಿದ ದಿನ ಮತ್ತು ಸ್ಥಳ ನಿಗದಿಪಡಿಸಿದರೆ ಈ ಬಗ್ಗೆ ಸಾರ್ವಜನಿಕ ಚರ್ಚೆಗೆ ನಾನು ಸಿದ್ಧ' ಎಂದು ಸವಾಲು ಹಾಕಿದ್ದಾರೆ.

'ನಾಡಿಗೆ ಬರಗಾಲ ಬಂದು ಆರು ತಿಂಗಳಾಗಿದೆ. ಬರ ಪರಿಹಾರದ ಕೆಲಸಗಳಿಗಾಗಿ ₹18,177 ಕೋಟಿ ನೀಡಲು ಮೂರು ತಿಂಗಳುಗಳಿಂದ ಒತ್ತಾಯಿಸುತ್ತಿದ್ದೇವೆ. ನಾನೇ ಪ್ರಧಾನಮಂತ್ರಿಯವರನ್ನು ಭೇಟಿಯಾಗಿ ರೈತರ ಕಷ್ಟಗಳನ್ನು ವಿವರಿಸಿದ್ದೇನೆ. ಇಲ್ಲಿಯವರೆಗೆ ಒಂದು ಪೈಸೆಯೂ ಪರಿಹಾರ ಬಿಡುಗಡೆ ಮಾಡಿಲ್ಲ' ಎಂದು ದೂರಿದ್ದಾರೆ.

ಸಿದ್ದರಾಮಯ್ಯ

'ಯುಪಿಎ ಸರ್ಕಾರದ 14ನೇ ಹಣಕಾಸು ಆಯೋಗವು ಕರ್ನಾಟಕಕ್ಕೆ ನಿಗದಿಪಡಿಸಿದ್ದ ಶೇ 4.72 ತೆರಿಗೆ ಪಾಲನ್ನು ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೆ ಬಂದ 15ನೇ ಹಣಕಾಸು ಆಯೋಗವು ಶೇ 3.64 ಕ್ಕೆ ಇಳಿಸಿದೆ. ಕರ್ನಾಟಕಕ್ಕೆ ₹ 5,495 ಕೋಟಿ ವಿಶೇಷ ಅನುದಾನ ನೀಡುವಂತೆ 15ನೇ ಹಣಕಾಸು ಆಯೋಗ ಮಾಡಿದ್ದ ಶಿಫಾರಸನ್ನು ಹಣಕಾಸು ಸಚಿವರಾಗಿರುವ ನಿರ್ಮಲಾ ಸೀತಾರಾಮನ್ ತಿರಸ್ಕರಿಸಿದ್ದಾರೆ. ಆರ್ಥಿಕ ವರ್ಷ ಆರಂಭವಾಗಿ ಆರು ತಿಂಗಳು ಕಳೆದರೂ ಕೇಂದ್ರ ಸರ್ಕಾರದ ಸಹಯೋಗದ 61 ಯೋಜನೆಗಳಿಗೆ ಸಂಬಂಧಿಸಿದಂತೆ 23 ಇಲಾಖೆಗಳಿಗೆ ನಯಾ ಪೈಸೆ ಅನುದಾನ ಬಿಡುಗಡೆಯಾಗಿಲ್ಲ. ಕೃಷ್ಣಾ ಮೇಲ್ದಂಡೆ ಮತ್ತು ಮಹದಾಯಿ ಯೋಜನೆಗಳನ್ನು ನಿರ್ಲಕ್ಷಿಸಲಾಗುತ್ತಿದೆ' ಎಂದೂ ಆರೋಪಿಸಿದ್ದಾರೆ.

'ರೈಲ್ವೆ ಯೋಜನೆಗಳನ್ನು ಮೂಲೆಗೆ ತಳ್ಳಲಾಗಿದೆ. ಏಮ್ಸ್ ಸಂಸ್ಥೆ ಬೇಕೆಂಬ ಕನ್ನಡಿಗರ ಕನಸು ಇನ್ನೂ ಕನಸಾಗಿಯೇ ಉಳಿದಿದೆ. ಕನ್ನಡಿಗರು ಶ್ರಮದಿಂದ ಕಟ್ಟಿದ ಬ್ಯಾಂಕುಗಳು ವಿಲೀನದ ಹೆಸರಲ್ಲಿ ಬೇರೆ ರಾಜ್ಯಗಳ ನಷ್ಟದಲ್ಲಿರುವ ಬ್ಯಾಂಕುಗಳ ಜೊತೆ ವಿಲೀನ ಮಾಡಿ ಕನ್ನಡಿಗರಿಗೆ ದ್ರೋಹ ಬಗೆಯಲಾಯಿತು. ಬೆಂಗಳೂರು ಉಪನಗರ ರೈಲು ಯೋಜನೆಗೆ ಅನುದಾನ ಇಲ್ಲದೆ ಸೊರಗಿ ಹೋಗಿದೆ. ತೆರೆದ ಪುಸ್ತಕದಲ್ಲಿ ಕಾಣುವ ಈ ಅನ್ಯಾಯಗಳನ್ನು ಕಂಡು ಮೌನವಾಗಿರುವ ಪ್ರಧಾನಿಯವರ ಪ್ರತಿಕ್ರಿಯೆಯನ್ನು ಹೇಗೆ ವ್ಯಾಖ್ಯಾನಿಸಲಿ' ಎಂದಿದ್ದಾರೆ.

ನಕಲಿ ವೈದ್ಯರೆಂದು ದಾಳಿ: ಖಂಡನೆ

ಬೆಂಗಳೂರು: ಭಾರತೀಯ ವೈದ್ಯಕೀಯ ಪದ್ಧತಿಗಳನ್ನು ಅಭ್ಯಾಸ ಮಾಡಿದವರ ಮೇಲೆ ನಕಲಿ ವೈದ್ಯರೆಂದು ಆರೋಗ್ಯ ಇಲಾಖೆ ಅಧಿಕಾರಿಗಳು ದಾಳಿ ಮಾಡುತ್ತಿರುವುದನ್ನು ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್ (ಎನ್‌ಐಎಂಎ) ಖಂಡಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ರಾಜ್ಯ ಘಟಕದ ಅಧ್ಯಕ್ಷ ಡಾ. ಸಿದ್ಧಪ್ಪ ಮಾಗರಿ, 'ವೈದ್ಯಕೀಯ ವೃತ್ತಿ ನಡೆಸಲು ಅಗತ್ಯ ವಿದ್ಯಾರ್ಹತೆ ಪಡೆದು ರಾಜ್ಯದಾದ್ಯಂತ 40 ಸಾವಿರಕ್ಕೂ ಹೆಚ್ಚು ವೈದ್ಯರು ಕೆಲಸ ಮಾಡುತ್ತಿದ್ದಾರೆ. ನಮ್ಮ ಎಲ್ಲ ಕ್ಲಿನಿಕ್‌ಗಳು ಕೆಪಿಎಂಇ ಕಾಯ್ದೆಯಡಿ (ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ ಕಾಯ್ದೆ) ನೋಂದಣಿ ಮಾಡಿಕೊಂಡಿವೆ. ಆದರೂ, ಆರೋಗ್ಯ ಇಲಾಖೆ ಅಧಿಕಾರಿಗಳು ನಕಲಿ ವೈದ್ಯರು ಎಂದು ಕಿರುಕುಳ ನೀಡಿ, ನಮ್ಮ ಕ್ಲಿನಿಕ್‌ಗಳ ಮೇಲೆ ದಾಳಿ ಮಾಡುತ್ತಿದ್ದಾರೆ' ಎಂದು ದೂರಿದರು.

'ಆರೋಗ್ಯ ಇಲಾಖೆ ನಕಲಿ ವೈದ್ಯರೆಂದು ದಾಳಿ ಮಾಡುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕೆಂದು ರಾಜ್ಯಪಾಲ ಥಾವರಚಂದ್ ಗೆಹಲೋತ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಮನವಿ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

ಮತ್ತಷ್ಟು ತಾಂತ್ರಿಕ ಸಿಬ್ಬಂದಿ ನೇಮಕಾತಿಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿಗೆ ಮಾರ್ಚ್ ನಂತರ ಮತ್ತಷ್ಟು ತಾಂತ್ರಿಕ ಸಹಾಯಕ ಸಿಬ್ಬಂದಿಯನ್ನು ನೇಮಕಾತಿ ಮಾಡಲು ಆರ್ಥಿಕ ಇಲಾಖೆಯಿಂದ ಅನುಮತಿ ಪಡೆಯಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಕೆಎಸ್‌ಆರ್‌ಟಿಸಿಗೆ ನೇಮಕವಾದ 264 ತಾಂತ್ರಿಕ ಸಹಾಯಕ ಅಭ್ಯರ್ಥಿಗಳಿಗೆ ಬುಧವಾರ ನೇಮಕಾತಿ ಆದೇಶ ನೀಡಿ ಅವರು ಮಾತನಾಡಿದರು.

ನಿವೃತ್ತಿ ಮತ್ತು ಇತರ ಕಾರಣಗಳಿಂದ 2016 ರಿಂದ ಇಲ್ಲಿಯವರೆಗೆ 13,888 ಹುದ್ದೆ ತೆರವಾಗಿದ್ದು, ಭರ್ತಿ ಮಾಡಿರಲಿಲ್ಲ. ಇದರಿಂದ ಬಸ್ಸುಗಳ ಸಮರ್ಪಕ ಕಾರ್ಯಾಚರಣೆಗೆ ತೊಂದರೆಯುಂಟಾಗುತ್ತಿತ್ತು ಎಂದು ಹೇಳಿದರು.

ನಿಗಮದಲ್ಲಿ ಪ್ರಸ್ತುತ 4,588 ತಾಂತ್ರಿಕ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದು, ಈ ಪೈಕಿ 353 ಮಹಿಳಾ ತಾಂತ್ರಿಕ ಸಿಬ್ಬಂದಿ ಇದ್ದಾರೆ. ಕೋವಿಡ್ ಕಾರಣದಿಂದ ಸ್ಥಗಿತಗೊಂಡಿದ್ದ 726 ತಾಂತ್ರಿಕ ಸಹಾಯಕ ಹುದ್ದೆಗಳ ಪೈಕಿ 300 ಹುದ್ದೆಗಳನ್ನು ಭರ್ತಿ ಮಾಡಲು 2023ರ ಅಕ್ಟೋಬರ್‌ನಲ್ಲಿ ಅನುಮತಿ ನೀಡಿತ್ತು. ಆಯ್ಕೆಯಾದ ಅಭ್ಯರ್ಥಿಗಳನ್ನು ಮೆರಿಟ್ ಮತ್ತು ರೋಸ್ಟರ್ ಆಧಾರದಲ್ಲಿ ಅವರೇ ಆಯ್ಕೆ ಮಾಡಿಕೊಂಡ ಘಟಕಗಳಿಗೆ ನಿಯೋಜನೆ ಮಾಡಲಾಗಿದೆ ಎಂದು ವಿವರಿಸಿದರು.



ಕೆಎಸ್‌ಆರ್‌ಟಿಸಿ ತಾಂತ್ರಿಕ ಸಹಾಯಕ ಹುದ್ದೆಗೆ ನೇಮಕವಾದ ಅಭ್ಯರ್ಥಿಗಳಿಗೆ ಆದೇಶ ಪತ್ರವನ್ನು ನೀಡಲಾಯಿತು. ನಿಗಮದ ನಿರ್ದೇಶಕಿ ಕೆ. ನಂದಿನಿದೇವಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

ಆಯ್ಕೆಯಾದ ಅಭ್ಯರ್ಥಿಗಳಿಗೆ ಇದೇ ಮೊದಲ ಬಾರಿಗೆ ಗಣಕೀಕೃತ ಕೌನ್ಸೆಲಿಂಗ್ ಮೂಲಕ ನೇರವಾಗಿ ಘಟಕಗಳನ್ನು ಆಯ್ಕೆ ಮಾಡುವ ಅವಕಾಶವನ್ನು ಒದಗಿಸಲಾಯಿತು. ಸ್ಥಳ ನಿಯೋಜನೆಯಲ್ಲಿ ಪಾರದರ್ಶಕತೆಯನ್ನು ಅನುಸರಿಸಲಾಗಿದೆ. ತಾಂತ್ರಿಕ ಸಹಾಯಕರ ನೇಮಕಾತಿ ಪ್ರಕ್ರಿಯೆಯನ್ನು 3 ತಿಂಗಳ ಒಳಗೆ ಪೂರ್ಣಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಅಧಿಸೂಚನೆ ಸಂದರ್ಭದಲ್ಲಿ ನಿಗದಿಪಡಿಸಲಾಗಿದ್ದ 2 ವರ್ಷಗಳ ತರಬೇತಿ ಅವಧಿಯನ್ನು 1 ವರ್ಷಕ್ಕೆ ಇಳಿಕೆ ಮಾಡಲಾಗಿದೆ. ತಿಂಗಳ ತರಬೇತಿ ಭತ್ಯೆಯನ್ನು ₹ 9,100ದಿಂದ ₹ 14,000ಕ್ಕೆ ಏರಿಸಲಾಗಿದೆ ಎಂದರು.

ನಿಗಮವು 2000 ಚಾಲಕ–ನಿರ್ವಾಹಕ ಹುದ್ದೆಯ ನೇಮಕಾತಿಗಾಗಿ ಸದ್ಯದಲ್ಲಿಯೇ ಚಾಲನಾ ಪರೀಕ್ಷೆ ನಡೆಸಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತೆ) ನಂದಿನಿ ದೇವಿ, ನಿಗಮದ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸಿದ್ದರು.

ತಾನು ಆಯೋಜಿಸುವ ಚಾಂಪಿಯನ್‌ಷಿಪ್ ನೈಜ: ಅಡ್‌ಹಾಕ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಚಾಂಪಿಯನ್‌ಷಿಪ್ ಆಯೋಜಿಸುವ ಅಧಿಕಾರ ರಾಷ್ಟ್ರೀಯ ಫೆಡರೇಷನ್‌ಗೆ ಮಾತ್ರ ಇದೆ ಎಂದು ಭಾರತ ಕುಸ್ತಿ ಸಂಸ್ಥೆ (ಡಬ್ಲ್ಯುಎಫ್‌ಐ)ಯ ಅಮಾನತುಗೊಂಡಿರುವ ಆಡಳಿತ ಸಮಿತಿ ಪ್ರತಿಪಾದಿಸಿದ ಬೆನ್ನಲ್ಲೆ, ಐಒಎ ನೇಮಿಸಿದ ತಾತ್ಕಾಲಿಕ ಸಮಿತಿಯು ತಾನು ಆಯೋಜಿಸುವ ಪಂದ್ಯಾವಳಿ ಮಾತ್ರ ನೈಜ ಎಂದು ಪರಿಗಣಿಸಲಾಗುವುದು ಎಂದು ಹೇಳಿದೆ.

ನಾವು ನಡೆಸುವ ಸ್ಪರ್ಧೆಯಲ್ಲಿ ಭಾಗವಹಿಸುವ ಕುಸ್ತಿಪಟುಗಳು ಮಾತ್ರ 'ಅನುಕೂಲ'ಗಳನ್ನು ಪಡೆಯುತ್ತಾರೆ ಎಂದು ತಾತ್ಕಾಲಿಕ ಸಮಿತಿ ಸ್ಪಷ್ಟಪಡಿಸಿದೆ.

ಮಂಗಳವಾರ ನಡೆದ ಮೊದಲ ಕಾರ್ಯಕಾರಿ ಸಮಿತಿ ಸಭೆ ಬಳಿಕ ಜನವರಿ 29 ರಿಂದ ಪುಣೆಯಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಸುವುದಾಗಿ ಡಬ್ಲ್ಯುಎಫ್‌ಐ ಮಂಗಳವಾರ ಘೋಷಿಸಿತ್ತು. ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಸಲು ತಾತ್ಕಾಲಿಕ ಸಮಿತಿಗೆ ಯಾವುದೇ ಅಧಿಕಾರವಿಲ್ಲ ಎಂದು ವಾದಿಸಿತ್ತು.

'ರೈಲ್ವೆ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ (ಆರ್‌ಎಸ್‌ಪಿಬಿ) ಸಹಯೋಗದೊಂದಿಗೆ ಫೆ. 2 ರಿಂದ 5ರವರೆಗೆ ಆಯೋಜಿಸುವ ಸೀನಿಯರ್ ರಾಷ್ಟ್ರೀಯ ಫ್ರೀ ಸ್ಟೈಲ್, ಗ್ರೀಕೊ ರೋಮನ್ ಶೈಲಿ ಮತ್ತು ಮಹಿಳಾ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್ 2023 ಮಾತ್ರ ನೈಜ ಮತ್ತು ಮಾನ್ಯತೆ ಪಡೆದ ಚಾಂಪಿಯನ್‌ಷಿಪ್ ಆಗಿದೆ. ಅಂತಹ ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಮಾತ್ರ ಸರ್ಕಾರದ ಎಲ್ಲಾ ಪ್ರಯೋಜನಗಳು ಸಿಗುತ್ತವೆ' ಎಂದು ಅಡ್‌ಹಾಕ್ ಸಮಿತಿಯ ಮುಖ್ಯಸ್ಥ ಭೂಪಿಂದರ್ ಸಿಂಗ್ ಬಜ್ವಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿತ್ರಾವಳಿ

ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ 404 ರನ್ ಗಳಿಸಿ ದಾಖಲೆ ಬರೆದಿರುವ ಕರ್ನಾಟಕ ತಂಡದ ಪ್ರತಿಭಾವಂತ ಆಟಗಾರ ಪ್ರಖರ್ ಚತುರ್ವೇದಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭಿನಂದಿಸಿದರು. ಸಿ.ಎಂ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜ್ ಹಾಜರಿದ್ದರು.

ನಗರದ ಮ್ಯೂಸಿಯಂ ರಸ್ತೆಯಲ್ಲಿರುವ ಅಂಚೆ ಕಚೇರಿಯ ಸಂದೇಶ್ ವಸ್ತು ಸಂಗ್ರಹಾಲಯದಲ್ಲಿ ಅಂಚೆಚೀಟಿ ಸಂಗ್ರಹಣಕಾರರಾದ ಶ್ರೀದೇವಿ ಅವರ 'ರಾಮಾಯಣ' ಕುರಿತ ಅಂಚೆಚೀಟಿಗಳ ಪ್ರದರ್ಶನಕ್ಕೆ ಅಂಚೆ ಇಲಾಖೆಯ ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್‌. ರಾಜೇಂದ್ರಕುಮಾರ್(ಬಲತುದಿಯಲ್ಲಿ) ಬುಧವಾರ ಚಾಲನೆ ನೀಡಿದರು. ರಾಮಾಯಣದ ಘಟನೆಗಳನ್ನು ಪರಿಚಯಿಸುವ ಈ ಅಂಚೆ ಚೀಟಿ ಪ್ರದರ್ಶನ ಫೆಬ್ರುವರಿ 15ರವರೆಗೆ ಮುಂದುವರಿಯಲಿದೆ. ಬೆಳಿಗ್ಗೆ 9.30ರಿಂದ ರಾತ್ರಿ 8.30ರವರೆಗೆ ಪ್ರದರ್ಶನವಿರುತ್ತದೆ. ಸಾರ್ವಜನಿಕರಿಗೆ ಪ್ರವೇಶ ಉಚಿತ.

ಆದಿಚುಂಚನಗಿರಿಯ 'ಮಾತೃ ಸಂಗಮ'ದಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ಅಭಿಮತ

'ನಮ್ಮ ಸಂಸ್ಕೃತಿಯಲ್ಲಿ ಮಹಿಳೆಗೆ ಮೊದಲ ಸ್ಥಾನ'

ಪ್ರಜಾವಾಣಿ ವಾರ್ತೆ

ನಾಗಮಂಗಲ: 'ಪ್ರೀತಿ, ಮಮತೆ ವಾತ್ಸಲ್ಯದ ಪ್ರತಿರೂಪವೇ ತಾಯಿ. ಭರತನಿಂದ ಭಾರತವಾದರೂ, ಭಾರತಮಾತೆ ಎಂದು ಕರೆಸಿಕೊಳ್ಳುವ ಭೂಮಿ, ಜಲ, ದೇಶವನ್ನು ತಾಯಿಗೆ ಹೋಲಿಸುವ ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಗೆ ಮೊದಲ ಸ್ಥಾನ ನೀಡಲಾಗಿದೆ' ಎಂದು ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಆದಿಚುಂಚನಗಿರಿ ಮಠದ ಬಿಜಿಎಸ್ ಸಭಾಂಗಣದಲ್ಲಿ ಬಾಲಗಂಗಾಧರನಾಥ ಸ್ವಾಮೀಜಿಯವರ 79ನೇ ಜಯಂತ್ಯುತ್ಸವ ಮತ್ತು 11ನೇ ವರ್ಷದ ಸಂಸ್ಮರಣಾ ಮಹೋತ್ಸವದ ಅಂಗವಾಗಿ ಬುಧವಾರ ಆಯೋಜಿಸಿದ್ದ 'ಮಾತೃ ಸಂಗಮ'ದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

'ಆಧುನಿಕ ಜಗತ್ತಿನಲ್ಲಿ ಮಾನವೀಯ ಮೌಲ್ಯ ಮತ್ತು ಮೂಲ ತತ್ವಗಳನ್ನು ದೂರ ಮಾಡದೇ ಒಳಗಣ್ಣನ್ನು ತೆರೆದು, ಬದುಕಬೇಕಿದೆ. ಮಾತೆಯರು ದೇಶದ ಸಂಸ್ಕೃತಿ, ಸಂಸ್ಕಾರಗಳನ್ನು ಬಿಂಬಿಸುವ ಆಚಾರ ವಿಚಾರಗಳನ್ನು ಮೈಗೂಡಿಸಿಕೊಂಡು ನಮ್ಮ ಭವಿಷ್ಯದ ಪೀಳಿಗೆಯಾದ ಮಕ್ಕಳಿಗೂ ಬದುಕಿನ ಆದರ್ಶಗಳ ಕುರಿತು ಮಾರ್ಗದರ್ಶನ ನೀಡಬೇಕು' ಎಂದು ಸಲಹೆ ನೀಡಿದರು.

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, 'ರೈತ ದೇಶದ ನಿಜವಾದ ಬೆನ್ನೆಲುಬು ಆದರೂ, ಅವನ ಮೂಲ ದೇವರು ಭೂಮಿತಾಯಿ. ಭವಿಷ್ಯದಲ್ಲಿ ದೇಶ ಅಭಿವೃದ್ಧಿಯಲ್ಲಿ ಮಹಿಳೆಯ ಕೊಡುಗೆ ಹೆಚ್ಚಾಗಲಿದ್ದು, ತಾಯಂದಿರು ಭಾರತದ ಅಭಿವೃದ್ಧಿಗೆ ಸಹಕರಿಸಬೇಕು' ಎಂದರು.

ವಿಧಾನ ಪರಿಷತ್ ಸದಸ್ಯೆ ತೇಜಸ್ವಿನಿ ಗೌಡ ಮಾತನಾಡಿ, 'ಮಹಿಳಾ ಸಮೂಹವು ಮಮತೆಯ ಮತ್ತು ವಾತ್ಸಲ್ಯದ ಪರಂಪರೆಗೆ ಪ್ರತಿರೂಪವಾಗಿದೆ. ಸಂತಭಕ್ತರ ಕೈಲಾಸ ಆದಿಚುಂಚನಗಿರಿ ಮಠವು ಬಾಲಗಂಗಾಧರ ನಾಥ ಸ್ವಾಮೀಜಿ ಅವರಿಂದ ಆಧ್ಯಾತ್ಮಿಕ ಮೌಲ್ಯದೊಂದಿಗೆ ಶೈಕ್ಷಣಿಕ ಸೇವೆಯನ್ನು ಮಾಡುತ್ತಿದೆ. ಸಾಧಕರನ್ನು ಗೌರವಿಸುವುದು ಒಂದೆಡೆಯಾದರೆ, ಸಾಧಿಸುವಂತೆ ಪ್ರೇರೇಪಿಸಿ ಗೌರವಿಸುವುದು ಇಲ್ಲಿನ ವಿಶೇಷತೆಯಾಗಿದೆ' ಎಂದರು.

ಬಿಜೆಪಿ ಮುಖಂಡ ಸಿ.ಟಿ.ರವಿ ಮಾತನಾಡಿ, 'ಒಂದು ದೇಶದ ಅಭಿವೃದ್ಧಿ, ಮನೆ ಬೆಳಗಲು, ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪ್ರಮುಖ ಕಾರಣ ತಾಯಿ. ತನ್ನ ಮಕ್ಕಳ ಬಾಲ್ಯವನ್ನು ಸಂಭ್ರಮಿಸುವ, ಆತ್ಮವಿಶ್ವಾಸ ತುಂಬಿ ಜೀವನ ಮೌಲ್ಯ ಕಲಿಸುವ ಗುರುವಾಗುತ್ತಾಳೆ' ಎಂದರು.

ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ಬುಧವಾರ ನಡೆದ ಮಾತೃ ಸಂಗಮವನ್ನು ಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಿರಾ ಶಾಸಕ ಟಿ.ಬಿ.ಜಯಚಂದ್ರ, ವಿಧಾನ ಪರಿಷತ್ ಸದಸ್ಯೆ ತೇಜಸ್ವಿನಿ ಗೌಡ, ಬಿಜೆಪಿ ಮುಖಂಡ ಸಿ.ಟಿ. ರವಿ ಭಾಗಿಯಾಗಿದ್ದರು – ಪ್ರಜಾವಾಣಿ ಚಿತ್ರ

ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಮಾತನಾಡಿದರು. ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ, ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ, ಶಿರಾ ಶಾಸಕ ಟಿ.ಬಿ.ಜಯಚಂದ್ರ, ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಆಡಳಿತಾಧಿಕಾರಿ ಡಾ.ಎ.ಟಿ. ಶಿವರಾಮು, ಚುಂಚಾದ್ರಿ ಮಹಿಳಾ ಸಂಘದ ಅಧ್ಯಕ್ಷೆ ಭಾರತಿ ಶಂಕರ್, ನಿವೃತ್ತ ಜಿಲ್ಲಾ ನ್ಯಾಯಮೂರ್ತಿ ಶಶಿಕಲಾ, ವಿವಿಧ ಮಹಿಳಾ ಸಂಘಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ನಗರದಲ್ಲಿ ಇಂದು

'ಉನ್ನತ ಶಿಕ್ಷಣದಲ್ಲಿ 21ನೇ ಶತಮಾನದ ಕೌಶಲಗಳು' ಕುರಿತು ಕಾರ್ಯಾಗಾರ: ಉದ್ಘಾಟನೆ: ಡಾ.ಎಂ.ಸಿ. ಸುಧಾಕರ್, ಅತಿಥಿಗಳು: ಜಗದೀಶ ಜಿ., ಎಸ್.ಬಿ. ಅಪ್ಪಾಜಿ ಗೌಡ, ಜಿ. ಶೋಭ, ಶೋಭ ಟಿ.ಆರ್., ಅಧ್ಯಕ್ಷತೆ: ಕೆ. ರಾಮಕೃಷ್ಣ ರೆಡ್ಡಿ, ಆಯೋಜನೆ: ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಸ್ಥಳ: ಸರ್ಕಾರಿ ಕಲಾ ಕಾಲೇಜು, ಅಂಬೇಡ್ಕರ್ ವೀದಿ, ಬೆಳಿಗ್ಗೆ 10

'ಮಕ್ಕಳು ಮತ್ತು ಹದಿಹರೆಯದವರಲ್ಲಿ ಮಾನಸಿಕ ಆರೋಗ್ಯದ ಸವಾಲುಗಳು' ಕುರಿತು ವಿಚಾರಸಂಕಿರಣ: ಭಾಷಣಕಾರ: ಡಾ. ಚಿತ್ತರಂಜನ್ ಅಂದ್ರಾಡೆ, ಆಯೋಜನೆ: ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ಸ್ಥಳ: ದಿ ಚಾನ್ಸರಿ ಪೆವಿಲಿಯನ್, ಅಶೋಕನಗರ, ಬೆಳಿಗ್ಗೆ 10

ಬೆಂಗಳೂರು ಅಂತರರಾಷ್ಟ್ರೀಯ ಗ್ರ್ಯಾಂಡ್‌ಮಾಸ್ಟರ್ಸ್ ಓಪನ್ ಚೆಸ್ ಪಂದ್ಯಾವಳಿ ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಯು.ಟಿ. ಖಾದರ್, ಬಿ. ನಾಗೇಂದ್ರ, ಕೆ. ಗೋವಿಂದರಾಜು, ಅಧ್ಯಕ್ಷತೆ: ಸೌಮ್ಯ ಎಂ.ಯು., ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ, ಬೆಳಿಗ್ಗೆ 10.30

ಸ್ವಾಮಿ ವಿವೇಕಾಂದ ಜನ್ಮದಿನಾಚರಣೆ: ಉದ್ಘಾಟನೆ: ಪಟೇಲ್ ಪಾಂಡು ಬಿ.ಎಂ., ಅತಿಥಿ: ಶಶಿಕಲಾ, ಉಪನ್ಯಾಸ: ಸತ್ಯವತಿ ಬಸವರಾಜು, ಅಧ್ಯಕ್ಷತೆ: ಬಿ.ಪಿ. ಹರ್ಷ, ಆಯೋಜನೆ: ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಪಟೇಲ್‌ಪಾಂಡು ಬಿ.ಎಂ., ಚೈತನ್ಯ ಮಂದಿರ ಶಾಲಾ ಕಾಲೇಜು ಆವರಣ, ಮೈಸೂರು ರಸ್ತೆ, ಬೆಳಿಗ್ಗೆ 10.30

'ಅಪರಾಧಿಕ ಕಾನೂನಿನಲ್ಲಿ ಪಾಟಿ ಸವಾಲಿನ ಕುರಿತು ಒಂದು ಪಕ್ಷಿನೋಟ': ಅತಿಥಿ: ಸಿ.ಎಚ್. ಹನುಮಂತರಾಯ, ಅಧ್ಯಕ್ಷತೆ: ಜಯಶ್ರೀ ಆರ್. ಸಾಲಿಮಠ, ಆಯೋಜನೆ ಮತ್ತು ಸ್ಥಳ: ಜಗದ್ಗುರು ರೇಣುಕಾಚಾರ್ಯ ಕಾಲೇಜ್ ಆಫ್ ಲಾ, ಆನಂದರಾವ್ ವೃತ್ತಿ, ಬೆಳಿಗ್ಗೆ 11.30

ಹನುಮಂತ ರಾಯ

'ವಿಶ್ವಗುರು ಬಸವಣ್ಣ ಮತ್ತು ವಚನ ಸಾಹಿತ್ಯಾಧಾರಿತ ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಎಸ್.ಎಸ್. ಮಲ್ಲಿಕಾರ್ಜುನ್, ರಾಮಲಿಂಗಾರೆಡ್ಡಿ, ಗೊ.ರು. ಚನ್ನಬಸಪ್ಪ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಲಾಲ್‌ಬಾಗ್ ಗಾಜಿನ ಮನೆ, ಸಂಜೆ 6

ಹರಿದಾಸ ವೈಭವ: ಗಾಯನ: ಚಿಂತನಪ್ಪಲಿ ವಿ. ಶ್ರೀನಿವಾಸ್, ಪಿಟೀಲು: ಎಸ್. ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

ಕರ್ನಾಟಕ ವಾದ್ಯ ಸಂಗೀತ: ಕೊಳಲು: ಶ್ರೇಯಸ್, ಮ್ಯಾಂಡೋಲಿನ್: ಶ್ರೀವತ್ಸ ಕಶ್ಯಪ್, ತಬಲಾ: ನಟರಾಜ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

ಕಾಶ್ಮೀರದ ಕೇಸರಿ ಈಚಿನ ಸವಾಲುಗಳು

ಸುದ್ದಿಯಲ್ಲಿರುವ ಕಾರಣ ?

- ಸಿಮೆಂಟ್ ಕಾರ್ಖಾನೆಗಳು ಹೆಚ್ಚಾಗಿ ಕಾರ್ಯನಿರ್ವಹಿಸಲು ಪ್ರಾರಂಭವಾದ ಕಾರಣದಿಂದ ಕೇಸರಿ ಉತ್ಪಾದನೆಗೆ ಪ್ರಖ್ಯಾತಿಯನ್ನು ಹೊಂದಿದ್ದ ಕಾಶ್ಮೀರದಲ್ಲಿ ಉತ್ಪಾದನೆ ದಿನದಿಂದ ದಿನಕ್ಕೆ ತಗ್ಗುತ್ತಿದೆ ಎನ್ನುವ ವರದಿ ಬಹಿರಂಗವಾಗಿದೆ.
- ಇರಾನ್ ನಂತರ ಜಾಗತಿಕ ಮಟ್ಟದಲ್ಲಿ ಅತಿ ಹೆಚ್ಚು ಕೇಸರಿ ಉತ್ಪಾದನೆ ಮಾಡುತ್ತಿರುವುದು ಕಾಶ್ಮೀರ. ಪ್ರತಿ ವರ್ಷ 11 ರಿಂದ 12 ಟನ್ ಕೇಸರಿ ಉತ್ಪಾದನೆಯನ್ನು ಮಾಡುತ್ತಿತ್ತು.

ಕೇಸರಿ ಉತ್ಪಾದನೆ ಇಳಿಮುಖಕ್ಕೆ ಕಾರಣಗಳು

- ಕೇಸರಿ ಬೆಳೆಯುವ ಹೊಲಗಳಿಗೆ ಸಮೀಪದಲ್ಲಿರುವ ಸಿಮೆಂಟ್ ಕಾರ್ಖಾನೆಗಳಿಂದ ಹೆಚ್ಚಿನ ಪ್ರಮಾಣದ ದೂಳು ಹೊರಸೂಸುತ್ತಿರುವ ಕಾರಣದಿಂದ ಕೇಸರಿಯ ಇಳುವರಿ, ಗುಣಮಟ್ಟ ಮತ್ತು ಪ್ರಮಾಣ ಕಡಿಮೆಯಾಗುತ್ತಿದೆ.
- ಸಿಮೆಂಟ್ ಕಾರ್ಖಾನೆಗಳ ಮಾಲಿನ್ಯದ ಕಾರಣದಿಂದ ಪುಲ್ವಾಮದ ಕೇಸರಿ ಹೊಲಗಳ ಇಳುವರಿಯಲ್ಲಿ ಶೇ 60 ರಷ್ಟು ಕುಸಿತ ಕಂಡಿದೆ.

ಸಿಮೆಂಟ್ ದೂಳಿನ ಪರಿಣಾಮ

ಕೇಸರಿ ಹೂವುಗಳು ಅತ್ಯಂತ ಸೂಕ್ಷ್ಮವಾಗಿದ್ದು ಸಿಮೆಂಟ್ ದೂಳಿನಲ್ಲಿರುವ ಹಾನಿಕಾರಕ ಕಣಗಳಾದ ನೈಟ್ರೋಜನ್ ಆಕ್ಸೈಡ್, ಸಲ್ಫರ್ ಡೈ ಆಕ್ಸೈಡ್ ಮತ್ತು ಕಾರ್ಬನ್ ಮೊನಾಕ್ಸೈಡ್ ಅಂಶಗಳು ಹಾನಿ ಉಂಟು ಮಾಡುತ್ತಿವೆ.

- ಕಾರ್ಖಾನೆಗಳಿಂದ ಉಂಟಾಗುವ ದೂಳು ಕೇಸರಿ ಎಲೆಗಳ ಮತ್ತು ಹೂವುಗಳ ಸಣ್ಣ ರಂಧ್ರಗಳನ್ನು ಹೊಕ್ಕಿ ಪ್ರಾಥಮಿಕ ಹಂತದಲ್ಲಿಯೇ ಎಲೆ ಉದುರುತ್ತಿದೆ. ಇದರಿಂದ ಕೇಸರಿ ಬೆಳೆಯ ಇಳುವರಿ ಕುಸಿತಗೊಂಡಿದೆ.

ಪರಿಸರದ ಕಾರಣಗಳು

ಇತ್ತೀಚಿನ ವರ್ಷಗಳಲ್ಲಿ ಯಂತ್ರೋಪಕರಣಗಳ ಬಳಕೆ ಹೆಚ್ಚಾಗಿರುವುದರಿಂದ, ಮಣ್ಣಿನಲ್ಲಿರುವ ಪೌಷ್ಟಿಕಾಂಶ ನಶಿಸುತ್ತಿರುವ ಕಾರಣದಿಂದಲೂ ಕೇಸರಿ ಕೃಷಿಯ ಪ್ರಮಾಣ ಕಡಿಮೆಯಾಗಿದೆ.

ಸರ್ಕಾರದ ಬೆಂಬಲದ ಕೊರತೆ

ಕಾಶ್ಮೀರದ ರೈತರು ಸಿಮೆಂಟ್ ಕಾರ್ಖಾನೆಗಳ ವಿರುದ್ಧ ಪ್ರತಿಭಟನೆ ನಡೆಸಿದರೂ ಸರ್ಕಾರ ಕೇಸರಿ ಕೃಷಿ ಪ್ರದೇಶಗಳ ಸಮೀಪವೇ ಸಿಮೆಂಟ್ ಕಾರ್ಖಾನೆಗಳ ಸ್ಥಾಪನೆಗೆ ಅನುಮತಿಯನ್ನು ನೀಡಿದೆ.

ಮಾರುಕಟ್ಟೆಯ ಸವಾಲುಗಳು

ಕೇಸರಿ ಕೃಷಿ ಉತ್ಪನ್ನಕ್ಕೆ ಸರಿಯಾದ ಬೆಲೆ ಮತ್ತು ಸೂಕ್ತ ಮಾರುಕಟ್ಟೆಯ ವ್ಯವಸ್ಥೆ ಸಿಗದೇ ಇರುವುದರಿಂದ ಈ ಉತ್ಪನ್ನದ ಗುಣಮಟ್ಟ ಮತ್ತು ಪ್ರಮಾಣದಲ್ಲಿ ಇಳಿಮುಖ ಕಂಡಿದೆ.

ಭೌಗೋಳಿಕ ಸ್ಥಿತಿಗತಿಗಳು

ಕೇಸರಿ ಬೆಳೆಯನ್ನು ಸಮುದ್ರ ಮಟ್ಟದಿಂದ 2,000 ಮೀಟರ್ ಎತ್ತರದ ಪ್ರದೇಶಗಳಲ್ಲಿ ಮಾತ್ರ ಬೆಳೆಯಬಹುದಾಗಿದ್ದು, 12 ಗಂಟೆಗಳ ಕಾಲ ಸೂರ್ಯನ ಕಿರಣಗಳ ಅವಶ್ಯಕತೆ ಇರುತ್ತದೆ. ಕ್ಯಾಲ್ಸಿಯಂ ಕಾರ್ಬೋನೇಟ್ ಹೇರಳವಾಗಿ ಇರುವಂತಹ ಮಣ್ಣಿನಲ್ಲಿ ಹೆಚ್ಚಾಗಿ ಬೆಳೆಯಬಹುದಾಗಿದ್ದು, ವರ್ಷಕ್ಕೆ 1000 ದಿಂದ 1,500 ಮಿಲಿಮೀಟರ್ ಮಳೆಯ ಅಗತ್ಯವಿರುತ್ತದೆ.

ಕೇಸರಿಯ ಉಪಯುಕ್ತತೆಗಳು

ವೈದ್ಯಕೀಯ, ಸೌಂದರ್ಯವರ್ಧಕ ಹಾಗೂ ಸಾಂಪ್ರದಾಯಿಕ ಭಕ್ಷಗಳಾದ ಪಾನೀಯ, ಮಿಠಾಯಿ, ಡೈರಿ ಉತ್ಪನ್ನಗಳಲ್ಲಿ ಬಳಕೆಯಾಗುತ್ತದೆ.

ಕೇಂದ್ರ ಸರ್ಕಾರದ ಮಾನ್ಯತೆ: ಕೇಂದ್ರ ಸರ್ಕಾರ 2020ರಲ್ಲಿ ಭೌಗೋಳಿಕ ಸೂಚಿ ದೃಢೀಕರಣ ಪತ್ರವನ್ನು ನೀಡಿದ್ದು, ಜಾಗತಿಕ ಮಟ್ಟದ ಪಾರಂಪರಿಕ ಕೃಷಿ ವ್ಯವಸ್ಥೆಗಳಲ್ಲಿ ಅತ್ಯಂತ ಪ್ರಾಮುಖ್ಯತೆ ಹೊಂದಿದೆ.

ಸರ್ಕಾರದ ಉತ್ತೇಜನ ಕ್ರಮಗಳು

ರಾಷ್ಟ್ರೀಯ ಕೇಸರಿ ಅಭಿಯಾನವನ್ನು 2010-11ರಲ್ಲಿ ಕೇಂದ್ರ ಸರ್ಕಾರ ಪ್ರಾರಂಭಿಸಿದ್ದು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅಂಗವಾಗಿ ಕಾರ್ಯನಿರ್ವಹಿಸುತ್ತಿದೆ.

- ಕಾಶ್ಮೀರದ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವ ಉದ್ದೇಶದಿಂದ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ.
- ನಾರ್ತ್ ಈಸ್ಟ್ ಸೆಂಟರ್ ಫಾರ್ ಟೆಕ್ನಾಲಜಿ ಅಪ್ಲಿಕೇಶನ್ ಅಂಡ್ ರೀಚ್(NECTAR) - ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಈ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದ್ದು, ಭಾರತದ ಈಶಾನ್ಯ ರಾಜ್ಯಗಳಲ್ಲಿ ಕೇಸರಿ ಕೃಷಿಯನ್ನು ಹಮ್ಮಿಕೊಳ್ಳಲು ಪೂರಕವಾದ ಅಂಶಗಳ ಬಗ್ಗೆ ಅಧ್ಯಯನವನ್ನು ನಡೆಸುತ್ತಿದೆ.

ನಾಮ್‌ದಫಾ ಹಾರುವ ಅಳಿಲು 4 ದಶಕಗಳ ನಂತರ ಪತ್ತೆ

ಯು.ಟಿ.ಆಯಿಶಾ ಫರ್ಜಾನ

ಕಳೆದ 42 ವರ್ಷಗಳಿಂದ ಪರಿಸರದಲ್ಲಿ ಎಂದೂ ಕಂಡಿರದ ನಾಮ್‌ದಫಾ ಹಾರುವ ಅಳಿಲು ಇತ್ತೀಚೆಗೆ ಅರುಣಾಚಲ ಪ್ರದೇಶದಲ್ಲಿ ಮತ್ತೆ ಕಾಣಿಸಿಕೊಂಡಿದ್ದು, ಪರಿಸರಪ್ರಿಯರಲ್ಲಿ ಸಂಭ್ರಮ ಮೂಡಿಸಿದೆ.

ನಾಮ್‌ದಫಾ ಹಾರುವ ಅಳಿಲು (ಬಿಸ್ವಾಮೊಯೋಪ್ಟೆರಸ್ ಬಿಸ್ವಾಸಿ)

- ನಾಮ್‌ದಫಾ ಹಾರುವ ಅಳಿಲು (ಬಿಸ್ವಾಮೊಯೋಪ್ಟೆರಸ್ ಬಿಸ್ವಾಸಿ) ತೀವ್ರ ಅಳಿವಿನಂಚಿನಲ್ಲಿರುವ ಪ್ರಭೇದಗಳ ಪಟ್ಟಿಯಲ್ಲಿದೆ. ಸಮೀಕ್ಷೆಗಳ ಪ್ರಕಾರ ಉದ್ಯಾನದಲ್ಲಿ ಲಭ್ಯವಿರುವ ಈ ಅಳಿಲುಗಳ ವಾಸಸ್ಥಾನದ ವ್ಯಾಪ್ತಿಪ್ರದೇಶ 100 ಕಿಲೋಮೀಟರ್‌ಗಳಿಗಿಂತ ಕಡಿಮೆ ಎಂದು ಅಂದಾಜಿಸಲಾಗಿದೆ. ಅವುಗಳ ವಾಸಸ್ಥಾನವು ಸಣ್ಣ ವ್ಯಾಪ್ತಿಯಲ್ಲಿ ಇರುವುದೇ ಈ ಪ್ರಬೇಧಗಳ ಅವನತಿಗೆ ಕಾರಣವಾಗಿದೆ ಎಂದು ಊಹಿಸಲಾಗಿದೆ.
- ಸಮುದ್ರಮಟ್ಟದಿಂದ 100ರಿಂದ 350 ಮೀಟರ್ ಎತ್ತರದಲ್ಲಿರುವ ಪೂರ್ವ ಹಿಮಾಲಯದ ಜೀವವೈವಿಧ್ಯ ವಲಯದಲ್ಲಿರುವ ಅತಿದೊಡ್ಡ ಸಂರಕ್ಷಿತ ಪ್ರದೇಶವಾದ ನಾಮ್‌ದಫಾ ರಾಷ್ಟ್ರೀಯ ಉದ್ಯಾನದಲ್ಲಿ 1981ರಲ್ಲಿ ಕಂಡ ಏಕೈಕ ಅಳಿಲೇ ಕಟ್ಟಕಡೆಯ ಅಳಿಲಾಗಿತ್ತು.
- 1981ರ ಬಳಿಕ ಸಂಶೋಧಕರು ಈ ಕುತೂಹಲಕಾರಿ ಹಾರುವ ಅಳಿಲಿಗಾಗಿ ಸುತ್ತಮುತ್ತಲಿನ ಪ್ರದೇಶದಲ್ಲಿ ಹಲವು ಬಾರಿ ಹುಡುಕಾಡಿದ್ದರೂ ಯಾವುದೇ ಕುರುಹುಗಳು ಕಂಡುಬಂದಿರಲಿಲ್ಲ.
- ವಿಜ್ಞಾನಿಗಳು ಈ ಪ್ರಭೇದವು ಒಮ್ಮೆ ನಶಿಸಿಹೋಗಿದೆ ಎಂದು ನಂಬಿದ್ದರು ಮಾತ್ರವಲ್ಲದೇ ಇದು ಆ ಪ್ರದೇಶದ ಉದ್ದಕ್ಕೂ ಒಣ ಎಲೆಉದುರುವ ಕಾಡುಗಳಲ್ಲಿನ ನದಿಗಳ ಅಂಚಿನಲ್ಲಿ ಕಂಡುಬರುವ ಪ್ರಾಣಿ ಎಂದು ಭಾವಿಸಿದ್ದರು. ಆದರೆ ಈಗ ಇವುಗಳು ನಾಮ್‌ದಫಾ ರಾಷ್ಟ್ರೀಯ ಉದ್ಯಾನದೊಳಗಿನ ಒಂದು ಕಣಿವೆಯ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರಬಹುದು ಎಂದು ಅಂದಾಜಿಸಿದ್ದಾರೆ. ಇದು ಮುಸ್ಸಂಜೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಿರುವ ಪ್ರಾಣಿಯಾಗಿದ್ದು ವೃಕ್ಷಾವಲಂಬಿ(ಮರಗಳ ಮೇಲೆ ಜೀವಿಸುವ) ಜೀವಿಯಾಗಿದೆ.
- ವನ್ಯಜೀವಿ ಸಂರಕ್ಷಣಾ ಕಾಯಿದೆ - 1972ರ ಷೆಡ್ಯೂಲ್ I ರ ಅಡಿಯಲ್ಲಿ ಈ ಪ್ರಭೇದಗಳನ್ನು ಪಟ್ಟಿ ಮಾಡಲಾಗಿದೆ.
- ಈ ಪ್ರಭೇದಗಳಿಗೆ ಸೂಕ್ತ ರಕ್ಷಣೆಯ ಅವಶ್ಯಕತೆಯಿದೆ. ಇವುಗಳು ಇನ್ನೂ ಎಷ್ಟರ ಮಟ್ಟಿಗೆ ಉಳಿದಿವೆ? ಅವುಗಳ ಸಂರಕ್ಷಣೆ ಹೇಗೆ ಮತ್ತು ಪ್ರಸ್ತುತ ಅವುಗಳ ಪ್ರಸ್ತುತ ವಿತರಣಾ ವ್ಯಾಪ್ತಿ ಏನು ಎಂದು ನಿರ್ಧರಿಸಲು ವಿವರವಾದ ಕ್ಷೇತ್ರ ಸಮೀಕ್ಷೆಗಳನ್ನು ಕೈಗೊಳ್ಳುವ ಕಾರ್ಯ ನಡೆಯಬೇಕಿದೆ.

ನಾಮ್‌ದಫಾ ರಾಷ್ಟ್ರೀಯ ಉದ್ಯಾನ ಮತ್ತು ಹುಲಿಸಂರಕ್ಷಿತ ಪ್ರದೇಶ

- ರಾಷ್ಟ್ರೀಯ ಉದ್ಯಾನ ಮತ್ತು ಹುಲಿಸಂರಕ್ಷಿತ ಪ್ರದೇಶ ಎಂಬ ಎರಡೂ ಮನ್ನಣೆಗಳಿಗೆ ಪಾತ್ರವಾಗಿರುವ ನಾಮ್‌ದಫಾ ಅರಣ್ಯಪ್ರದೇಶವು ತನ್ನ ವಿಸ್ತಾರವಾದ ಹಚ್ಚಹಸುರಿನ ದಟ್ಟ ಕಾಡುಗಳೊಂದಿಗೆ 1985.23 ಚದರ ಕಿಲೋಮೀಟರ್ ವಿಸ್ತೀರ್ಣಗಳವರೆಗೆ ಹಬ್ಬಿದೆ.
- ಈಶಾನ್ಯ ಭಾರತದ ಅರುಣಾಚಲ ಪ್ರದೇಶದ ಚಾಂಗ್ಲಾಂಗ್ ಜಿಲ್ಲೆಯೊಳಗೆ ಭಾರತ ಮತ್ತು ಮ್ಯಾನ್ಮಾರ್ (ಬರ್ಮಾ) ನಡುವಿನ ಅಂತರರಾಷ್ಟ್ರೀಯ ಗಡಿಯಲ್ಲಿ ನೆಲೆಗೊಂಡಿರುವ ನಾಮ್‌ದಫಾ ರಾಷ್ಟ್ರೀಯ ಉದ್ಯಾನವು ಮಿಯಾವೊ ಜಿಲ್ಲೆಯಿಂದ ಕೆಲವೇ ಕಿಲೋಮೀಟರ್ ದೂರದಲ್ಲಿದ್ದು, ನೋವಾ-ಡಿಹಿಂಗ್ ನದಿಯ ಉದ್ದಕ್ಕೂ ಹಬ್ಬಿರುವ ಹಿಮಾಚ್ಛಾದಿತ ನೀಲಿ ಬೆಟ್ಟಗಳ ನಡುವೆ ನೆಲೆಸಿದೆ.
- ತನ್ನ ವಿಸ್ತಾರವಾದ ಉಷ್ಣವಲಯದ ಮಳೆಕಾಡಿಗೆ ಹೆಸರುವಾಸಿಯಾಗಿರುವ ಈ ಅರಣ್ಯವನ್ನು 1983ರಲ್ಲಿ ಸರ್ಕಾರವು ಹುಲಿ ಸಂರಕ್ಷಿತ ಪ್ರದೇಶವೆಂದು ಘೋಷಿಸಿತು.
- ಈ ರಾಷ್ಟ್ರೀಯ ಉದ್ಯಾನವು ಜೀವವೈವಿಧ್ಯದ ಸ್ವರ್ಗತಾಣ ಎನ್ನಬಹುದು. ಯಥೇಚ್ಛ ಅರಣ್ಯ ಸಂಪನ್ಮೂಲವನ್ನು ಹೊಂದಿದ್ದು ಅಲ್ಲಿನ ಪ್ರಾಣಿ ಮತ್ತು ಸಸ್ಯ ಪ್ರಬೇಧಗಳು ಹಾಗೂ ಸುದೀರ್ಘ ಕಾಲದಲ್ಲಿ ನಡೆಯುವ ಆನುವಂಶಿಕ ಬದಲಾವಣೆಯ ಬಗ್ಗೆ ಸಮಗ್ರ ಅಧ್ಯಯನವನ್ನು ಕೈಗೊಳ್ಳಬೇಕಾಗಿದೆ.

ನಾಮ್‌ದಫಾ ಅರಣ್ಯಪ್ರದೇಶವು ಸಸ್ಯಶಾಸ್ತ್ರಜ್ಞರ ಕನಸಿನ ಸಂಶೋಧನಾ ತಾಣವಾಗಿದ್ದು, ಸಂಪೂರ್ಣ ಸಸ್ಯಶಾಸ್ತ್ರೀಯ ಸಮೀಕ್ಷೆಗೆ 50 ವರ್ಷಗಳ ಕಾಲ ಬೇಕಾಗಬಹುದು ಎಂದು ಅಂದಾಜಿಸಲಾಗಿದೆ.

- ಈ ಪ್ರದೇಶವು ಭಾರತದಲ್ಲಿ ಬೇರೆಲ್ಲಿಯೂ ಕಂಡುಬರದ ಪೈನಸ್ ಮೆರ್ಕುಸಿ ಮತ್ತು ಅಬೀಸ್ ಡೆಲವಾವಿ ಸೇರಿದಂತೆ 150ಕ್ಕೂ ಹೆಚ್ಚು ಜಾತಿಯ ಮರಗಳನ್ನು ಹೊಂದಿದೆ.
- ವಿಶೇಷವಾಗಿ ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ಆರ್ಕಿಡ್‌ಗಳಲ್ಲಿ ಒಂದಾದ ಬ್ಲೂ ವಂಡಾ ಆರ್ಕಿಡ್‌ಗಳು ಇಲ್ಲಿ ಬೆಳೆಯುತ್ತದೆ. ಉದ್ಯಾನದಲ್ಲಿ ಮಿಶಿಮಿ ಟೀಟಾ (ಕೋಪ್ಟಿ ಟೀಟಾ) ಸಸ್ಯಗಳು ಬೆಳೆಯುತ್ತಿದ್ದು ಇದು ಸ್ಥಳೀಯವಾಗಿ ಪ್ರಸಿದ್ಧ ಔಷಧೀಯ ಸಸ್ಯವಾಗಿದೆ. ಮಿಶಿಮಿ ಟೀಟಾ (ಕೋಪ್ಟಿ ಟೀಟಾ) ಸಸ್ಯಗಳನ್ನು ರಫ್ತು ಮಾಡುವುದನ್ನು ನಿಷೇಧಿಸಲಾಗಿದೆ.
- ನಾಮ್‌ದಫಾದ ವೈವಿಧ್ಯಮಯ ಸಸ್ಯವರ್ಗ ಮತ್ತು ಆವಾಸಸ್ಥಾನಗಳು ಅನೇಕ ರೀತಿಯ ಪ್ರಾಣಿ ಮತ್ತು ಪಕ್ಷಿಗಳನ್ನು ಪೋಷಿಸುತ್ತವೆ. ಇದು ಜಗತ್ತಿನಲ್ಲಿಯೇ ಎಲ್ಲಾ ನಾಲ್ಕು ಬೆಕ್ಕಿನ ಪ್ರಭೇದಕ್ಕೆ ಸೇರುವ ದೊಡ್ಡ ಬೆಕ್ಕುಗಳನ್ನು ಒಂದೇ ಕಡೆ ಪೊರೆಯುವ ಏಕೈಕ ಉದ್ಯಾನವಾಗಿದೆ. ಹುಲಿ(ಪ್ಯಾಂಥೆರಾ ಟೈಗ್ರಿಸ್), ಚಿರತೆ (ಪ್ಯಾಂಥೆರಾ ಪಾರ್ಡಸ್), ಹಿಮಚಿರತೆ (ಪ್ಯಾಂಥೆರಾ ಅನ್ಸಿಯಾ), ಮತ್ತು ಕ್ಲೌಡೆಡ್ ಲೆಪರ್ಡ್ (ನಿಯೋಫೆಲಿಸ್ ನೆಬುಲೋಸಾ)
- ಅಸ್ಸಾಮಿ ಮಕಾಕ್, ಹಂದಿ-ಬಾಲದ ಮಕಾಕ್, ಸ್ಟಂಪ್-ಟೈಲ್ಡ್ ಮಕಾಕ್ ಮತ್ತು ಭಾರತದ ಏಕೈಕ 'ವಾನರ' ಜಾತಿಯ ಅಳಿವಿನಂಚಿನಲ್ಲಿರುವ ಹೂಲಾಕ್ ಗಿಬ್ಬನ್ಸ್ (ಹೈಲೋಬೇಟ್ಸ್ ಹೂಲಾಕ್) ಸೇರಿದಂತೆ ಹಲವು ಪ್ರೈಮೇಟ್ ಪ್ರಭೇದಗಳು ಈ ಅರಣ್ಯದಲ್ಲಿ ವಾಸಿಸುತ್ತವೆ. ಉಳಿದಂತೆ ಆನೆಗಳು, ಕಪ್ಪು ಕರಡಿಗಳು, ಭಾರತೀಯ ಕಾಡೆಮ್ಮೆ, ವಿವಿಧ ಜಿಂಕೆ ಜಾತಿಗಳು, ಸರೀಸೃಪಗಳು ಮತ್ತು ವಿವಿಧ ವೃಕ್ಷದ ಪ್ರಾಣಿಗಳು ಇಲ್ಲಿ ಯಥೇಚ್ಛವಾಗಿ ಕಂಡುಬರುತ್ತವೆ.
- ಈ ಉದ್ಯಾನದಲ್ಲಿ ಪಕ್ಷಿಸಂಕುಲವೂ ಬಲುದೊಡ್ಡ ಸಂಖ್ಯೆಯಲ್ಲಿದ್ದು ಬಿಳಿ ರೆಕ್ಕೆಯ ಮರದ ಬಾತುಕೋಳಿಗಳು, ಅಳಿವಿನಂಚಿನಲ್ಲಿರುವ ಪ್ರಭೇದಗಳು, ಜೊತೆಗೆ ದೊಡ್ಡ ಇಂಡಿಯನ್ ಹಾರ್ನ್‌ಬಿಲ್‌ಗಳು, ಜಂಗಲ್ ಫೌಲ್‌ಗಳು ಮತ್ತು ಫೆಸೆಂಟ್‌ಗಳಂತಹ ಗಮನಾರ್ಹ ಪಕ್ಷಿಪ್ರಬೇಧಗಳಿಗೆ ಈ ಅರಣ್ಯವು ನೆಲೆವೀಡಾಗಿದೆ.
- ಆರ್ದ್ರ ಉಷ್ಣವಲಯದ ಮಳೆಕಾಡಿನ ಭವ್ಯತೆಯನ್ನು ಪ್ರದರ್ಶಿಸುವಂಥ, ದಟ್ಟವಾಗಿ ಹೆಣೆದುಕೊಂಡಿರುವ ಬೆತ್ತಗಳು, ಬಿದಿರುಗಳು ಮತ್ತು ವೈವಿಧ್ಯಮಯ ಸಸ್ಯವರ್ಗಗಳಿಂದ ಕೂಡಿದ ಸಮೃದ್ಧವಾದ ಗಿಡಗಂಟಿಗಳು, ವಿವಿಧ ಪ್ರಾಣಿಗಳು ಮತ್ತು ಪಕ್ಷಿಗಳಿಗೆ ಸಂತಾನೋತ್ಪತ್ತಿಯ ತಾಣವೂ ಆಗಿದೆ.

ಈ ಅರಣ್ಯಗಳ ದುರ್ಗಮತೆಯು ಅದರೊಳಗೆ ಹೆಚ್ಚು ಮಾನವ ಪ್ರವೇಶಕ್ಕೆ ಅವಕಾಶ ನೀಡದಿರುವುದರಿಂದ ಅರಣ್ಯಗಳ ಮೂಲಸ್ವರೂಪವನ್ನು ಕಾಪಾಡಲು ನೆರವಾಗಬಹುದು ಎನ್ನುವುದು ಪರಿಸರಪ್ರಿಯರ ಅಭಿಮತವಾಗಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

III.The following paragraph has two errors. Edit the paragraph and rewrite it in the answer book, clues are given:

17. Although Dravidian in origin, Kannada has been high influenced by Sanskrit. According to some scholars, its early literature dates back with the 5th century A.D. Clues are given:

A. Adverbial mistake to be corrected.

B. Preposition to be corrected.

Ans:- Although Dravidian in origin, Kannada has been highly influenced by Sanskrit. According to some scholars, its early literature dates back from, 5th century A,D.

IV. Answer the following questions in 2-3 sentences each:

18. Why is Dr. B.R. Ambedkar considered as a champion of the depressed classes in India?

Ans:- Dr. B.R. Ambedkar was influenced by the work of Mahatma Phule. He decided to devote all his time and talents to improve the conditions of under privileged or depressed classes in our country. For this he started newspapers like Mooknayak, Bahishkrit Bharath and Samatha.

Hitakarini Sabha was set up by him. So all his works made him to think as a champion of the depressed classes in India.

19. How is pursuit of science an exciting adventure?

Ans:- Yes, everybody could agree that pursuit of Science is really an exciting adventure. When compare to other types of adventures like Sports, Art, Music, Whatever may be the field, Science need determination, perseverance and hard work. In all the fields especially in science field the major reward comes from the discovery itself.

20. Why do the tea cups circle und the poet like planets around the Sun?

Ans:- Earth has gravitational force but in space there is absence of gravitational pull, due to this the tea cup or whatever may be the object, it would revolve round like the planets around the Sun.

21. What do we learn from Sathish Gujral's life?

Ans:- Satish Gujral was the good example for the disabled could also achieve the best. Disability was no barrier to Success. He was given more inspiration to those who were want to achieve success in life.

22. Why does Roma consider Baleshwar's action to be amazing?

Ans:- Roma considered Baleshwar's action to be amazing because the way she was rescued by him. According to Roma it was astonishing because a stranger would jump off a train and risk his life for her. She was also a stranger to him.

23. How does inspector Patil help Mohan and his family?

Ans:- Patil, the sub-inspector of police was the friend of teacher. So he wanted to help them. He came and explained the situation, it was safer side if they handed over (gave) that machine to him. They may escape from arresting. Amma believed him and handed over that machine to police officer before the other police came.

OR

How did Dicky Dolma feel after scaling Mt. Everest?

Ans:- Dicky Dolma climbed Mt. Everest on May 10, 1993 and she was the youngest woman in the world to have achieved the awesome feat o scaling he world's highest peak. The view from above is something extraordinary not able to describe fully in words. It was much more breath - taking that she could ever have imagined. The entire National and State awards that she had been bestowed were nothing compared to the experiences of seeing that view.

24. How can you say that Hanif was a talented young man.

Ans:- The life for Hanif was always ekdam bindas. He sketched very well, made beautiful cards out of waste materials, read books and loved playing the drums. As a young man he was so talented and had very much interest in life.

OR

What qualities of Wangjia do you like?

Ans:- We like Wangjia the most in the story. He was so young to take such a risk. We like his selfless hard work. He did a great task for the benefit of his people: He faced many hardships during his task. He didn't care his life also. To work for others is really a good job, everyone will appreciate his work.

V. Answer the following questions in 5-6 sentences each:

25. How did Swami become a hero overnight though he was not courageous?

Ans:- Whenever Swami's father, cook and a servant caught the burglar, the next day congratulations were showered on Swami. though he was not so courageous, the timely spirit made him as hero. Swami bite the burglar with all his strength to escape from him. His timely action made him as hero.

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC MATHEMATICS

REVISION: MODEL QUESTIONS

25. Verify whether the function $f : A \to B$ where $A = R - \{3\}$ and $B = R - \{1\}$ defined by $f(x) = \frac{x-2}{x-3}$ is one – one and on to or not. Give reason?

Ans:- $\forall x_1, x_2 \in R - \{3\}$

$f(x_1) = f(x_2)$

$\Rightarrow \frac{x_1 - 2}{x_1 - 3} = \frac{x_2 - 2}{x_2 - 3} \Rightarrow x_1 = x_2,$

f is one – one $\exists\, y \in R - \{1\}$, such that $\frac{x-2}{x-3} = y$

$x - 2 = y(x-3) \Rightarrow x - 2 = xy - 3y$

$\Rightarrow x - xy = 2 - 3y \Rightarrow x(1-y) = 2 - 3y$

$\Rightarrow x = \frac{2-3y}{1-y}$

consider $f(x) = f\left(\frac{2-3y}{1-y}\right) = \frac{\frac{2-3y}{1-y} - 2}{\frac{2-3y}{1-y} - 3}$

(by taking LCM and simplify)

$f(x) = y$

$\therefore$ f in on to

consider $f(x) = f\left(\frac{2-3y}{1-y}\right) = \frac{\frac{2-3y}{1-y} - 2}{\frac{2-3y}{1-y} - 3}$

(by taking LCM and simplify)

$f(x) = y$

$\therefore$ f in on to

26. Prove that $\tan^{-1} x + \tan^{-1} y = \tan^{-1} \frac{x+y}{1-xy}$, where $xy < 1$

Ans:- Let $\tan^{-1} x = A \Rightarrow x = \tan A$

$\tan^{-1} y = B \Rightarrow x = \tan B$

$\tan(A+B) = \frac{\tan A + \tan B}{1 - \tan A \tan B}$

$A + B = \tan^{-1} \frac{x+y}{1-xy}$

substitute the values of A and B

$\tan^{-1} x + \tan^{-1} y = \tan^{-1} \frac{x+y}{1-xy}$

27. Express the matrix $A = \begin{bmatrix} 1 & 2 \\ 3 & 4 \end{bmatrix}$ as sum of symmetric and skew symmetric matrices

Ans :– $A = \frac{1}{2}(A + A') + \frac{1}{2}(A + A')$

$A' = \begin{bmatrix} 1 & 3 \\ 2 & 4 \end{bmatrix}$; $A + A' = \begin{bmatrix} 1 & 5 \\ 5 & 4 \end{bmatrix}$ and $A - A' = \begin{bmatrix} 0 & -1 \\ 1 & 0 \end{bmatrix}$

$\therefore \frac{1}{2}\begin{bmatrix} 1 & 5 \\ 5 & 4 \end{bmatrix} + \frac{1}{2}\begin{bmatrix} 0 & -1 \\ 1 & 0 \end{bmatrix} = \begin{bmatrix} 1 & 2 \\ 3 & 4 \end{bmatrix}$

28. If $y = \tan^{-1}\left[\frac{\sqrt{1+x^2} - 1}{x}\right]$, prove that $\frac{dy}{dx} = \frac{1}{2(1+x^2)}$

Ans :– Let $x = \tan\theta$, $y = \tan^{-1}\left[\frac{\sqrt{1+(\tan\theta)^2 - 1}}{\tan\theta}\right]$

$y = \tan^{-1}\left(\frac{\sec\theta - 1}{\tan\theta}\right) = \tan^{-1}\left(\tan\frac{\theta}{2}\right)$

$y = \frac{\theta}{2} \Rightarrow \frac{1}{2}\tan^{-1} x$ d.r.t.x

$\frac{dy}{dx} = \frac{1}{2(1+x^2)}$

29. If $x = at^2$; $y = 2$ at find $\frac{dy}{dx}$

Ans : – $\frac{dy}{dt} = 2a$; $\frac{dx}{dt} = 2at$

$\frac{dy}{dx} = \frac{\frac{dy}{dt}}{\frac{dx}{dt}} = \frac{2a}{2at} = \frac{1}{t}$

30. Find the intervals in which $f(x) = 4x^3 - 6x^2 - 72x + 30$ is

(i) Strictly increasing; (ii) Strictly decreasing

Ans :– $f'(x) = 12x^2 - 12x - 72$, $f'(x) = 0$ and $x = -2, 3$

Set of values for strictly increasing $(-\infty, -2) \cup (3, \infty)$

Set of values for strictly decreasing $(-2, 3)$

31. Find the anti derivative of $f(x) = 4x^3 - \frac{1}{x^3} + c$ such that $f(2) = 0$

Ans:- Integrate, we get $f(x) = x^4 - \frac{1}{x^3} + c$

Using $f(2) = 0$ we get $c = -\frac{129}{8}$

Integrate, we get $f(x) = x^4 - \frac{1}{x^3} + c$

Using $f(2) = 0$, we get $c = -\frac{129}{8}$

$f(x) = x^4 - \frac{1}{x^3} - \frac{129}{8}$

ತುಮಕೂರು ರಸ್ತೆಯಲ್ಲಿ ವಿಪರೀತ ದಟ್ಟಣೆ, ಇನ್ನೂ ಎರಡು ದಿನ ಸಂಕಷ್ಟ

ಮೇಲ್ಸೇತುವೆ ಬಂದ್: ಹೈರಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ರಕ್‌ಗಳಿಗೆ ಮಣ್ಣು ಹೇರಿ ಪೀಣ್ಯ ಮೇಲ್ಸೇತುವೆಯ 'ಸಾಮರ್ಥ್ಯ ಪರೀಕ್ಷೆ' ನಡೆಸಲಾಗುತ್ತಿದ್ದು, ಮಂಗಳವಾರ ಮಧ್ಯರಾತ್ರಿಯಿಂದಲೇ ಮೇಲ್ಸೇತುವೆಯಲ್ಲಿ ಎಲ್ಲ ಮಾದರಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಇದರಿಂದ ತುಮಕೂರು ರಸ್ತೆಯಲ್ಲಿ ವಿಪರೀತ ವಾಹನ ದಟ್ಟಣೆ ಉಂಟಾಗಿದ್ದು ವಾಹನ ಸವಾರರು, ರೋಗಿಗಳು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ರಾಷ್ಟ್ರೀಯ ಹೆದ್ದಾರಿ-4ರ ತುಮಕೂರು ರಸ್ತೆಯಲ್ಲಿ ಪೀಣ್ಯದಿಂದ ಕೆನ್ನಮೆಟಲ್‌(ವಿಡಿಯಾ) ಹಾಗೂ ಕೆನ್ನಮೆಟಲ್‌ನಿಂದ ಪೀಣ್ಯದವರೆಗೆ ಮೇಲ್ಸೇತುವೆ ಪಕ್ಕದ ರಾಷ್ಟ್ರೀಯ ಹೆದ್ದಾರಿ-4 ಹಾಗೂ ಸರ್ವೀಸ್ ರಸ್ತೆಯಲ್ಲಿ ಮಾತ್ರ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ನಗರದ ಒಳಕ್ಕೆ ಬರುವ ಹಾಗೂ ಹೊರಹೋಗುವ ಮಾರ್ಗದ ಉದ್ದಕ್ಕೂ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ. ಬುಧವಾರ ಸಂಜೆ 4ರಿಂದ ರಾತ್ರಿವರೆಗೆ ವಿಪರೀತ ದಟ್ಟಣೆ ಉಂಟಾಗಿ, ಸಾಕಷ್ಟು ಸಮಸ್ಯೆ ಎದುರಾಗಿತ್ತು.

ನಾಗಸಂದ್ರ, 8ನೇ ಮೈಲಿ, ಜಾಲಹಳ್ಳಿ ಕ್ರಾಸ್, ಪೀಣ್ಯ ಜಂಕ್ಷನ್ ಮೂಲಕ ಗೊರಗುಂಟೆಪಾಳ್ಯ ತಲುಪುವುದಕ್ಕೆ ವಾಹನ ಸವಾರರು ಪರದಾಡುವಂತಾಗಿದೆ. ನಗರ ಪ್ರವೇಶಿಸುವ ಮೊದಲು ಸಿಗುವ ಟೋಲ್‌ಗೇಟ್ (ವಿಡಿಯಾ ಸಮೀಪ)ನಿಂದಲೇ ವಾಹನ ದಟ್ಟಣೆ ಆರಂಭವಾಗಿದೆ. ಕೆಲವು ವಾಹನಗಳು ದಾಸರಹಳ್ಳಿ ಒಳಭಾಗದ ರಸ್ತೆಯಿಂದ ಹೆಸರಘಟ್ಟ ರಸ್ತೆಯ ಮೂಲಕ ನಗರದ ಒಳಕ್ಕೆ ಬರುತ್ತಿವೆ. ಇದರಿಂದ ಸಣ್ಣಪುಟ್ಟ ರಸ್ತೆಗಳಲ್ಲಿ ದಟ್ಟಣೆ ಹೆಚ್ಚಿದೆ.

ಜ.19ರ ವರೆಗೂ ಮೇಲ್ಸೇತುವೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಿದ್ದು, ಇದೇ ಪರಿಸ್ಥಿತಿ ಇರಲಿದೆ ಎಂದು ಸಂಚಾರ ಪೊಲೀಸರು ಹೇಳಿದರು.

20ಕ್ಕೂ ಹೆಚ್ಚು ಜಿಲ್ಲೆ, ಹೊರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಹೆದ್ದಾರಿ ಇದಾಗಿದ್ದು, ಸಾವಿರಾರು ವಾಹನಗಳು ಮೇಲ್ಸೇತುವೆ ಪಕ್ಕದ ಎನ್‌ಎಚ್-4 ರಸ್ತೆ, ಸರ್ವೀಸ್ ರಸ್ತೆಯಲ್ಲೇ ನಗರಕ್ಕೆ ಬರುತ್ತಿವೆ. ಆಂಬುಲೆನ್ಸ್‌ಗಳೂ ವಾಹನ ದಟ್ಟಣೆಯಲ್ಲಿ ಸಿಲುಕಿ ರೋಗಿಗಳು ಪರದಾಡುತ್ತಿದ್ದಾರೆ.

'ಸಾಮರ್ಥ್ಯ ಪರೀಕ್ಷೆಗೆ 16 ಟ್ರಕ್‌ಗಳನ್ನು ಬಳಕೆ ಮಾಡಲಾಗುತ್ತಿದೆ. ಎರಡು ಪಿಲ್ಲರ್‌ಗಳ ನಡುವೆ ಟ್ರಕ್‌ಗಳನ್ನು ನಿಲುಗಡೆ ಮಾಡಲಾಗಿದ್ದು, 14 ಟ್ರಕ್‌ಗಳಿಗೆ ತಲಾ 30 ಟನ್ ಹಾಗೂ ಉಳಿದ ಎರಡು ಟ್ರಕ್‌ಗಳಿಗೆ ತಲಾ 34 ಟನ್ ಭಾರ ಹೇರಲಾಗಿದೆ. ಟ್ರಕ್‌ಗಳನ್ನು ಹಂತ ಹಂತವಾಗಿ ತಂದು ನಿಲುಗಡೆ ಮಾಡಲಾಗುತ್ತಿದೆ. ಆ ಹಂತದಲ್ಲಿ ಪಿಲ್ಲರ್‌ಗಳಲ್ಲಿ ಅಳವಡಿಸಲಾಗಿರುವ ಸ್ಟ್ರಿಂಗ್‌ಗಳು ಎಷ್ಟು ಕೆಳಕ್ಕೆ ಹೋಗಿವೆ ಎಂಬುದನ್ನು ಹೆದ್ದಾರಿ ಪ್ರಾಧಿಕಾರದ ಎಂಜಿನಿಯರ್‌ಗಳು ಹಾಗೂ ತಜ್ಞರು ನಮೂದಿಸಿಕೊಳ್ಳುತ್ತಿದ್ದಾರೆ. ಹೀಗೆ ಇನ್ನೂ ಎರಡು ದಿನ ಪರೀಕ್ಷೆ ನಡೆಸಲಾಗುವುದು' ಎಂದು ಮೇಲ್ಸೇತುವೆ ಅಧ್ಯಯನ ಸಮಿತಿ ಸದಸ್ಯ ಅಂಜನ್ ಕುಮಾರ್ ತಿಳಿಸಿದರು.

ಪರೀಕ್ಷೆ ಯಶಸ್ವಿಯಾದರೆ ಇದೇ 20 ಅಥವಾ 21ರಿಂದ ಮೇಲ್ಸೇತುವೆಯಲ್ಲಿ ಎಲ್ಲ ಮಾದರಿ ವಾಹನಗಳ ಸಂಚಾರಕ್ಕೆ ಅವಕಾಶ ಲಭಿಸುವ ಸಾಧ್ಯತೆಯಿದೆ.

8ನೇ ಮೈಲಿ ಜಂಕ್ಷನ್ 102 ಹಾಗೂ 103ನೇ ಪಿಲ್ಲರ್ ನಡುವೆ ಮೂರು ಕೇಬಲ್‌ಗಳು ಬಾಗಿದ್ದರಿಂದ 2021ರ ಡಿಸೆಂಬರ್‌ನಿಂದ ಸಣ್ಣ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಿ ಲಾರಿ, ಬಸ್, ಸರಕು ಸಾಗಣೆ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು.



ರಾಷ್ಟ್ರೀಯ ಹೆದ್ದಾರಿ–4 ತುಮಕೂರು ರಸ್ತೆಯಲ್ಲಿ ಉಂಟಾಗಿರುವ ವಾಹನ ದಟ್ಟಣೆ.

240 ಕೇಬಲ್

ಮೇಲ್ಸೇತುವೆಯಲ್ಲಿ 120 ಪಿಲ್ಲರ್‌ಗಳಿವೆ. ಮೊದಲ ಹಂತದ ದುರಸ್ತಿ ವೇಳೆ 240 ಕೇಬಲ್ ಅಳವಡಿಕೆ ಮಾಡಲಾಗಿದೆ. ಸೇತುವೆಯ ಭಾರ ತಡೆದುಕೊಳ್ಳುವ ಸಾಮರ್ಥ್ಯದ ಪರೀಕ್ಷೆ ಯಶಸ್ವಿಯಾದರೆ, ವಾಹನ ಸಂಚಾರಕ್ಕೆ ಅವಕಾಶ ನೀಡಿ, 1,200 ಕೇಬಲ್‌ಗಳನ್ನು ಬದಲಾವಣೆ ಮಾಡಲಾಗುವುದು ಎಂದು ತಜ್ಞರು ಹೇಳುತ್ತಾರೆ.

ನನ್ನದೂ ಮೈಸೂರು ಗರಡಿ: ಅನಂತಕುಮಾರ ಹೆಗಡೆ

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): 'ನಾನೂ ಮೈಸೂರಿನವನು, ಅಲ್ಲಿಯ ಗರಡಿಯಲ್ಲಿ ಪಳಗಿದ್ದೇನೆ. ನಮ್ಮವರನ್ನು ಏಕವಚನದಲ್ಲಿ ಟೀಕಿಸಿದರೆ ಸಹಿಸುವುದಿಲ್ಲ' ಎಂದು ಸಂಸದ ಅನಂತಕುಮಾರ ಹೆಗಡೆ ಪರೋಕ್ಷವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ವಾಗ್ದಾಳಿ ನಡೆಸಿದರು.

ಇಲ್ಲಿಯ ಬಿಜೆಪಿ ಕಚೇರಿಯಲ್ಲಿ ಬುಧವಾರ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ, 'ಅಮ್ಮನ ಎದೆ ಹಾಲು ಕುಡಿದು ಬೆಳೆದಿದ್ದೇನೆ. ರಾಮ, ದೇವಮ್ಮ ಮತ್ತು ಅಮ್ಮನ ಬಗ್ಗೆ ಮಾತನಾಡಿದರೆ ಸಹಿಸಲ್ಲ' ಎಂದರು.

'ಮಹಾಯುದ್ಧ (ಲೋಕಸಭೆ ಚುನಾವಣೆ) ಪ್ರಾರಂಭವಾಗಿದೆ. ಯುದ್ಧಭೂಮಿಯಲ್ಲಿ ಶಾಸ್ತ್ರೀಯ ಸಂಗೀತ, ಭರತನಾಟ್ಯಕ್ಕೆ ಅವಕಾಶವಿಲ್ಲ. ಹೇಗೆ ಮಾತನಾಡಬೇಕೊ ಹಾಗೆಯೇ ಮಾತನಾಡಬೇಕು' ಎಂದರು.

'ಮಂದಿರ ಕೆಡವಿ ಎಲ್ಲಿ ಮಸೀದಿ ನಿರ್ಮಿಸಿದ್ದಾರೋ, ಅಲ್ಲಿಯ ಕಲ್ಲುಗಳು ಪಿಸುಗುಟ್ಟುತ್ತಿವೆ. ಅಲ್ಲಿ ಮತ್ತೆ ಹಿಂದೂ ದೇವಾಲಯ ನಿರ್ಮಿಸಬೇಕಿದೆ. ರಣಭೈರವ ಎದ್ದಾಗಿದೆ. ಸಾವಿರ ವರ್ಷಗಳ ಬಳಿಕ ರಾಮಮಂದಿರ ಆಗಿದೆ. ಈಗ ಕಾಲ ಕೂಡಿ ಬರುತ್ತಿದೆ' ಎಂದರು.

ಅವನೊಬ್ಬ ಮೂರ್ಖ: ಸಿದ್ದರಾಮಯ್ಯ

ಸಂಗೊಳ್ಳಿ (ಬೆಳಗಾವಿ ಜಿಲ್ಲೆ): 'ಅವನೊಬ್ಬ ಮೂರ್ಖ. ದೇಶಪ್ರೇಮದ ಬಗ್ಗೆ ಏನೇನೋ ಮಾತನಾಡುತ್ತಾನೆ. ದೇಶದಲ್ಲಿ ಎಲ್ಲೆಲ್ಲಿ ಅತಿಕ್ರಮಣ ಮಾಡಿ ಮಸೀದಿ ಕಟ್ಟಲಾಗಿದೆಯೋ, ಅವುಗಳನ್ನೆಲ್ಲ ಒಡೆದು ದೇವಸ್ಥಾನ ಕಟ್ಟುತ್ತೇವೆ ಎನ್ನುತ್ತಾನೆ. ಮೂರ್ಖ, ಮೊದಲು ದೇಶದ ಇತಿಹಾಸ ತಿಳಿದುಕೊ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪರೋಕ್ಷವಾಗಿ ಅನಂತಕುಮಾರ ಹೆಗಡೆ ಹೇಳಿಕೆಗೆ ತಿರುಗೇಟು ನೀಡಿದರು. 'ಎಲ್ಲ ಜಾತಿ, ಧರ್ಮದವರನ್ನೂ ಸಮಾನವಾಗಿ ಕಾಣಬೇಕು. ಸಮಾನವಾಗಿ ಬಾಳಬೇಕು. ಆಗ ಮಾತ್ರ ದೇಶದ ಸಾರ್ವಭೌಮತ್ವ ಉಳಿಯುತ್ತದೆ. ನಾವೆಲ್ಲ ಸಂಗೊಳ್ಳಿ ರಾಯಣ್ಣ ಆಗಲು ಸಾಧ್ಯವಿಲ್ಲ. ಆದರೆ, ಅವರ ಆದರ್ಶ ರೂಢಿಸಿಕೊಳ್ಳಬಹುದು' ಎಂದರು.

> ರಾಜಕಾರಣದಿಂದ ದೂರ ಸರಿಯಲು ಇಷ್ಟಪಟ್ಟೆ. ದೇವರ ಸಂಕಲ್ಪವಿದೆ. ಮತ್ತೆ ನಿಮ್ಮ ಮುಂದೆ ಬಂದಿರುವೆ. ಯಾರೇ ನಿಂತರೂ ದಾಖಲೆಯ ಗೆಲುವಾಗಬೇಕು
> **ಅನಂತಕುಮಾರ ಹೆಗಡೆ**, ಸಂಸದ

ವಿಚಾರಣೆ ನಡೆಸಲು ಸಿಬ್ಬಂದಿ ಕೊರತೆ

ಒಂದನೇ ಪುಟದಿಂದ

ಅದರ ಸೇರಿದಂತೆ ಐದು ಹುದ್ದೆಗಳ ಸೃಜನೆಗೆ ಪ್ರಸ್ತಾವ ಸಲ್ಲಿಸಲಾಗಿತ್ತು. ಒಂದು ಹುದ್ದೆಗೆ ಮಾತ್ರ ಮಂಜೂರಾತಿ ನೀಡಲಾಗಿದೆ. ಉಪ ಹಿರಿಯ ವಿಷಯ ತಜ್ಞರಲ್ಲಿ ಮೂರನೇ ಒಂದರಷ್ಟು, ಸಹಾಯಕ ವಿಷಯ ತಜ್ಞರಲ್ಲಿ ನಾಲ್ಕನೇ ಒಂದರಷ್ಟು ಹುದ್ದೆಗಳಿಗೆ ಮಾತ್ರ ಒಪ್ಪಿಗೆ ನೀಡಲಾಗಿದೆ.

ಮತ್ತೆ ಪ್ರಸ್ತಾವ: 'ಬೇಡಿಕೆಯಷ್ಟು ಅಧಿಕಾರಿ, ಸಿಬ್ಬಂದಿ ನೇಮಿಸದಿದ್ದರೆ ಕಾಲಮಿತಿಯಲ್ಲಿ ವಿಚಾರಣೆ ಪೂರ್ಣಗೊಳಿಸಲು ಅಸಾಧ್ಯ. ಅಗತ್ಯ ಸಂಖ್ಯೆಯ ಹುದ್ದೆಗಳಿಗೆ ಮಂಜೂರಾತಿ ನೀಡುವಂತೆ ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರಿಗೆ ಮತ್ತೊಮ್ಮೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಪ್ರತಿಕ್ರಿಯಿಸಿದರು.

ನಾಮಪತ್ರ: ಬಾಕಿ ಪ್ರಕರಣಗಳ ಮಾಹಿತಿ ಅವಶ್ಯ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣೆಗೆ ಸ್ಪರ್ಧಿಸುವವರು ಸಲ್ಲಿಸಲಾಗುವ ನಾಮಪತ್ರದ ಜೊತೆಗಿನ ಸ್ವವಿವರಗಳ ಪ್ರಮಾಣ ಪತ್ರದಲ್ಲಿ ಕ್ರಿಮಿನಲ್ ಕೇಸುಗಳಲ್ಲಿ ಖುಲಾಸೆಗೊಂಡ ಮತ್ತು ರದ್ದುಗೊಂಡ ಪ್ರಕರಣಗಳ ಮಾಹಿತಿಯನ್ನೂ ಸಲ್ಲಿಸುವುದು ಅವಶ್ಯ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

'ಪ್ರಕರಣದಲ್ಲಿ ಖುಲಾಸೆಗೊಂಡಿದ್ದ ಮಾಹಿತಿ ಮುಚ್ಚಿಟ್ಟಿದ್ದಕ್ಕಾಗಿ ನನ್ನ ಸದಸ್ಯತ್ವ ಅನರ್ಹಗೊಳಿಸಲಾಗಿದೆ' ಎಂಬುದನ್ನು ಪ್ರಶ್ನಿಸಿ ಬಾಗಲಕೋಟೆ ಜಿಲ್ಲೆಯ ಬೇವೂರು ಗ್ರಾಮ ಪಂಚಾಯಿತಿ ಸದಸ್ಯ ಮುದಿಯಪ್ಪ ಸಲ್ಲಿಸಿದ್ದ ಅರ್ಜಿಯನ್ನು ಧಾರವಾಡದ ಪೀಠದಲ್ಲಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಸುಪ್ರೀಂಕೋರ್ಟ್ ತೀರ್ಪಿನ ಅನುಸಾರ ಅಭ್ಯರ್ಥಿಗಳು ತಮ್ಮ ವಿರುದ್ಧ ವಿಚಾರಣೆಗೆ ಬಾಕಿ ಇರುವ ಕ್ರಿಮಿನಲ್ ಕೇಸುಗಳ ವಿವರ ಸಲ್ಲಿಸಿದರೆ ಸಾಲದು. ಖುಲಾಸೆಗೊಂಡಿದ್ದ ಅಥವಾ ರದ್ದಾದ ಪ್ರಕರಣಗಳ ಮಾಹಿತಿಯನ್ನೂ ನೀಡಬೇಕು. ಇದರಿಂದ ಮತದಾರರು ಕಣದಲ್ಲಿರುವ ಅಭ್ಯರ್ಥಿಗಳ ಹಿನ್ನೆಲೆಯನ್ನು ಸಮಗ್ರವಾಗಿ ಅರಿಯಲು ಸಹಾಯಕವಾಗುತ್ತದೆ' ಎಂಬುದನ್ನು ಉಲ್ಲೇಖಿಸಿರುವ ನ್ಯಾಯಪೀಠ ಅರ್ಜಿ ವಜಾಗೊಳಿಸಿದೆ.

ಮೃತರ ಕುಟುಂಬಕ್ಕೆ ನಟ ಯಶ್ ನೆರವಿನ ಹಸ್ತ

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ (ಗದಗ ಜಿಲ್ಲೆ): ತಾಲ್ಲೂಕಿನ ಸೂರಣಗಿ ಗ್ರಾಮದಲ್ಲಿ ನಟ ಯಶ್ ಅವರ ಕಟೌಟ್ ನಿಲ್ಲಿಸುವಾಗ ವಿದ್ಯುತ್ ಸ್ಪರ್ಶಿಸಿ ಮೃತಪಟ್ಟ ಯುವಕರ ಕುಟುಂಬದವರಿಗೆ ಯಶೋ ಮಾರ್ಗ ಫೌಂಡೇಷನ್ ವತಿಯಿಂದ ತಲಾ ₹5 ಲಕ್ಷ ಮೊತ್ತದ ಚೆಕ್‌ಗಳನ್ನು ಬುಧವಾರ ವಿತರಿಸಲಾಯಿತು. ಚೆಕ್ ಸ್ವೀಕರಿಸಿದ ಮೃತರ ಪಾಲಕರು ಕಣ್ಣೀರಿಟ್ಟರು.

ಮೃತ ಮುರಳಿ ಅವರ ತಾಯಿ, 'ನೋಡು ಮಗನಾ ನಿನ್ನ ಯಶ್ ರೊಕ್ಕಾ ಕಳಸ್ಯಾರ' ಎಂದು ಗೋಳಾಡಿದರು.

'ಯಶ್ ಅವರು ಅಭಿಮಾನಿಗಳ ಮೇಲೆ ಸಾಕಷ್ಟು ಗೌರವ ಇಟ್ಟುಕೊಂಡಿದ್ದಾರೆ. ಮೃತ ಯುವಕರ ಮನೆಗಳಿಗೆ ಸ್ವತಃ ಅವರೇ ಭೇಟಿ ನೀಡಿದರು' ಎಂದು ಗ್ರಾಮಸ್ಥರಾದ ವಿಜಯಕುಮಾರ ಹಳ್ಳಿ ಮತ್ತು ಕೋಟೆಪ್ಪ ವರ್ದಿ ಹೇಳಿದರು.

ಯಶ್ ಆಪ್ತ ಚೇತನ್ ಮಾತನಾಡಿ, 'ಇಂತಹ ದುರಂತ ಆಗಬಾರದಿತ್ತು. ಘಟನೆ ನಡೆದ ದಿನ ಯಶ್ ಬಹಳ ದುಃಖಿತರಾಗಿದ್ದರು. ಸದ್ಯ ಅವರು ಪರಿಹಾರ ಕೊಟ್ಟಿದ್ದು, ಮುಂದೆಯೂ ಪಾಲಕರ ಜೊತೆ ಇರುತ್ತಾರೆ' ಎಂದರು.

ನಟ ಯಶ್ ಜನ್ಮದಿನದ ಪ್ರಯುಕ್ತ ಜನವರಿ 7ರಂದು ರಾತ್ರಿ ಅವರ ಕಟೌಟ್ ಅಳವಡಿಸುವಾಗ ವಿದ್ಯುತ್ ಸ್ಪರ್ಶಿಸಿ, ಮುರಳಿ ನಡುವಿನಮನಿ, ನವೀನ ಗಾಜಿ ಹಾಗೂ ಹನುಮಂತ ಹರಿಜನ ಎಂಬುವರು ಮೃತಪಟ್ಟಿದ್ದರು. ಮೂವರು ಗಾಯಗೊಂಡಿದ್ದರು.

ಕೃಷ್ಣ ಪ್ರಸಾದ 'ಸೂರೆ' ಮಾಡಿದ ಭಕ್ತರು

ಪ್ರಜಾವಾಣಿ ವಾರ್ತೆ

ಉಡುಪಿ: ಕೃಷ್ಣಾಪುರ ಮಠದ ಪರ್ಯಾಯದ ಕೊನೆಯ ದಿನವಾದ ಬುಧವಾರ, ಮಠದ ಸಂಪ್ರದಾಯದಂತೆ ಪಾಕಶಾಲೆಯಲ್ಲಿ ಉಳಿಕೆಯಾದ ಆಹಾರ ಪದಾರ್ಥಗಳನ್ನು ಭಕ್ತರು ಸೂರೆ ಮಾಡಲು ಅವಕಾಶ ನೀಡಲಾಯಿತು.

ಮಧ್ಯಾಹ್ನದ ಅನ್ನ ಸಂತರ್ಪಣೆ ಮುಗಿಯುತ್ತಿದ್ದಂತೆ ಪರ್ಯಾಯ ಕೃಷ್ಣಾಪುರ ಮಠದ ವಿದ್ಯಾಸಾಗರ ತೀರ್ಥ ಸ್ವಾಮೀಜಿ ಗೋವಿಂದ ನಾಮ ಸ್ಮರಣೆ ಮಾಡಿ ಸೂರೆಮಾಡಲು ಅನುಮತಿ ನೀಡುತ್ತಿದ್ದಂತೆ ನೂರಾರು ಭಕ್ತರು ಪಾಕಶಾಲೆಗೆ ನುಗ್ಗಿದರು.

ದೈತ್ಯಾಕಾರದ ಕಡಾಯಿಗಳಲ್ಲಿ ಉಳಿದಿದ್ದ ಅನ್ನ, ಸಾರು, ಹುಳಿ, ಪಾಯಸ ಸೇರಿದಂತೆ ಹಲವು ಬಗೆಯ ಭಕ್ಷ್ಯಗಳನ್ನು ಪಾತ್ರೆಗಳಲ್ಲಿ ತುಂಬಿಸಿಕೊಂಡರು. ಬಕೆಟ್, ಕ್ಯಾನ್, ಕೊಡಪಾನ ಹೀಗೆ ಕೈಗೆ ಸಿಕ್ಕ ಪಾತ್ರೆಗಳಲ್ಲಿ ಆಹಾರವನ್ನು ಒಯ್ದರು.

ಕೆಲವರು ಬಕೆಟ್‌ಗಳಿಗೆ ಹಗ್ಗಕಟ್ಟಿ ಕಡಾಯಿಯೊಳಗೆ ಇಳಿಬಿಟ್ಟು ಪ್ರಸಾದವನ್ನು ಸೂರೆಮಾಡುತ್ತಿದ್ದ ದೃಶ್ಯ ಕಂಡುಬಂತು.

ಸೂರೆ ಬಿಡುವಾಗ ಪಾತ್ರೆಗಳಲ್ಲಿ ಬೆಳ್ಳಿ ಹಾಗೂ ಚಿನ್ನದ ನಾಣ್ಯಗಳನ್ನು ಹಾಕಲಾಗುತ್ತದೆ. ಅದೃಷ್ಟವಿದ್ದವರಿಗೆ ಪ್ರಸಾದದ ಜತೆಗೆ ಅಮೂಲ್ಯ ವಸ್ತುಗಳು ಸಿಗುತ್ತದೆ ಎನ್ನುತ್ತಾರೆ ಮಠದ ಸಿಬ್ಬಂದಿ.

'ಪರ್ಯಾಯ'ಕ್ಕೆ ₹10 ಕೋಟಿ ಅನುದಾನ

ಉಡುಪಿ: ಶ್ರೀಕೃಷ್ಣ ಮಠದ ಪರ್ಯಾಯ ಮಹೋತ್ಸವಕ್ಕೆ ರಾಜ್ಯ ಸರ್ಕಾರ ಸಂಪೂರ್ಣ ಸಹಕಾರ ನೀಡುತ್ತಿದ್ದು, ₹10 ಕೋಟಿ ಅನುದಾನ ಬಿಡುಗಡೆ ಮಾಡಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ನಗರದಲ್ಲಿ ಬುಧವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ನಗರೋತ್ಥಾನ ಯೋಜನೆಯಡಿ ಉಡುಪಿ ನಗರದ ಅಭಿವೃದ್ಧಿಗೆ ₹ 30 ಕೋಟಿ ಬಿಡುಗಡೆ ಮಾಡಲಾಗಿದೆ ಎಂದರು.

ಪರ್ಯಾಯ ಮಹೋತ್ಸವಕ್ಕೂ ಅನುದಾನ ಬಿಡುಗಡೆ ಮಾಡಲು ಮುಖ್ಯಮಂತ್ರಿ ಕ್ರಮವಹಿಸಲಿದ್ದಾರೆ. ಕಾರಣಾಂತರಗಳಿಂದ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಅವರು ಪರ್ಯಾಯದಲ್ಲಿ ಪಾಲ್ಗೊಳ್ಳುತ್ತಿಲ್ಲ ಎಂದರು.

ಭೋಜನ ತಯಾರಿ

ಉಡುಪಿ ಮಠದಲ್ಲಿ ಪರ್ಯಾಯ ಮಹೋತ್ಸವದ ಹಿಂದಿನ ದಿನ (ಜ.17) ಭಕ್ತರ ಸಂಖ್ಯೆ ಲೆಕ್ಕ ಹಾಕದೇ ಭೋಜನ ತಯಾರಿಸಲಾಗುತ್ತದೆ. ಮಠದಲ್ಲಿರುವ ಎಲ್ಲ ಪಾತ್ರೆಗಳಲ್ಲಿ ಆಹಾರ ಬೇಯಿಸಿ ಬಂದ ಭಕ್ತರಿಗೆ ಬಡಿಸಲಾಗುತ್ತದೆ. ಮಧ್ಯಾಹ್ನ 3ಗಂಟೆಯವರೆಗೂ ಭಕ್ತರಿಗೆ ಭೋಜನ ವಿತರಿಸಿ ಉಳಿದ ಎಲ್ಲ ಆಹಾರ ಪದಾರ್ಥವನ್ನು ಪಾತ್ರೆಗಳಲ್ಲಿ ಹಾಗೆಯೇ ಬಿಡಲಾಗುತ್ತದೆ. ಬಳಿಕ ಭಕ್ತರು ಉಳಿದ ಆಹಾರವನ್ನು ಪ್ರಸಾದದ ರೂಪವಾಗಿ ಮನೆಗಳಿಗೆ ಕೊಂಡೊಯ್ಯುತ್ತಾರೆ.

ಮಕ್ಕಳೊಂದಿಗೆ ತಾಯಿ ಆತ್ಮಹತ್ಯೆ

ಹಂದಿಗುಂದ(ಬೆಳಗಾವಿ ಜಿಲ್ಲೆ): ಸಮೀಪದ ಸುಲ್ತಾನಪುರ ಗ್ರಾಮದಲ್ಲಿ ಬುಧವಾರ ಇಬ್ಬರು ಪುತ್ರಿಯರೊಂದಿಗೆ ತಾಯಿ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ಸರಸ್ವತಿ ನಿತಿನ್ ಕಿರವೆ (26), ಪುತ್ರಿಯರಾದ ದೀಪಿಕಾ(7), ರಿತಿಕಾ(4) ಮೃತರು. ಮಹಾರಾಷ್ಟ್ರದ ಸಾಂಗ್ಲಿಯ ನಿತಿನ್ ಕಿರವೆ ಜೊತೆ 2016ರಲ್ಲಿ ಸುಲ್ತಾನಪುರದ ಸರಸ್ವತಿ ಅವರ ವಿವಾಹವಾಗಿತ್ತು. ಗಂಡನ ಮನೆಯವರ ಕಿರುಕುಳದಿಂದ ಬೇಸತ್ತು ಸರಸ್ವತಿ ಮಕ್ಕಳೊಂದಿಗೆ ತವರುಮನೆಯಲ್ಲಿ ವಾಸ ವಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ' ಎಂದು ಹಾರೊಗೇರಿ ಠಾಣೆಯ ಪೊಲೀಸರು ತಿಳಿಸಿದ್ದಾರೆ.

'ನಕಲಿ ಸೋಪು ಪ್ರಕರಣ: ಬಿಜೆಪಿ ನಂಟು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈದರಾಬಾದ್‌ನಲ್ಲಿ ಮೈಸೂರು ಸ್ಯಾಂಡಲ್ ನಕಲಿ ಸೋಪು ತಯಾರಿಕೆ ಘಟಕ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರ್ಖಾನೆ ನಡೆಸುತ್ತಿದ್ದ ರಾಕೇಶ್ ಜೈನ್ ಹಾಗೂ ಮಹಾವೀರ್ ಜೈನ್ ಎಂಬುವವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅವರಿಬ್ಬರೂ ಬಿಜೆಪಿಯ ಸಕ್ರಿಯ ಕಾರ್ಯಕರ್ತರು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಆರೋಪ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಈ ಇಬ್ಬರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ತೆಲಂಗಾಣ ಬಿಜೆಪಿ ನಾಯಕ ರಾಜಾಸಿಂಗ್ ಒಡನಾಡಿಗಳು. ಇಷ್ಟೆಲ್ಲ ಒಡನಾಟ ಇಟ್ಟುಕೊಂಡಿರುವವರ ಜತೆ ರಾಜ್ಯ ಬಿಜೆಪಿ ನಾಯಕರು ಸಂಪರ್ಕ ಹೊಂದಿರುವುದಿಲ್ಲವೇ' ಎಂದು ಪ್ರಶ್ನಿಸಿದರು.

'ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಅವರಿಗೆ ಅನಾಮಿಕನೊಬ್ಬ ಕರೆ ಮಾಡಿ, ಮೈಸೂರು ಸ್ಯಾಂಡಲ್ ಹೆಸರಲ್ಲಿ ನಕಲಿ ಸೋಪುಗಳ ಮಾರಾಟದ ಬಗ್ಗೆ ಮಾಹಿತಿ ನೀಡಿದ್ದನು. ಅದನ್ನು ಆಧರಿಸಿ ಮೈಸೂರು ಸ್ಯಾಂಡಲ್ ಕಾರ್ಖಾನೆಯ ಅಧಿಕಾರಿಗಳು ದಾಳಿ ಮಾಡಿದ್ದರು. ಈ ಪ್ರಕರಣದಲ್ಲಿ ರಾಕೇಶ್ ಜೈನ್, ಮಹಾವೀರ್ ಜೈನ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ' ಎಂದರು.

'ಚಿತ್ತಾಪುರದ ಬಿಜೆಪಿ ಮುಖಂಡ ಮಣಿಕಂಠ ರಾಠೋಡ್ ಹಾಗೂ ಮಾಜಿ ಶಾಸಕ ವಾಲ್ಮೀಕಿ ನಾಯಕ ಅವರ ಪುತ್ರ ವಿಠಲ್ ನಾಯಕ್ ಜೊತೆ ಆರೋಪಿಗಳಿಗೆ ಸಂಪರ್ಕವಿದೆ. ಬಿಜೆಪಿಯವರು ಹಣ ಮಾಡಲು ಯಾವುದಕ್ಕೂ ಹೇಸುವುದಿಲ್ಲ' ಎಂದ ಪ್ರಿಯಾಂಕ್, ಯೋಗಿ ಆದಿತ್ಯನಾಥ ಜೊತೆಗಿರುವ ಫೋಟೋ ಪ್ರದರ್ಶಿಸಿದರು.

> ಮಹೇಂದ್ರ ಜೈನ್ ಅವರ ಪುತ್ರ ಮಹಾವೀರ ಜೈನ್ ನನ್ನ ಸ್ನೇಹಿತನಾಗಿದ್ದು, ಪ್ರಿಯಾಂಕ್ ಖರ್ಗೆ ಉಲ್ಲೇಖಿಸಿದ ವ್ಯಕ್ತಿಯ ತಂದೆ ಬಾಬುಲಾಲ್ ಜೈನ್ ಆಗಿದ್ದಾರೆ
> **ಮಣಿಕಂಠ ರಾಠೋಡ**, ಬಿಜೆಪಿ ಮುಖಂಡ

> ಪ್ರಿಯಾಂಕ್ ಅನವಶ್ಯಕವಾಗಿ ನನ್ನ ಹೆಸರು ಉಲ್ಲೇಖಿಸಿದ್ದು, ಇದರ ಹಿಂದೆ ರಾಜಕೀಯ ತೇಜೋವಧೆಯ ಉದ್ದೇಶವಿದೆ
> **ವಿಠಲ್ ವಾಲ್ಮೀಕ್ ನಾಯಕ**, ಬಿಜೆಪಿ ಮುಖಂಡ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಕವಿಪ್ರನಿನಿ/ಬಿ16/21723/2021–22 ದಿನಾಂಕ: 17.01.2024

ಪ್ರಕಟಣೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ದಿನಾಂಕ: 01.02.2022 ರ ಉದ್ಯೋಗ ಪ್ರಕಟಣೆಗನುಗುಣವಾಗಿ ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಜ್ಯೇಷ್ಠತೆಯ ಆಧಾರದ ಮೇರೆಗೆ **ಕಿರಿಯ ಇಂಜಿನಿಯರ್(ವಿದ್ಯುತ್)** (ಕೆ.ಕೆ/ಎನ್.ಕೆ.ಕೆ) ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕಟ್–ಆಫ್ (Cut-Off) ಅಂಕಗಳೊಂದಿಗೆ ಅಂತರ್ಜಾಲ **https://kptcl.karnataka.gov.in** ನಲ್ಲಿ ಪ್ರಕಟಿಸಲಾಗಿದೆ.

ಸಹಿ/-, ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಾರ್ಪೊರೇಟ್ ಕಛೇರಿ, ಮೆಸ್ಕಾಂ ಭವನ, ಬಿಜೈ, ಮಂಗಳೂರು-575004

ದೂರವಾಣಿ: 0824-2885796, CIN: U40109 KA 2002 SGC 030425

ಸಂಖ್ಯೆ: ಮಂ.ವಿ.ಸ.ಕಂ./ಅ.ಇಂ(ಯೋ)/ ಕಾನಿಇಂ(ಎ.ಪಿ.ಆರ್)/ 2023-24/716 ದಿನಾಂಕ: 12.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮಾದರಿಯಲ್ಲಿ ಮಾತ್ರ)

ಮ.ವಿ.ಸ.ಕಂ.ಯು ಮಂಗಳೂರು ವಿಭಾಗದ ಉಳ್ಳಾಲ ಉಪ ವಿಭಾಗ ವ್ಯಾಪ್ತಿಯಲ್ಲಿರುವ 11 ಕೆ.ವಿ ಉಳ್ಳಾಲ ಎಕ್ಸ್‌ಪ್ರೆಸ್ ಫೀಡರಿನ ಹಾಲಿ ಇರುವ ಮೇಲು ಮಾರ್ಗವನ್ನು 3*240 Sq.mm ಭೂಗತ ಕೇಬಲ್‌ನೊಂದಿಗೆ ಪರಿವರ್ತಿಸುವ ಕಾಮಗಾರಿಯನ್ನು ಪೂರ್ಣ ಗುತ್ತಿಗೆ ಆಧಾರದಲ್ಲಿ ಕೈಗೆತ್ತಿಕೊಳ್ಳಲು ಬಿಡ್ ವಿಚಾರಣಾ ಸಂಖ್ಯೆ MESCOM/2023-24/EL/WORK_INDENT71. ರನ್ವಯ ಟೆಂಡರನ್ನು ಆಹ್ವಾನಿಸುತ್ತಿದೆ.

ಆಸಕ್ತಿಯುಳ್ಳ ಅರ್ಹ ಬಿಡ್ದುದಾರರು ವೆಬ್‌ಸೈಟ್ **https://kppp.karnataka.gov.in**ಗೆ ದಿನಾಂಕ **18.01.2024** ಅಥವಾ ನಂತರ ಲಾಗ್ ಆನ್ ಮಾಡಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್ (ವಿ), (ಯೋಜನೆಗಳು), ಕಾರ್ಪೊರೇಟ್ ಕಛೇರಿ

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ : 1912ಕ್ಕೆ ಕರೆ ಮಾಡಿ

ಜವಾಹರಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ

ಜಕ್ಕೂರು, ಬೆಂಗಳೂರು–560064 ಕರ್ನಾಟಕ, ಭಾರತ.
ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅಡಿಯಲ್ಲಿನ ಒಂದು ಸ್ವಾಯತ್ತ ಸಂಸ್ಥೆ ಡೀಮ್ಸ್–ಟು–ಬಿ–ಯೂನಿವರ್ಸಿಟಿ ಸಂಸ್ಥೆ

Azadi Ka Amrit Mahotsav

ಜಾಹೀರಾತು ಸಂಖ್ಯೆ: JNC/AO/No. 01/2024 ದಿನಾಂಕ: 18–1–2024

ಅಧಿಸೂಚನೆ

ಜವಾಹರಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ (ಜೆಎನ್‌ಸಿಎಎಸ್‌ಆರ್) ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಧೀನದ ಪ್ರಮುಖ ಸಂಶೋಧನಾ ಸಂಸ್ಥೆಯಾಗಿದೆ. ಇದು ವಿಶ್ವವಿದ್ಯಾಲಯ ಮಾನ್ಯತೆಯುಳ್ಳ ಸಂಸ್ಥೆ ಎಂಬುದಾಗಿಯೂ ಪರಿಗಣಿಸಲ್ಪಡುತ್ತಿದ್ದು, ಇಂಟರ್ ಡಿಸಿಪ್ಲಿನರಿ ಸಂಶೋಧನೆಗೆ ಹೆಸರುವಾಸಿಯಾಗಿದೆ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಸಕಲ ರೀತಿಯಲ್ಲೂ ಸುಸಜ್ಜಿತವಾಗಿದೆ. ಇದರಲ್ಲಿನ ಕಲಿಕಾ ಸೌಲಭ್ಯಗಳು ತನ್ನ ಭೋಧಕ ಸಿಬ್ಬಂದಿಗೆ ಶೈಕ್ಷಣಿಕ ಚಟುವಟಿಕೆ ಮತ್ತು ಸಂಶೋಧನಾ ಕಾರ್ಯಗಳಲ್ಲಿನ ಮಹತ್ವಾಕಾಂಕ್ಷಿ ಗುರಿಗಳ ಸಾಧನೆಗೆ ಪೂರಕವಾಗಿವೆ. ಇದೀಗ ಜೆಎನ್‌ಸಿಎಎಸ್‌ಆರ್ ಸಂಸ್ಥೆಯು ವಿಜ್ಞಾನ ಮತ್ತು ಇಂಜಿನಿಯರಿಂಗ್‌ನ ಮಹತ್ವದ ಕ್ಷೇತ್ರಗಳಲ್ಲಿ ಸಹಾಯಕ ಪ್ರಾಧ್ಯಪಕ ಹುದ್ದೆಗಾಗಿ, ಒಸಿಐ ಕಾರ್ಡ್ ಹೊಂದಿದವರೂ ಸೇರಿದಂತೆ, ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಹೆಚ್ಚಿನ ವಿವರಗಳಿಗಾಗಿ ಕೆಳಕಂಡ ಜೆಎನ್‌ಸಿಎಎಸ್‌ಆರ್ ವೆಬ್‌ಸೈಟ್ ಪರಿಶೀಲಿಸಿರಿ:

https://www.jncasr.ac.in/openings/faculty-position

ಸಹಿ/– ಆಡಳಿತಾಧಿಕಾರಿ, ಜೆಎನ್‌ಸಿಎಎಸ್‌ಆರ್

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಮುಖ್ಯ ಅಭಿಯಂತರರು & ಮುಖ್ಯ ಪ್ರಧಾನ ವ್ಯವಸ್ಥಾಪಕರ ಕಛೇರಿ (ತಾಂತ್ರಿಕ), ಬೆಂಘತ್ಯಾನಿನಿ, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052.

ಸಂ: ಮುಅ&ಮುಪ್ರವ್ಯ(ತಾಂ)/ಬೆಂಘತ್ಯಾನಿನಿ/ಟೆಂಡ್/06/2023–24 ದಿನಾಂಕ:16.01.2024

ತಿದ್ದುಪಡಿ

ದಿನಾಂಕ 17.01.2024 ರಂದು ಈ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಟೆಂಡರ್ ಪ್ರಕಟಣೆ ಸಂಖ್ಯೆ: ಮುಅ&ಮುಪ್ರವ್ಯ(ತಾಂ)/ಬೆಂಘತ್ಯಾನಿನಿ/ಟೆಂಡ್/06/2023–24 ದಿನಾಂಕ: 16.01.2024 ಯ ಕ್ರಮ ಸಂಖ್ಯೆ: "1. ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಕಾಮಗಾರಿಗಳಿಗೆ 15ನೇ ಹಣಕಾಸು ಆಯೋಗದ ಅಡಿಯಲ್ಲಿ ಅನುದಾನವನ್ನು ಒದಗಿಸಲಾಗಿದೆ ಮತ್ತು ಅದಕ್ಕೆ ಅನುಗುಣವಾಗಿ ಕ್ರಿಯಾ ಯೋಜನೆಯನ್ನು ಸರ್ಕಾರವು ಅನುಮೋದಿಸಿದೆ" ಎಂಬುದರ ಬದಲಾಗಿ

"1. SBM 2.0 ಅನುದಾನದ ಅಡಿಯಲ್ಲಿ (ರಾಜ್ಯ, ಕೇಂದ್ರ ಮತ್ತು ULB ಹಂಚಿಕೆ) ಮತ್ತು ಕೆಳಗಿನ ಕೆಲಸಕ್ಕಾಗಿ ಪರಂಪರೆ ತ್ಯಾಜ್ಯವನ್ನು ಸಂಸ್ಕರಿಸಲು NGT ಪರಿಹಾರ ಮೊತ್ತದ ಅಡಿಯಲ್ಲಿ ಅನುದಾನವನ್ನು ಒದಗಿಸಲಾಗಿದೆ." ಎಂದು ಓದಿಕೊಳ್ಳುವುದು. ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–ಮುಖ್ಯ ಅಭಿಯಂತರರು &
ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)

ವಾಸಾಸಂಇ/ವಾಪ್ರ/3072/2023–24

Off. : 230236 STD : 08353

ನಗರ ಸಭೆ, ರಬಕವಿ – ಬನಹಟ್ಟಿ

ಜಿಲ್ಲಾ : ಬಾಗಲಕೋಟ ಕರ್ನಾಟಕ ರಾಜ್ಯ ಕಾರ್ಯಾಲಯ : ರಾಮಪೂರ

ಕ್ರ.ಸಂ.:ನಸರಬ/15ನೇಹ.ಯೋ.ಟೈಡ್&ಅನ್‌ಟೈಡ್&ಅನ್‌ಟೈಡ್.ಉ.ಅ./ಇಟೆಂಪ್ರ/2023–24 ದಿನಾಂಕ: 17–01–2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಕಾಲ್–2)

ನಗರಸಭೆ, ರಬಕವಿ–ಬನಹಟ್ಟಿ ಇವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ತಿದ್ದುಪಡಿ ಅಧಿನಿಯಮ/ನಿಯಮಗಳ ಪ್ರಕಾರ, ಸನ್ 2023–24 ನೇ ಸಾಲಿನ 15ನೇ ಹಣಕಾಸು ಯೋಜನೆ ಟೈಡ್(ಡಬ್ಲೂಎಸ್& ಎಸ್‌ಡಬ್ಲೂಎಂ) ಗ್ರ್ಯಾಂಟ್ ಹಾಗೂ 15ನೇ ಹಣಕಾಸು ಯೋಜನೆ ಅನ್‌ಟೈಡ್ ಗ್ರ್ಯಾಂಟ್ ಅನುದಾನದಲ್ಲಿ ಸ್ಟ್ಯಾಂಡರ್ಡ್ ಬಿಡ್‌ನಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇಂಡೆಂಟ್ ನಂಬರ 7858,7861,7864,7869,7870 ಹಾಗೂ 7876 ಕಾಮಗಾರಿಗಳಿಗೆ ಟೆಂಡರ(ಕಾಲ್–2) ಪ್ರಕಟಣೆ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ https://eproc.karnataka.gov.inನಿಂದ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ 25–01–2024 ರ ಮಧ್ಯಾಹ್ನ 4–30 ಗಂಟೆ ಒಳಗಾಗಿ ಆನ್‌ಲೈನ್ ಮುಖಾಂತರ ಟೆಂಡರ್ ಸಲ್ಲಿಸಬಹುದು. ಹಾಗೂ ಟೆಂಡರ್‌ಗಳನ್ನು ದಿನಾಂಕ 29–01–2024 ರಂದು ತೆರೆಯಲಾಗುವದು. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಈ ಕಛೇರಿಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಪೌರಾಯುಕ್ತರು, ನಗರಸಭೆ ರಬಕವಿ–ಬನಹಟ್ಟಿ
ಸಹಿ/– ಆಡಳಿತಾಧಿಕಾರಿಗಳು, ನಗರಸಭೆ ರಬಕವಿ–ಬನಹಟ್ಟಿ ಹಾಗೂ ಜಿಲ್ಲಾಧಿಕಾರಿಗಳು ಬಾಗಲಕೋಟ

ಬೆಳಗಾವಿ ಮಹಾನಗರ ಪಾಲಿಕೆ

ಸುಭಾಷನಗರ, ಬೆಳಗಾವಿ – 590016

Email : itstaff_ulb_belgaum@yahoo.com. Website : www.belgaumcity.mrc.gov.in

ಸಂಖ್ಯೆ:ಮನಪಾ/ಲೋ.ಶಾ/ಕಾಅ/ಘವನಿ/ಟಿಎನ್‌ಡಿ/ಇಪ್ರೋ–03/2023–24 ದಿನಾಂಕ: 16–01–2024

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್)

ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000 ಪ್ರಕಾರ ಆಕ್ಟ್ 2000 ನಿಯಮದಂತೆ **ಸ್ವಚ್ಛ ಭಾರತ ಮಿಷನ್ – 2.0 ಯೋಜನೆಯಡಿ ಮಂಜೂರಾದ Disposal of Legacy Waste ಕಾಮಗಾರಿಗೆ** ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **16–02–2024 ರಂದು ಇರುತ್ತದೆ.** ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ವೆಬ್‌ಸೈಟ್: **https://www.kppp.karnataka.gov.in** ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಆಯುಕ್ತರು
ಮಹಾನಗರ ಪಾಲಿಕೆ, ಬೆಳಗಾವಿ

ವಾಸಾಸಂಇ/ಬೆಳಗಾವಿ/947/ಅಡ್ವರ್ಟೋರ್/2023–24

ಜಿಲ್ಲಾ ಪಂಚಾಯತ್ ಕಾರ್ಯಾಲಯ,

ತುಮಕೂರು ಜಿಲ್ಲೆ, ತುಮಕೂರು. (ಆಡಳಿತ ಶಾಖೆ)

ಸಂಖ್ಯೆ:ತುಜಿಪ:ಆ(1)ಲೇಖನ ಸಾಮಗ್ರಿ/ಖರೀದಿ/ವಿವ–97/2023–24 ದಿನಾಂಕ: 08.01.2024

ಮರು ಟೆಂಡರ್ ಪ್ರಕಟಣೆ

ವಿಷಯ : ತುಮಕೂರು ಜಿಲ್ಲಾ ಪಂಚಾಯತ್ ಕಛೇರಿಯ ವಿವಿಧ ಶಾಖೆಗಳಿಗೆ ದೈನಂದಿನ ಕಛೇರಿ ನಿರ್ವಹಣೆಗೆ ಅಗತ್ಯವಿರುವ ಲೇಖನ ಸಾಮಗ್ರಿ/ಇತರೆ ಪರಿಕರಗಳನ್ನು ಇ–ಪ್ರಕ್ಯೂರ್ಮೆಂಟ್ ಟೆಂಡರ್ ಮೂಲಕ ಪಡೆಯುವ ಬಗ್ಗೆ.

ತುಮಕೂರು ಜಿಲ್ಲಾ ಪಂಚಾಯತ್ ಕಛೇರಿಯ ವಿವಿಧ ಶಾಖೆಗಳಿಗೆ ದೈನಂದಿನ ಕಛೇರಿ ನಿರ್ವಹಣೆಗೆ ಅಗತ್ಯವಿರುವ ಲೇಖನ ಸಾಮಗ್ರಿ/ಇತರೆ ಪರಿಕರಗಳನ್ನು ಇ–ಪ್ರಕ್ಯೂರ್ಮೆಂಟ್ ಟೆಂಡರ್ ಮೂಲಕ ಪಡೆಯಲು ಟೆಂಡರ್ ಕರೆಯಲಾಗದ್ದು, ಇ–ಟೆಂಡರ್ ಮೂಲಕ ಸಂಪರ್ಕಿಸುವ ದಿನಾಂಕ:09–01–2024 ಕೊನೆಯ ದಿನಾಂಕ:22–01–2024 ಹಾಗೂ ಟೆಂಡರ್ ತೆರೆಯುವ ದಿನಾಂಕ:24–01–2024 ಬೆಳಗ್ಗೆ 11.00 ಗಂಟೆಗೆ ಟೆಂಡರ್ದಾರರು ವಿವರಗಳನ್ನು https://kppp.karnataka.gov.in ನಲ್ಲಿ ಪಡೆದು ಅಪ್ಲೋಡ್ ಮಾಡಬಹುದಾಗಿದೆ.

ಸಹಿ/– ಉಪ ಕಾರ್ಯದರ್ಶಿ (ಆಡಳಿತ)
ಜಿಲ್ಲಾ ಪಂಚಾಯತ್. ತುಮಕೂರು.

DIPR/TUM/446/KSMCA/2023-24

ಕರ್ನಾಟಕ ಸರ್ಕಾರ

ಕಾರಾಗೃಹಗಳು ಮತ್ತು ಸುಧಾರಣಾ ಸೇವೆಗಳು

ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ, ಬೆಂಗಳೂರು-560100.

ವಿಚಾರಣೆ/ಸಿಆರ್–4993/2017–18 ದಿನಾಂಕ: 10–05–2018

ಪ್ರಕಟಣೆ

ಶ್ರೀ ಪಿ. ಮಹೇಶ್ ಬಾಬು, ವೀಕ್ಷಕರು ಇವರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಬೆಂಗಳೂರ, ಕೇಂದ್ರ ಕಾರಾಗೃಹದಲ್ಲಿ ವೀಕ್ಷಕರಾಗಿ (ಅನ್ಯ ಸೇವೆಯ ಮೇರೆಗೆ ಜಿಲ್ಲಾ ಕಾರಾಗೃಹ, ಶಿವಮೊಗ್ಗ) ಕರ್ತವ ನಿರ್ವಹಿಸುತ್ತಿರುವ ನೀವು ದಿನಾಂಕ: 14-12-2017 ರಿಂದ ಇಲ್ಲಿಯವರೆಗೂ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದು, ನಿಮ್ಮ ಈ ಕರ್ತವ್ಯ ಲೋಪಕ್ಕೆ ನಿಮ್ಮ ವಿರುದ್ಧ 1957ರ ಕೆ.ಸಿ.ಎಸ್. (ಸಿ. ಸಿ. ಮತ್ತು ಎ) ನಿಯಮಾವಳಿಗಳ ನಿಯಮ 11 ರಡಿಯಲ್ಲಿ ಶಿಸ್ತು ಕ್ರಮ ಜರುಗಿಸಲು ಉದ್ದೇಶಿಸಿ, ದೋಷಾರೋಪಣಾ ಪತ್ರ ಸಂಖ್ಯೆ:ಕೇಕಾಬೆಂ/ವಿಚಾರಣೆ/4993/2017-18 ದಿನಾಂಕ: 10-05-2018 ರಂದು ಜಾರಿಗೊಳಿಸಿದ್ದು, ಸದರಿ ದೋಷಾರೋಪಣಾ ಪತ್ರವನ್ನು ಮತ್ತು ವಿಚಾರಣೆಗೆ ಹಾಜರಾಗುವಂತೆ ತಿಳಿಸಿ, ನೋಟೀಸ್‌ಗಳನ್ನು ನೀವು ಸೇವ ಪುಸ್ತಕದಲ್ಲಿ ನೀಡಿರುವ ನಿಮ್ಮ ಮನೆಯ ವಿಳಾಸವಾದ ಮೇದರ ಬೀದಿ, ಕ್ಯಾತಸಂದ್ರ ಪೋಸ್ಟ್, ತುಮಕೂರು ಜಿಲ್ಲೆ-572104 ಈ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಕಳುಹಿಸಲಾಗಿತ್ತು ಆದರೆ ನೀವು ಸದರಿ ವಿಳಾಸದ ಲಭ್ಯವಿಲ್ಲದ ಕಾರಣ ಕಳುಹಿಸಿದ ದೋಷಾರೋಪಣಾ ಪತ್ರ ಮತ್ತು ಎಲ್ಲಾ ನೋಟೀಸ್‌ಗಳು ಈ ಕಛೇರಿ ಹಿಂದಿರುಗಿ ಬರುತ್ತದೆ. ನೀವು ದಿನಾಂಕ: 14-12-2017 ರಿಂದ ಇಲ್ಲಿಯವರೆಗೆ ಸತತವಾಗಿ ಸುಮಾರು 05 ವರ್ಷಗಳ ಕಾಲ ಸುದೀರ್ಘವಾಗಿ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿರುವ ಕಾರಣ, ಮುಖ್ಯ ಅಧೀಕ್ಷಕರ ಕೇಂದ್ರ ಕಾರಾಗೃಹ, ಬೆಂಗಳೂರು ರವರ ನಡವಳಿಗಳ ಆದೇಶ ಸಂಖ್ಯೆ:ಕೇಕಾಬೆಂ/ವಿಚಾರಣೆ/13493/2023-24 ದಿನಾಂಕ: 13-12-2023 ರಲ್ಲಿ ನಿಮ್ಮನ್ನು ಕಾರಾಗೃಹದ ವೀಕ್ಷಕರ ಹುದ್ದೆಯ ಸೇವೆಯಿಂದ ವಜಾಗೊಳಿಸಲಾಗಿದೆ ಹಾಗೂ ಇನ್ನು ಮುಂದೆ ಕಾರಾಗೃಹ ಇಲಾಖೆಯ ಯಾವುದೇ ರೀತಿಯ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/- (ವಿ. ಶೇಷುಮೂರ್ತಿ) ಮುಖ್ಯ ಅಧೀಕ್ಷಕರು,
ಕೇಂದ್ರ ಕಾರಾಗೃಹ, ಬೆಂಗಳೂರು.

DIPR/CP/RO3083/AAPL/2023-24

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (KSSIDC)

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಅಧೀಕ್ಷಕ ಅಭಿಯಂತರರು, ಕೇಂದ್ರ ಕಛೇರಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560010. ದೂರವಾಣಿ ಸಂಖ್ಯೆ: 080–23407011–25

ಇ–ಮೇಲ್: kssidcho@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ

(ದ್ವಿ ಟೆಂಡರ್ ದಾಖಲೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರವರ ಪರವಾಗಿ ಅಧೀಕ್ಷಕ ಅಭಿಯಂತರರು ಇವರು ಕೆಟಿಪಿಪಿ ಕಾಯ್ದೆ 2000 ರ ನಿಯಮಾವಳಿಗಳನ್ವಯ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಆಸಕ್ತಿಯುಳ್ಳ ಅರ್ಹತೆ ಹೊಂದಿರುವ ಕೆಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ/ಎನ್.ಹೆಚ್.ಎ.ಐ/ಕ್ಲಾಸ್–1 ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಟೆಂಡರ್ ಅಧಿಸೂಚನೆ ಸಂಖ್ಯೆ: ಇಪಿ79:ಇಎನ್‌ಜಿಜಿ:ಅ.ಅ/New Establishment Works: 2023-24 **ದಿನಾಂಕ: 16.01.2024** ರಲ್ಲಿ ಐಟಂವಾರು ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿಯ ವಿವರ
1	Establishment of New Industrial Estate at Badanaguppe-Kellamballi Grama, Chamarajanagara Tq, Chamarajanagara Dist. Extent of Land 25.0 Acres.
2	Establishment of New Industrial Estate at Budihal Grama-Ballolli hobli, Indi Tq, Vijayapura Dist, Extent of Land 19.38 Acres.
3	Establishment of New Industrial Estate at Kodkani Malalavalli Grama, Siddapura Tq, Uttarakannada Dist., Extent of Land 47.06 Acres.
4	Establishment of New Industrial Estate at Kanagala Grama, Sankeshwara hobli, Hukkeri Tq, Belagavi Dist. Extent of Land 25.0 Acres.
5	Establishment of Industrial Layout at Chittapur-Pet, Chittapura Tq, Kalburgi. Extent of Land 31.03 Acres.

ವಿವರವಾದ ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in**ನಿಂದ ದಿನಾಂಕ: **18.01.2024 ರಂದು ಮಧ್ಯಾಹ್ನ 03.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ದಾಖಲಾತಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **07.02.2024, 05.30 ಗಂಟೆಯವರೆಗೆ,** ಪೂರ್ವಭಾವಿ ಸಭೆಯ ದಿನಾಂಕ: **25.01.2024 3.00 ಗಂಟೆಗೆ.**

ಹೆಚ್ಚಿನ ಮಾಹಿತಿಯನ್ನು ಅಧೀಕ್ಷಕ ಅಭಿಯಂತರರ ಕಛೇರಿಯಲ್ಲಿ ಕಛೇರಿ ಅವಧಿಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸೆಲ್ / ಹೆಲ್ಪ್‌ಡೆಸ್ಕ್ (ದೂರವಾಣಿ ಸಂಖ್ಯೆ. 080–25501227/25501216) ಮುಖಾಂತರ ಪಡೆಯಲು ಕೋರಿದೆ.

ಸಹಿ/–
ಅಧೀಕ್ಷಕ ಅಭಿಯಂತರರು

DIPR/CP/SPAN/3080/2023-24

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

(www.kpwd.gov.in)

ಕಾರ್ಯಪಾಲಕ ಇಂಜಿನಿಯರ್, ಬೆಂಗಳೂರು ವಿಭಾಗ, 2ನೇ ಮಹಡಿ, ಲೋಕೋಪಯೋಗಿ ಇಲಾಖೆ, ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು.
ದೂರವಾಣಿ ಸಂಖ್ಯೆ: 080–22133370

Email ID: eepwdbngdn@yahoo.com E-Portal : https://kppp.karnataka.gov.in/#/portal/portal-home

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 15/2023–24
ದಿನಾಂಕ: 16.01.2024

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ಹೊಸಕೋಟೆ ಉಪವಿಭಾಗ ಉಪವಿಭಾಗಕ್ಕೆ ಸಂಬಂಧಿಸಿದಂತೆ 01 ಸಂಖ್ಯೆಯ (ರೂ. 300.00 ಲಕ್ಷಗಳು) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1.ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಕೆ.ಪಿ.ಪಿ. ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ: 16.01.2024 ರಿಂದ.

2.ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 24.01.2024 ಸಂಜೆ 4.00 ಗಂಟೆ ಯವರೆಗೆ.

3.ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ 25.01.2024 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

DIPR/CP/3082/Zen/2023-24

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ (ಘವನಿ), ಸಾಂಸ್ಕೃತಿಕ ಭವನ, ನ್ಯೂ ಕಾಟನ್ ಮಾರ್ಕೆಟ, ಹುಬ್ಬಳ್ಳಿ–580029

ಅಲ್ಪಾವದಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯು ಈ ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಮಾನವಶಕ್ತಿ ಪೂರೈಸುವ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ ಸಂ	ಇಂಡೆಂಟ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.ಗಳಲ್ಲಿ)	ಪೂರ್ವಭಾವಿ ಸಭೆಯ ದಿನಾಂಕ & ಸಮಯ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	DMA/2023-24/SE0623	18365317.00 / 2,75,480.	29–01–2024 ಸಮಯ ಬೆಳಿಗ್ಗೆ 11.00 ಘಂಟೆ	06–02–2024 ಸಮಯ ಸಂಜೆ 4.30 ಘಂಟೆ	08–02–2024 ಸಮಯ ಬೆಳಿಗ್ಗೆ 10.30 ಘಂಟೆ
2	DMA/2023-24/SE0562	2,75,02,365.00 / 4,12,535.00			

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಕುರಿತು ಮಾಹಿತಿಯನ್ನು ದಿನಾಂಕ: **17–01–2024** ರಿಂದ **www.kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಘವನಿ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ದಿನಾಂಕ: 16–01–2024 ವಾ.ಸಾ.ಇ/ಧಾರವಾಡ/682/ದೇಶಪಾಂಡೆಪಬ್ಲಿಸಿಟಿ/2023–24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಮಾಹಿತಿಯನ್ನು ನೀವು ಹೇಗೆ ಸಂಗ್ರಹಿಸುತ್ತೀರಿ, ನಿರ್ವಹಿಸುತ್ತೀರಿ ಮತ್ತು ಬಳಸಿಕೊಳ್ಳುತ್ತೀರಿ ಎಂಬುದರ ಮೇಲೆ ನಿಮ್ಮ ಸೋಲು ಅಥವಾ ಗೆಲುವು ನಿಂತಿರುತ್ತದೆ.

-ಬಿಲ್ ಗೇಟ್ಸ್

‘ಇಂಡಿಯಾ’ ಮೈತ್ರಿಕೂಟದ ವಿಳಂಬ ಧೋರಣೆ ಮೈಮರೆತರೆ ದೋಷ ಹೊರಬೇಕಾದೀತು

ವಿರೋಧ ಪಕ್ಷಗಳ ಒಕ್ಕೂಟವಾದ ‘ಇಂಡಿಯಾ’ ರೂಪ ಪಡೆದು ಆರು ತಿಂಗಳಿಗೂ ಹೆಚ್ಚು ಕಾಲ ಸಂದಿದೆ. ಈ ಮೈತ್ರಿಕೂಟವು ಲೋಕಸಭಾ ಚುನಾವಣೆಗೆ ಸಜ್ಜಾಗಲು ಇನ್ನು ಮೂರು ತಿಂಗಳಿಗೂ ಕಡಿಮೆ ಅವಧಿ ಇದೆ. ಆದರೆ ಮೈತ್ರಿಕೂಟದ ನಾಯಕತ್ವವನ್ನು ಯಾರು ವಹಿಸಿಕೊಳ್ಳುತ್ತಾರೆ ಎಂಬುದು ಇನ್ನೂ ತೀರ್ಮಾನ ಆಗಿಲ್ಲ. ಮೈತ್ರಿಕೂಟದ ಕಾರ್ಯಸೂಚಿ ರೂಪಿಸುವ ಕೆಲಸವು ಇನ್ನಷ್ಟೇ ಆಗಬೇಕಿದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಒಗ್ಗಟ್ಟಿನಿಂದ ಎದುರಿಸಬೇಕು ಎಂಬ ತೀರ್ಮಾನ ಹೊರತುಪಡಿಸಿದರೆ, ಮೈತ್ರಿಕೂಟದ ಪ್ರಮುಖರು ತಮ್ಮ ಕಾರ್ಯಸೂಚಿ ಅಂತಿಮಗೊಳಿಸುವ ವಿಚಾರವಾಗಿ ಹೆಚ್ಚು ಮುಂದೆ ಸಾಗಿಲ್ಲ. ಮೈತ್ರಿಕೂಟದ ಪಕ್ಷಗಳ ನಡುವೆ ಸೀಟು ಹಂಚಿಕೆ ಸೂತ್ರ ಅಂತಿಮಗೊಂಡಿಲ್ಲ. ಇಂತಹ ಎಲ್ಲ ವಿಚಾರಗಳಿಗೆ ಸಂಬಂಧಿಸಿದ ಕೆಲವು ಕೆಲಸಗಳು ಈಗಷ್ಟೇ ಆರಂಭ ಆಗಿವೆ. ಪ್ರತಿ ವಿಚಾರದಲ್ಲಿಯೂ ಮೈತ್ರಿಕೂಟದ ಪಕ್ಷಗಳ ನಡುವೆ ಬಹಳ ಜಾಣತನದ ಮೌನವೊಂದು ಇದೆ ಅಥವಾ ಒಂದಲ್ಲ ಒಂದು ಪಕ್ಷದ ವಿರೋಧ ಇದೆ. ವಿಭಿನ್ನ ಸಿದ್ಧಾಂತಗಳು, ವಿಭಿನ್ನ ಹಿತಾಸಕ್ತಿಗಳು ಹಾಗೂ ವಿಭಿನ್ನ ಮತದಾರ ಸಮೂಹದ ಬೆಂಬಲವನ್ನು ಹೊಂದಿರುವ 28 ಪಕ್ಷಗಳ ಒಂದು ಒಕ್ಕೂಟದಲ್ಲಿ ಇವೆಲ್ಲ ಸಹಜ ಎಂಬುದು ನಿಜ. ಆದರೆ ಮಹತ್ವದ ವಿಚಾರಗಳನ್ನು ಅಂತಿಮಗೊಳಿಸುವಲ್ಲಿ ಆಗಿರುವ ವಿಳಂಬವು ವಿಶ್ವಾಸ ವರ್ಧಿಸುವಂತೆ ಇಲ್ಲ. ಮೈತ್ರಿಕೂಟವು ಚುನಾವಣೆಗೂ ಮೊದಲು ಎಲ್ಲವನ್ನೂ ಅಂತಿಮಗೊಳಿಸಿಕೊಂಡು, ಪೂರ್ಣ ಬಲದೊಂದಿಗೆ ಚುನಾವಣೆ ಎದುರಿಸುತ್ತದೆ ಎಂದು ಖಚಿತವಾಗಿ ಹೇಳುವಂತಹ ವಾತಾವರಣ ಸೃಷ್ಟಿಯಾಗಿಲ್ಲ.



ಮೈತ್ರಿಕೂಟವು ಎಲ್ಲವನ್ನೂ ಅಂತಿಮಗೊಳಿಸಿಕೊಂಡು, ಪೂರ್ಣ ಬಲದೊಂದಿಗೆ ಚುನಾವಣೆ ಎದುರಿಸುತ್ತದೆ ಎಂದು ಖಚಿತವಾಗಿ ಹೇಳುವಂತಹ ವಾತಾವರಣ ಇನ್ನೂ ಸೃಷ್ಟಿಯಾಗಿಲ್ಲ

ಮೈತ್ರಿಕೂಟದ ಪಕ್ಷಗಳು ಇತ್ತೀಚೆಗೆ ವರ್ಚುವಲ್ ವೇದಿಕೆಯ ಮೂಲಕ ಸಭೆಯೊಂದನ್ನು ನಡೆಸಿವೆ. ಒಂದು ಹೆಜ್ಜೆ ಮುಂದೆ ಇರಿಸಿ, ಇನ್ನೊಂದು ಹೆಜ್ಜೆ ಮುಂದಕ್ಕಿಡಲು ಹಿಂದೆಮುಂದೆ ನೋಡುವ ಮೈತ್ರಿಕೂಟದ ಪ್ರವೃತ್ತಿಯು ಇಲ್ಲಿಯೂ ಪುನರಾವರ್ತನೆ ಕಂಡಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮೈತ್ರಿಕೂಟದ ಅಧ್ಯಕ್ಷರನ್ನಾಗಿಸಲು ಸಭೆಯಲ್ಲಿ ಸಹಮತ ಮೂಡಿದೆ ಎಂದು ವರದಿಯಾಗಿದೆ. ಮೈತ್ರಿಕೂಟದ ಅತಿದೊಡ್ಡ ಪಕ್ಷವಾಗಿ ಕಾಂಗ್ರೆಸ್ಸಿಗೆ ಈ ಸ್ಥಾನವನ್ನು ಕೇಳುವ ಅಧಿಕಾರ ಇದೆ. ಆದರೆ, ನಾಯಕತ್ವಕ್ಕೆ ಒಪ್ಪಿಗೆ ಸಿಕ್ಕಿದ್ದರೂ, ಅವರನ್ನು ಮೈತ್ರಿಕೂಟವು ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸುತ್ತದೆಯೇ ಎಂಬುದು ಖಚಿತವಾಗಿಲ್ಲ. ಮೈತ್ರಿಕೂಟದ ಸಂಚಾಲಕ ಸ್ಥಾನಕ್ಕೆ ಜೆಡಿಯು ನಾಯಕ ಹಾಗೂ ಬಿಹಾರದ ಮುಖ್ಯಮಂತ್ರಿ ಆಗಿರುವ ನಿತೀಶ್ ಕುಮಾರ್ ಹೆಸರು ಪ್ರಸ್ತಾಪ ಆಯಿತಾದರೂ, ಅವರು ಅದನ್ನು ಒಪ್ಪಲಿಲ್ಲ ಎಂದು ವರದಿಯಾಗಿದೆ. ಆ ಸ್ಥಾನಕ್ಕೆ ನಿತೀಶ್ ಅವರು ಆಕಾಂಕ್ಷಿ ಅಲ್ಲ ಎಂದು ಜೆಡಿಯು ಹೇಳಿದೆ. ಸಂಚಾಲಕ ಸ್ಥಾನದ ವಿಚಾರವಾಗಿ ತೀರ್ಮಾನ ಇನ್ನಷ್ಟೇ ಘೋಷಣೆ ಆಗಬೇಕಿದೆ. ಸೀಟು ಹಂಚಿಕೆಯ ವಿಚಾರವಾಗಿ ಆರಂಭಿಕ ಮಾತುಕತೆಗಳು ಆರಂಭವಾಗಿದ್ದರೂ, ಅದರ ಬಗ್ಗೆ ಅಂತಿಮ ತೀರ್ಮಾನ ಆಗಿಲ್ಲ. ಮೈತ್ರಿಕೂಟದ ಸದಸ್ಯ ಪಕ್ಷಗಳು ಕೇರಳ, ಪಶ್ಚಿಮ ಬಂಗಾಳ ಹಾಗೂ ಪಂಜಾಬ್‌ನಂತಹ ರಾಜ್ಯಗಳಲ್ಲಿ ಕಾಂಗ್ರೆಸ್ಸಿಗೆ ಎದುರಾಳಿಗಳೂ ಹೌದು. ಇಲ್ಲಿ ಸೀಟು ಹಂಚಿಕೆ ವಿಚಾರವಾಗಿ ಸಮಸ್ಯೆ ತಲೆದೋರಬಹುದು.

ಆದರೆ, ಬಿಜೆಪಿಗೆ ಎದುರಾಗಿ ವಿಶ್ವಾಸಾರ್ಹ ಪ್ರತಿರೋಧ ಒಡ್ಡಬೇಕು ಎಂದಾದರೆ, ಮೈತ್ರಿಕೂಟದ ಪಕ್ಷಗಳು ಸವಾಲು ಸ್ವೀಕರಿಸಲು ಸಜ್ಜಾಗಲೇಬೇಕಿದೆ. ಬಿಜೆಪಿಯ ಬತ್ತಳಿಕೆಯಲ್ಲಿ ಎಲ್ಲವೂ ಇವೆ. ಬಿಜೆಪಿಯು ಬಲಿಷ್ಠ ನಾಯಕತ್ವವನ್ನು ಹೊಂದಿದೆ, ಅದು ರಾಜಕೀಯ ಹಾಗೂ ಚುನಾವಣಾ ತಂತ್ರಗಾರಿಕೆಗಳನ್ನು ಸಜ್ಜುಗೊಳಿಸಿ ಇರಿಸಿದೆ. ಪಕ್ಷಕ್ಕೆ ಪೂರಕವಾಗಿ ರಾಮ ಮಂದಿರದ ವಿಚಾರದಲ್ಲಿ ದೇಶದಾದ್ಯಂತ ಸಂಭ್ರಮದ ಅಲೆಯೊಂದನ್ನು ಸೃಷ್ಟಿಸಿಕೊಂಡಿದೆ. ರಾಮ ಮಂದಿರದಲ್ಲಿ ಬಾಲರಾಮನ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ಮಾಡುವ ದಿನ ಪಕ್ಷವು ಲೋಕಸಭಾ ಚುನಾವಣೆಯ ಪ್ರಚಾರಕ್ಕೆ ಚಾಲನೆ ಕೂಡ ನೀಡಲಿದೆ. ಮೈತ್ರಿಕೂಟದ ಸದಸ್ಯ ಪಕ್ಷಗಳು ಲಗುಬಗೆಯಿಂದ ಹೆಜ್ಜೆ ಹಾಕದೇ ಇದ್ದಲ್ಲಿ, ದೋಷವನ್ನು ಕೊನೆಗೆ ಅವೇ ಹೊರಬೇಕಾಗುತ್ತದೆ. ಈಚೆಗೆ ನಡೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ಕಾಲಹರಣದ ಕೆಲಸ ಮಾಡಿತು. ಚುನಾವಣೆಯ ನಂತರದಲ್ಲಿ ತನಗೆ ಹೆಚ್ಚಿನ ಸೀಟುಗಳನ್ನು ಕೇಳುವ ತಾಕತ್ತು ಬರಬಹುದು ಎಂಬ ಕಾಂಗ್ರೆಸ್ಸಿನ ಲೆಕ್ಕಾಚಾರವು ತಲೆಕೆಳಗಾಗಿದೆ. ಮೈತ್ರಿಕೂಟದಲ್ಲಿ ಇರುವ ಹಲವು ಪಕ್ಷಗಳು, ಮೈತ್ರಿಕೂಟದ ಮೂಲಕ ತಮಗಾಗುವ ಲಾಭವನ್ನು ಹೆಚ್ಚಿಸಿಕೊಳ್ಳುವ ಉದ್ದೇಶ ಹೊಂದಿವೆ; ಎಲ್ಲರೂ ಒಗ್ಗೂಡಿ ಕೊಡು-ಕೊಳ್ಳುವ ಮೂಲಕ ಮೈತ್ರಿಕೂಟಕ್ಕೆ ಹೆಚ್ಚಿನ ಲಾಭ ಸಿಗಲಿ ಎಂಬ ಉದ್ದೇಶ ಅವರಲ್ಲಿ ಇಲ್ಲ. ಈಗಿನ ಸಂದರ್ಭ ಹಾಗೂ ಹಲವು ಸನ್ನಿವೇಶಗಳು ಮೈತ್ರಿಕೂಟಕ್ಕೆ ಪೂರಕವಾಗಿರುವಂತೆ ಕಾಣುತ್ತಿಲ್ಲ.

ಆರ್ಥಿಕ ತುರ್ತುಪರಿಸ್ಥಿತಿ ಘೋಷಣೆ, ಹಲವು ಕ್ರಮ ಜಾರಿ

ಅರ್ಜೆಂಟೀನಾ ಬಿಕ್ಕಟ್ಟು ಮತ್ತು ಡಾಲರೀಕರಣ

ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಜೇವಿಯರ್ ಮಿಲೆ, ಅರ್ಜೆಂಟೀನಾದ ಹೊಸ ಅಧ್ಯಕ್ಷ. ಅವರು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ತಮ್ಮ ದೇಶದ ಕೇಂದ್ರೀಯ ಬ್ಯಾಂಕಿನ ಪ್ರತಿಕೃತಿಯನ್ನು ಕೋಲಿನಿಂದ ಒಡೆದುಹಾಕುವ ಮೂಲಕ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ಕೇಂದ್ರೀಯ ಬ್ಯಾಂಕನ್ನು ಮುಚ್ಚುವುದು ಚುನಾವಣೆ ವೇಳೆ ಅವರು ನೀಡಿದ್ದ ಭರವಸೆಯೂ ಆಗಿತ್ತು. ಹಾಗೆಯೇ ದೇಶದ ಕರೆನ್ಸಿಯಾದ ಪೆಸೊವನ್ನು ರದ್ದುಗೊಳಿಸಿ, ಅಮೆರಿಕದ ಡಾಲರನ್ನು ತಮ್ಮ ದೇಶದ ಕರೆನ್ಸಿಯನ್ನಾಗಿಸುವುದಾಗಿ ಘೋಷಿಸಿದ್ದಾರೆ. ಖರ್ಚಿಗೆ ಕತ್ತರಿ ಹಾಕುವುದು, ತೆರಿಗೆಯಲ್ಲಿ ಕಡಿತ, ಸರ್ಕಾರದ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವುದು, ಸಚಿವರ ಸಂಖ್ಯೆಯನ್ನು ಇಳಿಸುವುದು, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ವಿಮೆ ಆಧಾರಿತ ವ್ಯವಸ್ಥೆಯನ್ನಾಗಿ ರೂಪಿಸುವುದು ಇವೆಲ್ಲಾ ಅವರ ಯೋಜನೆಗಳು. ಒಟ್ಟಾರೆ ಅವರ ಪ್ರಕಾರ, ಆರ್ಥಿಕತೆಯ ನಿರ್ವಹಣೆಯಲ್ಲಿ ಸರ್ಕಾರಕ್ಕೆ ಹೆಚ್ಚಿನ ಜವಾಬ್ದಾರಿಗಳು ಇರಬಾರದು.

ಅರ್ಜೆಂಟೀನಾದಲ್ಲಿ ಆರ್ಥಿಕತೆ ಹದಗೆಟ್ಟಿದೆ. ಹಣದುಬ್ಬರ ವಿಪರೀತಕ್ಕೆ ಹೋಗಿದೆ. ಇಂದು ಇದ್ದ ಬೆಲೆ ನಾಳೆ ಇರುವುದಿಲ್ಲ. ಜಿಡಿಪಿ ನಿರಂತರವಾಗಿ ಕುಸಿಯುತ್ತಿದೆ. ವಿತ್ತೀಯ ಕೊರತೆ 43 ಬಿಲಿಯನ್ ಡಾಲರ್ (ಅಂದಾಜು ₹ 3.57 ಲಕ್ಷ ಕೋಟಿ) ದಾಟಿದೆ. ಐಎಂಎಫ್‌ನಿಂದ ಪಡೆದಿರುವ ಸಾಲವೇ 44 ಬಿಲಿಯನ್ ಡಾಲರ್‌ನಷ್ಟಿದೆ (₹ 3.65 ಲಕ್ಷ ಕೋಟಿ). ಜೊತೆಗೆ ಬೇರೆ ಬೇರೆ ಮೂಲಗಳಿಂದಲೂ ವಿಪರೀತ ಸಾಲ ಮಾಡಿಕೊಂಡಿದೆ. ಸದ್ಯಕ್ಕಂತೂ ಸಾಲ ತೀರಿಸುವ ಸ್ಥಿತಿಯಲ್ಲಿ ಇಲ್ಲ.

ಅರ್ಜೆಂಟೀನಾದ ಈ ಸ್ಥಿತಿಗೆ ಹಿಂದಿನ ಸರ್ಕಾರಗಳು ಮಾಡಿಕೊಂಡ ಎಡವಟ್ಟುಗಳು ಕಾರಣ. ಉದಾಹರಣೆಗೆ, ಪಾವತಿ ಕೊರತೆ ಸರಿದೂಗಿಸುವ ಉದ್ದೇಶದಿಂದ ಹಿಂದಿನ ಅಧ್ಯಕ್ಷ ಮೆಕ್ರಿ ವಿಪರೀತ ಸಾಲ ಮಾಡಿಕೊಂಡಿದ್ದರು. ಅಸಲು ಹಾಗೂ ಬಡ್ಡಿ ಸೇರಿಕೊಂಡು ವಿತ್ತೀಯ ಕೊರತೆ ಇನ್ನಷ್ಟು ಹೆಚ್ಚಿತು. ಡಾಲರ್ ಎದುರು ಪೆಸೊ ಮೌಲ್ಯ ನೆಲಕಚ್ಚಿತು. ಆಮದು ಮಾಡಿಕೊಳ್ಳುತ್ತಿದ್ದ ಪದಾರ್ಥಗಳ ಬೆಲೆ ವಿಪರೀತವಾಯಿತು. ಅದರ ಪರಿಣಾಮವಾಗಿ ಉತ್ಪಾದನಾ ವೆಚ್ಚ ಹೆಚ್ಚಾಯಿತು. ಹಣದುಬ್ಬರದ ಪ್ರಮಾಣ ಇನ್ನಷ್ಟು ಹೆಚ್ಚಾಯಿತು. ಜನರ ಕೊಳ್ಳುವ ಶಕ್ತಿ ಕಡಿಮೆಯಾಯಿತು. ಮುಳುಗುವ ಆತಂಕದಲ್ಲಿದ್ದ ಜನರಿಗೆ ಮಿಲೆ ಅವರ ಭರವಸೆಗಳು ವಿಶ್ವಾಸ ಮೂಡಿಸಿರಬೇಕು. ಅಧ್ಯಕ್ಷರಾಗಿ ಬಹುಮತದಿಂದ ಆಯ್ಕೆಯಾದರು.

ಅರ್ಥಶಾಸ್ತ್ರಜ್ಞರಾದ ಮಿಲೆ ತಮ್ಮನ್ನು ‘ಅರಾಜಕತಾವಾದಿ ಬಂಡವಾಳಶಾಹಿ’ ಎಂದು ಕರೆದುಕೊಳ್ಳುತ್ತಾರೆ. ಎಲ್ಲವೂ ಖಾಸಗೀಕರಣಗೊಳ್ಳಬೇಕು, ಆರ್ಥಿಕ ವಿಚಾರದಲ್ಲಿ ಅನವಶ್ಯಕವಾಗಿ ಸರ್ಕಾರ ಮೂಗುತೂರಿಸಬಾರದು ಎಂದು ಭಾವಿಸುವ ಗುಂಪಿಗೆ ಸೇರಿದವರು. ಅರ್ಜೆಂಟೀನಾದ ಆರ್ಥಿಕ ಬಿಕ್ಕಟ್ಟಿಗೆ ಅವರ ಪರಿಹಾರ ಸರಳ. ಡಾಲರನ್ನು ದೇಶದ ಕರೆನ್ಸಿಯನ್ನಾಗಿ ಮಾಡಿಕೊಳ್ಳುವುದು. ಕೇಂದ್ರೀಯ ಬ್ಯಾಂಕನ್ನು ಮುಚ್ಚಿಬಿಡುವುದು. ಇನ್ನುಮುಂದೆ ಪೆಸೊವನ್ನು ಮುದ್ರಿಸಬೇಕಾಗಿಲ್ಲ. ಹಣಕಾಸು ನೀತಿಯನ್ನು ರೂಪಿಸುವ ಜವಾಬ್ದಾರಿಯೂ ಇಲ್ಲ. ಹೆಚ್ಚು ಮಿತವಾಗಿ, ಜವಾಬ್ದಾರಿಯಿಂದ ಖರ್ಚು ಮಾಡುವುದು ಸರ್ಕಾರಕ್ಕೆ ಅನಿವಾರ್ಯವಾಗುತ್ತದೆ. ಹಣದುಬ್ಬರದ ಜೊತೆಗೆ ಇತರ ಆರ್ಥಿಕ ಸಮಸ್ಯೆಗಳು ಪರಿಹಾರವಾಗುತ್ತವೆ. ಹೂಡಿಕೆದಾರರಿಗೆ ದೇಶದ ಆರ್ಥಿಕತೆಯ ಮೇಲೆ ವಿಶ್ವಾಸ ಮೂಡುತ್ತದೆ. ಹೂಡಿಕೆ ಹೆಚ್ಚುತ್ತದೆ. ಆರ್ಥಿಕತೆ ಸುಧಾರಿಸುತ್ತದೆ. ಇದು ಸ್ಥೂಲವಾಗಿ ಅವರ ತರ್ಕ.

ಡಾಲರೀಕರಣ ಹೊಸದೇನೂ ಅಲ್ಲ. ಕೆಲವು ದೇಶಗಳಲ್ಲಿ ಪ್ರಯೋಗ ಮಾಡಲಾಗಿದೆ. ಅರ್ಜೆಂಟೀನಾದಲ್ಲೇ ಅದರ ಇನ್ನೊಂದು ರೂಪವಾಗಿದ್ದ ಕರೆನ್ಸಿ ಬೋರ್ಡ್ ವ್ಯವಸ್ಥೆ ಜಾರಿಯಲ್ಲಿತ್ತು. ಅದರಲ್ಲಿ ಎರಡು ಕರೆನ್ಸಿಗಳ ನಡುವಿನ ವಿನಿಮಯ ದರವನ್ನು ನಿರ್ಧರಿಸಲಾಗುತ್ತದೆ. 1991ರಲ್ಲಿ ಅರ್ಜೆಂಟೀನಾದಲ್ಲಿ ಒಂದು ಡಾಲರಿಗೆ ಒಂದು ಪೆಸೊ ಎಂದು ನಿರ್ಧರಿಸಲಾಗಿತ್ತು. ಈ ವಿನಿಮಯ ದರವನ್ನು ಕಾಪಾಡಿಕೊಳ್ಳುವುದು ಕರೆನ್ಸಿ ಬೋರ್ಡಿನ ಕೆಲಸ. ವಿನಿಮಯ ದರವನ್ನು ಬದಲಿಸುವುದಕ್ಕೆ ಅವಕಾಶವಿರಲಿಲ್ಲ. ಈ ಕ್ರಮದಿಂದ ಹಣದುಬ್ಬರ ಕಡಿಮೆಯಾಯಿತು. ಆದರೆ ದೇಶಕ್ಕೆ ಬೇರೆ ಸಮಸ್ಯೆ ಎದುರಾಯಿತು. 2001ರಲ್ಲಿ ಕಾಣಿಸಿಕೊಂಡ ಜಾಗತಿಕ ಬಿಕ್ಕಟ್ಟಿನಿಂದಾಗಿ ಬ್ರೆಜಿಲ್ ಮೊದಲಾದ ದೇಶಗಳ ಕರೆನ್ಸಿಗಳ ಮೌಲ್ಯ ಕುಸಿಯಿತು. ಅಲ್ಲಿಂದ ಪದಾರ್ಥಗಳನ್ನು ಆಮದು ಮಾಡಿಕೊಳ್ಳುವುದು ಬೇರೆ ದೇಶಗಳಿಗೆ ಅಗ್ಗವಾಯಿತು. ಆದರೆ ಪೆಸೊ ಡಾಲರ್‌ನೊಂದಿಗೆ ತೆಕ್ಕೆಹಾಕಿಕೊಂಡಿದ್ದರಿಂದ ಅಲ್ಲಿ ಬೆಲೆ ಹೆಚ್ಚೇ ಇತ್ತು. ಬ್ರೆಜಿಲ್‌ನೊಂದಿಗೆ ಸ್ಪರ್ಧಿಸುವುದು ಅರ್ಜೆಂಟೀನಾಗೆ ಕಷ್ಟವಾಯಿತು. ಅದರ ರಫ್ತಿಗೆ ಹೊಡೆತ ಬಿತ್ತು. ಹೀಗೆ, ಹೊರಗಿನ ಹೊಡೆತ ತಡೆದುಕೊಳ್ಳಲಾಗದೆ ಕರೆನ್ಸಿ ಬೋರ್ಡಿನ ವ್ಯವಸ್ಥೆಯನ್ನು ಕೈಬಿಡಬೇಕಾಯಿತು.

ಡಾಲರೀಕರಣ ಇದಕ್ಕಿಂತ ಒಂದು ಹೆಜ್ಜೆ ಮುಂದೆ. ಈ ವ್ಯವಸ್ಥೆಯಲ್ಲಿ ಪೆಸೊ ಇರುವುದೇ ಇಲ್ಲ. ಡಾಲರ್‌ದೇ ಸಾಮ್ರಾಜ್ಯ. ಡಾಲರ್ ಕೊರತೆಯುಂಟಾದರೆ ಅದನ್ನು ಮುದ್ರಿಸುವುದಕ್ಕಂತೂ ಸಾಧ್ಯವಿಲ್ಲ. ಇರುವ ದಾರಿ ಅಂದರೆ ಸಾಲ ಮಾಡಬೇಕು ಅಥವಾ ಇರುವ ಸ್ವತ್ತನ್ನು ಮಾರಿಕೊಳ್ಳಬೇಕು. ಇಲ್ಲದಿದ್ದರೆ ವಿವಿಧ ಬಾಬ್ತಿಗೆ ಖರ್ಚು ಮಾಡುವುದಕ್ಕೆ, ಬಂಡವಾಳ ಹೂಡುವುದಕ್ಕೆ ಸರ್ಕಾರದ ಬೊಕ್ಕಸದಲ್ಲಿ ಹಣ ಇರುವುದಿಲ್ಲ. ಹೂಡಿಕೆ ಕಮ್ಮಿಯಾದರೆ ಜಿಡಿಪಿ ತಗ್ಗುತ್ತದೆ. ಬೆಳವಣಿಗೆ ಕುಂಠಿತವಾಗುತ್ತದೆ. ಅಂದರೆ ಡಾಲರೀಕರಣದಿಂದ ಹಣದುಬ್ಬರ ಕಡಿಮೆಯಾಗಬಹುದು. ಆದರೆ ಆರ್ಥಿಕತೆ ಕುಸಿಯುವ ಸಾಧ್ಯತೆಯೂ ಇದೆ. ಈಕ್ವೆಡಾರ್‌ನಂತಹ ದೇಶಗಳಲ್ಲಿ ಹೀಗೆ ಆಗಿದೆ. ಯೂರೊವನ್ನು ತಮ್ಮ ರಾಷ್ಟ್ರೀಯ ಕರೆನ್ಸಿಯನ್ನಾಗಿ ಮಾಡಿಕೊಂಡ ಇಟಲಿ, ಸ್ಪೇನ್, ಗ್ರೀಸ್‌ನಲ್ಲೂ ಆರ್ಥಿಕ ಬೆಳವಣಿಗೆ ಕುಸಿದಿತ್ತು. ಅಂದರೆ ಆರ್ಥಿಕತೆಯ ಡಾಲರೀಕರಣದಿಂದ ಅರ್ಜೆಂಟೀನಾದ ಮೂಲಭೂತ ಸಮಸ್ಯೆಗಳು ಪರಿಹಾರವಾಗಿಬಿಡುವ ಖಾತರಿಯೇನಿಲ್ಲ.

ಡಾಲರೀಕರಣವನ್ನು ವಿರೋಧಿಸುವವರ ಪ್ರಕಾರ, ಅರ್ಜೆಂಟೀನಾದ ಆರ್ಥಿಕತೆಯಲ್ಲಿ ಪೆಸೊಗೆ ಒಂದು ಮಹತ್ವವಿದೆ. ಜನ ಬಹುತೇಕ ಡಾಲರನ್ನೇ ಬಳಸುತ್ತಿದ್ದರೂ ಪೆಸೊವನ್ನು ದಿಢೀರನೆ ಹಿಂತೆಗೆದುಕೊಳ್ಳುವುದು ಸುಲಭವಲ್ಲ. ಅದು ಬರೀ ಹಣವಲ್ಲ. ದೇಶದ ಸಾಂಸ್ಕೃತಿಕ ಅಸ್ಮಿತೆ ರೂಪಿಸುವುದರಲ್ಲೂ ಅದಕ್ಕೊಂದು ಪಾತ್ರವಿದೆ. ದೇಶದೊಳಗಿನ ವ್ಯವಹಾರಕ್ಕೆ ಮಾತ್ರವಲ್ಲ, ಹಣದ ಪೂರೈಕೆ ನಿರ್ವಹಿಸುವುದಕ್ಕೆ, ಬಡ್ಡಿದರ, ವಿನಿಮಯ ದರ ನಿರ್ಧರಿಸುವುದಕ್ಕೂ ಅಧಿಕಾರ ನೀಡುತ್ತದೆ. ನಮ್ಮ ಆರ್ಥಿಕತೆಯನ್ನು ನಿರ್ವಹಿಸಲು ನಮ್ಮದಲ್ಲದ ಕರೆನ್ಸಿ ಬಳಸಿಕೊಂಡಾಗ ಈ ಸ್ವಾತಂತ್ರ್ಯಗಳನ್ನು ಕಳೆದುಕೊಳ್ಳುತ್ತೇವೆ. ಅದರಿಂದ ಒಂದು ದೇಶದ ಆರ್ಥಿಕತೆಗಷ್ಟೇ ಅಲ್ಲ ಪ್ರಜಾಸತ್ತೆಗೂ ತೊಂದರೆಯಾಗುತ್ತದೆ. ಉದಾಹರಣೆಗೆ, ಡಾಲರೀಕರಣದ ಪ್ರಕ್ರಿಯೆಯಿಂದಾಗಿ ಅರ್ಜೆಂಟೀನಾಕ್ಕೆ ತನ್ನದೇ ಆದ ಕರೆನ್ಸಿ ಇರುವುದಿಲ್ಲ. ಕೇಂದ್ರೀಯ ಬ್ಯಾಂಕು ಇರುವುದಿಲ್ಲ. ಹಾಗಾಗಿ, ಅದಕ್ಕೆ ತನ್ನದೇ ಹಣಕಾಸು ನೀತಿ ರೂಪಿಸುವುದಕ್ಕೆ ಕಷ್ಟವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಅಮೆರಿಕ ತನ್ನ ದೇಶದಲ್ಲಿನ ಹಣದುಬ್ಬರ ನಿಯಂತ್ರಿಸುವ ಉದ್ದೇಶದಿಂದ ಬಡ್ಡಿದರವನ್ನು ಏರಿಸುತ್ತದೆ ಎಂದು ಭಾವಿಸಿಕೊಳ್ಳಿ. ಅಲ್ಲಿ ಹೆಚ್ಚಿನ ಬಡ್ಡಿ ಸಿಗುವುದರಿಂದ ಡಾಲರ್ ಅರ್ಜೆಂಟೀನಾದಿಂದ ಅಮೆರಿಕಕ್ಕೆ ಹರಿದುಹೋಗಲು ಪ್ರಾರಂಭಿಸುತ್ತದೆ. ಅದನ್ನು ತಪ್ಪಿಸಲು ಅರ್ಜೆಂಟೀನಾ ಕೂಡ ಬಡ್ಡಿದರ ಹೆಚ್ಚಿಸಬೇಕು. ಆದರೆ ಅಂತಹ ಆರ್ಥಿಕ ನೀತಿ ರೂಪಿಸುವುದು ಸುಲಭವಲ್ಲ. ಹಾಗಾಗಿ, ಅರ್ಜೆಂಟೀನಾದ ಆರ್ಥಿಕತೆ ಗಂಭೀರವಾದ ಬಿಕ್ಕಟ್ಟಿನಲ್ಲಿ ಸಿಕ್ಕಿಬೀಳುವ ಅಪಾಯ ಸೃಷ್ಟಿಯಾಗುತ್ತದೆ.

ಜೊತೆಗೆ, ಡಾಲರೀಕರಣದ ಪ್ರಕ್ರಿಯೆ ಸಫಲವಾಗಬೇಕಾದರೆ ಅರ್ಜೆಂಟೀನಾ ಹಲವು ಕ್ರಮಗಳನ್ನು ತೆಗೆದುಕೊಳ್ಳಬೇಕು. ವಿತ್ತೀಯ ಶಿಸ್ತು ಸಾಧ್ಯವಾಗಬೇಕು. ಸಾಲದ ಮರುಪಾವತಿಗೆ ವ್ಯವಸ್ಥೆಯಾಗಬೇಕು. ಡಾಲರಿನ ಹೊರಹರಿವು ನಿಲ್ಲಬೇಕು. ಆರೋಗ್ಯ, ಶಿಕ್ಷಣ, ಪಿಂಚಣಿಯಂತಹ ವ್ಯವಸ್ಥೆಗಳಲ್ಲಿ ಸುಧಾರಣೆಯಾಗಬೇಕು. ಇವೆಲ್ಲವನ್ನೂ ಹಾಗೇ ಸಾಧಿಸುವುದಕ್ಕೆ ಸಾಧ್ಯವಾಗುವುದಾದರೆ ಡಾಲರೀಕರಣವೇ ಬೇಕಾಗದಿರಬಹುದು.

ಡಾಲರೀಕರಣ ಪ್ರಕ್ರಿಯೆ ಪ್ರಾರಂಭಿಸುವುದಕ್ಕೂ ಮಿಲೆ ಅವರಿಗೆ ಹಲವು ಸಮಸ್ಯೆಗಳಿವೆ. ಮೊದಲನೆಯದಾಗಿ, ಪ್ರಕ್ರಿಯೆಗೆ ಬೇಕಾದಷ್ಟು ಡಾಲರ್ ಸರ್ಕಾರದಲ್ಲಿ ಇಲ್ಲ. ಹೆಚ್ಚೆಂದರೆ 40 ಬಿಲಿಯನ್ ಡಾಲರ್ (₹ 3.32 ಲಕ್ಷ ಕೋಟಿ) ಇರಬಹುದು. ಸಾಲ ಸೇರಿದಂತೆ ಕೊಡಬೇಕಾದ್ದನ್ನೆಲ್ಲಾ ಕೊಟ್ಟುಬಿಟ್ಟರೆ ಏನೂ ಉಳಿಯುವುದಿಲ್ಲ. ಜನರಲ್ಲಿರುವ ಪೆಸೊವನ್ನು ಡಾಲರಿಗೆ ಬದಲಿಸಿಕೊಡಲೂ ಅದು ಪರದಾಡಬೇಕಾದ ಸ್ಥಿತಿಯಲ್ಲಿದೆ.

ಮತ್ತೊಂದು ಅಡಚಣೆಯೆಂದರೆ, ಇದನ್ನು ಜಾರಿಗೊಳಿಸುವುದಕ್ಕೆ ಸಂಸತ್ತಿನ ಒಪ್ಪಿಗೆ ಬೇಕು. ಅಲ್ಲಿ ಅವರಿಗೆ ಬಹುಮತ ಇಲ್ಲ. ಸದ್ಯಕ್ಕೆ ಎರಡು ವರ್ಷಗಳ ಕಾಲ ಆರ್ಥಿಕ ತುರ್ತುಪರಿಸ್ಥಿತಿಯನ್ನು ಘೋಷಿಸಿ ಹಲವು ಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಇದು ಬಹುಕಾಲ ಸಾಧ್ಯವಾಗುವುದಿಲ್ಲ. ಒಳಗಿನ ಬಿಕ್ಕಟ್ಟಿನ ಪರಿಹಾರಕ್ಕೆ ಹೊರಗಿನ ಶಕ್ತಿಯನ್ನು ನೆಚ್ಚಿಕೊಳ್ಳುವುದು ತಾಳಿಕೆಯ ಹಾದಿಯಾಗಲಾರದು.

ಚುರುಮುರಿ

ರೈಲು ಬಿಟ್ಟಿದ್ದಾರೆ!

• ಗುರು ಪಿ.ಎಸ್.

‘ನಾವೆಲ್ಲ ದಿನಾ ಹತ್ತಾರು ಕಿ.ಮೀ. ನಡ್ಕೊಂಡು ಸ್ಕೂಲ್‌ಗೆ ಹೋಗ್ತಿದ್ವಿ. ನೀನು ನೋಡಿದ್ರೆ ವರ್ಷಕ್ಕೊಮ್ಮೆ ಬೆಂಗಳೂರಿಗೆ ಹೋಗಿ ಪರೀಕ್ಷೆ ಬರೆಯೋಕೆ ಅಳ್ತೀಯ’ ಅಪ್ಪನ ಸುಪ್ರಭಾತ ಶುರುವಾಯಿತು.

‘ಎಕ್ಸಾಮ್‌ಗೆ ಓದೋಕಿಂತ, ಹೋಗೋದೇ ಹಿಂಸೆ ಅನಿಸುತ್ತಪ್ಪ. ಕಲಬುರಗಿಯಿಂದ 630 ಕಿ.ಮೀ., 12 ತಾಸು ಪ್ರಯಾಣ!’

‘ಕಲ್ಲು ತಿಂದು, ಕಲ್ಲು ಕರಗಿಸೋ ವಯಸ್ಸು ನಿಂದು. ನೀನೇನು ನಡ್ಕೊಂಡಾ ಹೋಗ್ತೀಯ, ರೈಲಲ್ಲಿ ತಾನೇ ಹೋಗೋದು’.

‘ಹೋದ ಸಲ ರೈಲಿನ ಟಾಯ್ಲೆಟ್‌ನಲ್ಲೆಲ್ಲ ಕೂತ್ಕೊಂಡು ಬರಬೇಕಾಯ್ತು. ಈ ಸಲ ನಾನೊಲ್ಲೆ’.

‘ಇವೆಲ್ಲ ಪ್ರಾಕ್ಟಿಕಲ್ ಪರೀಕ್ಷೆ ಇದ್ದಂಗೆ ಕಣೊ. ಮುಂದೆ ನೀನು ಲೆಕ್ಚರರ್ರೋ ಟೀಚರ್ರೋ ಆಗೋನು. ಸ್ಕೂಲು, ಕಾಲೇಜಿನ ಟಾಯ್ಲೆಟ್ ವಾಸನೆ ಸಹಿಸ್ಕೊಬೇಕಾಗುತ್ತಲ್ಲ, ಈಗಿನಿಂದಲೇ ಅದರ ಅನುಭವ ಆಗಲಿ ಅಂತ ಹಾಗೆ ವ್ಯವಸ್ಥೆ ಮಾಡಿದಾರೆ ಸರ್ಕಾರದೋರು’.

‘ನಮ್ಮ ಜಿಲ್ಲೆಯ ಪೊಲಿಟಿಷಿಯನ್‌ಗಳು, ಪದವೀಧರ, ಶಿಕ್ಷಕರ ಕ್ಷೇತ್ರದ ಶಾಸಕರೇ ಮಾತಾಡ್ತಿಲ್ಲ. ನೀನು ಮಾತ್ರ ಅವರನ್ನ ಮೀರಿಸೋ ಹಾಗೆ ಮಾತಾಡ್ತಿದೀಯ’.

‘ಅಲ್ವೋ, ಪರೀಕ್ಷೆ ಇದ್ದಾಗ ಮಾತ್ರ ತಾನೇ ನೀನು ಎಕ್ಸಾಂ ಹಾಲ್‌ಗೆ ಹೋಗೋದು. ಅವರೂ ಹಾಗೇ, ಎಲೆಕ್ಷನ್ ಅನ್ನೋ ಎಕ್ಸಾಂ ಇದ್ದಾಗ ಮಾತ್ರ ಬರ್ತಾರೆ’ ನಕ್ಕರು ಅಪ್ಪ.

‘ನೀನ್ಯಾಕೋ ನನ್ನ ಬಿಡೋ ಹಾಗೆ ಕಾಣಲ್ಲ’ ಎನ್ನುತ್ತಲೇ ಹೊರಡಲು ಸಿದ್ಧನಾದ ಮಗ.

‘ಇದೇನೋ ಹಾಸಿಗೆ, ದಿಂಬು ಎಲ್ಲ ಇಟ್ಕೊಂಡಿದೀಯ? ಫೋಲ್ಡಿಂಗ್ ಚೇರ್ ಬೇರೆ ಇದೆ’.

‘ರೈಲಿನ ಬೋಗಿಯೊಳಗೆ ಮಲಗೋಕೆ ಜಾಗ ಇಲ್ಲ ಅಂದ್ರೆ ಕೂತ್ಕೊಳ್ಳೋಕೆ ಚೇರ್ ಬೇಕಲ್ಲ’.

‘ವಂದೇ ಭಾರತ್ ಟ್ರೈನ್‌ನಲ್ಲೇ ಹೋಗು’.

‘ಅದರಲ್ಲಿ ಹೋಗೋಕೆ ನಿನ್ನ ಒಂದು ತಿಂಗಳ ಸಂಬಳ ಬೇಕು, ಕೊಡ್ತೀಯಾ?’

ಸ್ವಲ್ಪ ಹೊತ್ತು ಸುಮ್ಮನಿದ್ದ ಅಪ್ಪ, ನಂತರ ಮತ್ತೆ ಕೇಳಿದರು, ‘ಅದೇನೋ ಬುಲೆಟ್ ರೈಲು ಬಿಡ್ತೀವಿ ಅಂದಿದ್ರಲ್ಲ, ಅದಾದರೂ ಬಂತಾ?’

‘ರೈಲು ಬಿಟ್ಟಿದ್ದಾರೆ...!’ ಎನ್ನುತ್ತಾ ಬ್ಯಾಗ್ ಏರಿಸಿಕೊಂಡು ಹೊರಟ ಮಗ.

ದಿನದ ಟ್ವೀಟ್

ತಪ್ಪು ಮಾಹಿತಿಗೆ ಶಿಕ್ಷೆಯಾಗಲಿ

ವಿಮಾನ ಪ್ರಯಾಣವು ಎರಡು ಗಂಟೆಗಿಂತಲೂ ಹೆಚ್ಚು ಕಾಲ ವಿಳಂಬವಾದರೆ ಪ್ರಯಾಣಿಕರಿಗೆ ಪೂರ್ತಿ ಹಣ ಮರುಪಾವತಿ ಮಾಡಬೇಕಾಗುತ್ತದೆ. ಹೀಗಾಗಿ, ಅವರು ಆರಂಭದಲ್ಲಿ ಸರಿಯಾದ ಮಾಹಿತಿ ನೀಡದೆ ನಿಮ್ಮನ್ನು ಅತಂತ್ರ ಸ್ಥಿತಿಯಲ್ಲಿ ಇರಿಸುತ್ತಾರೆ. ಇಂತಹ ತಪ್ಪುಮಾಹಿತಿ, ಅರೆಸತ್ಯ ಮತ್ತು ಸುಳ್ಳುಗಳ ವಿರುದ್ಧ ವಿಮಾನ ಪ್ರಯಾಣಿಕರು ಸಂಘಟಿತರಾಗಿ ಮೊಕದ್ದಮೆ ಹೂಡಲಿ ಎಂದು ಆಶಿಸುತ್ತೇನೆ.

ಅರುಣ್ ಬೋತ್ರ, ಐಪಿಎಸ್ ಅಧಿಕಾರಿ

ಕಿಡಿನುಡಿ



ಕೇರಳದಲ್ಲಿನ ಪರಿಷ್ಕೃತ ಶಾಲಾ ಪಠ್ಯ ಪುಸ್ತಕಗಳು ಸಂವಿಧಾನದ ಪ್ರಸ್ತಾವನೆಯನ್ನು ಒಳಗೊಳ್ಳಲಿವೆ. ಪಠ್ಯಕ್ರಮವು ಲಿಂಗತ್ವ ಸೂಕ್ಷ್ಮತೆಯನ್ನು ಹೊಂದಿರಲಿದೆ. ಪೋಕ್ಸೊ ನಿಯಮಗಳ ಬಗೆಗಿನ ಪಾಠಗಳು, ಪ್ರಜಾಸತ್ತಾತ್ಮಕ ಮತ್ತು ಧರ್ಮನಿರಪೇಕ್ಷ ಮೌಲ್ಯಗಳು ಹಾಗೂ ವೈಜ್ಞಾನಿಕ ಮನೋಧರ್ಮವನ್ನು ಒಳಗೊಂಡಿರಲಿದೆ. ಶಿಕ್ಷಣದ ಕೋಮುವಾದೀಕರಣದ ಪ್ರಯತ್ನಗಳಿಗೆ ಇದು ನಮ್ಮ ಪ್ರತಿಕ್ರಿಯೆಯಾಗಿದೆ.

ಥಾಮಸ್ ಐಸಾಕ್, ಸಿಪಿಎಂ ಕೇಂದ್ರ ಸಮಿತಿ ಸದಸ್ಯ

ಸಂಗತ

ಶೈಕ್ಷಣಿಕ ಸಮ್ಮೇಳನ: ಉದ್ದೇಶ ನೇಪಥ್ಯಕ್ಕೆ?

ಶೈಕ್ಷಣಿಕ ಆಸಕ್ತಿ ಹಿನ್ನೆಲೆಗೆ ಸರಿದು ಪ್ರವಾಸದ ಉಮೇದು ಮುನ್ನೆಲೆಗೆ ಬಂದಿದೆ

• ರಾಜಕುಮಾರ ಕುಲಕರ್ಣಿ

ಬೆಳಿಗ್ಗೆ ವಾಕಿಂಗ್ ವೇಳೆ ಎದುರಾದ ಸ್ನೇಹಿತರು, ತಮ್ಮ ಬೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ನಡೆದ ಸಮ್ಮೇಳನದಲ್ಲಿ ಪಾಲ್ಗೊಂಡ ಅನುಭವವನ್ನು ಹಂಚಿಕೊಂಡರು. ಮಾತಿನುದ್ದಕ್ಕೂ ತಾವು ಭೇಟಿ ನೀಡಿದ ನಗರದ ವಿಶೇಷ, ಪ್ರೇಕ್ಷಣೀಯ ಸ್ಥಳಗಳು, ಕಡಲ ಕಿನಾರೆ, ಅಲ್ಲಿನ ಜನಪ್ರಿಯ ತಿಂಡಿ ತಿನಿಸು ಮತ್ತು ದೇವಸ್ಥಾನಗಳ ಕುರಿತು ಆಸಕ್ತಿಯಿಂದ ವಿವರಿಸಿದರು. ಸಮ್ಮೇಳನದಲ್ಲಿ ನಡೆದ ಚರ್ಚೆ, ಸಂವಾದ, ಗೋಷ್ಠಿಗಳ ಕುರಿತು ಏನನ್ನೂ ಹೇಳಲಿಲ್ಲ. ನಾನೇ ಮುಂದಾಗಿ ವಿಚಾರಿಸಿದಾಗ, ‘ಅಯ್ಯೋ ಅದೇನು ಹೇಳಿಕೊಳ್ಳುವಂತಹದ್ದಲ್ಲ. ಸಮ್ಮೇಳನಕ್ಕೆ ಬಂದವರಲ್ಲಿ ಹೆಚ್ಚಿನವರು ಪ್ರವಾಸಕ್ಕೆಂದೇ ಬಂದಿದ್ದರು. ಕೆಲವರು ಕುಟುಂಬಸಮೇತರಾಗಿ ಬಂದು ಮೋಜು ಮಸ್ತಿ ಮಾಡಿದರು’ ಎಂದರು.

ಶೈಕ್ಷಣಿಕ ಸಮ್ಮೇಳನಗಳ ಉದ್ದೇಶ ವಿಫಲವಾಗುತ್ತಿರುವುದಕ್ಕೆ ಪ್ರತಿನಿಧಿಗಳು ತಮ್ಮ ಪೂರ್ಣ ಸಮಯವನ್ನು ಸಮ್ಮೇಳನದ ಚಟುವಟಿಕೆಗಳಿಗೆ ವಿನಿಯೋಗಿಸದಿರುವುದೇ ಕಾರಣ. ಆಯೋಜಕರು ಕೂಡ ಪ್ರತಿನಿಧಿಗಳ ಸಂಖ್ಯೆ ಹೆಚ್ಚಿಸಬೇಕೆಂಬ ಕಾರಣಕ್ಕೆ ಹಾಜರಾತಿಯಲ್ಲಿ ವಿನಾಯಿತಿ ಕೊಡುವುದರಿಂದ, ಸಮ್ಮೇಳನಗಳು ಪ್ರವಾಸಕೇಂದ್ರಿತ ಆಗುತ್ತಿವೆ. ಸಾಮಾನ್ಯವಾಗಿ ಪ್ರತಿನಿಧಿಗಳಿಗೆ ಕುಟುಂಬದ ಸದಸ್ಯರನ್ನೂ ಜೊತೆಗೆ ಕರೆತರಲು ಆಯೋಜಕರು ಅವಕಾಶ ಕೊಡುವುದುಂಟು. ಹೀಗೆ ಬರುವವರು ಹೆಚ್ಚಿನ ಸಮಯವನ್ನು ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆಯಲ್ಲಿ ಕಳೆದು, ಕೊನೆಯ ದಿನ ಪ್ರಮಾಣ ಪತ್ರವನ್ನು ಸ್ವೀಕರಿಸಿ ತೆರಳುತ್ತಾರೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗ, ರಾಷ್ಟ್ರೀಯ ವೈದ್ಯಕೀಯ ಆಯೋಗ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನಂತಹ ಸಂಸ್ಥೆಗಳು ಬೋಧಕರು ಸಮ್ಮೇಳನಗಳಲ್ಲಿ ಭಾಗವಹಿಸುವುದು ಮತ್ತು ಸಂಶೋಧನಾ ಲೇಖನ ಮಂಡಿಸುವುದನ್ನು ಕಡ್ಡಾಯಗೊಳಿಸಿವೆ. ಹೀಗಾಗಿ, ಹೆಚ್ಚಿನ ಸಂಖ್ಯೆಯ ಬೋಧಕರು ಆಸಕ್ತಿಗಿಂತ ಹೆಚ್ಚಾಗಿ ಇದನ್ನೊಂದು ಅನಿವಾರ್ಯ ನಿಯಮ ಎನ್ನುವಂತೆ ಪಾಲಿಸುತ್ತಾರೆ. ಇನ್ನು ವೃತ್ತಿನಿರತರ ಸಂಘಗಳು ಆಯೋಜಿಸುವ ಸಮ್ಮೇಳನಗಳು ಜಗಳ, ಕಿರುಚಾಟ, ಪರಸ್ಪರ ನಿಂದನೆಯಲ್ಲಿ ಕೊನೆಗೊಳ್ಳುವುದೇ ಹೆಚ್ಚು. ಮೊದಲ ದಿನ ಮಾತ್ರ ಒಂದಿಷ್ಟು ಶೈಕ್ಷಣಿಕ ವಾತಾವರಣ ನೆಲೆಗೊಂಡಿರುತ್ತದೆ. ಕೊನೆಯ ದಿನವು ಸಂಘದ ಅಧ್ಯಕ್ಷರು, ಪದಾಧಿಕಾರಿಗಳ ಆಯ್ಕೆ ಹಾಗೂ ನೇಮಕಾತಿ ಪ್ರಕ್ರಿಯೆಗೆ ಮೀಸಲಾಗಿರುತ್ತದೆ. ವರ್ಷದ ಖರ್ಚು-ವೆಚ್ಚದ ವರದಿ ಓದುವಾಗ ವೇದಿಕೆಯು ಅಕ್ಷರಶಃ ರಣಾಂಗಣದ ರೂಪು ತಳೆಯುತ್ತದೆ. ಸದಸ್ಯರು ಮತ್ತು ಪದಾಧಿಕಾರಿಗಳ ನಡುವೆ ವಾಗ್ವಾದ ತಾರಕಕ್ಕೇರಿ, ಪರಿಸ್ಥಿತಿ ಕೈ ಕೈ ಮಿಲಾಯಿಸುವ ಹಂತಕ್ಕೆ ಹೋಗಿ ಸಮ್ಮೇಳನದ ಮೂಲ ಉದ್ದೇಶವೇ ಮೂಲೆಗುಂಪಾಗುತ್ತದೆ.

ಪುಸ್ತಕ ಪ್ರಕಾಶಕರು ಮತ್ತು ಶೈಕ್ಷಣಿಕ ಸಾಮಗ್ರಿಗಳ ಉತ್ಪಾದಕರು ತಮ್ಮ ಉತ್ಪನ್ನಗಳ ಪ್ರಚಾರಕ್ಕಾಗಿ ಸಮ್ಮೇಳನಗಳ ಪ್ರಾಯೋಜಕರಾಗುವುದುಂಟು. ಸಮ್ಮೇಳನದಲ್ಲಿ ಪಾಲ್ಗೊಳ್ಳಲು ತಗಲುವ ಪೂರ್ಣ ವೆಚ್ಚವನ್ನು ಪ್ರಾಯೋಜಕರು ಭರಿಸುವುದರಿಂದ, ಬೋಧಕರು ಮತ್ತು ಸಂಶೋಧಕರು ಇದರ ಲಾಭ ಪಡೆದು ಧನ್ಯರಾಗುತ್ತಾರೆ. ಒಟ್ಟಾರೆ, ಉಚಿತ ಪ್ರಾಯೋಜಕತ್ವದ ಪರಿಣಾಮವಾಗಿ, ಶೈಕ್ಷಣಿಕ ಆಸಕ್ತಿ ಹಿನ್ನೆಲೆಗೆ ಸರಿದು ಪ್ರವಾಸದ ಉಮೇದು ಮುನ್ನೆಲೆಗೆ ಬರುತ್ತದೆ.

ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿಯು (ನ್ಯಾಕ್) ಪದವಿ ಕಾಲೇಜುಗಳಲ್ಲಿ ಶೈಕ್ಷಣಿಕ ಗುಣಮಟ್ಟದ ಸುಧಾರಣೆಗಾಗಿ ಹಲವಾರು ನಿಯಮಗಳನ್ನು ಜಾರಿಗೆ ತಂದಿದೆ. ಪದವಿ ಕಾಲೇಜುಗಳಲ್ಲಿ ಪ್ರತಿವರ್ಷ ಶೈಕ್ಷಣಿಕ ಸಮ್ಮೇಳನಗಳ ಆಯೋಜನೆಯನ್ನು ಕಡ್ಡಾಯಗೊಳಿಸಲಾಗಿದೆ. ಉಪನ್ಯಾಸಕರು ವರ್ಷದಲ್ಲಿ ನಿರ್ದಿಷ್ಟ ಸಂಖ್ಯೆಯ ಸಮ್ಮೇಳನಗಳಲ್ಲಿ ಪಾಲ್ಗೊಳ್ಳುವುದು ಮತ್ತು ಸಂಶೋಧನಾ ಲೇಖನ ಮಂಡಿಸುವುದು ಅಗತ್ಯವಾಗಿದೆ. ಪರಿಣಾಮವಾಗಿ, ಮಂಡಳಿಯ ನಿಯಮಗಳನ್ನು ಅನುಸರಿಸುವ ಒತ್ತಡದಲ್ಲಿ ಸಮ್ಮೇಳನಗಳ ಆಯೋಜನೆ ಮತ್ತು ಪಾಲ್ಗೊಳ್ಳುವಿಕೆ ಅನಿವಾರ್ಯ ಎನ್ನುವಂತಾಗಿರುವುದು ದುರ್ದೈವದ ಸಂಗತಿ.

ಈ ನಡುವೆ, ಹೆಚ್ಚು ಅಂಕಗಳು ಲಭ್ಯವಾಗುವ ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ಆಯೋಜಿಸುವ ವ್ಯಾಮೋಹ ಈಗ ಸೋಂಕಿನಂತೆ ವ್ಯಾಪಕವಾಗುತ್ತಿದೆ. ನೆರೆಯ ಶ್ರೀಲಂಕಾ, ನೇಪಾಳ, ಸಿಂಗಪುರದಿಂದ ಒಂದಿಬ್ಬರು ಪ್ರತಿನಿಧಿಗಳು ಭಾಗವಹಿಸಿದರೂ ಸಮ್ಮೇಳನಕ್ಕೆ ಅಂತರರಾಷ್ಟ್ರೀಯ ಮಾನ್ಯತೆ ಪ್ರಾಪ್ತವಾಗುತ್ತದೆ. ಪರಿಣಾಮವಾಗಿ, ಹೋಬಳಿಯಂಥ ಸಣ್ಣ ಊರುಗಳಲ್ಲಿನ ಪದವಿ ಕಾಲೇಜುಗಳಲ್ಲಿ ಕೂಡ ಈಗ ಅಂತರರಾಷ್ಟ್ರೀಯ ಸಮ್ಮೇಳನ ಏರ್ಪಡಿಸಲಾಗುತ್ತಿದೆ.

ಕೋವಿಡ್ ಸಂದರ್ಭದಲ್ಲಿ ಶೈಕ್ಷಣಿಕ ಸಮ್ಮೇಳನಗಳನ್ನು ಆನ್‌ಲೈನ್ ಮೂಲಕ ಆಯೋಜಿಸಲಾಯಿತು. ಪ್ರತಿನಿಧಿಗಳೂ ನೋಂದಣಿ ಶುಲ್ಕದಂತಹ ಖರ್ಚುಗಳಿಲ್ಲದೆ ಇರುವುದರಿಂದ ಬಹಳ ಉಮೇದಿನಿಂದಲೇ ಈ ವೆಬಿನಾರ್‌ಗಳಲ್ಲಿ ಪಾಲ್ಗೊಂಡು ಪ್ರಮಾಣಪತ್ರಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡರೇ ವಿನಾ ಶೈಕ್ಷಣಿಕವಾಗಿ ಯಾವ ಉನ್ನತಿಯನ್ನೂ ಸಾಧಿಸಲಿಲ್ಲ.

‘ಈ ನೆಲದ ಮೇಲಿನ ಅತಿದೊಡ್ಡ ಕಸವೆಂದರೆ, ಪ್ರಶ್ನಿಸುವ ಸಾಮರ್ಥ್ಯವನ್ನು ಕಳೆದುಕೊಂಡ ಮೆದುಳು’ ಎಂದಿದ್ದಾರೆ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್. ಪ್ರಶ್ನೆ, ಚರ್ಚೆ, ಸಂವಾದದ ಮೂಲಕವೇ ಹೊಸ ಚಿಂತನೆಗಳು ಮತ್ತು ಸಾಧ್ಯತೆಗಳು ಹುಟ್ಟುತ್ತವೆ. ವಿಪರ್ಯಾಸವೆಂದರೆ, ಚರ್ಚೆ ಮತ್ತು ಸಂವಾದ ಇಂದಿನ ಬಹುಪಾಲು ಶೈಕ್ಷಣಿಕ ಸಮ್ಮೇಳನಗಳಲ್ಲಿ ಗೋಚರಿಸುತ್ತಿಲ್ಲ. ಹೊಸ ಹೊಳಹುಗಳು ಹಾಗೂ ಚಿಂತನೆಗಳು ಸಮ್ಮೇಳನಗಳ ಫಲಶ್ರುತಿಯಾಗಬೇಕು. ಆಗಮಾತ್ರ ಶೈಕ್ಷಣಿಕ ಸಮ್ಮೇಳನಗಳ ಉದ್ದೇಶ ಸಾಕಾರಗೊಂಡು ಅವುಗಳಿಗೆ ಒಂದು ಘನತೆ ಮತ್ತು ಅರ್ಥ ಪ್ರಾಪ್ತವಾಗುವುದು.

ವಾಚಕರ ವಾಣಿ

ಹಾಲಿ ಶಾಸಕರು ಹಿಂದೆ ಸರಿಯಲಿ

ಲೋಕಸಭಾ ಚುನಾವಣೆ ಸಮೀಪಿಸುತ್ತಿರುವಂತೆಯೇ ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಆರಂಭಿಸಿವೆ. ವಿವಿಧ ರಾಜ್ಯಗಳಲ್ಲಿ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಕೆಲವು ಸದಸ್ಯರನ್ನು ಲೋಕಸಭಾ ಚುನಾವಣಾ ಅಭ್ಯರ್ಥಿಗಳನ್ನಾಗಿಸುವ ಚಿಂತನೆ ನಡೆದಿದೆ. ಇಂತಹವರು ಗೆಲುವು ಸಾಧಿಸಿದರೆ ವಿಧಾನಸಭೆ ಅಥವಾ ವಿಧಾನಪರಿಷತ್ತಿನ ಸದಸ್ಯತ್ವಕ್ಕೆ ರಾಜೀನಾಮೆ ನೀಡಬೇಕಾಗುತ್ತದೆ. ಹಾಗಾದಲ್ಲಿ ಅವರ ಸ್ಥಾನ ತುಂಬಲು ಮರು ಚುನಾವಣೆ ಅನಿವಾರ್ಯವಾಗುತ್ತದೆ. ಅದಕ್ಕಾಗಿ ರಾಜ್ಯ ಸರ್ಕಾರವು ಕೋಟ್ಯಂತರ ರೂಪಾಯಿ ವೆಚ್ಚ ಮಾಡಬೇಕಾಗುವುದರಿಂದ, ಸಾರ್ವಜನಿಕರ ತೆರಿಗೆ ಹಣ ಸದ್ಬಳಕೆಯಾದಂತೆ ಆಗುವುದಿಲ್ಲ.

ರಾಜಕೀಯ ಪಕ್ಷಗಳು ಈ ದಿಸೆಯಲ್ಲಿ ಹೊಣೆಗಾರಿಕೆಯಿಂದ ನಡೆದುಕೊಳ್ಳಬೇಕು. ಹಾಲಿ ಶಾಸಕರನ್ನು ಲೋಕಸಭಾ ಚುನಾವಣೆ ಅಖಾಡಕ್ಕೆ ಇಳಿಸದಂತೆ ಮತದಾರರ ಕಡೆಯಿಂದಲೂ ಪಕ್ಷಗಳ ಮೇಲೆ ಒತ್ತಡ ಬರಬೇಕು.

ಬಸವರಾಜ ಹುಡೇದಗಡ್ಡಿ, ಬೆಂಗಳೂರು

ಈ ಸಿನಿಮಾದಲ್ಲಿ ಪಾತ್ರಧಾರಿಗಳು ಸಿಕ್ಕಿಬೀಳರು!

ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಹೊಸದುರ್ಗ ಶಾಸಕ ಬಿ.ಜಿ.ಗೋವಿಂದಪ್ಪ ಮತ್ತು ಮಾಜಿ ಶಾಸಕ ಗೂಳಿಹಟ್ಟಿ ಶೇಖರ್ ಅವರು ಪರಸ್ಪರ ಆರೋಪಗಳನ್ನು ಮಾಡಿಕೊಂಡಿರುವುದು ವರದಿಯಾಗಿದೆ. ಈ ಆರೋಪಗಳು ನಿಜವೇ ಆಗಿದ್ದಲ್ಲಿ, ಇಬ್ಬರೂ ತಪ್ಪಿತಸ್ಥರೇ ಆಗುತ್ತಾರೆ. ಅದನ್ನೆಲ್ಲ ಮುಚ್ಚಿಹಾಕಲು ಜನರಲ್ಲಿ ಗುಂಪುಗಾರಿಕೆ ಉಂಟುಮಾಡಿ, ತಮ್ಮ ತಮ್ಮ ಬೇಳೆ ಬೇಯಿಸಿಕೊಳ್ಳುವುದು ಈ ಆರೋಪ, ಪ್ರತ್ಯಾರೋಪದ ಒಳಹುನ್ನಾರ ಇರಬಹುದು. ನಮ್ಮ ದೇಶದಲ್ಲಿ ಇಂತಹ ಹುನ್ನಾರಗಳು ನಡೆಯುತ್ತಲೇ ಇರುತ್ತವೆ. ಇದು ನಾಟಕವಲ್ಲ ಸಿನಿಮಾ. ನಾಟಕವಾಗಿದ್ದರೆ ಸಭ್ಯವೇಷದ ಕಪಟ ಪಾತ್ರಧಾರಿಗಳು ಪ್ರೇಕ್ಷಕರ ಕೈಗೆ ಸಿಕ್ಕಿಬೀಳುತ್ತಿದ್ದರು!

ದಾಸೇಗೌಡ ಎಂ.ಆರ್., ಚಿತ್ರದುರ್ಗ

ಮಾತೇ ಮಾಣಿಕ್ಯ ಎಂದ ನಾಡಿನಲ್ಲಿ...

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಸಂಸದ ಅನಂತಕುಮಾರ ಹೆಗಡೆ ಅವರು ಏಕವಚನದಲ್ಲಿ ಟೀಕೆ ಮಾಡಿರುವುದನ್ನು ನಾವು ಒಪ್ಪುವುದಿಲ್ಲ’ ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಅವರು ಹೇಳಿರುವುದು (ಪ್ರ.ವಾ., ಜ. 17) ನಿಜಕ್ಕೂ ಒಳ್ಳೆಯ ಬೆಳವಣಿಗೆ. ಏಕೆಂದರೆ ನಮ್ಮ ನಮ್ಮ ಮನೆಯ ಕಸವನ್ನು ನಾವೇ ಗುಡಿಸಿ ಹೊರಹಾಕಬೇಕು ಅಲ್ಲವೇ? ಬಿಜೆಪಿಯೊಂದೇ ಅಲ್ಲ ಎಲ್ಲ ಪಕ್ಷಗಳೂ ಇಂತಹ ಸಡಿಲ ನಾಲಿಗೆಯವರನ್ನು ನಿಯಂತ್ರಿಸಬೇಕು. ಮಾತೇ ಮಾಣಿಕ್ಯ ಎಂದ ನಾಡು ನಮ್ಮದು. ಆದ್ದರಿಂದ, ಮಾತು ದೇಶವನ್ನು ಕಟ್ಟುವುದಕ್ಕೆ ನೆರವಾಗಬೇಕೇ ವಿನಾ ಕ್ಷೋಭೆ ಸೃಷ್ಟಿಗಲ್ಲ. ಅದರಲ್ಲೂ ರಾಜಕಾರಣಿಗಳು ಮಾತನಾಡುವಾಗ ತುಂಬಾ ಎಚ್ಚರ ವಹಿಸಬೇಕು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಭವಿಷ್ಯದ ಪೀಳಿಗೆಗಾಗಿ ಉಳಿಯಲಿ ಸ್ಟಡ್ ಫಾರಂ

ಕುಣಿಗಲ್‌ನಲ್ಲಿರುವ ಕುದುರೆ ತಳಿ ಸಂವರ್ಧನಾ ಕೇಂದ್ರವು (ಸ್ಟಡ್ ಫಾರಂ) ಟಿಪ್ಪು ಸುಲ್ತಾನ್ ಕಾಲದಿಂದಲೂ ಚಾಲನೆಯಲ್ಲಿದ್ದು, ಕುಣಿಗಲ್ ತಾಲ್ಲೂಕಿನ ಗೌರವವನ್ನು ಹೆಚ್ಚಿಸಿದೆ. ಈ ಪ್ರದೇಶದ ಸುಮಾರು 500 ಎಕರೆ ವಿಸ್ತೀರ್ಣವು ಬಸ್‌ನಿಲ್ದಾಣ, ಐ.ಬಿ. ಕಾಲೇಜು, ಸರ್ಕಾರಿ ಕಚೇರಿಗಳು ಬಂದು ಸ್ವಲ್ಪ ಮಟ್ಟಿಗೆ ಕಡಿಮೆ ಆಗಿರಬಹುದು. ಆದರೆ ಇನ್ನುಳಿದ ಅಷ್ಟೊಂದು ದೊಡ್ಡ ಬಯಲನ್ನು ಬಡಾವಣೆ ಮಾಡಿ ಶ್ರೀಮಂತರಿಗೆ ಪರಭಾರೆ ಮಾಡುವ ಕೆಲಸಕ್ಕೆ ಹುನ್ನಾರ ನಡೆಯುತ್ತಿರುವುದು ಖಂಡನೀಯ. ಈ ಕೇಂದ್ರದಲ್ಲಿ ಹಿಂದಿನಿಂದಲೂ ಅಮೆರಿಕ, ರಷ್ಯಾ, ಬ್ರಿಟನ್, ಜೋರ್ಡನ್‌ನಂತಹ ದೇಶಗಳಿಂದ ಬೇರೆ ಬೇರೆ ತಳಿಯ ಕುದುರೆಗಳನ್ನು ತರಿಸಿ, ಸಂವರ್ಧನೆ ಮಾಡಿ, ಬೆಳೆದ ಕುದುರೆಗಳನ್ನು ದೇಶ ವಿದೇಶಗಳಲ್ಲಿ ನಡೆಯುವ ಕುದುರೆ ಪಂದ್ಯಗಳು ಮತ್ತು ಸೇನೆಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ.

ಈಗ ಇಂತಹ ಐತಿಹಾಸಿಕ ಕೇಂದ್ರವನ್ನು ಮುಚ್ಚಿ ಬಡಾವಣೆ ನಿರ್ಮಿಸಿದರೆ, ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ. ಬೆಂಗಳೂರಿನ ಸುತ್ತಮುತ್ತ ಇರುವ ಯಾವ ತಾಲ್ಲೂಕಿನಲ್ಲೂ ಇಷ್ಟೊಂದು ದೊಡ್ಡ ಬಯಲಿಲ್ಲ. ಸ್ಟಡ್ ಫಾರಂ ಅನ್ನು ಈಗಿರುವಂತೆ ಉಳಿಸಿಕೊಂಡು ಅದರಲ್ಲೊಂದು ಎತ್ತರದ ವೀಕ್ಷಣಾ ಗೋಪುರ ನಿರ್ಮಿಸಿ, ಪ್ರವಾಸಿ ಕೇಂದ್ರ ಮಾಡಬಹುದು. ಜೊತೆಗೆ ಜಿಲ್ಲೆಯ ಜನಪದ ಮತ್ತು ಜನಾಂಗೀಯ ಅಧ್ಯಯನಕ್ಕೆ ನೆರವಾಗುವಂತಹ ವಸ್ತುಸಂಗ್ರಹಾಲಯವನ್ನು ಮಾಡಬಹುದು. ಸರ್ಕಾರವು ಮುಂದಿನ ಪೀಳಿಗೆಗಾಗಿ ಇದನ್ನು ಉಳಿಸಿ, ಸದ್ವಿನಿಯೋಗ ಆಗುವಂತೆ ಮಾಡಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ದಂಡವಷ್ಟೇ ಸಾಲದು...

ಅರ್ಜಿದಾರರೊಬ್ಬರ ವೇತನ ತಾರತಮ್ಯ ಸರಿಪಡಿಸುವಂತೆ ತಾನು ನೀಡಿದ್ದ ಆದೇಶವನ್ನು ಮೂರೂವರೆ ವರ್ಷಗಳಾದರೂ ಪಾಲಿಸದೇ ಇರುವ ಬಗ್ಗೆ ಸರ್ಕಾರವನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದ್ದಾಗಿ ವರದಿಯಾಗಿದೆ (ಪ್ರ.ವಾ., ಜ. 17). ಈ ಸಂಬಂಧ ನ್ಯಾಯಾಂಗ ನಿಂದನೆ ಎಸಗಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಆರು ಜನ ಆರೋಪಿಗಳಿಂದ ₹ 5 ಲಕ್ಷ ದಂಡ ವಸೂಲು ಮಾಡುವಂತೆ ನ್ಯಾಯಪೀಠ ಆದೇಶಿಸಿರುವುದು ಸೂಕ್ತ ಕ್ರಮವಾಗಿದೆ.

ಈ ಹಿಂದೆ, ತನ್ನ ಆದೇಶವನ್ನು ಪಾಲಿಸದೆ ನ್ಯಾಯಾಂಗ ನಿಂದನೆ ಎಸಗಿದ್ದ ಹಿರಿಯ ಐಎಎಸ್ ಅಧಿಕಾರಿಯೊಬ್ಬರಿಗೆ ಸುಪ್ರೀಂ ಕೋರ್ಟ್ ಒಂದು ತಿಂಗಳ ಕಾರಾಗೃಹ ವಾಸದ ಶಿಕ್ಷೆ ವಿಧಿಸಿದ್ದಲ್ಲದೆ, ಅವರ ಕ್ಷಮಾಪಣೆ ಮತ್ತು ಶಿಕ್ಷೆ ಕಡಿತದ ಮನವಿಯನ್ನು ಪುರಸ್ಕರಿಸಿರಲಿಲ್ಲ. ಅದರಿಂದ ಸರ್ಕಾರಿ ಸಿಬ್ಬಂದಿ ಪಾಠವನ್ನೇನೂ ಕಲಿತಂತಿಲ್ಲ. ನ್ಯಾಯಾಂಗ ನಿಂದನೆಯ ಅರ್ಜಿ ಕೋರ್ಟ್ ಮುಂದೆ ಬರುವುದನ್ನು ಅರಿತಾದರೂ, ಅಧಿಕಾರಿಗಳು ಆ ದಿನಾಂಕದೊಳಗೆ ವೇತನ ತಾರತಮ್ಯ ಸರಿಪಡಿಸಿ, ನ್ಯಾಯಾಲಯದ ಗಮನಕ್ಕೆ ತರುವ ಕನಿಷ್ಠ ಮಾನವೀಯತೆ ಮತ್ತು ಸೂಕ್ಷ್ಮ ಮನೋಭಾವವನ್ನಾದರೂ ಹೊಂದಬೇಕಿತ್ತು. ಅದನ್ನು ಮಾಡದೆ, ‘ಅರ್ಜಿಗೆ ಸಂಬಂಧಿಸಿದ ಪ್ರಸ್ತಾವ ಹಣಕಾಸು ಇಲಾಖೆಯ ಒಪ್ಪಿಗೆಗಾಗಿ ಕಾಯುತ್ತಿದ್ದು, ಕೋರ್ಟ್ ಆದೇಶ ಪಾಲಿಸಲು ಆರು ವಾರಗಳ ಕಾಲಾವಕಾಶ ನೀಡಬೇಕು’ ಎಂದು ಸರ್ಕಾರಿ ವಕೀಲರು ಸಂಕೋಚವಿಲ್ಲದೆ, ಧೈರ್ಯವಾಗಿಯೇ ಮನವಿ ಮಾಡಿದ್ದಾರೆ. ನ್ಯಾಯಾಲಯದ ಆದೇಶಕ್ಕೆ ಕವಡೆಕಾಸಿನ ಕಿಮ್ಮತ್ತನ್ನೂ ನೀಡದ ಸರ್ಕಾರಿ ಸಿಬ್ಬಂದಿಯ ವರ್ತನೆಯನ್ನು ಗಮನಿಸಿದರೆ, ದಂಡವನ್ನು ತೆರಲು ಅವರು ಸಮರ್ಥರಾಗಿದ್ದು ಅದಕ್ಕೆ ಸಿದ್ಧರಾಗಿಯೇ ಇರುವಂತೆ ತೋರುತ್ತದೆ. ಹೀಗಾಗಿ, ಅದೊಂದೇ ಶಿಕ್ಷೆ ಅವರ ಮೇಲೆ ಹೆಚ್ಚಿನ ಪರಿಣಾಮವೇನನ್ನೂ ಬೀರುವುದಿಲ್ಲವಾದ್ದರಿಂದ, ಅದರ ಜೊತೆಗೆ ಜೈಲು ಶಿಕ್ಷೆಯನ್ನೂ ವಿಧಿಸಬೇಕು. ಆಗ ಅಂತಹ ಅಸೂಕ್ಷ್ಮ ಜೀವಿಗಳು ಸ್ವಲ್ಪವಾದರೂ ತಗ್ಗಬಹುದು, ಬಗ್ಗಬಹುದು. ಅದು ಇತರರಿಗೆ ಎಚ್ಚರಿಕೆಯ ಪಾಠವಾದರೂ ಆದೀತು!

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

25 ವರ್ಷಗಳ ಹಿಂದೆ

ಸೋಮವಾರ, 18-1-1999

• ಮತಾಂತರ ನಿಷೇಧವಿಲ್ಲ: ವಾಜಪೇಯಿ

ತಿರುವನಂತಪುರ, ಜ. 17–ಮತಾಂತರವನ್ನು ನಿಷೇಧಿಸಲು ಸಂವಿಧಾನದಲ್ಲಿ ತಿದ್ದುಪಡಿ ಮಾಡುವ ಇಲ್ಲವೇ ಹೊಸ ಕಾನೂನನ್ನು ರಚಿಸುವ ಯಾವುದೇ ಪ್ರಸ್ತಾವ ತಮ್ಮ ಸರ್ಕಾರದ ಮುಂದಿಲ್ಲ ಎಂದು ಪ್ರಧಾನಿ ವಾಜಪೇಯಿ ಅವರು ಸ್ಪಷ್ಟಪಡಿಸಿದ್ದಾರೆ.

ಮತಾಂತರ ಕುರಿತು ರಾಷ್ಟ್ರೀಯ ಚರ್ಚೆಯಾಗಲಿ ಎಂದು ತಾವು ‘ಕರೆ ನೀಡಿದ್ದು ಸದ್ಭಾವನೆ ಮತ್ತು ವಿಶ್ವಾಸ ಮೂಡಿಸಲು ಮಾತ್ರ’ ಎಂದು ಅವರು ಹೇಳಿದರು.

ಕೇರಳ ರಾಜ್ಯ ಭೇಟಿ ಮುಗಿಸಿ ದೆಹಲಿಗೆ ತೆರಳುವ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ‘ಭಾರತದಲ್ಲಿ ಯಾವುದೇ ಧರ್ಮದವರಿಗೆ ತಾವು ದೇಶದಲ್ಲಿ ಸುರಕ್ಷಿತರಲ್ಲ ಎಂಬ ಭಾವನೆ ಮೂಡಬಾರದು’ ಎಂದು ಹೇಳಿದರು.

• ಪಟೇಲ್–ದೇವೇಗೌಡ ನಡುವೆ ‘ಒಳ ಒಪ್ಪಂದ’ದ ಶಂಕೆ

ಬೆಂಗಳೂರು, ಜ. 17–ರಾಜ್ಯ ಜನತಾದಳದ ಅಧ್ಯಕ್ಷ ಸ್ಥಾನದಿಂದ ಬಿ.ಎಲ್.ಶಂಕರ್ ಅವರನ್ನು ಪದಚ್ಯುತಗೊಳಿಸುವ ವಿಚಾರದಲ್ಲಿ ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡರ ವಿರುದ್ಧ ಬಂಡಾಯವೆದ್ದಿರುವ ಹಿರಿಯ ಒಕ್ಕಲಿಗ ಸಚಿವರನ್ನು ಶಂಕೆ ಕಾಡಲಾರಂಭಿಸಿದೆ.

ದೇವೇಗೌಡ ಮತ್ತು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರ ನಡುವೆ ‘ಒಳ ಒಪ್ಪಂದ’ವೇನಾದರೂ ಆಗಿತ್ತೇ ಎಂಬುದೇ ಆ ಶಂಕೆ. ಪಕ್ಷದ ರಾಜಕೀಯ ವ್ಯವಹಾರಗಳ ಸಮಿತಿ ಸಭೆಯಲ್ಲಿ ತಮ್ಮ ಸಮ್ಮುಖದಲ್ಲೇ ಶಂಕರ್ ಅವರನ್ನು ಅಧ್ಯಕ್ಷ ಸ್ಥಾನದಿಂದ ತೆಗೆದು ಹಾಕುವ ಬಗ್ಗೆ ನಿರ್ಧಾರವಾದರೂ ಪಟೇಲ್ ಅವರು ಪ್ರತಿಭಟಿಸದೆ ಅದನ್ನು ಒಪ್ಪಿಕೊಂಡು ಬಂದಿರುವುದು, ಹಿರಿಯ ಒಕ್ಕಲಿಗ ಸಚಿವರಲ್ಲಿ ಈ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 18-1-1974

• ಬಚ್ಚಿಟ್ಟ ಆಹಾರಧಾನ್ಯ ಹೊರತೆಗೆಯಲು ವ್ಯಾಪಕ ಕ್ರಮ

ಬೆಂಗಳೂರು, ಜ. 17 – ಇನ್ನು ಆರು ವಾರಗಳಲ್ಲಿ ಉದ್ದೇಶಿತ 2.5 ಲಕ್ಷ ಟನ್ನುಗಳ ಆಹಾರ ಸಂಗ್ರಹ ಗುರಿಯನ್ನು ಸಾಧಿಸಲು ಹಟ ತೊಟ್ಟಿರುವ ಸರ್ಕಾರ, ಕಾಳಸಂತೆ ಮತ್ತು ಅಕ್ರಮ ಸಂಗ್ರಹದಲ್ಲಿರುವ ಆಹಾರಧಾನ್ಯಗಳನ್ನು ಹೊರತೆಗೆಯಲು ವ್ಯಾಪಕ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಆಹಾರ ಸಚಿವ ಕೆ.ಎಚ್. ಪಾಟೀಲರ ನೇತೃತ್ವದಲ್ಲಿ ಕಳೆದ ಒಂದು ವಾರದಿಂದ ಈ ಕಾರ್ಯ ಈಗಾಗಲೇ ಆರಂಭವಾಗಿದ್ದು ಸುಮಾರು ಒಂದು ಕೋಟಿ ರೂ. ಬೆಲೆಬಾಳುವ ಆಹಾರಧಾನ್ಯಗಳು ಅಕ್ರಮ ದಾಸ್ತಾನಿನಿಂದ ಹೊರಬಂದಿವೆ.

• ಗುಜರಾತಿನಲ್ಲಿ ಧಾನ್ಯ ಉಗ್ರಾಣಗಳ ಲೂಟಿ: ಎರಡು ಕಡೆ ಗುಂಡು

ಅಹ್ಮದಾಬಾದ್, ಜ. 17–ಗುಜರಾತಿನ ಮೂರು ಪಟ್ಟಣಗಳಲ್ಲಿ ಸರ್ಕಾರಿ ಧಾನ್ಯ ಉಗ್ರಾಣಗಳನ್ನು ಲೂಟಿ ಮಾಡಿದ ದೊಂಬಿಯನ್ನು ಚದುರಿಸಲು ನಿನ್ನೆ ರಾತ್ರಿ ಮತ್ತು ಈ ದಿನ ಎರಡು ಕಡೆ ಪೊಲೀಸರು ಒಟ್ಟು ಐದು ಸುತ್ತು ಗುಂಡು ಹಾರಿಸಿದರು.

ಪೊಲೀಸ್ ಗೋಲಿಬಾರಿನಿಂದ ಯಾರಿಗೂ ಗಾಯಗಳಾಗಿಲ್ಲ ಎಂದು ವರದಿಯಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನವೋದ್ಯಮಗಳ ಸ್ಥಿತಿಗತಿ...

5000ಕ್ಕಿಂತ ಹೆಚ್ಚು ನವೋದ್ಯಮ ಇರುವ ರಾಜ್ಯಗಳು



● 5,000ಕ್ಕಿಂತ ಹೆಚ್ಚು ನವೋದ್ಯಮಗಳು ನೋಂದಣಿಯಾಗಿರುವಂತ ಎಂಟು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶ ದೇಶದಲ್ಲಿವೆ. ದೇಶದಲ್ಲಿರುವ ಒಟ್ಟು 1.17 ಲಕ್ಷ ನವೋದ್ಯಮಗಳಲ್ಲಿ ಇವುಗಳ ಪಾಲೇ 93,650ರಷ್ಟಿದೆ

ಮಹಿಳಾ ಮಾಲೀಕತ್ವದ ಪ್ರಮಾಣ ಶೇ 47ರಷ್ಟು

1.179 ಲಕ್ಷ ದೇಶದಾದ್ಯಂತ ನೋಂದಣಿಯಾಗಿರುವ ನವೋದ್ಯಮಗಳ ಒಟ್ಟು ಸಂಖ್ಯೆ



12.56 ಲಕ್ಷ ಈ ನವೋದ್ಯಮಗಳು ಸೃಷ್ಟಿಸಿರುವ ಉದ್ಯೋಗಗಳ ಸಂಖ್ಯೆ

ಪ್ರಮುಖ ಕ್ಷೇತ್ರಗಳು	ನವೋದ್ಯಮಗಳ ಸಂಖ್ಯೆ	ಉದ್ಯೋಗಗಳ ಸಂಖ್ಯೆ
ಮಾಹಿತಿ ತಂತ್ರಜ್ಞಾನ	13,500	1.52 ಲಕ್ಷ
ವೈದ್ಯಕೀಯ ಸೇವೆ	11,000	1.11 ಲಕ್ಷ
ಶಿಕ್ಷಣ	7,100	69,000
ನಾವೀನ್ಯತಾ ನವೋದ್ಯಮ	900	9,500
ಆಟಿಕೆ ಮತ್ತು ಗೇಮಿಂಗ್	330	3,400

ಪ್ರಜಾವಾಣಿ ವಾರ್ತೆ

ನವೋದ್ಯಮಗಳ ಉತ್ತೇಜನಕ್ಕಾಗಿ ಕೇಂದ್ರ ಸರ್ಕಾರವು 2016ರಲ್ಲಿ 'ನವೋದ್ಯಮ ಭಾರತ' ಎಂಬ ಕಾರ್ಯಕ್ರಮವನ್ನು ಆರಂಭಿಸಿತ್ತು. ನವೋದ್ಯಮಗಳ ನೋಂದಣಿ ಮತ್ತು ಬಂಡವಾಳ ಹೂಡಿಕೆಯಲ್ಲಿ ನೆರವು ನೀಡುವ ಈ ಕಾರ್ಯಕ್ರಮವು ಸಾಂಖ್ಯಿಕ ದೃಷ್ಟಿಯಿಂದ ಭಾರಿ ಯಶಸ್ಸು ಗಳಿಸಿದೆ. ಈ ಕಾರ್ಯಕ್ರಮ ಆರಂಭವಾದ ಏಳು ವರ್ಷಗಳ ಅವಧಿಯಲ್ಲಿ ದೇಶದಾದ್ಯಂತ ಒಟ್ಟು 1.17 ಲಕ್ಷ ನವೋದ್ಯಮಗಳು ನೋಂದಣಿಯಾಗಿವೆ. ಇವುಗಳಲ್ಲಿ ಕೆಲವು ನವೋದ್ಯಮಗಳಿಗೆ ಕೇಂದ್ರ ಸರ್ಕಾರವು ಹೂಡಿಕೆ ನೆರವನ್ನೂ ನೀಡಿದೆ. ನವೋದ್ಯಮ ಆರಂಭಕ್ಕೆ ಪೂರಕವಾದ ಔದ್ಯಮಿಕ ವಾತಾವರಣ ರೂಪಿಸಿದ ಪರಿಣಾಮವಾಗಿ ಅವುಗಳ ಸಂಖ್ಯೆ ಹೆಚ್ಚಾಯಿತು. ಆದರೆ, ಅವುಗಳ ಕಾರ್ಯಾಚರಣೆಗೆ ಪೂರಕವಾದ ಸ್ಥಿತಿ ಇಲ್ಲದೇ ಇರುವುದು ನವೋದ್ಯಮಗಳಿಗೆ ತೊಡಕಾಯಿತು. ಹಿಂದಿನ ಎರಡು ವರ್ಷಗಳಲ್ಲಿ ನವೋದ್ಯಮಗಳು ಮಾಡಿದ ಉದ್ಯೋಗ ಕಡಿತದ ಪ್ರಮಾಣವೂ ಇದನ್ನೇ ಹೇಳುತ್ತವೆ.

ಕೇಂದ್ರ ಸರ್ಕಾರವು ಈಚೆಗಷ್ಟೇ ಬಿಡುಗಡೆ ಮಾಡಿದ ರಾಜ್ಯಗಳ ನವೋದ್ಯಮ ರ‍್ಯಾಂಕಿಂಗ್ ವರದಿಯು, ನವೋದ್ಯಮಗಳ ಸ್ಥಿತಿಗತಿಯ ಬಗ್ಗೆ ಬೆಳಕು ಚೆಲ್ಲುತ್ತದೆ. ನವೋದ್ಯಮಗಳ ಉತ್ತೇಜನಕ್ಕೆ ಪೂರಕವಾದ ವಾತಾವರಣ ಇರುವ ರಾಜ್ಯಗಳ ಪಟ್ಟಿಯಲ್ಲಿ ಗುಜರಾತ್ ಮೊದಲ ಸ್ಥಾನದಲ್ಲಿದೆ. ಆದರೆ ಅತಿಹೆಚ್ಚು ನವೋದ್ಯಮಗಳು ಇರುವ ಮಹಾರಾಷ್ಟ್ರಕ್ಕೆ ಅಂತಹ ಸ್ಥಾನ ದೊರೆತಿಲ್ಲ. ಮಹಾರಾಷ್ಟ್ರಕ್ಕಿಂತಲೂ ಗುಜರಾತ್‌ನಲ್ಲಿ ನವೋದ್ಯಮ ಪೂರಕವಾದ ವಾತಾವರಣ ಹೆಚ್ಚು ಎಂಬುದು ಈ ವರದಿಯ ವಿಶ್ಲೇಷಣೆ. ಈ ವರದಿಯಲ್ಲಿ ಸರ್ಕಾರವು ನವೋದ್ಯಮಗಳ ಸ್ಥಾಪನೆಗೆ ಸಂಬಂಧಿಸಿದ ವಿವರಗಳಿಗೆ ಒತ್ತು ನೀಡಿದೆಯೇ ಹೊರತು, ಅವುಗಳು ಸ್ಥಗಿತವಾದುದರ ಬಗ್ಗೆ ಮಾಹಿತಿ ಇಲ್ಲ. ಈಚೆಗಷ್ಟೇ ಬಿಡುಗಡೆ ಮಾಡಿದ 'ನವೋದ್ಯಮ ಭಾರತದ ಏಳು ವರ್ಷಗಳು:2016–2023' ಎಂಬ ವರದಿಯಲ್ಲೂ ಅಂತಹ ಮಾಹಿತಿ ಇಲ್ಲ. ಆದರೆ, ನವೋದ್ಯಮಗಳು ಸ್ಥಿತಿಗತಿಯ ಬಗ್ಗೆ ಮಾಧ್ಯಮಗಳು, ವಾಣಿಜ್ಯ ಪತ್ರಿಕೆಗಳು ಆಗ್ಗಿಂದಾಗ್ಗೆ ವರದಿ ಪ್ರಕಟಿಸುತ್ತಲೇ ಇವೆ.

'2016ರಿಂದ 2023ರ ನವೆಂಬರ್‌ವರೆಗೆ ದೇಶದಾದ್ಯಂತ ನೋಂದಣಿಯಾದ ನವೋದ್ಯಮಗಳು ಒಟ್ಟು 12.56 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿವೆ. ಪ್ರತಿ ನವೋದ್ಯಮವೂ ಸರಾಸರಿ 11 ಮಂದಿಗೆ ಉದ್ಯೋಗ ನೀಡಿದೆ ಎನ್ನುತ್ತದೆ' ಕೇಂದ್ರ ಸರ್ಕಾರದ ದಾಖಲೆ. ಆದರೆ ಈ ಅವಧಿಯಲ್ಲಿ ಎಷ್ಟು ನವೋದ್ಯಮಗಳು ಸ್ಥಗಿತವಾಗಿವೆ, ನವೋದ್ಯಮಗಳಲ್ಲಿ ಆದ ಉದ್ಯೋಗ ನಷ್ಟವೆಷ್ಟು ಎಂಬ ಮಾಹಿತಿಯನ್ನು ಸರ್ಕಾರ ನಿರ್ವಹಣೆ ಮಾಡುತ್ತಿಲ್ಲ. ಆದರೆ ಜಾಗತಿಕ ಮಟ್ಟದ ಕೆಲವು ಅಧ್ಯಯನ ಸಂಸ್ಥೆಗಳು ಭಾರತದಲ್ಲಿನ ನವೋದ್ಯಮಗಳ ಬೆಳವಣಿಗೆ ಮೇಲೆ ನಿಗಾ ಇರಿಸಿವೆ. ಅಂತಹ ಹಲವು ಅಧ್ಯಯನ ವರದಿಗಳ ಪ್ರಕಾರ 2021ರಲ್ಲಿ 1,000ಕ್ಕೂ ಹೆಚ್ಚು ನವೋದ್ಯಮಗಳು ಬಾಗಿಲು ಮುಚ್ಚಿವೆ. 2022ರಲ್ಲಿ ಈ ಸಂಖ್ಯೆ 2,100ರ ಗಡಿ ದಾಟಿತ್ತು. 2023ರಲ್ಲಿ ಎಷ್ಟು ನವೋದ್ಯಮಗಳು ಸ್ಥಗಿತವಾಗಿವೆ ಎಂಬುದರ ಮಾಹಿತಿ ಲಭ್ಯವಿಲ್ಲ. ಆದರೆ 2023ರಲ್ಲಿ ಅತಿದೊಡ್ಡ 15 ನವೋದ್ಯಮಗಳು ಕಾರ್ಯಾಚರಣೆ ನಿಲ್ಲಿಸಿದ್ದವು.

2022ರಲ್ಲಿ ಭಾರತದ ನವೋದ್ಯಮ ಮಾರುಕಟ್ಟೆಗೆ ಅಂದಾಜು ₹1.66 ಲಕ್ಷ ಕೋಟಿ ಬಂಡವಾಳ ಹೂಡಿಕೆಯಾಗಿತ್ತು. ಆದರೆ ಮರುವರ್ಷ, 2023ರಲ್ಲಿ ಅದು ಅಂದಾಜು ₹58 ಸಾವಿರ ಕೋಟಿಗೆ ಇಳಿಕೆಯಾಗಿತ್ತು. ಒಂದೇ ವರ್ಷದಲ್ಲಿ ಬಂಡವಾಳ ಹೂಡಿಕೆಯು ಶೇ 65ರಷ್ಟು ಕುಸಿತ ಕಂಡಿತ್ತು. ನವೋದ್ಯಮಗಳು ನಿರೀಕ್ಷಿತಮಟ್ಟದಲ್ಲಿ ಕಾರ್ಯನಿರ್ವಹಿಸದೇ ಇರುವುದು ಮತ್ತು ಜಾಗತಿಕ ಆರ್ಥಿಕ ಬಿಕ್ಕಟ್ಟು ಇದಕ್ಕೆ ಕಾರಣ ಎಂದು ವಿಶ್ಲೇಷಿಸಲಾಗಿದೆ.

ಭಾರತದ ಕೆಲವು ದೊಡ್ಡ ಮತ್ತು ಜನಪ್ರಿಯ ನವೋದ್ಯಮಗಳು 2023ರಲ್ಲಿ ದೊಡ್ಡಮಟ್ಟದ ಉದ್ಯೋಗ ಕಡಿತದಿಂದ ಸುದ್ದಿಯಲ್ಲಿದ್ದವು. ನವೋದ್ಯಮಗಳ ಆಗುಹೋಗುಗಳ ಬಗ್ಗೆ ಅಧ್ಯಯನ ನಡೆಸುವ ಸಂಸ್ಥೆ, 'ಗ್ಲೋಬಲ್‌ಡಾಟಾ' ವರದಿಯ ಪ್ರಕಾರ 2023ರ ಮೊದಲ 11 ತಿಂಗಳಲ್ಲಿ ಭಾರತದ ಪ್ರಮುಖ ನವೋದ್ಯಮಗಳು 15,000 ಜನರನ್ನು ಕೆಲಸದಿಂದ ತೆಗೆದುಹಾಕಿವೆ. 2022ರಲ್ಲಿ ಈ ಸಂಖ್ಯೆ 24,000ಕ್ಕಿಂತ ಹೆಚ್ಚು ಇತ್ತು. ವ್ಯವಹಾರ ನಷ್ಟ, ಕೃತಕಬುದ್ಧಿಮತೆ ಅಳವಡಿಕೆ, ಕಾರ್ಯಾಚರಣೆ ಸ್ಥಗಿತಗೊಳಿಸಿದ್ದೇ ಇದಕ್ಕೆ ಕಾರಣ. ಅತಿಹೆಚ್ಚು ಜನರನ್ನು (2,500) ಕೆಲಸದಿಂದ ತೆಗೆದುಹಾಕಿದ್ದು ಬೈಜೂ'ಸ್. ಆ ಹನ್ನೊಂದು ತಿಂಗಳಲ್ಲಿ 100ಕ್ಕೂ ಹೆಚ್ಚು ಜನರನ್ನು ಕೆಲಸದಿಂದ ತೆಗೆದುಹಾಕಿದ ನವೋದ್ಯಮಗಳ ಸಂಖ್ಯೆ 36. ಇವು ದೊಡ್ಡ ನವೋದ್ಯಮಗಳ ಲೆಕ್ಕ ಮಾತ್ರ. ಆದರೆ 100ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಉದ್ಯೋಗ ಕಡಿತ ಮಾಡಿದ ಸಂಸ್ಥೆಗಳ ಮಾಹಿತಿ ಇಲ್ಲ. ನವೋದ್ಯಮಗಳು ನಿರೀಕ್ಷಿತಮಟ್ಟದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂಬುದನ್ನೇ ಇವು ಸೂಚಿಸುತ್ತವೆ.

ಅನ್ವೇಷಣೆಗೆ ಒತ್ತು ನೀಡುವ ನವೋದ್ಯಮಗಳ ಉತ್ತೇಜನಕ್ಕೆ ಕೇಂದ್ರ ಸರ್ಕಾರವು ನೀಡುವ 'ಸೀಡ್‌ಫಂಡ್'ಗೆ ಸಂಬಂಧಿಸಿದ ದತ್ತಾಂಶ ಸಹ ಇದನ್ನೇ ಹೇಳುತ್ತದೆ. ಸೀಡ್ ಫಂಡ್ ಕಾರ್ಯಕ್ರಮದ ಅಡಿಯಲ್ಲಿ ಕೇಂದ್ರ ಸರ್ಕಾರವು ಆಯ್ದ ಪ್ರಮಾಣದ ನವೋದ್ಯಮಗಳಿಗೆ ಆರ್ಥಿಕ ನೆರವು ಒದಗಿಸುತ್ತದೆ. ಇದಕ್ಕಾಗಿ ನವೋದ್ಯಮಗಳು ಕೆಲವು ಷರತ್ತುಗಳನ್ನು ಪೂರೈಸಬೇಕಾಗುತ್ತದೆ. ಆದರೆ 2013ರಿಂದ 2023ರ ಮಧ್ಯೆ ಅಂತಹ ಷರತ್ತುಗಳನ್ನು ಪೂರೈಸಿ ಕೇಂದ್ರ ಸರ್ಕಾರದ ಹೂಡಿಕೆ ನೆರವನ್ನು ಪಡೆದುಕೊಂಡಿದ್ದು 790 ನವೋದ್ಯಮಗಳು ಮಾತ್ರ. ಈ ಅವಧಿಯಲ್ಲಿ ದೇಶದಾದ್ಯಂತ 1.17 ಲಕ್ಷ ನವೋದ್ಯಮಗಳು ನೋಂದಣಿಯಾಗಿದ್ದರೂ, ಕೇಂದ್ರ ಸರ್ಕಾರದ ಆರ್ಥಿಕ ನೆರವು ದೊರೆತದ್ದು ಶೇ 0.7ರಷ್ಟು ನವೋದ್ಯಮಗಳಿಗೆ ಮಾತ್ರ. ಇದಕ್ಕಾಗಿ ವಿಧಿಸಲಾಗಿರುವ ಷರತ್ತುಗಳು ಸರಳವಾಗಿಲ್ಲ ಮತ್ತು ನೋಂದಣಿಯಾದ ನವೋದ್ಯಮಗಳೆಲ್ಲವೂ ನಿರೀಕ್ಷಿತ ಮಟ್ಟದ ಗುರಿಯನ್ನು ಹಾಕಿಕೊಂಡಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಒಟ್ಟಾರೆ ನವೋದ್ಯಮಗಳ ನೋಂದಣಿಗೆ ಒತ್ತು ದೊರೆಯುತ್ತಿದೆಯೇ ಹೊರತು, ಅವುಗಳ ಮುಂದುವರಿಕೆಯು ಹಿನ್ನೆಲೆಗೆ ಸರಿದಿದೆ ಎಂಬುದು ಗ್ಲೋಬಲ್‌ಡಾಟಾದ ವಿಶ್ಲೇಷಣೆ.

ಕರ್ನಾಟಕದಲ್ಲಿ ನವೋದ್ಯಮ ಪ್ರಗತಿಗೆ ನೀತಿ ನಿರೂಪಣೆಯೇ ಕಾರಣ

ನವೋದ್ಯಮಗಳ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಒದಗಿಸುವಲ್ಲಿ ಕರ್ನಾಟಕವು ಉತ್ತಮ ಪ್ರಗತಿ ಸಾಧಿಸಿದೆ. ನವೋದ್ಯಮಗಳು ಸೃಷ್ಟಿಸುತ್ತಿರುವ ಉದ್ಯೋಗಗಳ ಸಂಖ್ಯೆಯಲ್ಲಿ ರಾಜ್ಯವು ವಾರ್ಷಿಕ ಶೇ 560ರಷ್ಟು ಪ್ರಗತಿ ಕಂಡಿದೆ. ಇಲ್ಲಿನ ಸರ್ಕಾರದ ನೀತಿಗಳೇ ಇದಕ್ಕೆ ಕಾರಣ ಎಂದು 'ನವೋದ್ಯಮ ರ‍್ಯಾಂಕಿಂಗ್' ವರದಿಯಲ್ಲಿ ವಿವರಿಸಲಾಗಿದೆ. 2016ರಲ್ಲಿ ನವೋದ್ಯಮ ಭಾರತ ಕಾರ್ಯಕ್ರಮ ಆರಂಭವಾದಾಗಿನಿಂದ ಕರ್ನಾಟಕದಲ್ಲಿ ಹಲವು ಸರ್ಕಾರಗಳು ಬದಲಾಗಿವೆ. ಆದರೆ ಈ ಅವಧಿಯಲ್ಲಿನ ಎಲ್ಲಾ ಸರ್ಕಾರಗಳು ನವೋದ್ಯಮಗಳ ಬೆಳವಣಿಗೆಗೆ ಸಹಕರಿಸಿವೆ. ಅಂತಹ ಸಹಕಾರದ ಕೆಲವು ಅಂಶಗಳು ಇಂತಿವೆ

1. ಪ್ರತ್ಯೇಕ ನಿಧಿ: ಆರಂಭಿಕ ಹಂತದ ನವೋದ್ಯಮಗಳಿಗೆ ಆರ್ಥಿಕ ನೆರವು ನೀಡಲು ಪ್ರತ್ಯೇಕ ನಿಧಿಯನ್ನು ಸ್ಥಾಪಿಸಲಾಗಿದೆ. ಜತೆಗೆ ತೆರಿಗೆ ವಿನಾಯಿತಿಯಂತಹ ಕೊಡುಗೆಗಳು ಇವೆ
2. ಸರಳ ನಿಯಮಗಳು: ನವೋದ್ಯಮಗಳ ನೋಂದಣಿ ಮತ್ತು ಪರವಾನಗಿ ನೀಡಲು ಪ್ರತ್ಯೇಕ ಘಟಕವನ್ನು ಸ್ಥಾಪಿಸಲಾಗಿದೆ. ಹೀಗಾಗಿ ಈ ಪ್ರಕ್ರಿಯೆಗಳು ಅತ್ಯಂತ ತ್ವರಿತವಾಗಿ ಆಗುತ್ತವೆ
3. ಕೌಶಲ ಅಭಿವೃದ್ಧಿ: ನವೋದ್ಯಮಗಳಿಗೆ ಅಗತ್ಯವಾದಂತಹ ಕೌಶಲ ಹೊಂದಿರುವ ಅಭ್ಯರ್ಥಿಗಳನ್ನು ರೂಪಿಸುವ ನಿಟ್ಟಿನಲ್ಲಿ ನವೋದ್ಯಮ ಪಠ್ಯಕ್ರಮ, ಕೋರ್ಸ್‌ಗಳು ಲಭ್ಯವಿವೆ. ನವೋದ್ಯಮಗಳ ಕಾರ್ಯನಿರ್ವಹಣೆಗೆ ಅಗತ್ಯವಾದಂತಹ ಕೌಶಲಭರಿತ ಮಾನವ ಸಂಪನ್ಮೂಲ ಲಭ್ಯವಿದೆ
4. ಕ್ಷೇತ್ರವಾರು ನಾವೀನ್ಯತಾ ಕೇಂದ್ರಗಳು: ಕ್ಷೇತ್ರವಾರು ನವೋದ್ಯಮಗಳ ಸ್ಥಾಪನೆ ಮತ್ತು ಕಾರ್ಯನಿರ್ವಹಣೆಗೆ ನೆರವಾಗುವಂತೆ ಕ್ಷೇತ್ರವಾರು ನಾವೀನ್ಯತಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ
5. ಮಾರುಕಟ್ಟೆ: ನವೋದ್ಯಮಗಳು ಸೇವೆ ಅಥವಾ ಸರಕು ಒದಗಿಸಲು ಉತ್ತಮ ಮಾರುಕಟ್ಟೆಯಿದೆ. ಸರ್ಕಾರವೂ ನವೋದ್ಯಮಗಳ ಸೇವೆ ಪಡೆದುಕೊಳ್ಳಲು ಅವಕಾಶವಿರುವ ಕಾರಣ, ಅವುಗಳ ಕಾರ್ಯನಿರ್ವಹಣೆಗೆ ನೆರವಾಗಿದೆ
6. ಜಾಗತಿಕ ವೇದಿಕೆ: ಜಾಗತಿಕ ಮಟ್ಟದ ಹೂಡಿಕೆದಾರರು, ಮಾರುಕಟ್ಟೆ ತಜ್ಞರು, ಸ್ಥಳೀಯ ನವೋದ್ಯಮಗಳು ಒಂದೇ ವೇದಿಕೆಯಲ್ಲಿ ಬರುವಂತಹ ಸಮ್ಮೇಳನಗಳು ಮತ್ತು ಹೂಡಿಕೆ ಸಮಾವೇಶಗಳನ್ನು ಕರ್ನಾಟಕ ಸರ್ಕಾರ ಅಗ್ಗಿಂದಾಗ್ಗೆ ಆಯೋಜಿಸಿದೆ. ಇದು ಹೂಡಿಕೆ ಏರಿಕೆಗೆ ಕಾರಣವಾಗಿದೆ

ಆಧಾರ: ನವೋದ್ಯಮ ಭಾರತ ಪೋರ್ಟಲ್, ನವೋದ್ಯಮ ಭಾರತ ರ‍್ಯಾಂಕಿಂಗ್ ವರದಿ, ಪಿಟಿಐ, ಗ್ಲೋಬಲ್‌ಡಾಟಾ

ಸಿನಿ ಬಿಟ್ಸ್

'ಭೀಮ' ಚಿತ್ರದ ಕ್ಲೈಮ್ಯಾಕ್ಸ್ ದೃಶ್ಯ

19ಕ್ಕೆ ಬರ್ತಿದೆ 'ಭೀಮ' ಟೀಸರ್

ನಟ ದುನಿಯಾ ವಿಜಯ್ ನಿರ್ದೇಶಿಸಿ, ನಟಿಸಿರುವ 'ಭೀಮ' ಬಿಡುಗಡೆಗೆ ಸಜ್ಜಾಗುತ್ತಿದೆ. ಇತ್ತೀಚೆಗಷ್ಟೇ ಕ್ಲೈಮ್ಯಾಕ್ಸ್ ದೃಶ್ಯಗಳ ಚಿತ್ರೀಕರಣ ಪೂರ್ಣಗೊಳಿಸಿದ್ದ ಚಿತ್ರತಂಡ, ಜ.19ರಂದು ಸಂಜೆ 6ಕ್ಕೆ ಟೀಸರ್ ಬಿಡುಗಡೆ ಮಾಡಲಿದೆ.

ಜ.20 ವಿಜಯ್ ಜನ್ಮದಿನ. ಇದೇ ಹೊಸ್ತಿಲಲ್ಲಿ ಟೀಸರ್ ಬಿಡುಗಡೆಯಾಗುತ್ತಿದೆ. 'ಸಲಗ' ಸಿನಿಮಾ ಮೂಲಕ ಡೈರೆಕ್ಟರ್ ಕ್ಯಾಪ್ ತೊಟ್ಟು ನಿರ್ದೇಶನದಲ್ಲೂ ಮಿಂಚಿದ್ದ ದುನಿಯಾ ವಿಜಯ್, 'ಭೀಮ' ಪ್ರಾಜೆಕ್ಟ್ ಆರಂಭಿಸಿ ಎರಡು ವರ್ಷ ಕಳೆದಿದೆ. ಈ ಸಿನಿಮಾ ಶೂಟಿಂಗ್ ಸಂದರ್ಭದಲ್ಲೇ, ತೆಲುಗು ಚಿತ್ರವೊಂದರಲ್ಲಿ ನಟಿಸಿ ಮರಳಿದ್ದ ವಿಜಯ್ ಬಳಿಕ ಚಿತ್ರೀಕರಣಕ್ಕೆ ವೇಗ ನೀಡಿದ್ದರು. ಇತ್ತೀಚೆಗೆ ಬೆಂಗಳೂರಿನ ಗಲ್ಲಿಗಳಲ್ಲಿ ಮಧ್ಯರಾತ್ರಿ ಚಿತ್ರದ ಕ್ಲೈಮ್ಯಾಕ್ಸ್ ದೃಶ್ಯಗಳ ಚಿತ್ರೀಕರಣ ನಡೆದಿತ್ತು. ಈಗಾಗಲೇ ಮೂರು ಹಾಡುಗಳನ್ನು ರಿಲೀಸ್ ಮಾಡಿರುವ 'ಭೀಮ' ಚಿತ್ರತಂಡ ಒಂದೆರಡು ತಿಂಗಳಲ್ಲಿ ಸಿನಿಮಾ ಬಿಡುಗಡೆ ಮಾಡುವ ಸಾಧ್ಯತೆ ಇದೆ. ಚಿತ್ರದಲ್ಲಿ ಭೀಮನಿಗೆ ಜೋಡಿಯಾಗಿ ಅಶ್ವಿನಿ ನಟಿಸಿದ್ದು, ರಂಗಾಯಣ ರಘು, ಅಚ್ಯುತ್ ಕುಮಾರ್, ಕಾಕ್ರೋಚ್ ಸುಧಿ, ಕಲ್ಯಾಣಿ ಮತ್ತಿತರರು ಅಭಿನಯಿಸಿದ್ದಾರೆ. ಮಾಸ್ತಿ ಸಂಭಾಷಣೆ ಚಿತ್ರಕ್ಕಿದ್ದು, ಕೃಷ್ಣ ಸಾರ್ಥಕ್, ಜಗದೀಶ್ ಗೌಡ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ.

'ಗಂಗೆ ಗೌರಿ'ಗೆ ಚಾಲನೆ

ರಾಜ್‌ಕುಮಾರ್, ಲೀಲಾವತಿ, ಭಾರತಿ ಅಭಿನಯಿಸಿದ್ದ 'ಗಂಗೆ ಗೌರಿ' ಚಿತ್ರ ಸೂಪರ್ ಹಿಟ್ ಚಿತ್ರ. ಇದೀಗ ಅದೇ ಹೆಸರಿನ ಮತ್ತೊಂದು ಚಿತ್ರ ಸೆಟ್ಟೇರಿದೆ. ಈ ಹಿಂದೆ ಸಾಕಷ್ಟು ಪೌರಾಣಿಕ ಸಿನಿಮಾಗಳನ್ನು ನಿರ್ದೇಶಿಸಿರುವ ಬಿ.ಎ.ಪುರುಷೋತ್ತಮ್ ಓಂಕಾರ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಮಧುಕಾರ್ತಿಕ್-ಪ್ರಜ್ವಲ್ ಜಂಟಿಯಾಗಿ ಜಿಆರ್ ಫಿಲ್ಮ್ಸ್ ಅಡಿಯಲ್ಲಿ ಬಂಡವಾಳ ಹೂಡುತ್ತಿದ್ದಾರೆ.

ನಿಖಿತಾ ಸ್ವಾಮಿ, ಗಣೇಶ್ ರಾವ್, ರೂಪಾಲಿ

'ಇಲ್ಲಿವರೆಗೆ 27 ಸಿನಿಮಾ ನಿರ್ದೇಶಿಸಿದ್ದೇನೆ. ಅದರಲ್ಲಿ 23 ಪೌರಾಣಿಕ ಚಿತ್ರಗಳು. ಗಂಗೆ, ಗೌರಿ ಸಂಬಂಧ ಏನು? ಗಂಗೆ ಯಾಕೆ ಶಿವನ ತಲೆ ಮೇಲೆ ಇರುತ್ತಾಳೆ? ಗೌರಿ ಯಾಕೆ ಶಿವನ ತೊಡೆ ಮೇಲೆ ಕುಳಿತಿರುತ್ತಾಳೆ? ಇದಕ್ಕೆ ಕಾರಣವೇನು? ಇಬ್ಬರನ್ನು ಶಿವನು ಯಾವ ರೀತಿ ಸಂಭಾಳಿಸುತ್ತಾನೆ ಎಂಬಿತ್ಯಾದಿ ವಿವರಗಳು ಚಿತ್ರದಲ್ಲಿವೆ' ಎಂದರು ನಿರ್ದೇಶಕರು.

ಮೈಸೂರು, ಶ್ರೀರಂಗಪಟ್ಟಣ, ಊಟಿ ಸುತ್ತ 30 ದಿನಗಳ ಕಾಲ ಚಿತ್ರೀಕರಣ ನಡೆಸಲು ತಂಡ ಯೋಜನೆ ಹಾಕಿಕೊಂಡಿದೆ. ಗಣೇಶ್ ರಾವ್ ಕೇಸರ್‌ಕರ್, ರೂಪಾಲಿ, ನಿಖಿತಾಸ್ವಾಮಿ ಮುಖ್ಯ ಪಾತ್ರದಲ್ಲಿದ್ದಾರೆ. ರಾಜ್ ಭಾಸ್ಕರ್ ಸಂಗೀತ, ಗೌರಿವೆಂಕಟೇಶ್ ಛಾಯಾಚಿತ್ರಗ್ರಹಣವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಅಯೋಧ್ಯೆಯ ರಾಮಮಂದಿರದಲ್ಲಿ ಇದೇ 22ರಂದು ರಾಮಲಲ್ಲಾನ ಪ್ರಾಣಪ್ರತಿಷ್ಠಾಪನೆ ನಡೆಯಲಿದೆ. ಅಂದಿನಿಂದ ದೇಶದಾದ್ಯಂತ ಪ್ರಸಾದವನ್ನು ಅಲ್ಲಿಂದಲೇ ವಿತರಿಸಲಾಗುತ್ತದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಕೆಲವು ಸುದ್ದಿ ಮಾಧ್ಯಮಗಳಲ್ಲೂ ಹರಿದಾಡುತ್ತಿದೆ. ಅಮೆಜಾನ್‌ನಲ್ಲೂ ಕೆಲವು ಕಂಪನಿಗಳು, 'ರಾಮ ಮಂದಿರದಿಂದ ಪ್ರಸಾದವನ್ನು ನೇರವಾಗಿ ನಿಮ್ಮ ಮನೆಗೆ ತಲುಪಿಸುತ್ತೇವೆ. ಈಗಲೇ ಖರೀದಿಸಿ' ಎಂಬಂತಹ ಜಾಹೀರಾತು ನೀಡುತ್ತಿವೆ. ಇವಲ್ಲದೆ, 'Khadi Organic' ಮತ್ತು 'Mandir Darshan' ಎಂಬ ಜಾಲತಾಣಗಳೂ ಇಂಥದ್ದೇ ಜಾಹೀರಾತು ನೀಡುತ್ತಿವೆ. ಆದರೆ ಇವೆಲ್ಲವೂ ಸುಳ್ಳು.



ಶ್ರೀ ರಾಮಮಂದಿರ ತೀರ್ಥ ಕ್ಷೇತ್ರ ಟ್ರಸ್ಟ್ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದ ಹೊಣೆ ಹೊತ್ತಿದೆ. ರಾಮಮಂದಿರದ ಬಗ್ಗೆ ಈ ಟ್ರಸ್ಟ್ ನೀಡುವ ಮಾಹಿತಿ ಮಾತ್ರವೇ ಅಧಿಕೃತ. ಪ್ರಸಾದವನ್ನು ಮನೆ–ಮನೆಗೆ ಕಳುಹಿಸುವಂತಹ ಯಾವುದೇ ಜಾಹೀರಾತನ್ನು ಈ ಟ್ರಸ್ಟ್ ಪ್ರಕಟಿಸಿಲ್ಲ. ಜತೆಗೆ ವಿಶ್ವ ಹಿಂದೂ ಪರಿಷತ್, ಇಂತಹ ಜಾಹೀರಾತುಗಳೆಲ್ಲವೂ ಸುಳ್ಳು. ಅವನ್ನು ನಂಬಬೇಡಿ ಎಂದು ಪ್ರಕಟಣೆ ಹೊರಡಿಸಿದೆ. ಹೀಗಾಗಿ ಪ್ರಸಾದವನ್ನು ಮನೆಗೆ ಕಳುಹಿಸುತ್ತೀವಿ, ಈಗಲೇ ಟೋಕನ್ ಖರೀದಿಸಿ ಎಂದು ನೀಡಲಾಗುತ್ತಿರುವ ಜಾಹೀರಾತುಗಳೆಲ್ಲವೂ ಸುಳ್ಳು ಮತ್ತು ಜನರಿಂದ ಹಣ ಸುಲಿಗೆ ಮಾಡುವ ಉದ್ದೇಶ ಹೊಂದಿರುವಂತಹವು ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಅತಿಯಾದ ನಂಬಿಕೆಯಿಡುವ ಮುನ್ನ



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಒಬ್ಬಳು ಯುವತಿಗೆ ಹಾವುಗಳೆಂದರೆ ಬಹಳ ಇಷ್ಟ. ಆಕೆ ಸಾಕಿದ್ದ ಪ್ರಾಣಿ ಯಾವುದೆಂದರೆ ಒಂದು ಹೆಬ್ಬಾವು. ಆ ಹೆಬ್ಬಾವೆಂದರೆ ಆಕೆಗೆ ಬಹು ಪ್ರೀತಿ. ಏಳು ಅಡಿ ಉದ್ದದ ಆ ಹಾವು ಒಂದು ದಿನ ಇದ್ದಕ್ಕಿದ್ದಂತೆಯೇ ತಿನ್ನುವುದನ್ನು ನಿಲ್ಲಿಸಿಬಿಟ್ಟಿತು. ಯುವತಿ ಎಷ್ಟೇ ಪ್ರಯತ್ನ ಪಟ್ಟರೂ ಏನನ್ನೂ ಅದು ತಿನ್ನಲಿಲ್ಲ. ಹಲವು ದಿನಗಳೇ ಕಳೆದವು. ಆದರೂ ಅದು ಏನನ್ನೂ ಮುಟ್ಟದೇ ಇದ್ದಾಗ ಗಾಬರಿಯಾದ ಯುವತಿ ಪಶುವೈದ್ಯರ ಹತ್ತಿರ ಅದನ್ನು ತೆಗೆದುಕೊಂಡು ಹೋದಳು.

ಕೆಲವು ದಿನಗಳಿಂದ ಏನೂ ತಿನ್ನುತ್ತಿಲ್ಲ ಎಂದಾಗ ವೈದ್ಯರು, 'ದಿನವೂ ರಾತ್ರಿ ಹಾವು ನಿಮ್ಮ ಜತೆಯೇ ಮಲಗುತ್ತದೆಯೇ?' ಎಂದು ಕೇಳಿದರು. ಈಕೆ ಹೌದೆಂದಳು. 'ಮಲಗಿದಾಗ ನಿಮ್ಮ ಹತ್ತಿರ ಬಂದು ತನ್ನನ್ನು ತಾನು ಎಳೆದುಕೊಂಡಂತೆ ಮಾಡುತ್ತದೆಯೇ' ಎಂದರು. ಈಕೆ 'ಹೌದು, ಹಸಿವಾಗಿ ನಿದ್ದೆ ಬಾರದೇ ಹಾಗೆ ಒದ್ದಾಡುತ್ತದೆ, ಪಾಪ ಅದರ ಪರಿಸ್ಥಿತಿ ನೋಡಿ ಬೇಸರವಾಗುತ್ತದೆ' ಎಂದಳು.

ಆಗ ವೈದ್ಯರು ಮುಗುಳ್ನಕ್ಕು ಹೇಳಿದರು, 'ಮೇಡಂ, ನಿಮ್ಮ ಹಾವು ಕಾಯಿಲೆ ಬಿದ್ದಿಲ್ಲ. ಅದು ನಿಮ್ಮನ್ನು ನುಂಗಲು ತಯಾರಿ ನಡೆಸುತ್ತಿದೆ. ಪ್ರತೀ ದಿನವೂ ನಿಮ್ಮ ಗಾತ್ರವನ್ನು ಅಳೆಯುತ್ತಿದೆ. ನಿಮ್ಮನ್ನು ನುಂಗಿದಾಗ ಜೀರ್ಣಿಸಿಕೊಳ್ಳಲು ಜಾಗ ಬೇಕಲ್ಲ, ಹಾಗಾಗಿ ಅದು ಏನನ್ನೂ ತಿನ್ನುತ್ತಿಲ್ಲ. ಹುಶಾರಾಗಿರಿ. ಮೊದಲು ಹೋಗಿ ಯಾವುದಾದರೂ ಪ್ರಾಣಿಸಂಗ್ರಹಾಲಯಕ್ಕೆ ಅದನ್ನು ಕೊಟ್ಟು ಬನ್ನಿ' ಎಂದರು.

ಈ ಹಾವಿನಂಥ ವ್ಯಕ್ತಿತ್ವದವರು ಬಹು ಅಪಾಯಕಾರಿ. ಹತ್ತಿರದವರೆಂದು ನಟಿಸುತ್ತ ಸೂಕ್ತ ಸಮಯ ಬಂದಾಗ ನುಂಗಲು ಕಾದಿರುವ ಇಂಥವರ ಬಗ್ಗೆ ಬಹು ಎಚ್ಚರಿಕೆಯಿಂದ ಇರಬೇಕು. ಜತೆಯಲ್ಲಿದ್ದುಕೊಂಡೇ ಬೆನ್ನಿಗೆ ಚೂರಿ ಹಾಕಿದವರಿಂದ ಎಂಥೆಂಥ ಮಹಾನ್ ವ್ಯಕ್ತಿಗಳು ನೆಲ ಕಚ್ಚಿದ್ದಾರೆ ಎನ್ನುವುದು ಇತಿಹಾಸ ನಮಗೆ ಕಲಿಸಿದ ಪಾಠಗಳಲ್ಲೊಂದು. ಇತಿಹಾಸದ ದಿಕ್ಕನ್ನೇ ಇಂತಹ ವ್ಯಕ್ತಿಗಳು ಬದಲಾಯಿಸಿದ್ದಾರೆ ಎಂದರೆ ಸಾಮಾನ್ಯರು ಯಾವ ಲೆಕ್ಕ? ಹಾಗೆಂದು ಮನುಷ್ಯ ಮನುಷ್ಯರ ನಡುವೆ ನಂಬಿಕೆಯೇ ಇರಬಾರದೇ? ಒಬ್ಬರನ್ನೊಬ್ಬರು ನಂಬದಿದ್ದರೆ ಬದುಕಲಾದೀತೇ ಎಂಬೆಲ್ಲ ಪ್ರಶ್ನೆಗಳು ಹುಟ್ಟುತ್ತವೆ. ಅದೂ ನಿಜವೇ. ಜಗತ್ತು ನಿಂತಿರುವುದೇ ನಂಬಿಕೆಯ ಮೇಲೆ. ಹೇಗೆ ಒಬ್ಬರು ತಪ್ಪಿತಸ್ಥರು ಎಂಬುದನ್ನು ತತ್‌ಕ್ಷಣ ತೀರ್ಮಾನಿಸಲಾಗದೋ ಅದೇ ರೀತಿ ನಂಬಿಕಸ್ಥರೆಂದು ಒಪ್ಪಿಕೊಳ್ಳಲೂ ಸಮಯ ಬೇಕಾಗುತ್ತದೆ. ಸ್ನೇಹ ಸಂಬಂಧಗಳಲ್ಲಿ ಸಲಿಗೆ ಒಂದು ಹಂತ ಮೀರದಂತೆ ಪುಟ್ಟ ಚೌಕಟ್ಟು, ಒಂದಿಷ್ಟು ಸ್ಪಷ್ಟತೆ ಇಟ್ಟುಕೊಂಡು ಎಚ್ಚರಿಕೆಯಿಂದಿರುವುದು ಬಹುಮುಖ್ಯ. ಅತಿಯಾದ ನಂಬಿಕೆ, ಅತಿಯಾದ ಅನುಮಾನ ಎರಡೂ ಅತಿಗಳಿಂದ ದೂರವಿರುವುದೇ ಜಾಣತನ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಗುರುವಾರ ಜನವರಿ 18, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಶುಕ್ಲ ಅಷ್ಟಮಿ ಗಂ. 20-45 ನಕ್ಷತ್ರ: ಅಶ್ವಿನಿ ಗಂ. 26-58 ಯೋಗ: ಸಿದ್ಧ ಗಂ. 14-48 ಕರಣ: ವಿಷ್ಟಿ ಗಂ. 09-23, ಮಕರ ಮಾಸದ 03 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 3.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 07-01 ಸೂರ್ಯಾಸ್ತ : 06-20
ಮುಸ್ಲಿಂ ದಿನಾಂಕ : 06 ರಜಬ್
ಅದೃಷ್ಟ ಸಂಖ್ಯೆ : 3, 2

ಮೇಷ: ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿರುವವರಿಗೆ ಈ ದಿನ ಅನಿರೀಕ್ಷಿತ ರೀತಿಯಲ್ಲಿ ಫಲಿತಾಂಶ ದೊರೆಯಲಿದೆ. ಪ್ರಾಮಾಣಿಕ ಪ್ರಯತ್ನಬಲ ಹಾಗೂ ಒಳ್ಳೆಯತನ ಈ ದಿನದಂದು ಉಪಯೋಗಕ್ಕೆ ಬರದು.

ವೃಷಭ : ಯಾವುದೇ ವಾದ ವಿವಾದಗಳು ನಡೆದರೂ ಈ ದಿನದ ನಿಮ್ಮ ಕಾರ್ಯ ಸಾಧನೆಗೆ ಅಡ್ಡಿಯಾಗದು. ಬಂಗಾರದಂಥ ಬೆಲೆಬಾಳುವ ವಸ್ತು ಕಳೆದು ಹೋಗುವ ಸಾಧ್ಯತೆಯಿದೆ ಜಾಗ್ರತರಾಗಿರಿ. ಗೃಹದಲ್ಲಿ ಶಾಂತಿ ವರ್ಧಿಸುತ್ತದೆ.

ಮಿಥುನ: ಜನರನ್ನು ಆಕರ್ಷಿಸುವ ಕಲೆ ನಿಮ್ಮಲ್ಲಿದೆ. ತಂತ್ರಗಾರಿಕೆಯನ್ನು ಬಳಸಿ-ಕೊಳ್ಳುವುದರಿಂದ ವ್ಯವಹಾರದಲ್ಲಿ ಲಾಭ ಗಳಿಸುವಿರಿ. ವಿದ್ಯಾರ್ಥಿಗಳು ತಮ್ಮ ಅಭ್ಯಾಸದಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆ ಕಾಣುವಿರಿ.

ಕರ್ಕಾಟಕ: ದೇವರ ಕೆಲಸಗಳಿಗಾಗಿ ಹಣ ವ್ಯಯವಾದರೂ ಆದಾಯದಲ್ಲಿ ಕೊರತೆಯೇನು ಬರಲಾರದು. ತಂತ್ರಜ್ಞರಿಗೆ ಮತ್ತು ಕುಶಲ ಕಾರ್ಮಿಕರಿಗೆ ಬೇಡಿಕೆಗಳು ಹೆಚ್ಚುವುದು. ಕೃಷಿ ಕಾರ್ಯಗಳು ಬಿಡುವಿಲ್ಲದೆ ನಡೆಯುವುದು.

ಸಿಂಹ: ತೆಗೆದುಕೊಂಡ ನಿರ್ಧಾರದ ಬಗ್ಗೆ ಅನುಮಾನಗಳು ಎದುರಾಗಬಹುದು. ರಾಜಕೀಯ ವ್ಯಕ್ತಿಗಳಿಗೆ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟವಿರುವುದು. ನಿಮ್ಮ ಸ್ವಲ್ಪ ಪರಿಶ್ರಮ ಕೂಡ ಕಾರ್ಯಸಾಧನೆಯಲ್ಲಿ ಹೆಚ್ಚಿನ ಫಲ ನೀಡಲಿದೆ.

ಕನ್ಯಾ: ಕೆಲಸದಲ್ಲಿ ನಿಮ್ಮ ಗಮನಕ್ಕೆ ಬರುವ ತಪ್ಪುಗಳನ್ನು ಪುನರಾವರ್ತನೆ-ಯಾಗದಂತೆ ಗಮನಿಸಿದರೆ ಯಶಸ್ಸಿನ ದಾರಿ ಕಾಣಬಹುದು. ವಿದ್ಯಾರ್ಜನೆಯಲ್ಲಿ ಉತ್ತಮವಾದ ಹಂತ ತಲುಪಲು ಸಾಧ್ಯ.

ತುಲಾ: ನಾಲ್ಕಾರು ದಿನದ ಹಿಂದೆ ಪ್ರಾರಂಭಿಸಿದ್ದ ಒಂದು ಯೋಜನೆ ಈ ದಿನ ನಿಶ್ಚಿತ ಹಂತ ತಲುಪಿ ಮನಸ್ಸಿಗೆ ಹೆಚ್ಚಿನ ಸಮಾಧಾನವಾಗುವುದು. ಪತ್ರಿಕೋದ್ಯ-ಮದವರಿಗೆ ಕೆಲಸದ ಹೊರೆ ಅತಿ ಎನಿಸುವುದು.

ವೃಶ್ಚಿಕ : ನೀವು ಮಾಡುತ್ತಿರುವ ಪರೋಪಕಾರದ ಕೆಲಸಗಳಿಗೆ ಸಕಾರಾತ್ಮಕ ಪ್ರತಿಫಲ ಕಟ್ಟಿಟ್ಟ ಬುತ್ತಿ. ಆಭರಣಗಳ ಖರೀದಿ ನಡೆಸುವುದರಿಂದ ಸಂತೋಷವಾಗುವುದು. ಎಣ್ಣೆ ಮತ್ತು ಬೇಳೆ ಕಾಳು ವ್ಯಾಪಾರ ಉತ್ತಮವಾಗಿರುವುದು.

ಧನು: ವೃತ್ತಿಯಲ್ಲಿ ಅನುಸರಿಸುತ್ತಿರುವ ಮಾರ್ಗದ ಬಗ್ಗೆ ಇನ್ನೊಮ್ಮೆ ಪರಿಶೀಲನೆ ನಡೆಸಿ ಮುಂದೆ ಸಾಗುವುದು ಉತ್ತಮ. ಸ್ವಯಂ ಉದ್ಯೋಗಸ್ಥರಿಗೆ ಇನ್ನೊಬ್ಬರ ಸಹಾಯ ಅನಿವಾರ್ಯ. ಅಧಿಕಾರಕ್ಕಾಗಿ ಹೋರಾಟ ನಡೆಸುವಿರಿ.

ಮಕರ: ತಮ್ಮನ ಕೆಲಸಕ್ಕಾಗಿ ಉನ್ನತ ಅಧಿಕಾರಿಗಳನ್ನು ಕಾಣಲು ದಿನವಿಡೀ ಓಡಾಟ ನಡೆಸುವಿರಿ. ದೇಹದಲ್ಲಿ ಪಿತ್ತಾಧಿಕ್ಯದಿಂದ ಅಥವಾ ನಿದ್ದೆಯ ಅಭಾವದಿಂದ ಅನಾರೋಗ್ಯ ಉಂಟಾಗಬಹುದು.

ಕುಂಭ: ಅಧಿಕ ಕೆಲಸಗಳ ಬಗ್ಗೆ ಗಮನ ಹರಿಸುವುದು ಉತ್ತಮ. ಸುತ್ತಲ ವಾತಾವರಣವು ಸಂತಸದಾಯಕವಾಗಿರುತ್ತದೆ. ಬದುಕಿನ ಧನ್ಯತೆಗೆ ಅಚಲವಾದ ನಂಬಿಕೆಯೇ ಮುಖ್ಯವೆಂದು ಅನಿಸುವುದು.

ಮೀನ: ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ಮಾಡುವ ಆಲೋಚನೆಯನ್ನು ಕಾರ್ಯರೂಪಕ್ಕೆ ತನ್ನಿರಿ. ಸ್ವಾದಿಷ್ಟ ಭೋಜನದ ಯೋಗ ನಿಮಗೆ ಪ್ರಾಪ್ತವಾಗು-ವುದು. ಕ್ರೀಡಾಪಟುಗಳಿಗೆ ಕ್ರೀಡೆಯಲ್ಲಿ ಪ್ರಗತಿ ಕಂಡು ಬರುವುದು.

ಪದಬಂಧ 5564

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆತನ ವದನ (3)
3.ನಡುವೆ ಕರವನ್ನಿಟ್ಟು ಒಂದುಗೂಡಿಸುವುದು (5)
6.ನಿಯಮಿತವಾಗಿ ಕಾಣಿಸಿಕೊಳ್ಳುವ ಸ್ತ್ರೀ (3)
7.ಚಟ್ಟ ಹತ್ತಿದರೂ ಬಿಡದ ವ್ಯಸನ (2)
8.ಪಟದಲ್ಲಿರುವ ವ್ಯತ್ಯಾಸ ಗೊತ್ತಾಯಿತೇ? (3)
9.ಹಾರ ಹಿಡಿದಿರುವ ಬ್ರಾಹ್ಮಣ (3)
10.ಅವನಿರುವ ಭೂಮಿ (3)
13.ಸಹೋದರಿಯತ್ತ ನುಗ್ಗಿದ ಗೂಳಿ (2)
14.ಒಲುಮೆಯಿಂದ ಮಾಡಿದ ಒತ್ತಾಯ (3)
16.ಹರನಿಗೆ ಮುಡಿಪು ಕಟ್ಟು! (5)
17.ದೈವದಲ್ಲಿ ಬಹಳ ನಂಬಿಕೆ ಉಳ್ಳವನು (3)

ಮೇಲಿಂದ ಕೆಳಕ್ಕೆ
1.ಗರ್ವದ ಪ್ರದರ್ಶನವಿದು (4)
2.ವನದಲ್ಲಿ ತಿರುಗಿದಾಗ ಹೊಸತು ಕಂಡೀತು (2)
3.ಏರುತಲಿದ್ದಾಗ ಕಾಣಿಸಿದ್ದು ನೀರನ್ನು ಮೇಲೆತ್ತುವ ಸಾಧನ (2)
4.ಕೈಯ್ಯಲ್ಲಿರುವ ಚಿಪ್ಪು (3)
5.ಪದ್ಯದ ಪಂಕ್ತಿ ಉಲ್ಟಾ ಕಾಣುತ್ತಿದೆಯಲ್ಲಾ? (3)
7.ಚಿಲುಮೆ ಬಳಿಯಿರುವ ಸುಂದರಾಂಗ (3)
9.ಹಾರಿಕೆಯಲ್ಲ! ಜರೂರಾಗಿ ಇರುವಿಕೆ! (3)
11.ಯಾವುದೇ ಆತಂಕವಿಲ್ಲದ್ದು (4)
12.ಈ ಮೋಹ ಅತಿಶಯವಾದುದು (3)
13.ಹೋಲಿಗೆಯಲ್ಲಿ ಕಾಣಿಸಿದ ಸಾಮ್ಯ (3)
14.ಜಟ್ಟಿಯ ಚಂಡಿಕೆ (2)
15.ಆಮೇಲೆ ತಿರುಗಿರುವ ಕೂರ್ಮ (2)

1		2	■	3		4		5
	■	6			■		■	
	■	■	■	■	7		■	
8			■	■		■	■	■
■	■	■	9			■	■	■
■	■	■		■	■	10		11
12	■	13		■	■	■	■	
	■		■	14		15	■	
16					■	17		

5563ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂಪ್ರತಿ 3.ಶಕಟ
5.ಹರಾಮ 6.ಯಥೋಚಿತ
8.ವಿಪ್ರ 10.ಆಪತ್ತು
11.ಲಿಪಿ 13.ನವನೀತ
15.ವೈಯ್ಯಾರಿ 16.ಓರಣ
17.ಹರಿತ

ಮೇಲಿಂದ ಕೆಳಕ್ಕೆ:
2.ಪ್ರಥಮ 4.ಕಲುಚಿ
5.ಹರವಿ 6.ಯಜ್ಞೋಪವೀತ
7.ತಬ್ಬಲಿ 9.ಪ್ರಧಾನ
12.ಪಿತೂರಿ 14.ವರಾರ
15.ವೈಖರಿ

ಸುಡೊಕು 5949

2		8		7			6	
			4		2	3		1
	3	1		5			8	
6		4		3			5	
5		2	6		9			8
				2			4	
3				1			9	
	2	5	8			6		7
1				6			2	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5948 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ: ಕಾಂಗ್ರೆಸ್ ಟಿಕೆಟ್ ಬಯಸಿ 14 ಮುಖಂಡರ ಅರ್ಜಿ

ಮುಖ್ಯಮಂತ್ರಿ ಪುತ್ರನ ಸ್ಪರ್ಧೆ ಚರ್ಚೆ ಬಿರುಸು

• ಎಂ. ಮಹೇಶ

ಪ್ರತಾಪ ಸಿಂಹ

ಡಾ.ಯತೀಂದ್ರ

ಮುಖ್ಯಾಂಶಗಳು

- ಕ್ಷೇತ್ರದಲ್ಲಿ ಸತತ 2 ಬಾರಿ ಗೆದ್ದಿರುವ ಬಿಜೆಪಿ
- 3ನೇ ಬಾರಿ ಸ್ಪರ್ಧೆಗೆ ಅಣಿಯಾಗುತ್ತಿರುವ ಪ್ರತಾಪ ಸಿಂಹ
- ಕಾಂಗ್ರೆಸ್ ಟಿಕೆಟ್‌ಗೆ 14 ಆಕಾಂಕ್ಷಿಗಳ ಅರ್ಜಿ

ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಯೋಚಿಸಿಲ್ಲ. ಆದರೆ ಪಕ್ಷ ಸೂಚಿಸಿದರೆ ಪಾಲಿಸಲೇಬೇಕಾಗುತ್ತದೆ

ಡಾ.ಯತೀಂದ್ರ ಸಿದ್ದರಾಮಯ್ಯ

ಮೈಸೂರು: ಮೈಸೂರು–ಕೊಡಗು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಹಾಗೂ ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸ್ಪರ್ಧಿಸುತ್ತಾರೆಯೇ ಎಂಬ ಚರ್ಚೆ ಮುನ್ನೆಲೆಗೆ ಬಂದಿದೆ. ಬಿಜೆಪಿಯೊಂದಿಗೆ ಮೈತ್ರಿ ಏರ್ಪಡಿಸಿಕೊಂಡಿರುವ ಜೆಡಿಎಸ್ ಪಾತ್ರದ ಕುರಿತೂ ಚರ್ಚೆ ನಡೆದಿದೆ.

ಕಾಂಗ್ರೆಸ್ ಟಿಕೆಟ್‌ಗೆ ತೀವ್ರ ಪೈಪೋಟಿ ಏರ್ಪಟ್ಟಿದ್ದು, 'ಕೈ' ಟಿಕೆಟ್ ಬಯಸಿ 14 ಮುಖಂಡರು ಅರ್ಜಿ ಸಲ್ಲಿಸಿದ್ದಾರೆ. ಪಕ್ಷದ ಜಿಲ್ಲಾ ಸಮಿತಿ ಹೈಕಮಾಂಡ್‌ಗೆ ಸಲ್ಲಿಸಿರುವ ಆಕಾಂಕ್ಷಿಗಳ ಪಟ್ಟಿಯಲ್ಲಿ ಯತೀಂದ್ರರ ಹೆಸರಿಲ್ಲ. 'ಯತೀಂದ್ರ ಸ್ಪರ್ಧಿಸುವುದಿಲ್ಲ' ಎಂದು ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಕೂಡ ಹೇಳಿದ್ದಾರೆ. ಆದರೆ, ಸಂಸದ ಪ್ರತಾಪ ಸಿಂಹ ಸೇರಿದಂತೆ ಬಿಜೆಪಿ ಮುಖಂಡರು ಯತೀಂದ್ರ ಅವರ ಹೆಸರನ್ನು ಮುನ್ನಲೆಗೆ ತರುತ್ತಿದ್ದಾರೆ. 'ತಮ್ಮ ಪುತ್ರನಿಗೆ ರಾಜಕೀಯ ಭವಿಷ್ಯ ಕಲ್ಪಿಸಲು ಮುಖ್ಯಮಂತ್ರಿ ನನ್ನ ವಿರುದ್ಧ ಹುನ್ನಾರ ನಡೆಸುತ್ತಿದ್ದಾರೆ' ಎಂಬ ಆರೋಪವನ್ನೂ ಸಂಸದರು ಆಗಾಗ ಮಾಡುತ್ತಿದ್ದಾರೆ.

'ವಿಧಾನಸಭೆ ಚುನಾವಣೆಯಲ್ಲಿ ತಮಗಾಗಿ ವರುಣ ಕ್ಷೇತ್ರವನ್ನು ಬಿಟ್ಟುಕೊಟ್ಟಿರುವ ಪುತ್ರನಿಗೆ 'ರಾಜಕೀಯ ಪುನರ್ವಸತಿ' ಕಲ್ಪಿಸಲೆಂದೇ ಅವರನ್ನು ಕಣಕ್ಕಿಳಿಸುವ ಬಗ್ಗೆ ಸಿದ್ದರಾಮಯ್ಯ ಗಂಭೀರವಾಗಿ ಯೋಚಿಸಿದ್ದಾರೆ. ತವರು ಜಿಲ್ಲೆ ಮೈಸೂರನ್ನು ಒಳಗೊಂಡಿರುವ ಕ್ಷೇತ್ರವನ್ನು ಗೆಲ್ಲುವುದು ಪ್ರತಿಷ್ಠೆಯ ವಿಷಯವಾಗಿದ್ದು, ಚುನಾವಣೆಯನ್ನು ಸವಾಲಾಗಿ ಸ್ವೀಕರಿಸಿದ್ದಾರೆ' ಎನ್ನಲಾಗುತ್ತಿದೆ.

ಆದರೆ, ಪಕ್ಷದ ಪ್ರಮುಖ ಸ್ಥಾನದಲ್ಲಿರುವ ಯಾರೊಬ್ಬರೂ ಅಧಿಕೃತವಾಗಿ ಹೇಳಿಕೆ ನೀಡುತ್ತಿಲ್ಲ. ಈ ನಡುವೆ, 'ಯತೀಂದ್ರ ಸ್ಪರ್ಧಿಸಿದರೆ ಬಿಜೆಪಿಗೆ ಪ್ರಬಲ ಪೈಪೋಟಿ ಕೊಡಬಹುದು' ಎಂಬ ಮಾತುಗಳು ಪಕ್ಷದ ವಲಯದಲ್ಲಿ ಕೇಳಿಬರುತ್ತಿವೆ. ಹೀಗಾಗಿಯೇ ಅವರ ಸ್ಪರ್ಧೆಯ ವಿಷಯವನ್ನು ಜೀವಂತವಾಗಿಡುವ ಪ್ರಯತ್ನ ನಡೆದಿದೆ.

ಆಕಾಂಕ್ಷಿಗಳು ಯಾರ‍್ಯಾರು?: ಮೈಸೂರು ಗ್ರಾಮಾಂತರ ಜಿಲ್ಲಾ ಸಮಿತಿಯ ಅಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ, 'ಮುಡಾ' ಮಾಜಿ ಅಧ್ಯಕ್ಷ ಸಿ. ಬಸವೇಗೌಡ, ಕೆಪಿಸಿಸಿ ಕಾರ್ಯದರ್ಶಿ ಗುರುಪಾದಸ್ವಾಮಿ, ವಕೀಲ ಚಂದ್ರಮೌಳಿ, ಮಾಜಿ ಶಾಸಕರಾದ ವಾಸು, ಎಂ.ಕೆ. ಸೋಮಶೇಖರ್, ಮುಖಂಡರಾದ ಜೆ.ಜೆ. ಆನಂದ್, ವರುಣ ಮಹೇಶ್, ಡಾ.ಸುಶ್ರುತ್ ಗೌಡ, ಗುರುಮಲ್ಲೇಶ, ಎ.ಎಚ್. ವಿಶ್ವನಾಥ್ ಹಾಗೂ ಕೆಪಿಸಿಸಿ ಉಪಾಧ್ಯಕ್ಷ ಸೂರಜ್ ಹೆಗಡೆ ಆಕಾಂಕ್ಷಿಗಳು.

ನಗರಾಭಿವೃದ್ಧಿ ಸಚಿವ ಬಿ.ಸುರೇಶ್ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಮಾಲೋಚನಾ ಸಭೆಯಲ್ಲಿ ಪಟ್ಟಿ ಸಿದ್ಧಪಡಿಸಲಾಗಿದೆ. 'ನಾನೂ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ' ಎಂದು ವಿಧಾನಪರಿಷತ್ ಬಿಜೆಪಿ ಸದಸ್ಯ ಎ.ಎಚ್. ವಿಶ್ವನಾಥ್ ಹೇಳುತ್ತಿರುವುದು ವಿಶೇಷ ಬೆಳವಣಿಗೆ.

ಸತತ 2 ಚುನಾವಣೆಗಳಲ್ಲಿ ಗೆದ್ದಿರುವ ಬಿಜೆಪಿಯ ಪ್ರತಾಪ ಸಿಂಹ 3ನೇ ಬಾರಿಗೆ ಸ್ಪರ್ಧೆಗೆ ಸಿದ್ಧತೆ ನಡೆಸುತ್ತಿದ್ದಾರೆ. ಆಕಾಂಕ್ಷಿಗಳ ಪಟ್ಟಿಯಲ್ಲಿ ಬೇರೆ ಹೆಸರುಗಳು ಕೇಳಿಬಂದಿಲ್ಲ. ಜೆಡಿಎಸ್‌ನ 'ಪಟ್ಟು' ಏನಾಗಿರಲಿದೆ ಎಂಬುದರ ಮೇಲೆ ಮೈತ್ರಿ ಅಭ್ಯರ್ಥಿ ಯಾರು ಎನ್ನುವುದು ಸ್ಪಷ್ಟವಾಗಲಿದೆ.



ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದ ನಕ್ಷೆ

'ಮೈತ್ರಿ' ಕುತೂಹಲ...

ಈ ಕ್ಷೇತ್ರದಲ್ಲಿ ಜೆಡಿಎಸ್– ಬಿಜೆಪಿ ಮೈತ್ರಿ ಅಭ್ಯರ್ಥಿ ಯಾರಾಗಬಹುದೆಂಬುದೂ ಕುತೂಹಲ ಮೂಡಿಸಿದೆ. ಈ ನಡುವೆ, 'ಯತೀಂದ್ರ ಸ್ಪರ್ಧಿಸಿದರೆ ನನಗೆ ಅನುಕೂಲ' ಎಂದು ಹಾಲಿ ಸಂಸದ, ಬಿಜೆಪಿಯ ಪ್ರತಾಪ ಸಿಂಹ ಅವರ ಇತ್ತೀಚಿನ ಹೇಳಿಕೆ ಗಮನ ಸೆಳೆದಿದೆ.

ಹಳೆಯ ಮೈಸೂರು ಪ್ರದೇಶದಲ್ಲಿ ಅಲುಗಾಡುತ್ತಿರುವ ಬೇರನ್ನು ಭದ್ರಪಡಿಸಿಕೊಳ್ಳಲು ಕಾರ್ಯತಂತ್ರ ರೂಪಿಸುತ್ತಿರುವ ಜೆಡಿಎಸ್ ನಾಯಕರು, ಕ್ಷೇತ್ರವನ್ನು ತಮಗೆ ಬಿಟ್ಟು ಕೊಡುವಂತೆ ಬಿಜೆಪಿ ವರಿಷ್ಠರಲ್ಲಿ ಬೇಡಿಕೆ ಇಟ್ಟಿದ್ದಾರೆ. ಮಾಜಿ ಸಚಿವ ಸಾ.ರಾ. ಮಹೇಶ್ ಅವರನ್ನು ಕಣಕ್ಕಿಳಿಸಲು ಬಯಸಿರುವ ಎಚ್.ಡಿ.ದೇವೇಗೌಡ ಹಾಗೂ ಎಚ್.ಡಿ. ಕುಮಾರಸ್ವಾಮಿ, ಜಾತಿ ಸಮೀಕರಣವನ್ನು ಮುಂದಿಟ್ಟಿದ್ದಾರೆ ಎಂದು ಗೊತ್ತಾಗಿದೆ. ಇದು ಯಶಸ್ವಿಯಾದರೆ, ಪ್ರತಾಪ ಸಿಂಹ ಅವರ ರಾಜಕೀಯ ಭವಿಷ್ಯವೇನು ಎಂಬ ಚರ್ಚೆಯೂ ನಡೆಯುತ್ತಿದೆ.

'ಈ ಬೆಳವಣಿಗೆಗಳಿಂದಾಗಿಯೇ, ಅವರು ಕುಮಾರಸ್ವಾಮಿಯವರನ್ನು ಭೇಟಿಯಾಗಿ ಸಹಕಾರ ಕೋರಿದ್ದಾರೆ' ಎನ್ನಲಾಗಿದೆ.

ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಾಬಲ್ಯ

ವಿಧಾನಸಭೆ ಚುನಾವಣೆ ನಂತರ ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಾಬಲ್ಯ ವೃದ್ಧಿಸಿದೆ. ಲೋಕಸಭಾ ಕ್ಷೇತ್ರದ 8 ವಿಧಾನಸಭೆ ಕ್ಷೇತ್ರಗಳ ಪೈಕಿ ಚಾಮರಾಜ, ಪಿರಿಯಾಪಟ್ಟಣ, ನರಸಿಂಹರಾಜ, ಮಡಿಕೇರಿ, ವಿರಾಜಪೇಟೆಯಲ್ಲಿ ಕಾಂಗ್ರೆಸ್ ಗೆದ್ದಿದೆ. ಚಾಮುಂಡೇಶ್ವರಿ ಹಾಗೂ ಹುಣಸೂರು ಜೆಡಿಎಸ್ ಪಾಲಾಗಿದ್ದರೆ, ಬಿಜೆಪಿ ಕೃಷ್ಣರಾಜದಲ್ಲಷ್ಟೇ ಗೆದ್ದಿದೆ.

ಸುದ್ದಿ 2 ನಿಮಿಷ

ಹೋರಾಡಿ ಟಿಕೆಟ್ ಪಡೆಯುವ ಮನಸ್ಥಿತಿಯಿಲ್ಲ: ಸಂಗಣ್ಣ ಕರಡಿ

ಕೊಪ್ಪಳ: 'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನನಗೆ ಟಿಕೆಟ್ ಕೊಟ್ಟರೂ, ಕೊಡದಿದ್ದರೂ ಪಕ್ಷದ ಪರವಾಗಿ ಕೆಲಸ ಮಾಡುತ್ತೇನೆ. ಹೋರಾಡಿ ಟಿಕೆಟ್ ಪಡೆಯುವ ಮನಸ್ಥಿತಿ ಇಲ್ಲ' ಎಂದು ಸಂಸದ ಸಂಗಣ್ಣ ಕರಡಿ ಹೇಳಿದರು.



ಬುಧವಾರ ಇಲ್ಲಿ ನಡೆದ ವಿಕಸಿತ ಭಾರತ ಸಂಕಲ್ಪ ಯಾತ್ರೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪಕ್ಷದ ಎಲ್ಲರ ಆಶೀರ್ವಾದದಿಂದ ಎರಡು ಬಾರಿ ಸಂಸದನಾಗಿದ್ದೇನೆ. ನನಗೆ ಟಿಕೆಟ್ ಕೊಟ್ಟರೆ ಮೂರನೇ ಬಾರಿಗೆ ಸ್ಪರ್ಧೆ ಮಾಡುವೆ. ಒಂದು ವೇಳೆ ಪಕ್ಷ ನನಗೆ ಟಿಕೆಟ್ ಕೊಡದಿದ್ದರೆ ಹೇಗಾದರೂ ಮಾಡಿ ಟಿಕೆಟ್ ಪಡೆಯಲೇಬೇಕು ಎನ್ನುವ ಮನಸ್ಥಿತಿಯಲ್ಲಿ ನಾನಿಲ್ಲ. ಕೆಲಸ ಮಾಡಿದ ನಾಯಕನನ್ನು ಮತದಾರರು ಕಳೆದುಕೊಳ್ಳಲು ಇಷ್ಟಪಡುವುದಿಲ್ಲ ಎಂದು ಭಾವಿಸಿದ್ದೇನೆ' ಎನ್ನುವ ಮೂಲಕ ತಾವು ಸಹ ಟಿಕೆಟ್ ಆಕಾಂಕ್ಷಿ ಎನ್ನುವ ಅಭಿಲಾಷೆಯನ್ನು ವ್ಯಕ್ತಪಡಿಸಿದರು.

ಬಿಜೆಪಿ ಎಸ್‌ಟಿ ಸಮಾವೇಶ ನಾಳೆ

ಬೆಂಗಳೂರು: ಬಿಜೆಪಿ ಎಸ್‌ಟಿ ಮೋರ್ಚಾದ ಸಮಾವೇಶ ಇದೇ 19 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿದೆ ಎಂದು ಮೋರ್ಚಾ ಅಧ್ಯಕ್ಷ ಬಂಗಾರು ಹನುಮಂತು ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಈ ಸಮಾವೇಶದಲ್ಲಿ ವಾಲ್ಮೀಕಿ ಸಮಾಜ ಸೇರಿ 52 ಎಸ್‌ಟಿ ಸಮುದಾಯಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಪಕ್ಷದ ರಾಜ್ಯ ಘಟಕ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಶಾಸಕರಾದ ಬಸವರಾಜ ಬೊಮ್ಮಾಯಿ, ರಮೇಶ ಜಾರಕಿಹೊಳಿ, ಮಾಜಿ ಸಚಿವರಾದ ಸಿ.ಟಿ.ರವಿ, ಬಿ.ಶ್ರೀರಾಮುಲು ಭಾಗವಹಿಸಲಿದ್ದಾರೆ ಎಂದರು.

ಶಾ-ಕುಮಾರಸ್ವಾಮಿ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆ ಚುನಾವಣೆಯ ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ಜೆ.ಪಿ. ನಡ್ಡಾ ಅವರೊಂದಿಗೆ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಬುಧವಾರ ಸಂಜೆ ಮಾತುಕತೆ ನಡೆಸಿದರು.

ಅಮಿತ್ ಶಾ ನಿವಾಸದಲ್ಲಿ ನಡೆದ ಸಭೆಯಲ್ಲಿ ಉಭಯ ನಾಯಕರು ಮೈತ್ರಿ ವಿಷಯವೂ ಸೇರಿದಂತೆ ರಾಜ್ಯ ರಾಜಕೀಯದ ಬಗ್ಗೆ ಸುಮಾರು 45 ನಿಮಿಷ ಸಮಾಲೋಚಿಸಿದರು.

'ಜೆಡಿಎಸ್ ಪಕ್ಷ ಅಧಿಕೃತವಾಗಿ ಎನ್‌ಡಿಎ ಮೈತ್ರಿಕೂಟಕ್ಕೆ ಸೇರ್ಪಡೆ, ಕ್ಷೇತ್ರ ಹಂಚಿಕೆ ಸೇರಿದಂತೆ ಎಲ್ಲ ಪ್ರಕ್ರಿಯೆಗಳನ್ನು ಜನವರಿ 22ರ ನಂತರ ಅಂತಿಮಗೊಳಿಸೋಣ. ರಾಜ್ಯದ 28 ಲೋಕಸಭೆ ಕ್ಷೇತ್ರಗಳಲ್ಲಿ ಮೈತ್ರಿಕೂಟ ಗೆಲ್ಲಬೇಕು. ಎರಡೂ ಪಕ್ಷಗಳು ವಿಶ್ವಾಸ ಹಾಗೂ ನಂಬಿಕೆಯಿಂದ ಚುನಾವಣೆ ಎದುರಿಸಲು ಎಲ್ಲ ನಿರ್ಧಾರಗಳನ್ನು ಮಾಡೋಣ' ಎಂದು ಶಾ ಅವರು ಕುಮಾರಸ್ವಾಮಿ ಅವರಿಗೆ ತಿಳಿಸಿದರು.

ದೆಹಲಿಯಲ್ಲಿ ಬುಧವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌ಡಿ.ಕುಮಾರಸ್ವಾಮಿ ಭೇಟಿಯಾದರು

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ಒಂದು ವರ್ಷ ತುಂಬುವುದಕ್ಕೆ ಮೊದಲೇ ಆಡಳಿತ ವಿರೋಧಿ ಅಲೆ ಸೃಷ್ಟಿಯಾಗಿದೆ. ಜನರು ಇನ್ನಿಲ್ಲದ ಸಂಕಷ್ಟ ಅನುಭವಿಸುತ್ತಿದ್ದಾರೆ. ರಾಜ್ಯ ಸರ್ಕಾರದ ವೈಫಲ್ಯಗಳನ್ನು ಜನರ ಗಮನಕ್ಕೆ ಪರಿಣಾಮಕಾರಿಯಾಗಿ ತರುವ ಬಗ್ಗೆ ಚರ್ಚಿಸಲಾಯಿತು' ಎಂದು ಕುಮಾರಸ್ವಾಮಿ ಹೇಳಿದರು.

'ರಾಜ್ಯದಲ್ಲಿನ ಭೀಕರ ಬರದ ಬಗ್ಗೆಯೂ ಗೃಹ ಸಚಿವರ ಗಮನಕ್ಕೆ ತಂದಿದ್ದೇನೆ. ಬರಪೀಡಿತ ಜನರಿಗೆ ರಾಜ್ಯ ಸರ್ಕಾರ ಈವರೆಗೆ ಬಿಡಿಗಾಸನ್ನೂ ಕೊಟ್ಟಿಲ್ಲ ಎಂಬುದು ಶಾ ಅವರಿಗೆ ಗೊತ್ತಿದೆ' ಎಂದರು.

ಅಭ್ಯರ್ಥಿ ಗುಟ್ಟು ಬಿಟ್ಟುಕೊಡದ ಬಿಜೆಪಿ, ಕಾಂಗ್ರೆಸ್

ದಾವಣಗೆರೆ ಲೋಕಸಭಾ ಕ್ಷೇತ್ರ: ಕಣದ ಕಲಿಗಳ ಬಗ್ಗೆ ಮತದಾರರಲ್ಲಿ ಗರಿಗೆದರಿದ ಕುತೂಹಲ

• ಸಿದ್ದಯ್ಯ ಹಿರೇಮಠ

ಜಿ.ಎಂ. ಸಿದ್ದೇಶ್ವರ

ರೇಣುಕಾಚಾರ್ಯ

ದಾವಣಗೆರೆ: ಲೋಕಸಭೆ ಚುನಾವಣೆಗೆ ನಾಲ್ಕು ತಿಂಗಳಷ್ಟೇ ಉಳಿದಿದ್ದು, ದಾವಣಗೆರೆ ಕ್ಷೇತ್ರದಲ್ಲಿ ಯಾವ ಪಕ್ಷದಿಂದ ಯಾರು ಕಣಕ್ಕಿಳಿಯಬಹುದು ಎಂಬ ಚರ್ಚೆಗಳು ಮತದಾರರ ವಲಯದಲ್ಲಿ ಆರಂಭವಾಗಿವೆ. ಆದರೆ, ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಅಭ್ಯರ್ಥಿ ಕುರಿತು ಗುಟ್ಟು ಬಿಟ್ಟುಕೊಡುತ್ತಿಲ್ಲ.

ಸತತ ನಾಲ್ಕು ಬಾರಿ ಆಯ್ಕೆಯಾಗಿರುವ ಹಾಲಿ ಸಂಸದ, ಬಿಜೆಪಿಯ ಜಿ.ಎಂ. ಸಿದ್ದೇಶ್ವರ ತಮಗೇ ಮತ್ತೆ ಸ್ಪರ್ಧೆಗೆ ಅವಕಾಶ ದೊರೆಯಬಹುದು ಎಂಬ ಸಂಪೂರ್ಣ ವಿಶ್ವಾಸದಲ್ಲಿದ್ದಾರೆ. '70 ವರ್ಷ ದಾಟಿರುವ ಹಿನ್ನೆಲೆಯಲ್ಲಿ ಒಂದೊಮ್ಮೆ ನನ್ನನ್ನು ಪರಿಗಣಿಸದಿದ್ದರೆ, ಪುತ್ರ ಅನಿತ್‌ಕುಮಾರ್ ಅಥವಾ ಸೋದರ ಜಿ.ಎಂ. ಲಿಂಗರಾಜ್ ಅವರಿಗಾದರೂ ಟಿಕೆಟ್ ಕೊಡಿ' ಎಂಬ ಬೇಡಿಕೆ ಇರಿಸಿದ್ದಾರೆ ಎಂದು ತಿಳಿದುಬಂದಿದೆ.

ಸಮೀಕ್ಷೆ ಆಧರಿಸಿ ನಿರ್ಧರಿಸಿ: 'ಲೋಕಸಭೆ ಚುನಾವಣೆಯ ಟಿಕೆಟ್ ಹಂಚಿಕೆಗೆ ಮುನ್ನ ಕ್ಷೇತ್ರದಾದ್ಯಂತ ಸಮೀಕ್ಷೆ ನಡೆಸಿ, ಯಾರಿಗೆ ಮತದಾರ ಒಲಿಯಬಹುದು ಎಂಬುದನ್ನು ತಿಳಿದು ಟಿಕೆಟ್ ಹಂಚಿಕೆ ಮಾಡಿ' ಎಂದು ಪ್ರಮುಖ ಆಕಾಂಕ್ಷಿ, ವಿಧಾನಸಭೆ ಚುನಾವಣೆಯಲ್ಲಿ ಹೊನ್ನಾಳಿ ಕ್ಷೇತ್ರದಿಂದ ಪರಾಜಿತರಾಗಿರುವ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಬಹಿರಂಗವಾಗಿ ಮನವಿ ಮಾಡಿದ್ದಾರೆ.

'ಜಿ.ಎಂ. ಸಿದ್ದೇಶ್ವರ ಅವರ ಬದಲಿಗೆ ನನ್ನನ್ನೇ ಪರಿಗಣಿಸಿ' ಎಂದೂ ವಿಧಾನಸಭೆ ಚುನಾವಣೆಯ ಸೋಲಿನ ಕೆಲವೇ ದಿನಗಳ ನಂತರ ಬೇಡಿಕೆ ಸಲ್ಲಿಸುತ್ತಲೇ ಬಂದಿರುವ ರೇಣುಕಾಚಾರ್ಯ, ಇತ್ತೀಚೆಗೆ ದಾವಣಗೆರೆಯಲ್ಲೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಇವರು ಟಿಕೆಟ್ ಕೋರಿದ್ದಕ್ಕೆ ತಮ್ಮ ಅಸಮಾಧಾನ ಹೊರಹಾಕಿದ್ದ ಸಿದ್ದೇಶ್ವರ, 'ಅವರು ಇಲ್ಲಿಗೆ ಬರಲಿ. ನಾನು ಹೊನ್ನಾಳಿಗೆ ಹೋಗಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುತ್ತೇನೆ' ಎಂದು ಸವಾಲು ಎಸೆದಿದ್ದರು.

ಜಗಳೂರಿನ ಮಾಜಿ ಶಾಸಕ ಗುರುಸಿದ್ದನಗೌಡ ಅವರ ಪುತ್ರ ಡಾ.ಟಿ.ಜಿ. ರವಿ ಕುಮಾರ್, ಪಕ್ಷದ ಮುಖಂಡ ಕೆ.ಜಿ. ಕೊಟ್ರೇಶ್ ಮತ್ತಿತರರು ಬಿಜೆಪಿಯ ಆಕಾಂಕ್ಷಿಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿದ್ದಾರೆ.

'ಇಂಥವರಿಗೇ ಬಿಜೆಪಿ ಟಿಕೆಟ್ ಸಿಗಲಿದೆ' ಎಂಬುದನ್ನು ಖಚಿತವಾಗಿ ಹೇಳಲಾಗದು ಎಂಬುದಕ್ಕೆ ಪುಷ್ಟಿ ಎಂಬಂತೆ, ಮೂರು ದಿನಗಳ ಹಿಂದಷ್ಟೇ ಪ್ರಕಟವಾದ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನದ ನೇಮಕವು ಅಧ್ಯಕ್ಷ ಸ್ಥಾನದ ಪ್ರಮುಖ ಆಕಾಂಕ್ಷಿಗಳಲ್ಲಿ ನಿರಾಸೆ ಮೂಡಿಸಿತ್ತು.

2019ರಲ್ಲಿ ನಡೆದ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದು ಸೋತಿದ್ದ ಸಂಘ ಪರಿವಾರ ಮೂಲದ ಎನ್.ರಾಜಶೇಖರ್ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಪರಿಗಣಿಸಿರುವುದು ಲೋಕಸಭೆ ಚುನಾವಣೆಯ ಟಿಕೆಟ್ ಆಕಾಂಕ್ಷಿಗಳಲ್ಲೂ ಆಸೆ ಮೂಡಿಸಿದೆ. 'ಪಕ್ಷ ಯಾರನ್ನಾದರೂ ಪರಿಗಣಿಸಬಹುದು' ಎಂಬುದೇ ಸ್ಪರ್ಧಾಕಾಂಕ್ಷೆ ಚಿಗುರೊಡೆಯಲು ಪ್ರೇರಣೆ ಆಗಿದೆ.

ವಿನಯ ಪಾದಯಾತ್ರೆ


ವಿನಯ್ ಕುಮಾರ್ ಜಿ.ಬಿ.

ಇನ್ನೊಂದೆಡೆ ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ, ದಾವಣಗೆರೆ ತಾಲ್ಲೂಕಿನ ಕಕ್ಕರಗೊಳ್ಳ ಮೂಲದ ಜಿ.ಬಿ. ವಿನಯಕುಮಾರ್ ಕಾಂಗ್ರೆಸ್ ಟಿಕೆಟ್ ಕೋರಿದ್ದು, ಕಳೆದ ಒಂದು ವರ್ಷದಿಂದ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಲೋಕಸಭೆ ಕ್ಷೇತ್ರದಾದ್ಯಂತ ಒಂದು ತಿಂಗಳಿಂದ 'ವಿನಯ ನಡಿಗೆ' ಹೆಸರಿನ ಪಾದಯಾತ್ರೆಯನ್ನೂ ಆರಂಭಿಸಿ ಜನರನ್ನು ಭೇಟಿ ಮಾಡುತ್ತಿದ್ದಾರೆ. 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಬಲ ಇರುವುದರಿಂದ ಟಿಕೆಟ್ ದೊರೆಯಲಿದೆ ಎಂಬ ಸಂಪೂರ್ಣ ವಿಶ್ವಾಸವೂ ವಿನಯಕುಮಾರ್ ಅವರಲ್ಲಿದೆ' ಎಂಬ ಮಾತು ಕಾಂಗ್ರೆಸ್ ವಲಯದಲ್ಲಿ ಕೇಳಿಬರುತ್ತಿದೆ.

ವಿನಯಕುಮಾರ್ ಅವರ ಸಂಬಂಧಿ ಶಿವಕುಮಾರ್ ಒಡೆಯರ್ ಸಹ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದು, ಇತರ ಕೆಲವರೂ ತಮ್ಮ ಆಕಾಂಕ್ಷೆಯನ್ನು ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಟಿಕೆಟ್‌ಗೂ ಸ್ಪರ್ಧೆ

ಡಾ.ಪ್ರಭಾ ಮಲ್ಲಿಕಾರ್ಜುನ್

ಕಾಂಗ್ರೆಸ್ ವಲಯದಲ್ಲೂ ಟಿಕೆಟ್‌ಗೆ ತೀವ್ರ ಬೇಡಿಕೆ ಇದ್ದು, ಶಾಸಕ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರು ತಮ್ಮ ಕುಟುಂಬ ಸದಸ್ಯರಿಗೇ ಟಿಕೆಟ್ ಗಿಟ್ಟಿಸಿಕೊಳ್ಳಲಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ.

ಕಳೆದ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋತಿದ್ದ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಬಿ. ಮಂಜಪ್ಪ ಈ ಬಾರಿಯೂ ತಮಗೆ ಅವಕಾಶ ದೊರೆಯಬಹುದು ಎಂಬ ಆಶಾಭಾವ ಹೊಂದಿದ್ದಾರಾದರೂ, ಈವರೆಗೆ ಸ್ಪರ್ಧಾಕಾಂಕ್ಷೆಯ ಕುರಿತು ಬಹಿರಂಗ ಹೇಳಿಕೆ ನೀಡಿಲ್ಲ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪತ್ನಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಕಣಕ್ಕಿಳಿಸುವ ನಿಟ್ಟಿನಲ್ಲಿ ಶಾಮನೂರು ಶಿವಶಂಕರಪ್ಪ ಮನಸು ಮಾಡಿದ್ದಾರೆ. ಅಂತೆಯೇ ಡಾ.ಪ್ರಭಾ ಅವರು ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರೊಂದಿಗೆ ಸಂಪರ್ಕದೊಂದಿಗೆ ಇದ್ದಾರೆ. ಸಭೆ– ಸಮಾರಂಭಗಳಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ.

'ನನ್ನ ಸ್ಪರ್ಧೆಯ ವಿಚಾರವಾಗಿ ಮನೆಯಲ್ಲಿ ಚರ್ಚೆ ನಡೆದಿಲ್ಲ. ಪತಿ ಸಚಿವರಾಗಿದ್ದು, ಮಾವ ಶಾಸಕರಾಗಿರುವುದರಿಂದ ಸಾಮಾಜಿಕ ಕೆಲಸ ನಿರ್ವಹಿಸಬೇಕಿದೆ. ಆರೋಗ್ಯ ಸೇವೆ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೇನೆಯೇ ಹೊರತು ಚುನಾವಣೆ ದೃಷ್ಟಿಯಿಂದಲ್ಲ. ಚುನಾವಣೆ ಪ್ರತಿ ಐದು ವರ್ಷಕ್ಕೊಮ್ಮೆ ಬರುತ್ತದೆ. ನಮ್ಮ ಎಸ್.ಎಸ್. ಕೇರ್ ಟ್ರಸ್ಟ್‌ನ ಸೇವೆ ನಿರಂತರ' ಎಂದು ಡಾ.ಪ್ರಭಾ ಹೇಳಿದ್ದು, ಅವರ ಸ್ಪರ್ಧೆಯ ಬಗ್ಗೆ ಸ್ಪಷ್ಟತೆ ಮೂಡಿಲ್ಲ.

ಶಿಖಾ, ದಿವ್ಯಾ ಪ್ರಭುಗೆ ಸಿಇಸಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಸಿ. ಶಿಖಾ

ದಿವ್ಯಾ ಪ್ರಭು

ಬೆಂಗಳೂರು: ಮತದಾರರ ದಿನದ ಅಂಗವಾಗಿ ಕೇಂದ್ರ ಚುನಾವಣಾ ಆಯೋಗವು ನೀಡುವ ರಾಷ್ಟ್ರಮಟ್ಟದ ವಿಶೇಷ ಪ್ರಶಸ್ತಿಗಳಿಗೆ ರಾಜ್ಯದ ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತೆ ಸಿ. ಶಿಖಾ ಮತ್ತು ಚಿತ್ರದುರ್ಗ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಜಿ.ಆರ್. ಆಯ್ಕೆಯಾಗಿದ್ದಾರೆ.

ಚುನಾವಣಾ ಪ್ರಕ್ರಿಯೆಯಲ್ಲಿನ ಕ್ರಿಯಾಶೀಲ ಪ್ರಯೋಗಗಳನ್ನು ಗುರುತಿಸಿ ಕೇಂದ್ರ ಚುನಾವಣಾ ಆಯೋಗ (ಸಿಇಸಿ) ಪ್ರಶಸ್ತಿ ನೀಡುತ್ತದೆ. ಇದೇ 25ರಂದು ದೆಹಲಿಯಲ್ಲಿ ನಡೆಯುವ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

2023ರ ವಿಧಾನಸಭಾ ಚುನಾವಣೆಯಲ್ಲಿ ಉಚಿತ ಉಡುಗೊರೆಗಳ ವಿತರಣೆಯನ್ನು ತಡೆಯಲು ವಾಣಿಜ್ಯ ತೆರಿಗೆ ಇಲಾಖೆ ಮೂಲಕ ಕೈಗೊಂಡ ಕ್ರಮಗಳಿಗಾಗಿ ಶಿಖಾ ಅವರನ್ನು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಸರ್ಕಾರಿ ಇಲಾಖೆಯ ವಿಭಾಗದಲ್ಲಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಚಿತ್ರದುರ್ಗ ಜಿಲ್ಲಾ ಚುನಾವಣಾಧಿಕಾರಿಯಾಗಿದ್ದ ದಿವ್ಯಾ ಅವರು ಮತದಾರರ ಪಟ್ಟಿ ನಿರ್ವಹಣೆ, ಯುವ ಮತದಾರರ ನೋಂದಣಿ, ವಿಶೇಷ ಮತದಾರರ ನೋಂದಣಿ ಸೇರಿದಂತೆ ರಾಷ್ಟ್ರ ಮಟ್ಟದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿರುವುದನ್ನು ಗುರುತಿಸಿ ಸಾಮಾನ್ಯ ವಿಭಾಗದಲ್ಲಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

ಕಲ್ಲಡ್ಕಗೆ ನಿರೀಕ್ಷಣಾ ಜಾಮೀನು

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಹನುಮಾನ್ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ಸಂದರ್ಭದಲ್ಲಿ ವಿವಾದಾತ್ಮಕ ಹೇಳಿಕೆ ನೀಡಿದ್ದ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಅವರಿಗೆ ಪಟ್ಟಣದ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಬುಧವಾರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

₹ 2 ಲಕ್ಷ ಮುಚ್ಚಳಿಕೆ ಬಾಂಡ್ ಮತ್ತು ಇಬ್ಬರು ವ್ಯಕ್ತಿಗಳ ಜಾಮೀನು ಷರತ್ತಿಗೆ ಅನುಗುಣವಾಗಿ ನ್ಯಾಯಾಧೀಶರಾದ ಗೋಪಾಲಕೃಷ್ಣ ರೈ ಅವರು ಜಾಮೀನು ಮಂಜೂರು ಮಾಡಿದರು.

'ಪಕ್ಷದಲ್ಲಿ ಯತೀಂದ್ರರಿಗೆ ನಂಬಿಕೆ ಇಲ್ಲ'

ಪ್ರಜಾವಾಣಿ ವಾರ್ತೆ

ಹಾಸನ: 'ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸಿದರೆ ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿಯಾಗಿರಲಿದ್ದಾರೆ ಎಂದು ಅವರ ಪುತ್ರ ಡಾ.ಯತೀಂದ್ರ ಹೇಳಿಕೆ ಗಮನಿಸಿದರೆ, ಪಕ್ಷದಲ್ಲಿ ಅವರಿಗೆ ನಂಬಿಕೆ ಇಲ್ಲವೆಂಬುದು ಮನವರಿಕೆಯಾಗುತ್ತದೆ' ಎಂದು ಸಂಸದ ಪ್ರಜ್ವಲ್ ರೇವಣ್ಣ ಟೀಕಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿರಲು ಕಾಂಗ್ರೆಸ್ ಪಕ್ಷ ಟಾರ್ಗೆಟ್ ಕೊಟ್ಟಿದೆಯೇ ಅಥವಾ ಅವರ ಜನಪ್ರಿಯತೆಗೆ ಆ ಸ್ಥಾನವನ್ನು ನೀಡಿದ್ದಾರೆಯೇ ಎಂಬ ಬಗ್ಗೆ ಸ್ಪಷ್ಟೀಕರಣ ನೀಡಬೇಕಿದೆ' ಎಂದರು.

'ರಾಜ್ಯ ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿಗಳಿಂದ ಆರ್ಥಿಕ ಹೊರೆಯಾಗುತ್ತಿದೆ ಎಂದು ಅವರ ಪಕ್ಷದ ಸಚಿವರೇ ಬಹಿರಂಗಪಡಿಸಿದ್ದಾರೆ. ಲೋಕಸಭೆ ಚುನಾವಣೆಯ ನಂತರ ಗ್ಯಾರಂಟಿ ಯೋಜನೆಗಳು ಮುಂದುವರಿಯುವುದಿಲ್ಲ. ಇದೆಲ್ಲ ರಾಜಕೀಯ ಗಿಮಿಕ್ ಎಂದು ಟೀಕಿಸಿದರು.

'ಪುತ್ರನ ಹೆಗಲ ಮೇಲೆ ಬಂದೂಕಿಟ್ಟ ಸಿ.ಎಂ'

ಮೈಸೂರು: 'ಇಷ್ಟು ದಿನ, ಎಂ.ಬಿ.ಪಾಟೀಲ, ಸತೀಶ್ ಜಾರಕಿಹೊಳಿ, ಕೆ.ಎನ್. ರಾಜಣ್ಣ, ಜಮೀರ್ ಅಹಮದ್ ಅವರ ಮೂಲಕ ಐದು ವರ್ಷ ತಾವೇ ಸಿಎಂ ಎಂದು ಸಿದ್ದರಾಮಯ್ಯ ಹೇಳಿಸುತ್ತಿದ್ದರು. ಇದೀಗ ಪುತ್ರನ ಹೆಗಲಿನ ಮೇಲೆ ಬಂದೂಕಿಟ್ಟು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಗುಂಡು ಹಾರಿಸುತ್ತಿದ್ದಾರೆ' ಎಂದು ಸಂಸದ ಪ್ರತಾಪ ಸಿಂಹ ವ್ಯಂಗ್ಯವಾಡಿದರು.

'ಶಿವಕುಮಾರ್ ಅವರನ್ನು ನೋಡಿದರೆ ಪಾಪ ಅನ್ನಿಸುತ್ತದೆ: ಪಕ್ಷವನ್ನು ಸಮರ್ಥವಾಗಿ ಮುನ್ನಡೆಸಿ ಅಧಿಕಾರಕ್ಕೆ ತಂದರು. ಆದರೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾದರು' ಎಂದು ಹೇಳಿದರು.

ಸಂಗೊಳ್ಳಿ ಉತ್ಸವ ಉದ್ಘಾಟನಾ ಸಮಾರಂಭದಲ್ಲಿ ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದ ಸಿದ್ದರಾಮಯ್ಯ

'ರಾಯಣ್ಣನ ದೇಶಪ್ರೇಮ ನೋಡಿ ಕಲಿಯಿರಿ'

ಪ್ರಜಾವಾಣಿ ವಾರ್ತೆ

ಸಂಗೊಳ್ಳಿ (ಬೆಳಗಾವಿ ಜಿಲ್ಲೆ): 'ದೇಶಭಕ್ತಿ, ದೇಶಪ್ರೇಮದ ಬಗ್ಗೆ ಕೆಲವರು ಬರೀ ಬಾಯಿ ಬಡಿದುಕೊಳ್ಳುತ್ತಾರೆ. ಅದು ಬರೀ ಭಾಷಣದ ಸರಕಲ್ಲ. ನಿಮ್ಮಂಥವರು ಸಂಗೊಳ್ಳಿ ರಾಯಣ್ಣನ ನೋಡಿ ಕಲಿಯಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿಯಲ್ಲಿ ಬುಧವಾರ ಸಂಗೊಳ್ಳಿ ರಾಯಣ್ಣ ಉತ್ಸವ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆ, ಸಮುದಾಯ ಭವನ, ಭೋಜನಾಲಯ ಹಾಗೂ ಶಿಲ್ಪವನ ಉದ್ಘಾಟಿಸಿ ಅವರು ಮಾತನಾಡಿದರು.

'ಕಿತ್ತೂರು ಚನ್ನಮ್ಮ, ರಾಯಣ್ಣ, ಹಲಗಲಿ ಬೇಡರು, ಸುರಪುರದ ವೆಂಕಟಪ್ಪ ನಾಯಕ, ಟಿಪ್ಪು ಸುಲ್ತಾನ್ ಮುಂತಾದವರು ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೂ ಮೊದಲೇ ಬ್ರಿಟಿಷರ ವಿರುದ್ಧ ಹೋರಾಡಿದವರು. ಈಗ ದೇಶಪ್ರೇಮದ ಬಗ್ಗೆ ದೊಡ್ಡದಾಗಿ ಮಾತನಾಡುವವರೆಲ್ಲ ಆಗ ಎಲ್ಲಿದ್ದರು' ಎಂದು ಅವರು ಪ್ರಶ್ನಿಸಿದರು.

ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿಯಲ್ಲಿ ಬುಧವಾರ 'ಸಂಗೊಳ್ಳಿ ರಾಯಣ್ಣ ಉತ್ಸವ'ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಪ್ರಮುಖರಾದ ಬಿ.ಎಸ್‌.ಸುರೇಶ್, ಮಹಾಂತೇಶ ಕೌಜಲಗಿ, ಶಿವರಾಜ ತಂಗಡಗಿ, ನಿರಂಜನಾನಂದಪುರಿ ಸ್ವಾಮೀಜಿ, ಸತೀಶ ಜಾರಕಿಹೊಳಿ, ಗುರುಲಿಂಗ ಶಿವಾಚಾರ್ಯ ಸ್ವಾಮೀಜಿ, ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ, ಅಶೋಕ ಪಟ್ಟಣ, ವಿಶ್ವಾಸ ವೈದ್ಯ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

'ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದು ಕಾಂಗ್ರೆಸ್‌ನವರು. ಇತಿಹಾಸ ಸರಿಯಾಗಿ ಓದಿಕೊಳ್ಳಿ. ಇತಿಹಾಸ ಅರಿಯದವ ಭವಿಷ್ಯ ನಿರ್ಮಿಸಲು ಸಾಧ್ಯವಿಲ್ಲ ಎಂಬ ಅಂಬೇಡ್ಕರ್ ಮಾತು ಅರ್ಥ ಮಾಡಿಕೊಳ್ಳಿ' ಎಂದು ಹೇಳಿದರು.

'ಪ್ರತಿಯೊಬ್ಬರೂ ರಾಯಣ್ಣನಂತೆ ತಾಯ್ನಾಡು ಪ್ರೀತಿಸಬೇಕು. ನಮ್ಮ ನಾಡನ್ನು, ದೇಶವನ್ನು ನಾವಲ್ಲದೇ ಇನ್ಯಾರು ಪ್ರೀತಿಸುತ್ತಾರೆ? ಇದಕ್ಕಾಗಿ ಸೈನಿಕ ಶಾಲೆಗಳು ದಾರಿ ತೋರಿಸಬೇಕು' ಎಂದರು.

ಶೇ 65 ಮೀಸಲಾತಿ: 'ಸಂಗೊಳ್ಳಿಯ ಸೈನಿಕ ಶಾಲೆಯಲ್ಲಿ ಕರ್ನಾಟಕದ ಮಕ್ಕಳಿಗೆ ಶೇ 65ರಷ್ಟು ಮೀಸಲಾತಿ ನೀಡಲಾಗುವುದು. ಈಗಾಗಲೇ ವಿಜಯಪುರ ಸೈನಿಕ ಶಾಲೆಯಲ್ಲಿ ಕನ್ನಡ ನಾಡಿನ ಮಕ್ಕಳಿಗೆ ಶೇ 65ರಷ್ಟು ಮೀಸಲಾತಿ ಇದೆ. ಅದೇ ಮಾದರಿ ಇಲ್ಲಿಯೂ ಮುಂದುವರಿಯಲಿದೆ. ಶಾಲೆ ನಿರ್ವಹಣೆಗೆ ಇನ್ನೂ ಹೆಚ್ಚಿನ ಅನುದಾನ ನೀಡಲಾಗುವುದು' ಎಂದರು.

'ತಾಯ್ನಾಡಿಗಾಗಿ ಬಲಿದಾನ ಮಾಡಿದ ರಾಯಣ್ಣನ ಭೂಮಿಯಲ್ಲಿ 100 ಎಕರೆ ಪ್ರದೇಶದಲ್ಲಿ ಸೈನಿಕ ಶಾಲೆ, 10 ಎಕರೆಯಲ್ಲಿ ಶಿಲ್ಪವನ ಉದ್ಘಾಟಿಸಿದ್ದು ನನಗೆ ಹೆಮ್ಮೆ ತಂದಿದೆ. ಈ ಹಿಂದೆ ನಾನೇ ಈ ಯೋಜನೆಗೆ ಅಡಿಗಲ್ಲು ಇಟ್ಟಿದ್ದೆ. ಈಗ ನನ್ನ ಕನಸು ನನಸಾಗಿದೆ' ಎಂದರು.

ಮಹಾರಾಷ್ಟ್ರ ಸರ್ಕಾರ ರಾಜ್ಯದೊಳಗೆ ಬರಬಾರದು. 865 ಹಳ್ಳಿಗಳಿಗೆ ಜನಾರೋಗ್ಯ ವಿಮೆ ಜಾರಿ ಮಾಡಿದ ಬಗ್ಗೆ ನಮ್ಮ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದೇನೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಸಂಗೊಳ್ಳಿ ರಾಯಣ್ಣ ಅಭಿವೃದ್ಧಿ ಪ್ರಾಧಿಕಾರಕ್ಕೆ ₹267 ಕೋಟಿ ಹಣ ನೀಡಿದ್ದೇನೆ. ರಾಯಣ್ಣನ ಊರು, ನೇಣುಗಂಬಕ್ಕೆ ಏರಿದ ಊರು, ಬಂಧನಕ್ಕೆ ಒಳಗಾದ ಕೆರೆ ಸೇರಿ ಎಲ್ಲ ಪ್ರದೇಶಗಳನ್ನೂ ಅಭಿವೃದ್ಧಿ ಮಾಡಲಾಗುವುದು' ಎಂದರು.

'ಈ ದೇಶದಲ್ಲಿ ಬರೀ ಮೋಸದ ಗೆಲುವು'

'ಈ ದೇಶವನ್ನು ಮೊಘಲರು 600 ವರ್ಷ, ಬ್ರಿಟಿಷರು 200 ವರ್ಷ ಆಳಿದರು. ಅವರ‍್ಯಾರೂ ಸ್ವಂತ ಬಲದ ಮೇಲೆ ಗೆದ್ದವರಲ್ಲ. ಸ್ವಂತ ಬುದ್ಧಿಯಿಂದ ಆಳಿದವರಲ್ಲ. ನಮ್ಮವರನ್ನೇ ಬಳಸಿಕೊಂಡು ಮೋಸದಿಂದ ಗೆದ್ದರು. ಈ ದೇಶದಲ್ಲಿ ಬರೀ ಇಂಥದ್ದೇ ನಡೆದಿದೆ' ಎಂದು ಸಿದ್ದರಾಮಯ್ಯ ಹೇಳಿದರು.

'ಮೊದಲ ಆಂಗ್ಲೊ- ಕಿತ್ತೂರು ಯುದ್ಧದಲ್ಲಿ ನಮ್ಮವರು ಗೆದ್ದರು. ಎರಡನೇ ಬಾರಿ ನಮ್ಮವರನ್ನೇ ಬಳಸಿಕೊಂಡು ಬ್ರಿಟಿಷರು ಮೋಸ ಮಾಡಿ ಗೆದ್ದು, ಅಧಿಕಾರ ಹಿಡಿದರು' ಎಂದರು.

ಒಳಮೀಸಲು: ಕೇಂದ್ರದ ಹೆಗಲಿಗೆ?

ಒಂದನೇ ಪುಟದಿಂದ...

ಸಂಪುಟ ಉಪ ಸಮಿತಿ 2011ರ ಜನಗಣತಿಯಂತೆ ಒಟ್ಟು 101 ಪರಿಶಿಷ್ಟ ಜಾತಿಗಳ ಜಾತಿವಾರು ಜನಸಂಖ್ಯೆಯನ್ನು ಪರಿಗಣಿಸಿ ನಾಲ್ಕು ಗುಂಪುಗಳಾಗಿ ವರ್ಗೀಕರಿಸಿ, ಒಳ ಮೀಸಲಾತಿ ಅನುಷ್ಠಾನ ಮಾಡುವಂತೆ ಸಚಿವ ಸಂಪುಟ ಸಭೆಗೆ ಶಿಫಾರಸು ಮಾಡಿತ್ತು. 2023ರ ಮಾರ್ಚ್ 24ರಂದು ನಡೆದ ಸಚಿವ ಸಂಪುಟ ಸಭೆಯು ಉಪ ಸಮಿತಿಯ ಶಿಫಾರಸನ್ನು ಅನುಮೋದಿಸಿತು. ಗುಂಪುಗಳ ವರ್ಗೀಕರಣ, ಶೇಕಡವಾರು ಮೀಸಲಾತಿ ನಿಗದಿಪಡಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಸಂಪುಟ ಸಭೆ ನಿರ್ಣಯಿಸಿತ್ತು. ಹಾಗೆಯೇ, ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಭೋವಿ, ಬಂಜಾರ, ಕೊರಮ, ಕೊರಚ ಜಾತಿಗಳನ್ನು ಉಳಿಸಿಕೊಳ್ಳುವಂತೆ ನಿರ್ಣಯ ಕೈಗೊಳ್ಳಲಾಗಿತ್ತು.

'ಸುಪ್ರೀಂ'ನಲ್ಲಿ ಪರಿಶಿಷ್ಟರ ವರ್ಗೀಕರಣ: ಸಚಿವ ಸಂಪುಟ ಸಭೆಯ ನಿರ್ಣಯವನ್ನು ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯಕ್ಕೆ ಸರ್ಕಾರ 2023ರ ಮಾರ್ಚ್ 28 ಮತ್ತು 31ರಂದು ಪ್ರಸ್ತಾವ ಸಲ್ಲಿಸಿತು. ಈ ಬಗ್ಗೆ 2023ರ ಜೂನ್ 8ರಂದು ರಾಜ್ಯಕ್ಕೆ ಪತ್ರ ಬರೆದಿದ್ದ ಕೇಂದ್ರ ಸರ್ಕಾರ, 'ಪಂಜಾಬ್ ರಾಜ್ಯ ಸರ್ಕಾರ ಹಾಗೂ ದೇವಿಂದರ್ ಸಿಂಗ್ ಮತ್ತು ಇತರರ ಮಧ್ಯದ ಪ್ರಕರಣದಲ್ಲಿ 2020ರ ಆಗಸ್ಟ್ 27ರಂದು ಸುಪ್ರೀಂ ಕೋರ್ಟ್ ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿಗಳಲ್ಲಿನ ವರ್ಗೀಕರಣದ ವಿಷಯವು ನ್ಯಾಯಿಕ ಪ್ರಕ್ರಿಯೆಯಲ್ಲಿನ ಮಧ್ಯಪ್ರವೇಶ (ಸಬ್ ಜ್ಯುಡಿಸ್) ಆಗುತ್ತದೆ' ಎಂದು ತಿಳಿಸಿತ್ತು.

ಪರಿಶಿಷ್ಟ ಜಾತಿಯಲ್ಲಿ ಉಪ ಗುಂಪುಗಳ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಪಂಜಾಬ್ ಸರ್ಕಾರ ರೂಪಿಸಿದ್ದ ಕಾಯ್ದೆಯನ್ನು ಪಂಜಾಬ್–ಹರಿಯಾಣ ಹೈಕೋರ್ಟ್ ರದ್ದುಪಡಿಸಿದೆ. ಅದರ ವಿರುದ್ಧ ಪಂಜಾಬ್ ಸರ್ಕಾರವು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ. ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠವು ಈ ಪ್ರಕರಣವನ್ನು ಏಳು ನ್ಯಾಯಮೂರ್ತಿಗಳ ಪೀಠದ ಮುಂದಿಡುವಂತೆ ಆದೇಶಿಸಿದೆ.

ಸದಾಶಿವ, ನಿಜಾಮ್‌ಗೆ 'ಈ ಹೊತ್ತಿಗೆ ಪ್ರಶಸ್ತಿ'

ಸದಾಶಿವ

ನಿಜಾಮ್

ಬೆಂಗಳೂರು: ಈ ಹೊತ್ತಿಗೆ ಟ್ರಸ್ಟ್ ನೀಡುವ 'ಈ ಹೊತ್ತಿಗೆ ಕಥಾ ಪ್ರಶಸ್ತಿ'ಗೆ ದಾವಣಗೆರೆಯ ಸದಾಶಿವ ಸೊರಟೂರು ಅವರ 'ಧ್ಯಾನಕ್ಕೆ ಕೂತ ನದಿ' ಅಪ್ರಕಟಿತ ಕಥಾಸಂಕಲನ, 'ಈ ಹೊತ್ತಿಗೆ ಕಾವ್ಯ ಪ್ರಶಸ್ತಿ'ಗೆ ಮಂಗಳೂರಿನ ಸಜೀಪನಡು ಊರಿನ ನಿಜಾಮ್ ಗೋಳಿಪಡ್ಪು ಅವರ 'ಅನಾಮಧೇಯ ಗೀರುಗಳು' ಅಪ್ರಕಟಿತ ಕವನ ಸಂಕಲನ ಆಯ್ಕೆಯಾಗಿವೆ.

ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಒಳಗೊಂಡಿವೆ. ಮಾರ್ಚ್‌ನಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಕಾರ್ಯಕ್ರಮ ದಲ್ಲಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಅಯೋಧ್ಯೆಯಲ್ಲಿ 2ನೇ ದಿನಕ್ಕೆ ಕಾಲಿಟ್ಟ ಪೂರ್ವಭಾವಿ ಧಾರ್ಮಿಕ ವಿಧಿವಿಧಾನ • 'ಮೋದಿ ಮುಖ್ಯ ಯಜಮಾನ'

ಸರಯೂ ನದಿ ತೀರದಿಂದ ಕಳಶ ಯಾತ್ರೆ

ಪ್ರಜಾವಾಣಿ ವಾರ್ತೆ

ಲಖನೌ: ಅಯೋಧ್ಯೆಯ ರಾಮಮಂದಿರದಲ್ಲಿ ಮಂಗಳವಾರ ಆರಂಭವಾಗಿದ್ದ ರಾಮಮೂರ್ತಿ ಪ್ರತಿಷ್ಠಾಪನೆಯ ಪೂರ್ವಭಾವಿ ಆಚರಣೆಗಳು 'ಕಳಶ ಯಾತ್ರೆ' ಮೂಲಕ ಬುಧವಾರ ರಾಮಮಂದಿರ ಆವರಣಕ್ಕೆ ಸ್ಥಳಾಂತರಗೊಂಡವು.

ಇದಕ್ಕೂ ಮೊದಲು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಸದಸ್ಯ ಅನಿಲ್ ಮಿಶ್ರಾ, ಅವರ ಪತ್ನಿ ಮತ್ತು ಇತರರು ಸರಯೂ ನದಿ ತೀರದಲ್ಲಿ 'ಕಳಶ ಪೂಜೆ' ನೆರವೇರಿಸಿದರು. ಪೂಜೆ ಬಳಿಕ ಸರಯೂ ನದಿ ನೀರನ್ನು ಕುಂಭಗಳಲ್ಲಿ ತುಂಬಿಸಿ ಮಹಿಳೆಯರು 'ಕಳಶ ಯಾತ್ರೆ' ಕೈಗೊಂಡರು. ರಾಮಮಂದಿರ ಆವರಣಕ್ಕೆ ಕುಂಭಗಳನ್ನು ಒಯ್ಯಲಾಯಿತು ಎಂದು ಟ್ರಸ್ಟ್ ತಿಳಿಸಿದೆ

ಜನವರಿ 21ರವರೆಗೂ ಈ ಪೂರ್ವಭಾವಿ ಧಾರ್ಮಿಕ ಆಚರಣೆಗಳು ನೆರವೇರಲಿವೆ. ಜ.22ರಂದು ಮೂರ್ತಿ ಪ್ರತಿಷ್ಠಾಪನೆ ಸಮಾರಂಭ ನೆರವೇರಲಿದೆ.

ಪ್ರಧಾನಿಯಿಂದ ಕಠಿಣ ವ್ರತ: ಪ್ರಧಾನಿ ನರೇಂದ್ರ ಮೋದಿ ಅವರು ಸಮಾರಂಭದ 'ಮುಖ್ಯ ಯಜಮಾನ' ರಾಗಿರುತ್ತಾರೆ. ಅವರೂ ಕೂಡಾ ಮೂರು ದಿವಸಗಳ ಕಾಲ ಕಠಿಣ ವ್ರತಗಳನ್ನು ಕೈಗೊಳ್ಳಬೇಕು. ಶುಕ್ರವಾರದಿಂದಲೇ ಅವರು ಮರದ ಮಂಚದಲ್ಲಿ ಹಾಸಿಗೆ ಬದಲು ಹೊದಿಕೆ ಹಾಸಿ ಮಲಗಬೇಕು.

ಈ ಮೂರು ದಿನಗಳೂ ಅವರು ಹಣ್ಣುಗಳನ್ನು ಮಾತ್ರ ತಿನ್ನಬೇಕು. ರಾವಣನ ವಿರುದ್ಧ ಹೋರಾಡಿದ 'ಜಟಾಯು'ವಿನ ಮೂರ್ತಿಯನ್ನು ಅವರು ಪೂಜಿಸಬೇಕು ಎಂದು ಅರ್ಚಕರು ತಿಳಿಸಿದ್ದಾರೆ.

121 ಆಚಾರ್ಯರು ವಿಧಿವಿಧಾನಗಳನ್ನು ನೆರವೇರಿಸುತ್ತಿದ್ದಾರೆ. ಕಾಶಿಯ ಲಕ್ಷ್ಮಿಕಾಂತ ದೀಕ್ಷಿತ್ ಮುಖ್ಯ ಅರ್ಚಕರಾಗಿದ್ದಾರೆ. ವಾರಾಣಸಿಯ ಗಣೇಶ್ವರ ಶಾಸ್ತ್ರಿ ದ್ರಾವಿಡ್ ಅವರು ಧಾರ್ಮಿಕ ವಿಧಿಗಳ ಮೇಲ್ವಿಚಾರಣೆ ವಹಿಸಿದ್ದಾರೆ.

ಅಯೋಧ್ಯೆಯಲ್ಲಿ ಬುಧವಾರ ನಡೆದ 'ಕಳಶ ಯಾತ್ರೆ'ಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರು –ಪಿಟಿಐ ಚಿತ್ರ

ರಾಮೇಶ್ವರದಲ್ಲಿ ದೇವಾಲಯ ನಿರ್ಮಾಣಕ್ಕೂ ಮೊದಲು ಶ್ರೀರಾಮನು ಶಿವಲಿಂಗದ ಪ್ರಾಣ ಪ್ರತಿಷ್ಠಾಪನೆ ಮಾಡಿದ್ದನು. ಇಂತಹ ಹಲವು ಉದಾಹರಣೆಗಳಿವೆ
ಶ್ರೀ ಶ್ರೀ ರವಿಶಂಕರ್ ಗುರೂಜಿ
ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕ

ರಾಮ ಲಲ್ಲಾ ಪ್ರಾಣ ಪ್ರತಿಷ್ಠಾಪನೆಯ ಹೆಸರಿನಲ್ಲಿ ರಾಷ್ಟ್ರವನ್ನು ಧ್ರುವೀಕರಿಸುವ ಪ್ರಯತ್ನ ನಡೆಯುತ್ತಿದೆ. ಧರ್ಮಾಧಾರಿತ ರಾಜಕೀಯವನ್ನು ಮಾಡಬಾರದು
ಸೀತಾರಾಂ ಯೆಚೂರಿ
ಸಿಪಿಎಂ ಪ್ರಧಾನ ಕಾರ್ಯದರ್ಶಿ

ಪ್ರಾಣ ಪ್ರತಿಷ್ಠಾಪನೆಗೆ ಅತಿಥಿಗಳನ್ನು ಆಹ್ವಾನಿಸುವಲ್ಲಿ ಜಾತಿ ತಾರತಮ್ಯ ಮಾಡಲಾಗಿದೆ. ರಾಷ್ಟ್ರಪತಿ ಅವರನ್ನು ಸಮಾರಂಭಕ್ಕೆ ಆಹ್ವಾನಿಸಲಾಗಿಲ್ಲ
ಜಿತೇಂದ್ರ ಆಹ್ವಾಡ್
ಎನ್‌ಸಿಪಿ (ಶರದ್ ಪವಾರ್ ಬಣ) ಶಾಸಕ

ದಾವೋಸ್‌ನಲ್ಲೂ ಸಂಭ್ರಮ

ದಾವೋಸ್ (ಪಿಟಿಐ): ರಾಮಮಂದಿರ ಪ್ರಾಣ ಪ್ರತಿಷ್ಠಾಪನೆ ಸಮಾರಂಭದ ಸಂಭ್ರಮವು ಇಲ್ಲಿಯೂ ಪ್ರತಿಫಲಿಸಿದೆ. ಪ್ರಾಣ ಪ್ರತಿಷ್ಠಾಪನೆ ಸಮಾರಂಭದ ಅಂಗವಾಗಿ ಜನವರಿ 22ರಂದು ಕಾರ್ಯಕ್ರಮ ಹಮ್ಮಿಕೊಳ್ಳಲು ರಾಮಭಕ್ತರು ನಿರ್ಧರಿಸಿದ್ದಾರೆ.

ಭಾಗಿಯಾಗಲ್ಲ; ಶರದ್ ಪವಾರ್

ಮುಂಬೈ: ಜನವರಿ 22ರಂದು ನಡೆಯಲಿರುವ ರಾಮಮಂದಿರ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ತಾವು ಭಾಗಿಯಾಗುವುದಿಲ್ಲ ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ಗೆ ತಿಳಿಸಿದ್ದಾರೆ.

ರಾಮಮಂದಿರ ನಿರ್ಮಾಣ ಕಾಮಗಾರಿ ಸಂಪೂರ್ಣವಾದ ಬಳಿಕ ಮಂದಿರಕ್ಕೆ ಭೇಟಿ ನೀಡುವುದಾಗಿ ಅವರು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರಿಗೆ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

ಚಂಪತ್ ರಾಯ್ ಅವರು ಶರದ್ ಅವರನ್ನು ಆಹ್ವಾನಿಸಿದ್ದರು. ಶರದ್ ಪವಾರ್ ಅವರು ಪತ್ರದ ಮೂಲಕ ವಿನಮ್ರವಾಗಿ ಪ್ರತಿಕ್ರಿಯೆ ನೀಡಿದ್ದಾರೆ ಮತ್ತು ಆಹ್ವಾನಿಸಿದ್ದಕ್ಕೆ ಧನ್ಯವಾದ ಹೇಳಿದ್ದಾರೆ.

'ಕೆಲಸದ ನಿಮಿತ್ತ ಅಯೋಧ್ಯೆಗೆ ಭೇಟಿ ನೀಡುವ ಯೋಜನೆ ಇದೆ. ಆಗ ರಾಮಮಂದಿರಕ್ಕೆ ಬಂದು ಸಾಕಷ್ಟು ಸಮಯ ವ್ಯಯಿಸಿ ಶ್ರೀರಾಮನ ದರ್ಶನ ಪಡೆಯುತ್ತೇನೆ. ಆ ವೇಳೆಗೆ ಮಂದಿರ ನಿರ್ಮಾಣ ಕಾಮಗಾರಿಯೂ ಸಂಪೂರ್ಣವಾಗಿರುತ್ತದೆ' ಎಂದು ಪವಾರ್ ಹೇಳಿದ್ದಾರೆ.

ಸಮಾರಂಭದಲ್ಲಿ ಭಾಗಿ ಆಗುವುದಿಲ್ಲ ಎಂದು ಕಾಂಗ್ರೆಸ್ ನಾಯಕತ್ವ ಸ್ಪಷ್ಟಪಡಿಸಿದ ಬೆನ್ನಲ್ಲೇ ಶರದ್ ಈ ಪತ್ರ ಬರೆದಿದ್ದಾರೆ.

- ಭಕ್ತರಿಗೆ ಅನುಕೂಲವಾಗಲೆಂದು ಓಯೊ ಕಂಪನಿಯು ಅಯೋಧ್ಯೆಯಲ್ಲಿ 51 ಹೋಂ ಸ್ಟೇಗಳನ್ನು ಮತ್ತು 14 ಹೋಟೆಲ್‌ಗಳನ್ನು ಆರಂಭಿಸಿದೆ.
- ಜ. 22ರ ಬಳಿಕ ಪತ್ನಿ, ಮಕ್ಕಳು ಮತ್ತು ಪೋಷಕರ ಜತೆ ಅಯೋಧ್ಯೆಗೆ ಭೇಟಿ ನೀಡಲು ನಾನು ಬಯಸಿದ್ದೇನೆ. ನನಗೆ ಆಹ್ವಾನ ಪತ್ರಿಕೆ ದೊರಕಿದೆ. ಅದರಲ್ಲಿ ಒಬ್ಬರಿಗೆ ಮಾತ್ರ ಅವಕಾಶವಿದೆ ಎಂದು ಹೇಳಿರುವುದಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ತಿಳಿಸಿದ್ದಾರೆ.
- ಜನವರಿ 22ರಂದು ರಾಮಮೂರ್ತಿ ಪ್ರತಿಷ್ಠಾಪನೆ ಕೈಗೊಂಡಿರುವುದು ಸನಾತನ ಧರ್ಮದ ಸಿದ್ಧಾಂತಕ್ಕೆ ವಿರುದ್ಧವಾಗಿದೆ. ಸಮಾರಂಭಕ್ಕೆ ತಡೆ ನೀಡಬೇಕು ಎಂದು ಕೋರಿ ಭೋಲಾ ದಾಸ್ ಎಂಬುವರು ಅಲಹಾಬಾದ್ ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಸಿದ್ದಾರೆ.
- ಜ. 22ರಂದು ಗೋರಖ್‌ಪುರದ ಮೃಗಾಲಯಕ್ಕೆ ಭೇಟಿ ನೀಡಲು ಬಯಸುವ 'ರಾಮ' ಹೆಸರಿನ ವ್ಯಕ್ತಿಗಳಿಗೆ ಶೇ 50ರಷ್ಟು ರಿಯಾಯಿತಿ ನೀಡಲಾಗುವುದು. ರಿಯಾಯಿತಿ ಪಡೆಯಲು ಸೂಕ್ತ ಗುರುತಿನ ದಾಖಲೆಯನ್ನು ತೋರಿಸಬೇಕು ಎಂದು ಮೃಗಾಲಯದ ನಿರ್ದೇಶಕರು ಹೇಳಿದ್ದಾರೆ.

ರಾಮಮಂದಿರ 140 ಕೋಟಿ ಜನರದ್ದು: ಸಚಿವೆ ಹೆಬ್ಬಾಳಕರ

ಪ್ರಜಾವಾಣಿ ವಾರ್ತೆ

ಉಡುಪಿ: 'ಅಯೋಧ್ಯೆಯ ರಾಮಮಂದಿರ ಅವರದ್ದೂ(ಬಿಜೆಪಿ) ಅಲ್ಲ; ನಮ್ಮದೂ (ಕಾಂಗ್ರೆಸ್) ಅಲ್ಲ. 140 ಕೋಟಿ ಜನರಿಗೆ ಸೇರಿದ್ದು' ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಲಕ್ಷ್ಮೀ ಹೆಬ್ಬಾಳಕರ

ನಗರದಲ್ಲಿ ಬುಧವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ, 'ರಾಮಮಂದಿರ ನಿರ್ಮಾಣಕ್ಕೆ ನಾನೂ ದೇಣಿಗೆ ನೀಡಿದ್ದು ಶೀಘ್ರ ಅಯೋಧ್ಯೆಗೆ ಭೇಟಿ ನೀಡುತ್ತೇನೆ. ರಾಮಮಂದಿರ ವಿಚಾರದಲ್ಲಿ ಪಕ್ಷದ ನಡೆಯ ಬಗ್ಗೆ ಮಾತನಾಡುವುದಿಲ್ಲ. ಮಾತನಾಡಲು ಪಕ್ಷದ ಅಧ್ಯಕ್ಷೆಯೂ ಅಲ್ಲ, ನಾನು ದೇವರ ಭಕ್ತೆ ಅಷ್ಟೆ' ಎಂದರು.

ಅನಂತಕುಮಾರ ಹೆಗಡೆಗೆ ತಿರುಗೇಟು: ನಾಲ್ಕೂವರೆ ವರ್ಷಗಳಿಂದ ಸುದ್ದಿಯಲ್ಲಿ ಇರದ ಬಿಜೆಪಿ ಸಂಸದ ಅನಂತಕುಮಾರ ಹೆಗಡೆ ಚುನಾವಣೆ ಸಮೀಪಿಸುತ್ತಿದ್ದಂತೆ ದಿಢೀರ್ ಮುನ್ನೆಲೆಗೆ ಬಂದಿದ್ದಾರೆ. ಕಾಂಗ್ರೆಸ್ ಹಾಗೂ ಮುಖ್ಯಮಂತ್ರಿ ಅವರನ್ನು ಟೀಕಿಸುವ ನೈತಿಕತೆ ಅವರಿಗಿಲ್ಲ ಎಂದು ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೊಳಪಡುವ ಬೆಳಗಾವಿ ಜಿಲ್ಲೆಯ ಖಾನಾಪುರ ವಿಧಾನಸಭಾ ಕ್ಷೇತ್ರಕ್ಕೆ ಒಮ್ಮೆಯೂ ಭೇಟಿ ನೀಡಿಲ್ಲ. ಮತದಾರರ ಸಮಸ್ಯೆ ಆಲಿಸಿಲ್ಲ. ಅಭಿವೃದ್ಧಿ ಕಾರ್ಯಗಳನ್ನು ಮಾಡದ ಸಂಸದರು ಪ್ರಚೋದನಾತ್ಮಕ ಹೇಳಿಕೆಗಳನ್ನು ನೀಡುವಲ್ಲಿ ನಿರತರಾಗಿದ್ದಾರೆ ಎಂದು ದೂರಿದರು.

ರಾಮನ ವಿರೋಧಿಸುವವರಿಗೆ ಕಾಮಾಲೆ ಆಗಿದೆ: ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬೀದರ್: 'ಯಾರು ರಾಮನನ್ನು ವಿರೋಧಿಸುತ್ತಾರೋ ಅವರಿಗೆ ಕಾಮಾಲೆ ಆಗಿದೆ' ಎಂದು ಮಠಾಧೀಶರ ಒಕ್ಕೂಟದ ಹಿರೇನಾಗಾಂವ ಜಯಶಾಂತಲಿಂಗ ಸ್ವಾಮೀಜಿ, ತಡೋಳಾ ರಾಜೇಶ್ವರ ಶಿವಾಚಾರ್ಯರು ಹೇಳಿದರು.

'ರಾಮಲೀಲಾ ಅಥವಾ ರಾಮನನ್ನು ಅರ್ಥ ಮಾಡಿಕೊಳ್ಳಡwದಿದ್ದರೆ ಗೊಂಬೆ ಕಾಣಿಸುತ್ತದೆ. ರಾಮನನ್ನು ಅರ್ಥ ಮಾಡಿಕೊಂಡರೆ ರಾಮ ಕಾಣಿಸುತ್ತಾನೆ. ಜಗತ್ತಿಗೆ ರಾಮ ಕಾಣಿಸುತ್ತಿದ್ದಾನೆ. ಅವನಿಗೆ ಗೊಂಬೆ ಕಾಣಿಸುತ್ತಿದ್ದರೆ ಕಾಮಾಲೆ ಆಗಿದೆ ಎಂದರ್ಥ. ಎಲ್ಲವೂ ಹಸಿರು ಕಾಣಿಸುತ್ತಿದೆ. ರಾಮನನ್ನು ಟೀಕಿಸುತ್ತಿರುವುದು ಖಂಡನಾರ್ಹ' ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಹರಿಪ್ರಸಾದ್ ಅವರ ಹೆಸರು ಪ್ರಸ್ತಾಪಿಸದೆ ನಗರದಲ್ಲಿ ಬುಧವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದರು.

'ಅಯೋಧ್ಯೆ ರಾಮಮಂದಿರದ ಗರ್ಭಗುಡಿಯಲ್ಲಿ ಎಲ್ಲ ಕೆಲಸಗಳು ಪೂರ್ಣಗೊಂಡಿವೆ. ಎಲ್ಲವೂ ಶಾಸ್ತ್ರಬದ್ಧವಾಗಿಯೇ ನಡೆಯುತ್ತಿದೆ' ಎಂದರು.

ಸಚಿವರಿಂದ ರಾಮಭಕ್ತರಿಗೆ ಅವಮಾನ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು ಶ್ರೀರಾಮ ಮತ್ತು ಸೀತೆಯರನ್ನು ಟೂರಿಂಗ್ ಟಾಕೀಸ್ ಬೊಂಬೆಗಳು ಎಂದು ಹೇಳಿರುವುದು, ರಾಮಭಕ್ತರಿಗೆ ಮತ್ತು ಭಕ್ತಿ ಪರಂಪರೆಗೆ ಮಾಡಿರುವ ಅವಮಾನ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದರು.

'ದೇವರನ್ನು ಆಟಿಕೆ ಎನ್ನುವ ಮೂಲಕ ಕಾಂಗ್ರೆಸ್ ಪಕ್ಷ ಬಾಲಿಶತನ ತೋರಿದೆ. ಮಾತಿನಲ್ಲಿ ಹಿಡಿತವಿಲ್ಲದೇ ಹಿಂದೂ ಧರ್ಮದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವುದು ಕಾಂಗ್ರೆಸ್‌ನ ಅವನತಿಗೆ ಕಾರಣವಾಗಲಿದೆ' ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

'ಕಾಂಗ್ರೆಸ್‌ನವರಿಗೆ ರಾಮ– ಸೀತೆ ಎಲ್ಲರೂ ಟೂರಿಂಗ್ ಟಾಕೀಸ್ ಬೊಂಬೆಗಳಂತೆಯೇ ಕಾಣುತ್ತಾರೆ. ಹಿಂದೆ ಇವರೇ ರಾಮನನ್ನು ಕಾಲ್ಪನಿಕ ವ್ಯಕ್ತಿ, ಜನ್ಮ ಪ್ರಮಾಣ ಪತ್ರ ಇಲ್ಲ ಎಂದಿದ್ದರು. ಮುಸ್ಲಿಮರನ್ನು ಮತ ಬ್ಯಾಂಕ್ ಮಾಡಿಕೊಂಡು, ಹಿಂದೂಗಳನ್ನು ಎರಡನೇ ದರ್ಜೆ ಪ್ರಜೆಗಳನ್ನಾಗಿಸುವ ಗುಣ ಕಾಂಗ್ರೆಸ್ ರಕ್ತದಲ್ಲೇ ಇದೆ. ಸಿದ್ದರಾಮಯ್ಯ ಅವರೇ ಸುಪ್ರೀಂಕೋರ್ಟ್ ತೀರ್ಪಿಗೆ ಬೆಲೆ ಕೊಡುವುದಿಲ್ಲ ಎನ್ನುತ್ತಾರೆ' ಎಂದು ಅಶೋಕ ಹರಿಹಾಯ್ದರು.

ರಾಮಭಕ್ತರ ಮನಸ್ಸಿಗೆ ನೋವು: 'ಕಾಂಗ್ರೆಸ್ ಮುಖಂಡರು ತಮ್ಮ ಹೇಳಿಕೆಗಳಿಂದ ಕೋಟ್ಯಂತರ ರಾಮಭಕ್ತರ ಮನಸ್ಸಿಗೆ ನೋವು ಉಂಟು ಮಾಡಿ ದ್ದಾರೆ' ಎಂದು ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಹೇಳಿದರು.

'ಭಾರತದ ಭಕ್ತಿ ಪರಂಪರೆಯಡಿ ಎಲ್ಲರಲ್ಲೂ ದೈವತ್ವವನ್ನು ನಾವು ಕಾಣುತ್ತೇವೆ. ನಿಸರ್ಗದಲ್ಲಿ ದೈವತ್ವ ನೋಡುವುದು ನಮ್ಮ ಪರಂಪರೆ. ರಾಮ–ಸೀತೆಯರನ್ನು ಗೊಂಬೆಗಳು, ಟೆಂಟ್ ಎನ್ನುವುದು ರಾಜಣ್ಣ ಅವರ ಮನಸ್ಥಿತಿ ಮತ್ತು ಸಂಸ್ಕಾರಕ್ಕೆ ಹಿಡಿದಿರುವ ಕನ್ನಡಿಯಾಗಿದೆ' ಎಂದರು.

ಫ್ಲೆಕ್ಸ್ ಹರಿದ ಕಿಡಿಗೇಡಿಗಳು

ಪ್ರಜಾವಾಣಿ ವಾರ್ತೆ

ಮುಳಬಾಗಿಲು (ಕೋಲಾರ ಜಿಲ್ಲೆ): ಪಟ್ಟಣದಲ್ಲಿ ಹಾಕಿದ್ದ ರಾಮನ ಫ್ಲೆಕ್ಸ್ ಹಾಗೂ ಕಟೌಟ್‌ಗಳನ್ನು ಮಂಗಳವಾರ ರಾತ್ರಿ ಕಿಡಿಗೇಡಿಗಳು ಬ್ಲೇಡ್‌ನಿಂದ ಹರಿದು ಹಾಕಿದ್ದಾರೆ. ಈ ಸಂಬಂಧ ಪೊಲೀಸರು ವ್ಯಕ್ತಿಯೊಬ್ಬನನ್ನು ಬಂಧಿಸಿದ್ದಾರೆ.

ಅಯೋಧ್ಯೆಯ ರಾಮಮಂದಿರದಲ್ಲಿ ಜ.22ರಂದು ನಡೆಯಲಿರುವ ಕಾರ್ಯಕ್ರಮ ನಿಮಿತ್ತ ಸಂಕ್ರಾಂತಿಯಂದು ಪಟ್ಟಣದ ವಿವಿಧೆಡೆ ಫ್ಲೆಕ್ಸ್ ಮತ್ತು ಕಟೌಟ್ ಅಳವಡಿಸಲಾಗಿತ್ತು.

ಬುಧವಾರ ಬೆಳಿಗ್ಗೆ ವಿಷಯ ಗೊತ್ತಾಗುತ್ತಿದ್ದಂತೆ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಪೊಲೀಸರು ವಾತಾವರಣ ತಿಳಿಗೊಳಿಸಿದರು. ಎಸ್‌ಪಿ ಎಂ.ನಾರಾಯಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳೀಯ ವ್ಯಕ್ತಿಯನ್ನು ಬಂಧಿಸಿರುವ ಪೊಲೀಸರು ಆತನನ್ನು ಪ್ರಶ್ನಿಸುತ್ತಿದ್ದಾರೆ. ವ್ಯಕ್ತಿಯ ಹೆಸರನ್ನು ಬಹಿರಂಗಪಡಿಸಿಲ್ಲ.

ನಗರದ ಗುಣಿಗಂಟೆಪಾಳ್ಯ, ಜಹಾಂಗೀರ್ ಮೊಹಲ್ಲಾ, ವಿಠಲೇಶ್ವರ ಪಾಳ್ಯ ಹಾಗೂ ಶ್ರೀನಿವಾಸಪುರ ವೃತ್ತದಲ್ಲಿ ಮಂಗಳವಾರ ರಾತ್ರಿ 10.46ರ ಸುಮಾರಿಗೆ ವ್ಯಕ್ತಿಯೊಬ್ಬ ಬ್ಲೇಡ್‌ನಿಂದ ಫ್ಲೆಕ್ಸ್ ಹರಿಯುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಸಂಸದ ಎಸ್.ಮುನಿಸ್ವಾಮಿ, ಬಿಜೆಪಿ ಕಾರ್ಯಕರ್ತರು ಸ್ಥಳಕ್ಕೆ ತೆರಳಿ ಪ್ರತಿಭಟನೆ, ರಸ್ತೆ ತಡೆ ನಡೆಸಿದರು. ಫ್ಲೆಕ್ಸ್ ಹರಿಯುವಲ್ಲಿ ಕಸಾಯಿಖಾನೆ ಮಾಲೀಕರ ಕುಮ್ಮಕ್ಕು ಇದೆ ಎಂದು ಆರೋಪಿಸಿ ಕಸಾಯಿಖಾನೆಗೆ ಮುತ್ತಿಗೆ ಹಾಕಿದರು.

ಹರಿದ ಫ್ಲೆಕ್ಸ್ ತೆರವುಗೊಳಿಸಿದ ಬಿಜೆಪಿ ಕಾರ್ಯಕರ್ತರು ಹೊಸ ಫ್ಲೆಕ್ಸ್ ಅಳವಡಿಸಿ ಪೂಜೆ ಮಾಡಿ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಗುಣಿಗಂಟೆಪಾಳ್ಯದ ಶಾಲೆಯ ಮೇಲಿದ್ದ ಹಸಿರು ಬಾವುಟವನ್ನು ಸಂಸದರ ಸೂಚನೆ ಮೇರೆಗೆ ತೆರವುಗೊಳಿಸಲಾಯಿತು.

ಮುಳಬಾಗಿಲಿನಲ್ಲಿ ಬ್ಲೇಡ್‌ನಿಂದ ಹರಿದು ಹಾಕಿದ ಫ್ಲೆಕ್ಸ್

ರಾಮನವಮಿ ದಿನ 'ಸೂರ್ಯ ತಿಲಕ'

ಫರೀದಾಬಾದ್ (ಪಿಟಿಐ): ಅಯೋಧ್ಯೆಯ ರಾಮ ಮಂದಿರದಲ್ಲಿ ಪ್ರತಿ ರಾಮನವಮಿ ದಿನದಂದು ಭಗವಾನ್ ರಾಮನ ಮೂರ್ತಿಗೆ 'ಸೂರ್ಯ ತಿಲಕ' ಇಡುವ ತಂತ್ರಜ್ಞಾನವನ್ನು ಅಳವಡಿಸಲಾಗುತ್ತದೆ.

ಮಸೂರಗಳನ್ನು ಒಳಗೊಂಡಂತಹ ಜಾಲದ ನೆರವಿನಿಂದ ಹಣೆಗೆ ಸೂರ್ಯನ ಬೆಳಕು ಬೀಳುವಂತೆ ಮಾಡಲಾಗುತ್ತದೆ. ಇದಕ್ಕೆ ಬೇಕಾದ ತಂತ್ರಜ್ಞಾನವನ್ನು ಸಿಎಸ್‌ಐಆರ್– ಕೇಂದ್ರೀಯ ಕಟ್ಟಡ ಸಂಶೋಧನಾ ಸಂಸ್ಥೆ (ಸಿಬಿಆರ್‌ಐ) ಅಭಿವೃದ್ಧಿಪಡಿಸಿದೆ.

ರಾಮನವಮಿ ದಿನದಂದು ಮಧ್ಯಾಹ್ನ 12 ರಿಂದ ಸುಮಾರು ಆರು ನಿಮಿಷಗಳ ಕಾಲ ಸೂರ್ಯನ ಬೆಳಕು, ಗರ್ಭಗುಡಿಯಲ್ಲಿರುವ ವಿಗ್ರಹದ ಹಣೆಯ ಮೇಲೆ ಬೀಳಲಿದೆ.

'ರಾಮ ಮಂದಿರದ ಮೂರನೇ ಮಹಡಿಯಲ್ಲಿ ಆಪ್ಟಿಕಲ್ ಲೆನ್ಸ್‌ವೊಂದನ್ನು ಅಳವಡಿಸಲಾಗುತ್ತದೆ. ಅದು ಪೈಪ್‌ಗಳಲ್ಲಿ ಅಳವಡಿಸಿರುವ ರಿಫ್ಲೆಕ್ಟರ್‌ಗಳ ಮೂಲಕ ಬೆಳಕನ್ನು ವಿಗ್ರಹದ ಹಣೆಯ ಮೇಲೆ ಮೂಡಿಸಲಿದೆ' ಎಂದು ಸಿಬಿಆರ್‌ಐನ ಮುಖ್ಯ ವಿಜ್ಞಾನಿ ಆರ್. ಧರ್ಮರಾಜು ತಿಳಿಸಿದರು.

ಭಾರತೀಯ ಖಭೌತ ವಿಜ್ಞಾನ ಸಂಸ್ಥೆಯ ನೆರವಿನಿಂದ ಈ ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದೆ. ಸೂರ್ಯನು ನಿರ್ದಿಷ್ಟ ದಿನದಂದು ಯಾವ ಜಾಗದಲ್ಲಿ ಇರುವನು ಎಂಬುದನ್ನು ನೋಡಿಕೊಂಡು 'ಸೂರ್ಯ ತಿಲಕ'ಕ್ಕೆ ಅಗತ್ಯವಿರುವ ಮಸೂರಗಳನ್ನು ರಾಮಮಂದಿರದಲ್ಲಿ ಅಳವಡಿಸಲಾಗುವುದು.

ಸಾಂಪ್ರದಾಯಿಕ ಬಿಲ್ಲು ಸಮರ್ಪಣೆ

ತಿರುವನಂತಪುರ: ರಾಮಲಲ್ಲಾ ಪ್ರತಿಷ್ಠಾಪನೆ ಅಂಗವಾಗಿ ಇಲ್ಲಿನ ಪದ್ಮನಾಭಸ್ವಾಮಿ ದೇವಾಯಲಯವು ಅಯೋಧ್ಯೆಯ ರಾಮಮಂದಿರಕ್ಕೆ 'ಓಣವಿಲ್ಲ್' ವರ್ಣಚಿತ್ರಗಳನ್ನು ಒಳಗೊಂಡ ಸಾಂಪ್ರದಾಯಿಕ ಬಿಲ್ಲನ್ನು ಗುರುವಾರ ಕೊಡುಗೆಯಾಗಿ ನೀಡಲಿದೆ.

ದೊಡ್ಡಾಟ ಪ್ರದರ್ಶನ

ಶಿಗ್ಗಾವಿ (ಹಾವೇರಿ ಜಿಲ್ಲೆ): ರಾಮ ಮಂದಿರದ ಉದ್ಘಾಟನೆ ಹಿನ್ನೆಲೆಯಲ್ಲಿ ಶಿಗ್ಗಾವಿ, ಕುಂದಗೋಳ ಮತ್ತು ಹಳಿಯಾಳದ ಕಲಾವಿದರ ತಂಡದಿಂದ ಅಯೋಧ್ಯೆಯಲ್ಲಿ ಜನವರಿ 26 ರಿಂದ 29ರವರೆಗೆ 'ಶ್ರೀರಾಮಚಂದ್ರ ದೊಡ್ಡಾಟ' ಪ್ರದರ್ಶನ ನಡೆಯಲಿದೆ.

ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದ ಅಧೀನದಲ್ಲಿರುವ ಮಹಾರಾಷ್ಟ್ರದ ನಾಗಪುರದ ದಕ್ಷಿಣ ಮಧ್ಯ ಕ್ಷೇತ್ರದ ಸಾಂಸ್ಕೃತಿಕ ಕೇಂದ್ರದಿಂದ ಪ್ರದರ್ಶನಕ್ಕೆ ಆಹ್ವಾನ ಬಂದಿದೆ.

ಕುಂದಗೋಳ ತಾಲ್ಲೂಕಿನ ಹಿರೇಹರಕುಣಿಯ ಕಲಾವಿದರಾದ ಚಂದ್ರಶೇಖರಯ್ಯ ಗುರಯ್ಯನವರ ಕಲಾ ತಂಡ ದೊಡ್ಡಾಟ ಪ್ರದರ್ಶಿಸಲಿದೆ. ಹಳಿಯಾಳದ ತೊಗಲುಗೊಂಬೆ ಆಟದ ಕಲಾವಿದ ಸಿದ್ದು ಬಿರಾದಾರ ಅದರ ನೇತೃತ್ವ ವಹಿಸುವರು.

ಶಿಗ್ಗಾವಿಯ ರಾಮಚಂದ್ರಪ್ಪ ಅರ್ಕಸಾಲಿ ನೇಪಥ್ಯ ಕಲಾಸಂಸ್ಥೆಯ ಕಲಾವಿದ ಶಂಕರ ಅರ್ಕಸಾಲಿ, ಸಹಾಯಕ ಕಲಾವಿದ ಶರಣ ಬಿಂದಲಗಿ, ದೊಡ್ಡಾಟದ ಪಾತ್ರಧಾರಿಗಳಿಗೆ ಪ್ರಸಾಧನ ವೇಷಭೂಷಣ ಸೇವೆ ಸಲ್ಲಿಸುವರು.

14–18 ವರ್ಷದ ಶೇ 25ರಷ್ಟು ವಿದ್ಯಾರ್ಥಿಗಳಿಗೆ 2ನೇ ತರಗತಿ ಪಠ್ಯವನ್ನೂ ಓದಲು ಬರಲ್ಲ

ಗ್ರಾಮೀಣ ಭಾಗದ ಶೇ 42 ಮಕ್ಕಳಿಗೆ ಇಂಗ್ಲಿಷ್ ಕಠಿಣ

ನವದೆಹಲಿ (ಪಿಟಿಐ): ದೇಶದ ಗ್ರಾಮಾಂತರ ಪ್ರದೇಶದಲ್ಲಿನ 14ರಿಂದ 18 ವಯೋಮಾನದ ಶೇ 25ರಷ್ಟು ವಿದ್ಯಾರ್ಥಿಗಳಿಗೆ ತಮ್ಮ ಪ್ರಾದೇಶಿಕ ಭಾಷೆಯಲ್ಲಿರುವ ಎರಡನೇ ತರಗತಿಯ ಪಠ್ಯವನ್ನು ನಿರರ್ಗಳವಾಗಿ ಓದಲು ಬರುವುದಿಲ್ಲ. ಅಲ್ಲದೆ ಈ ವಯಸ್ಸಿನ ಶೇ 42ರಷ್ಟು ವಿದ್ಯಾರ್ಥಿಗಳಿಗೆ ಇಂಗ್ಲಿಷ್‌ನಲ್ಲಿ ಸುಲಭವಾದ ವಾಕ್ಯಗಳನ್ನು ಓದಲೂ ಬರುವುದಿಲ್ಲ ಎಂದು 2023ನೇ ಸಾಲಿನ ಶಿಕ್ಷಣ ಸ್ಥಿತಿಗತಿ ವಾರ್ಷಿಕ ವರದಿ (ಎಎಸ್‌ಇಆರ್) ತಿಳಿಸಿದೆ.

ಅಲ್ಲದೆ, ಈ ವಯಸ್ಸಿನ ಅರ್ಧಕ್ಕಿಂತ ಹೆಚ್ಚು ಮಕ್ಕಳಿಗೆ ಸರಳ ಭಾಗಾಕಾರವೂ ಬರುವುದಿಲ್ಲ. ಈ ಕೌಶಲಗಳನ್ನು ಸಾಮಾನ್ಯವಾಗಿ 3 ಮತ್ತು 4ನೇ ತರಗತಿ ಮಕ್ಕಳಲ್ಲಿಯೇ ನಿರೀಕ್ಷಿಸಲಾಗುತ್ತದೆ ಎಂದು ವರದಿ ಹೇಳಿದೆ.

ಇದರಲ್ಲಿ ಶೇ 76ರಷ್ಟು ಬಾಲಕಿಯರು ಬಾಲಕರಿಗಿಂತ ಉತ್ತಮವಾಗಿ ತಮ್ಮ ಪ್ರಾದೇಶಿಕ ಭಾಷೆಯಲ್ಲಿ 2ನೇ ತರಗತಿಯ ಪಠ್ಯವನ್ನು ಓದುತ್ತಾರೆ. ಆದರೆ ಅಂಕಗಣಿತ ಮತ್ತು ಇಂಗ್ಲಿಷ್ ಓದುವಿಕೆಯಲ್ಲಿ ಬಾಲಕರು ಮುಂದಿದ್ದಾರೆ.

ದೇಶದ 26 ರಾಜ್ಯಗಳ 28 ಜಿಲ್ಲೆಗಳಲ್ಲಿನ 14ರಿಂದ 18 ವಯೋಮಾನದ 34,745 ಮಕ್ಕಳನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ಪ್ರತಿ ರಾಜ್ಯದಿಂದ ಒಂದೊಂದು ಗ್ರಾಮಾಂತರ ಜಿಲ್ಲೆ ಹಾಗೂ ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶಗಳಿಂದ ತಲಾ ಎರಡು ಜಿಲ್ಲೆಗಳನ್ನು ಸಮೀಕ್ಷೆಗೆ ಆಯ್ಕೆ ಮಾಡಿಕೊಳ್ಳಲಾಗಿತ್ತು.

'ಪ್ರಥಮ್ ಫೌಂಡೇಷನ್' ಈ ಸಮೀಕ್ಷಾ ವರದಿಯನ್ನು ಬುಧವಾರ ಬಿಡುಗಡೆ ಮಾಡಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಶೈಕ್ಷಣಿಕ ನೀತಿಗಳನ್ನು ರೂಪಿಸುವಾಗ ಎಎಸ್‌ಇಆರ್ ವರದಿಗಳನ್ನು ಗಮನಿಸುತ್ತದೆ.

ಇದು ರಾಷ್ಟ್ರೀಯ ಮಟ್ಟದ ಮನೆ-ಮನೆ ಸಮೀಕ್ಷೆಯಾಗಿದೆ. ಗ್ರಾಮೀಣ ಭಾರತದ ಮಕ್ಕಳ ಶಾಲೆ ಹಾಗೂ ಕಲಿಕೆಯ ಕುರಿತ ಮಾಹಿತಿಯನ್ನು ಈ ಸಮೀಕ್ಷೆ ನೀಡುತ್ತದೆ. 2005ರಿಂದ ಎಎಸ್‌ಇಆರ್ ಈ ಸಮೀಕ್ಷೆಗಳನ್ನು ನಡೆಯುತ್ತಿದೆ.

ಭಾರತದ ಯುವಕರು ಯಾವ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂಬುದನ್ನೂ 2023ರ ಸಮೀಕ್ಷೆಯಲ್ಲಿ ಗುರುತಿಸಲಾಗಿದೆ. ಅವರ ಓದುವಿಕೆ, ಗಣಿತದ ಸಾಮರ್ಥ್ಯ, ಡಿಜಿಟಲ್ ಅರಿವು, ಕೌಶಲಗಳ ಬಗ್ಗೆ ಮಾಹಿತಿ ನೀಡುತ್ತದೆ.

3ನೇ ತರಗತಿ ಮಕ್ಕಳು ಓದುವಿಕೆ ಮತ್ತು ಅಂಕಗಣಿತದ ಕೌಶಲಗಳನ್ನು ಪಡೆದುಕೊಂಡಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಅಗತ್ಯದ ಕುರಿತು ಎನ್‌ಇಪಿ 2020ರಲ್ಲಿ ಹೇಳಲಾಗಿದೆ ಎಂದೂ ವರದಿ ತಿಳಿಸಿದೆ.

ಉನ್ನತ ಶಿಕ್ಷಣ ಮುಂದುವರಿಸದ ಶೇ 32ರಷ್ಟು ವಿದ್ಯಾರ್ಥಿಗಳು

14ರಿಂದ 18 ವಯೋಮಾನದ ಶೇ 86.8ರಷ್ಟು ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾಗಿದ್ದಾರೆ. ಆದರೆ 18 ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರ ಪೈಕಿ ಶೇ 32ಕ್ಕಿಂತ ಹೆಚ್ಚಿನ ಜನರು ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾಗಿಲ್ಲ ಎಂದು ಎಎಸ್‌ಇಆರ್ ವರದಿ ತಿಳಿಸಿದೆ.

11-12ನೇ ತರಗತಿಯ ಶೇಕಡ 55ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಮಾನವಿಕ ವಿಷಯಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ, ಉಳಿದವರು ವಿಜ್ಞಾನ, ವಾಣಿಜ್ಯವನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ವರದಿ ಹೇಳಿದೆ.

'ಕರ್ನಾಟಕದಲ್ಲಿ ಸುಧಾರಿಸಬೇಕಿದೆ ಗುಣಮಟ್ಟ'

ಬೆಂಗಳೂರು: ಶಿಕ್ಷಣ ಕಲಿಕೆಯ ಗುಣಮಟ್ಟವನ್ನು ಕರ್ನಾಟಕದಲ್ಲಿ ಸುಧಾರಿಸಬೇಕಿದೆಎಂಬ ಅಂಶವನ್ನು ಶಿಕ್ಷಣ ಸ್ಥಿತಿಗತಿ ವಾರ್ಷಿಕ ವರದಿ–2023 ಬಹಿರಂಗಗೊಳಿಸಿದೆ.

ಮೈಸೂರು ಜಿಲ್ಲೆಯನ್ನು ಸಮೀಕ್ಷೆಗಾಗಿ ಆಯ್ಕೆ ಮಾಡಿಕೊಂಡಿದ್ದು, 60 ಹಳ್ಳಿಗಳಲ್ಲಿ 1,194 ಮನೆಗಳಿಗೆ ಭೇಟಿ ನೀಡಿ ವರದಿ ಸಿದ್ಧಪಡಿಸಲಾಗಿದೆ.

14ರಿಂದ 18 ವಯೋಮಾನದ ಶೇ 7.6ರಷ್ಟು ವಿದ್ಯಾರ್ಥಿಗಳು ಶಾಲೆ ತೊರೆದಿದ್ದಾರೆ. ಶೇ 68ರಷ್ಟು ಯುವಕರು ಕನಿಷ್ಠ 2 ಹಂತದ ಪಠ್ಯ ಓದುತ್ತಾರೆ. ಶೇ 58ರಷ್ಟು ಮಕ್ಕಳು ಮಾತ್ರ ಮೂಲ ಇಂಗ್ಲಿಷ್ ಓದಬಲ್ಲರು. 14-16 ವರ್ಷ ವಯಸ್ಸಿನ ಶೇ 2ರಷ್ಟು ಮಕ್ಕಳು ಯಾವುದೇ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾಗಿಲ್ಲ. 14–16 ವಯಸ್ಸಿನ ಶೇ 19ರಷ್ಟು, ಶೇ 71ರಷ್ಟು ವಿದ್ಯಾರ್ಥಿಗಳು ಸರ್ಕಾರಿ ಸಂಸ್ಥೆಗಳಲ್ಲಿ ಶಾಲೆಯಲ್ಲಿ ದಾಖಲಾಗಿದ್ದಾರೆ. 5ರಿಂದ 8ನೇ ತರಗತಿಗಳ ವಿದ್ಯಾರ್ಥಿಗಳ ಕಲಿಕೆಯ ಮಟ್ಟ ಸ್ಥಿರವಾಗಿದೆ ಎಂಬ ಅಂಶಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ನೋಂದಣಿ ರದ್ದುಗೊಳಿಸಿದ ಕೇಂದ್ರ ಗೃಹ ಸಚಿವಾಲಯ

ಸಿಪಿಆರ್: ವಿದೇಶಿ ದೇಣಿಗೆ ಬಂದ್

ನವದೆಹಲಿ (ಪಿಟಿಐ/ ರಾಯಿಟರ್ಸ್): ದೇಶದ ಪ್ರಮುಖ ಸಾರ್ವಜನಿಕ ಚಿಂತಕರ ಚಾವಡಿ ಎನಿಸಿರುವ 'ಸೆಂಟರ್ ಫಾರ್ ಪಾಲಿಸಿ ರಿಸರ್ಚ್' (ಸಿಪಿಆರ್) ಸಂಸ್ಥೆಯು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯಡಿ (ಎಫ್‌ಸಿಆರ್‌ಎ) ಹೊಂದಿದ್ದ ನೋಂದಣಿಯನ್ನು ಕೇಂದ್ರ ಗೃಹ ಸಚಿವಾಲಯವು ರದ್ದುಗೊಳಿಸಿದೆ. ಇದರಿಂದ ಈ ಸಂಸ್ಥೆಯು ವಿದೇಶದಿಂದ ದೇಣಿಗೆ ಸ್ವೀಕರಿಸುವ ಅವಕಾಶ ಕಳೆದುಕೊಂಡಿದೆ.

ಕೇಂದ್ರ ಸರ್ಕಾರದ ಕ್ರಮದ ವಿರುದ್ಧ ಕಾನೂನು ಹೋರಾಟ ನಡೆಸುವುದಾಗಿ ಸಿಪಿಆರ್ ಹೇಳಿದೆ. ಎಫ್‌ಸಿಆರ್‌ಎ ಅಡಿ ಹೊಂದಿರುವ ನೋಂದಣಿ ರದ್ದಾದರೆ, ಆ ಸಂಸ್ಥೆಯು ವಿದೇಶದಿಂದ ಅಥವಾ ವಿದೇಶಿ ದಾನಿಗಳಿಂದ ಯಾವುದೇ ದೇಣಿಗೆ ಪಡೆಯುವಂತಿಲ್ಲ.

ಎಫ್‌ಸಿಆರ್‌ಎ ಕಾಯ್ದೆಯ ಉಲ್ಲಂಘನೆ ಆರೋಪದಲ್ಲಿ ಸಿಪಿಆರ್‌ನ ಪರವಾನಗಿಯನ್ನು ಅಮಾನತು ಮಾಡಿದ ಒಂದು ವರ್ಷದ ಬಳಿಕ ಗೃಹ ಸಚಿವಾಲಯವು ನೋಂದಣಿ ರದ್ದುಗೊಳಿಸಿದೆ.

ಗೃಹ ಸಚಿವಾಲಯವು 2023ರ ಫೆಬ್ರುವರಿಯಲ್ಲಿ ಎಫ್‌ಸಿಆರ್‌ಎ ಪರವಾನಗಿಯನ್ನು 180 ದಿನಗಳ ಮಟ್ಟಿಗೆ ಅಮಾನತು ಮಾಡಿತ್ತು. ಆ ಬಳಿಕ ಅಮಾನತನ್ನು 180 ದಿನಗಳವರೆಗೆ ವಿಸ್ತರಿಸಿತ್ತು.

ಗೃಹ ಸಚಿವಾಲಯದ ಅಮಾನತು ಕ್ರಮವನ್ನು ಪ್ರಶ್ನಿಸಿ ಸಿಪಿಆರ್, ದೆಹಲಿ ಹೈಕೋರ್ಟ್ ಮೊರೆ ಹೋಗಿತ್ತು. 'ಸಿಪಿಆರ್ ಸಂಸ್ಥೆಯು ವಿದೇಶಿ ದೇಣಿಗೆಯನ್ನು ಅನಪೇಕ್ಷಿತ ಉದ್ದೇಶಗಳಿಗೆ ಬಳಸುತ್ತಿರುವುದರಿಂದ ದೇಶದ ಆರ್ಥಿಕ ಹಿತಾಸಕ್ತಿಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಆದ್ದರಿಂದ ವಿದೇಶಿ ದೇಣಿಗೆಯನ್ನು ನಿಲ್ಲಿಸಬೇಕು' ಎಂದು ಗೃಹ ಸಚಿವಾಲಯ ಹೈಕೋರ್ಟ್‌ನಲ್ಲಿ ವಾದಿಸಿತ್ತು.

'ಯಾವ ಆಧಾರದಲ್ಲಿ ಈ ನಿರ್ಧಾರ ತೆಗೆದುಕೊಂಡಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಆಗುತ್ತಿಲ್ಲ. ಗೃಹ ಸಚಿವಾಲಯ ನೀಡಿರುವ ಕೆಲವು ಕಾರಣಗಳು ಸಂಶೋಧನಾ ಸಂಸ್ಥೆಯ ಕಾರ್ಯನಿರ್ವಹಣೆಯ ಬುನಾದಿಯನ್ನೇ ಪ್ರಶ್ನಿಸುವಂತಿದೆ' ಎಂದು ಸಂಸ್ಥೆಯ ಅಧ್ಯಕ್ಷೆ ಯಾಮಿನಿ ಅಯ್ಯರ್ ಪ್ರತಿಕ್ರಿಯಿಸಿದ್ದಾರೆ.

ಹಲವು ಎನ್‌ಜಿಒಗಳ ನೋಂದಣಿ ರದ್ದು

ನರೇಂದ್ರ ಮೋದಿ ಸರ್ಕಾರ 2014 ರಲ್ಲಿ ಅಧಿಕಾರಕ್ಕೆ ಬಂದ ಬಳಿಕ ಎಫ್‌ಸಿಆರ್‌ಎ ಕಾಯ್ದೆ ಉಲ್ಲಂಘನೆಯಡಿ ಹಲವು ಸ್ವಯಂ ಸೇವಾ ಸಂಸ್ಥೆಗಳ (ಎನ್‌ಜಿಒ) ನೋಂದಣಿಯನ್ನು ರದ್ದುಗೊಳಿಸಿದೆ.

2022ರ ಅಕ್ಟೋಬರ್‌ನಲ್ಲಿ ರಾಜೀವ್ ಗಾಂಧಿ ಫೌಂಡೇಶನ್ (ಆರ್‌ಜಿಎಫ್) ಮತ್ತು ರಾಜೀವ್ ಗಾಂಧಿ ಚಾರಿಟಬಲ್ ಟ್ರಸ್ಟ್‌ನ (ಆರ್‌ಜಿಸಿಟಿ) ನೋಂದಣಿಯನ್ನು ರದ್ದುಗೊಳಿಸಿತ್ತು. ಈ ಎರಡೂ ಎನ್‌ಜಿಒಗಳಿಗೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅಧ್ಯಕ್ಷರಾಗಿದ್ದಾರೆ.

- 1973 ರಲ್ಲಿ ಸ್ಥಾಪನೆಯಾಗಿದ್ದ ಸಿಪಿಆರ್ ಸಂಸ್ಥೆ
- ಸಿಪಿಆರ್‌ಗೆ ದೇಣಿಗೆ ನೀಡುವವರಲ್ಲಿ ಬಿಲ್ ಗೇಟ್ಸ್ ಫೌಂಡೇಶನ್, ಹ್ಯೂಲೆಟ್ ಫೌಂಡೇಶನ್, ವಿಶ್ವ ಬ್ಯಾಂಕ್, ಫೋರ್ಡ್ ಫೌಂಡೇಶನ್ ಮತ್ತು ಬ್ರೌನ್ ಯೂನಿವರ್ಸಿಟಿ ಸೇರಿವೆ.
- ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಮತ್ತು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಆಗಿದ್ದ ದಿವಂಗತ ವೈ.ವಿ.ಚಂದ್ರಚೂಡ್ ಅವರು ಈ ಸಂಸ್ಥೆಯ ಆಡಳಿತ ಮಂಡಳಿಯಲ್ಲಿದ್ದ ಪ್ರಮುಖರು

ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಲಾರಿ, ಟೆಂಪೊ, ಬಾಡಿಗೆ ವಾಹನಗಳ ಮಾಲೀಕರು ಹಾಗೂ ಚಾಲಕರು ಚಾಮರಾಜನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು

ಲಾರಿ ಮುಷ್ಕರ ಆರಂಭ

ಒಂದನೇ ಪುಟದಿಂದ...

ಈ ತಿದ್ದುಪಡಿಯ ಪ್ರಕಾರ, ಅಪಘಾತ ನಡೆದ ಕೂಡಲೇ ಚಾಲಕನನ್ನು ಬಂಧಿಸಬೇಕು. ಅಲ್ಲದೇ 10 ವರ್ಷ ಜೈಲು ಶಿಕ್ಷೆ, ₹ 7 ಲಕ್ಷ ದಂಡ ವಿಧಿಸಲು ಅವಕಾಶ ನೀಡಲಾಗಿದೆ. ಈ ತಿದ್ದುಪಡಿ ವಾಪಸ್ ಪಡೆಯುವವರೆಗೆ ಮುಷ್ಕರ ಹಿಂಪಡೆಯುವುದಿಲ್ಲ' ಎಂದು ಫೆಡರೇಷನ್ ಆಫ್ ಕರ್ನಾಟಕ ಲಾರಿ ಓನರ್ಸ್ ಅಸೋಸಿಯೇಶನ್ ಅಧ್ಯಕ್ಷ ಸಿ. ನವೀನ್ ರೆಡ್ಡಿ ತಿಳಿಸಿದರು.

'ರಾಜ್ಯದ ಗಡಿ ಭಾಗಗಳಲ್ಲಿರುವ ಸಾರಿಗೆ ಇಲಾಖೆಯ ತಪಾಸಣೆ ಠಾಣೆಗಳನ್ನು ತೆಗೆದು ಹಾಕಬೇಕು. ಹೆಚ್ಚುವರಿ ಲೋಡ್‌ಗೆ ವಿಧಿಸುತ್ತಿರುವ ₹ 20,000 ದಂಡವನ್ನು ಕಡಿಮೆ ಮಾಡಬೇಕು. ಕಪ್ಪುಪಟ್ಟಿಯಲ್ಲಿರುವ ವಾಣಿಜ್ಯ ವಾಹನಗಳಿಗೆ ಸಾಮರ್ಥ್ಯ ಪ್ರಮಾಣಪತ್ರ (ಎಫ್‌ಸಿ), ಪರವಾನಗಿ ನವೀಕರಣ ನಿರಾಕರಿಸಬಾರದು. ಬೆಂಗಳೂರು ನಗರದ ಪ್ರವೇಶಕ್ಕೆ ಸರಕು ಸಾಗಾಟದ ವಾಹನಗಳಿಗೆ ದಿನದ ಕೆಲವು ಸಮಯದಲ್ಲಿ ನಿರ್ಬಂಧ ವಿಧಿಸಿ ರುವುದನ್ನು ತೆಗೆದು ಹಾಕಬೇಕು ಎಂಬುದನ್ನೂ ಸೇರಿ ಕೆಲವು ಸ್ಥಳೀಯ ಬೇಡಿಕೆಗಳನ್ನು ಈಡೇರಿಸಬೇಕು ಎಂದು ರಾಜ್ಯ ಪೊಲೀಸ್ ಇಲಾಖೆ ಮತ್ತು ಸಾರಿಗೆ ಇಲಾಖೆಯ ಮುಂದೆ ಇಟ್ಟಿದ್ದೇವೆ' ಎಂದು ಅವರು ಮಾಹಿತಿ ನೀಡಿದರು.

ಎಲ್ಲ ಬೇಡಿಕೆಗಳು ಈಡೇರುವವರೆಗೆ ಮುಷ್ಕರ ಮುಂದುವರಿಯಲಿದೆ. ಹಾಲು, ಇಂಧನ, ಔಷಧ ಸಹಿತ ಅಗತ್ಯ ವಸ್ತುಗಳ ಸಾಗಾಟದ ವಾಹನಗಳಿಗೆ ವಿನಾಯಿತಿ ನೀಡಲಾಗಿದೆ ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಮಿಶ್ರ ಪ್ರತಿಕ್ರಿಯೆ: ಮುಷ್ಕರಕ್ಕೆ ಮೈಸೂರು ಭಾಗದಲ್ಲಿ ಮಿಶ್ರ ಪ್ರತಿಕ್ರಿಯೆ ದೊರೆತಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಮಾತ್ರ ಮುಷ್ಕರಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಲಾರಿಗಳು, ಟೆಂಪೊಗಳು, ಬಾಡಿಗೆ ವಾಹನಗಳು ಸಂಚರಿಸಲಿಲ್ಲ. ಕೆಲವು ಆಟೊ ಚಾಲಕರು ಮತ್ತು ಮಾಲೀಕರು ಕೂಡ ಮುಷ್ಕರ ಬೆಂಬಲಿಸಿದರು. ಜಿಲ್ಲಾ ಕೇಂದ್ರ ಚಾಮರಾಜನಗರ ಮತ್ತು ಕೊಳ್ಳೇಗಾಲದಲ್ಲಿ ಬೃಹತ್ ಪ್ರತಿಭಟನೆ, ಮೆರವಣಿಗೆ ನಡೆಸಿದರು. ಮೈಸೂರಿನಲ್ಲಿ ಜಿಲ್ಲಾ ಲಾರಿ ಮಾಲೀಕರ ಒಕ್ಕೂಟವು ಸುದ್ದಿಗೋಷ್ಠಿ ನಡೆಸಿ ಬಂದ್‌ಗೆ ಬೆಂಬಲ ಸೂಚಿಸಿತು. ಹಾಸನ ಜಿಲ್ಲೆಯಲ್ಲಿ ಮುಷ್ಕರ ನಡೆಯಲಿಲ್ಲ. 'ಲಾರಿ ಮುಷ್ಕರಕ್ಕೆ ಬೆಂಬಲವಿಲ್ಲ' ಎಂದು ಕೊಡಗು ಜಿಲ್ಲಾ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಜಿಲ್ಲಾ ಅಧ್ಯಕ್ಷ ಮಸೂದ್ ತಿಳಿಸಿದರು.

ಉತ್ತರಪ್ರದೇಶ: ಶಂಕಿತ ಉಗ್ರ ಬಂಧನ

ಲಖನೌ (ಪಿಟಿಐ): 'ಐಎಸ್ ಭಯೋತ್ಪಾದಕ ಸಂಘಟನೆಯೊಂದಿಗೆ ನಂಟು ಹೊಂದಿರುವ ಶಂಕಿತ ಉಗ್ರನನ್ನು ಆಲಿಗಢದಲ್ಲಿ ಬುಧವಾರ ಬಂಧಿಸಲಾಗಿದೆ' ಎಂದು ಉತ್ತರ ಪ್ರದೇಶದ ಭಯೋತ್ಪಾದಕ ನಿಗ್ರಹ ದಳದ (ಎಟಿಎಸ್) ಪ್ರಕಟಣೆ ಹೇಳಿದೆ.

'ಹಲವು ಪ್ರಕರಣಗಳಲ್ಲಿ ಎಟಿಎಸ್‌ಗೆ ಬೇಕಾಗಿದ್ದ ಫಜಾನ್ ಬಕ್ತಿಯಾರ್ ಬಂಧಿತ ಆರೋಪಿ. ಈತನನ್ನು ಬಂಧಿಸಲು ಅನುಕೂಲವಾಗುವಂಥ ಮಾಹಿತಿ ನೀಡಿದವರಿಗೆ ₹25,000 ನೀಡಲಾಗುವುದು ಎಂದೂ ಘೋಷಿಸಲಾಗಿತ್ತು' ಎಂದು ತಿಳಿಸಿದೆ.

'ಆಲಿಗಢ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಸಮಾಜ ಕಾರ್ಯ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿದ್ದ, 2023ರ ನವೆಂಬರ್‌ನಲ್ಲಿ ಐಸ್‌ನೊಂದಿಗೆ ನಂಟು ಹೊಂದಿದ್ದ ಅಬ್ದುಲ್ಲಾ ಅಸ್ರಲಾನ್ ಹಾಗೂ ಮಾಜ್ ಬಿನ್ ತಾರಿಖ್ ಅವರನ್ನು ಬಂಧಿಸಿದ ಬಳಿಕ ಫೈಜಾನ್‌ನ ಹೆಸರು ಮುನ್ನೆಲೆಗೆ ಬಂದಿತ್ತು' ಎಂದೂ ವಿವರಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು





ಶ್ರೀ ಎ.ನಾಗರಾಜರೆಡ್ಡಿಯವರು | ಶ್ರೀಮತಿ ಲಕ್ಷ್ಮಮ್ಮನವರು | ಶ್ರೀ ಅಬ್ಬಯ್ಯರೆಡ್ಡಿಯವರು

ನಿಮ್ಮ ಸವಿನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿದೆ.
ನಮ್ಮ ಏಳಿಗೆಯ ಪ್ರತಿ ಕ್ಷಣದಲ್ಲೂ ನಮ್ಮನ್ನು ಆಶೀರ್ವದಿಸುತ್ತಿರುವ
ನಿಮ್ಮನ್ನು ಕೃತಜ್ಞತೆಯಿಂದ ಸ್ಮರಿಸುತ್ತಾ
ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುತ್ತೇವೆ.
ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ, ಮಗ, ಸೊಸೆ, ಮಗಳು, ಅಳಿಯ, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ, ಜೆ.ಪಿ.ನಗರ, ಬೆಂಗಳೂರು

ನಿಮ್ಮ ಪ್ರೀತಿಯ ಸವಿನೆನಪು

ಶ್ರೀಮತಿ ಮೀನಮ್ಮ
ಶ್ರೀ ಬಿ. ನಾರಾಯಣರೆಡ್ಡಿಯವರ ಧರ್ಮಪತ್ನಿ
ಸೀತಾರಾಮಪಾಳ್ಯ
ನಿಧನ: 28–8–1991
"ನಿಮ್ಮ ಆದರ್ಶ ಜೀವನವು ಎಲ್ಲರ ಪ್ರೀತ್ಯಾದರಕ್ಕೆ ಪಾತ್ರವಾಗಿದ್ದು ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿರುವುದು. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥಿಸುವ."
– ಬಿ.ಎನ್.ಬಿ.ಕುಟುಂಬದವರು ಮತ್ತು ಸ್ನೇಹಿತರು.

ಒಂಬತ್ತನೆಯ ವರ್ಷದ ಪುಣ್ಯತಿಥಿ



ಬಿ.ನಾರಾಯಣರೆಡ್ಡಿ (ಬಿ.ಎನ್.ಬಿ)
28.08.1928 To 18.01.2015
ಸೀತಾರಾಮಪಾಳ್ಯ
ನಾವು ಪ್ರೀತಿಸುವ ವ್ಯಕ್ತಿ ಈ ಜಗದಲ್ಲಿ ನೆನಪಾಗಿ ಉಳಿದಿದ್ದರೆ, ಆ ನೆನಪುಗಳೇ ನಮಗೆ ಸಿಕ್ಕಿರುವ ಸವಿನೆನಪಿನ ನಿಧಿ
– ಬಿ.ಎನ್.ಬಿ ಕುಟುಂಬದವರು ಮತ್ತು ಸ್ನೇಹಿತರು.

ಬಲೂಚಿಸ್ತಾನ್ ಪ್ರಾಂತ್ಯದ ಭಯೋತ್ಪಾದಕ ನೆಲೆಗಳ ಮೇಲೆ ಕ್ಷಿಪಣಿ ದಾಳಿ

ಇರಾನ್‌ಗೆ ಪಾಕಿಸ್ತಾನದ ಎಚ್ಚರಿಕೆ

ಇಸ್ಲಾಮಾಬಾದ್ (ಪಿಟಿಐ): ಬಲೂಚಿಸ್ತಾನ್ ಪ್ರಾಂತ್ಯದ ಭಯೋತ್ಪಾದಕ ನೆಲೆಗಳ ಮೇಲೆ ಇರಾನ್ ನಡೆಸಿರುವ ಕ್ಷಿಪಣಿ ಮತ್ತು ಡ್ರೋನ್ ದಾಳಿಯನ್ನು ತೀವ್ರವಾಗಿ ಖಂಡಿಸಿರುವ ಪಾಕಿಸ್ತಾನ, ಇದಕ್ಕೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಬುಧವಾರ ಎಚ್ಚರಿಸಿದೆ.

ಇರಾಕ್ ಮತ್ತು ಸಿರಿಯಾ ಮೇಲೆ ಕ್ಷಿಪಣಿ ದಾಳಿ ನಡೆಸಿದ ಮಾರನೇ ದಿನ, ಪಾಕ್‌ನ ಬಲೂಚಿಸ್ತಾನದಲ್ಲಿ ನೆಲೆಸಿರುವ ಜೈಶ್ ಅಲ್ ಅದ್ಲ್ ಉಗ್ರಗಾಮಿ ಗುಂಪಿಗೆ ಸೇರಿದ ಎರಡು ನೆಲೆಗಳ ಮೇಲೆ ಇರಾನ್ ಪಡೆ ದಾಳಿ ನಡೆಸಿತ್ತು. ಈ ದಾಳಿಯಲ್ಲಿ ಇಬ್ಬರು ಮಕ್ಕಳು ಮೃತಪಟ್ಟಿದ್ದು, ಮೂವರಿಗೆ ಗಂಭೀರ ಗಾಯಗಳಾಗಿವೆ.

ಈ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಪಾಕಿಸ್ತಾನವು ಇರಾನಿನ ರಾಯಭಾರಿಯನ್ನು ಕರೆಸಿ ಪ್ರತಿಭಟನೆ ದಾಖಲಿಸಿದೆ.

ಕ್ಷಿಪಣಿ ದಾಳಿ ಖಂಡಿಸಿರುವ ಪಾಕಿಸ್ತಾನದ ವಿದೇಶಾಂಗ ಸಚಿವಾಲಯ, 'ದಾಳಿಯಲ್ಲಿ ಇಬ್ಬರು ಮಕ್ಕಳು ಮೃತಪಟ್ಟಿದ್ದು, ಮೂವರಿಗೆ ಗಂಭೀರ ಗಾಯಗಳಾಗಿವೆ. ವಾಯುನೆಲೆ ನಿಯಮಗಳನ್ನು ಇರಾನ್ ಉಲ್ಲಂಘಿಸಿದೆ. ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಯಾವುದೇ ವಿಚಾರವನ್ನು ಪಾಕಿಸ್ತಾನ ಸಹಿಸುವುದಿಲ್ಲ. ಇಂತಹ ಕೃತ್ಯಗಳನ್ನು ಒಪ್ಪಲಾಗುವುದಿಲ್ಲ. ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗಬಹುದು' ಎಂದು ಎಚ್ಚರಿಕೆ ಸಂದೇಶ ರವಾನಿಸಿದೆ.

ಜೈಶ್ ಅಲ್-ಅದ್ಲ್ ಭಯೋತ್ಪಾದಕ ಗುಂಪಿನ ಎರಡು ಪ್ರಮುಖ ಭದ್ರಕೋಟೆಗಳನ್ನು ನಿರ್ದಿಷ್ಟವಾಗಿ ಗುರಿಯಾಗಿಸಿ ದಾಳಿ ನಡೆಸಿ, ಅವುಗಳನ್ನು ನಾಶಗೊಳಿಸಲಾಗಿದೆ ಎಂದು ಇರಾನ್‌ನ ತಸ್ನಿಮ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಇರಾನ್‌ನಿಂದ ರಾಯಭಾರಿ ವಾಪಸ್ ಕರೆಸಿದ ಪಾಕ್

ಇರಾನ್ ದಾಳಿಯನ್ನು ತೀವ್ರವಾಗಿ ಖಂಡಿಸಿರುವ ಪಾಕಿಸ್ತಾನ, ಇರಾನ್‌ನಿಂದ ತನ್ನ ರಾಯಭಾರಿಯನ್ನು ವಾಪಸ್ ಕರೆಸಿಕೊಂಡಿದೆ. ಅಲ್ಲದೆ ಮುಂಬರುವ ದಿನಗಳಲ್ಲಿ ನಿಗದಿಯಾಗಿದ್ದ ಎಲ್ಲಾ ಉನ್ನತ ಮಟ್ಟದ ದ್ವಿಪಕ್ಷೀಯ ಭೇಟಿಗಳನ್ನು ಸ್ಥಗಿತಗೊಳಿಸಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಪಾಕ್ ವಿದೇಶಾಂಗ ಸಚಿವಾಲಯದ ವಕ್ತಾರರಾದ ಮುಮ್ತಾಜ್ ಜಹ್ರಾ ಬಲೂಚ್ ಅವರು, ಇರಾನ್‌ನ ಅಪ್ರಚೋದಿತ ದಾಳಿಯು ಪಾಕ್‌ನ ಸಾರ್ವಭೌಮತ್ವ, ಅಂತರರಾಷ್ಟ್ರೀಯ ಕಾನೂನುಗಳು, ವಿಶ್ವಸಂಸ್ಥೆಯ ಚಾರ್ಟರ್‌ನ ಉದ್ದೇಶಗಳು ಮತ್ತು ತತ್ವಗಳ ಉಲ್ಲಂಘನೆಯಾಗಿದೆ ಎಂದಿದ್ದಾರೆ.

ಪಾಕಿಸ್ತಾನದಲ್ಲಿರುವ ಇರಾನ್‌ನ ರಾಯಭಾರಿ ತಮ್ಮ ದೇಶಕ್ಕೆ ತೆರಳುತ್ತಿದ್ದು, ಅವರೂ ಸದ್ಯಕ್ಕೆ ಹಿಂತಿರುಗುವ ಅಗತ್ಯವಿಲ್ಲ ಎಂದು ಮುಮ್ತಾಜ್ ಹೇಳಿದ್ದಾರೆ.

ಗುರಿಯಾಗಿಸಿದ ಈ ಪ್ರದೇಶವನ್ನು 'ಗ್ರೀನ್ ಮೌಂಟೇನ್' ಎಂದು ಕರೆಯಲಾಗುತ್ತದೆ ಎಂದೂ ಅದು ಹೇಳಿದೆ.

ಈ ಉಗ್ರ ಸಂಘಟನೆಯು ಈ ಹಿಂದೆ ಪಾಕಿಸ್ತಾನದ ಗಡಿ ಪ್ರದೇಶದಲ್ಲಿ ಇರಾನ್ ಭದ್ರತಾ ಪಡೆಗಳ ಮೇಲೆ ದಾಳಿ ನಡೆಸಿದೆ ಎಂದು ಡಾನ್ ಪತ್ರಿಕೆ ವರದಿ ಮಾಡಿದೆ.

ಇರಾನ್ ದಾಳಿಯನ್ನು ಪಾಕಿಸ್ತಾನ ನದ ವಿವಿಧ ರಾಜಕೀಯ ಪಕ್ಷಗಳು ಖಂಡಿಸಿವೆ. 'ಭಾರತ, ಅಫ್ಗಾನಿಸ್ತಾನದ ಬಳಿಕ ಇರಾನ್ ಜೊತೆಗೆ ನಮ್ಮ ಸಂಬಂಧಗಳು ಗಂಭೀರವಾಗಿ ಕ್ಷೀಣಿಸಿರುವುದು ಕಳವಳ ಮೂಡಿಸಿದೆ. ಇದು ನಮ್ಮ ವಿದೇಶಾಂಗ ನೀತಿ ಮತ್ತು ರಕ್ಷಣಾ ನೀತಿಗಳ ವಿಫಲತೆಯ ಬಗ್ಗೆ ತಿಳಿಸುತ್ತದೆ' ಎಂದು ಪಾಕಿಸ್ತಾನದ ಪ್ರಮುಖ ವಿರೋಧ ಪಕ್ಷ ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ (ಪಿಟಿಐ) ದೂರಿದೆ.

ಪರಸ್ಪರ ಶಾಂತಿ ಕಾಯ್ದುಕೊಳ್ಳಲು ಚೀನಾ ಕರೆ (ಬೀಜಿಂಗ್ ವರದಿ): ಸಂದಿಗ್ಧ ಪರಿಸ್ಥಿತಿಯಲ್ಲಿ ಪಾಕಿಸ್ತಾನ ಮತ್ತು ಇರಾನ್ ರಾಷ್ಟ್ರಗಳು ಪರಸ್ಪರ ಶಾಂತಿ ಕಾಯ್ದುಕೊಳ್ಳಬೇಕು ಎಂದು ಚೀನಾ ಕರೆ ನೀಡಿದೆ.

'ಇರಾನ್ ಮತ್ತು ಪಾಕಿಸ್ತಾನ ಎರಡೂ ನೆರೆಹೊರೆ ದೇಶಗಳಾಗಿದ್ದು, ಪ್ರಮುಖ ಇಸ್ಲಾಮಿಕ್ ರಾಷ್ಟ್ರಗಳಾಗಿವೆ. ಯುಎನ್ ಚಾರ್ಟರ್ ಮತ್ತು ಅಂತರರಾಷ್ಟ್ರೀಯ ಕಾನೂನಿನ ಉದ್ದೇಶಗಳು ಮತ್ತು ತತ್ವಗಳಿಗೆ ಬದ್ಧವಾಗಿ ಎರಡೂ ದೇಶಗಳು ಸಂಬಂಧಗಳನ್ನು ನಿರ್ವಹಿಸಬೇಕು. ಎಲ್ಲ ದೇಶಗಳ ಸಾರ್ವಭೌಮತ್ವ, ಸ್ವಾತಂತ್ರ್ಯ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸಬೇಕು ಮತ್ತು ರಕ್ಷಿಸಬೇಕು ಎಂಬುದನ್ನು ಚೀನಾ ನಂಬುತ್ತದೆ' ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಮಾವೊ ನಿಂಗ್ ಪ್ರತಿಕ್ರಿಯಿಸಿದ್ದಾರೆ.

ಠಾಕ್ರೆ ಬಣದ ಅರ್ಜಿ ವಿಚಾರಣೆ ಜ.22ಕ್ಕೆ

ನವದೆಹಲಿ(ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಬಣವೇ 'ನಿಜವಾದ ಶಿವಸೇನಾ' ಎಂದು ವಿಧಾನಸಭೆ ಸ್ಪೀಕರ್ ರಾಹುಲ್ ನಾರ್ವೇಕರ್ ನೀಡಿರುವ ಆದೇಶ ಪ್ರಶ್ನಿಸಿರುವ ಶಿವಸೇನಾದ ಉದ್ಧವ್ ಠಾಕ್ರೆ ಬಣದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಬುಧವಾರ ಇದೇ ತಿಂಗಳ 22ಕ್ಕೆ ಮುಂದೂಡಿದೆ.

ಠಾಕ್ರೆ ಬಣ ಸೋಮವಾರ ಸಲ್ಲಿಸಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ರಿಜಿಸ್ಟ್ರಿಯು ಜ.19ಕ್ಕೆ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠ ವಿಚಾರಣೆಗೆ ನಿಗದಿಪಡಿಸಿತ್ತು.

ಠಾಕ್ರೆ ಬಣದ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಈ ಅರ್ಜಿಯನ್ನು ಜ.19 ಬದಲಿಗೆ ಬರುವ ಜ.22 ವಿಚಾರಣೆ ನಡೆಸುವಂತೆ ಪೀಠಕ್ಕೆ ಮನವಿ ಮಾಡಿದರು. ಇದಕ್ಕೆ ಪೀಠವು ಸಮ್ಮತಿಸಿದೆ.

ಶಿಂದೆ ಮತ್ತು ಅವರ ಬೆಂಬಲಿಗ 16 ಶಾಸಕರ ಅನರ್ಹತೆ ಕೋರಿ ಠಾಕ್ರೆ ಬಣ ಸಲ್ಲಿಸಿದ್ದ ಮನವಿಯನ್ನು ಸ್ಪೀಕರ್ ರಾಹುಲ್ ನಾರ್ವೇಕರ್ ಅವರು ತಿರಸ್ಕರಿಸಿದ್ದರು.

ಮಣಿಪುರ: ಮೃತರ ಸಂಖ್ಯೆ 2ಕ್ಕೆ ಏರಿಕೆ

ಇಂಫಾಲ್(ಪಿಟಿಐ): ಮಣಿಪುರದ ತೆಂಗ್‌ನೌಪಾಲ್ ಜಿಲ್ಲೆಯ ಮೋರೆ ಎಂಬಲ್ಲಿ ಭದ್ರತಾ ಪಡೆಗಳು ಹಾಗೂ ಬಂಡುಕೋರರ ನಡುವಿನ ಗುಂಡಿನ ಕಾಳಗದಲ್ಲಿ ಸೇನೆಯ ಮತ್ತೊಬ್ಬ ಸಿಬ್ಬಂದಿ ಮೃತಪಟ್ಟಿದ್ದು, ಸತ್ತವರ ಸಂಖ್ಯೆ ಎರಡಕ್ಕೆ ಏರಿದಂತಾಗಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಈ ಗುಂಡಿನ ಕಾಳಗದಲ್ಲಿ ಮತ್ತಿಬ್ಬರು ಪೊಲೀಸರು ಗಾಯಗೊಂಡಿದ್ದಾರೆ ಎಂದೂ ತಿಳಿಸಿದ್ದಾರೆ.

ಮೃತರನ್ನು ಪಶ್ಚಿಮ ಇಂಫಾಲ್ ಜಿಲ್ಲೆಯ ತಖೇಲ್ಲಂಬಮ್ ಶೈಲೇಶ್ವೋರೆ ಎಂದು ಗುರುತಿಸಲಾಗಿದೆ.

ಇದಕ್ಕೂ ಮುನ್ನ, ಇಮಾ ಕೊಂಡೊಂಗ್ ಲೈರೆಂಬಿ ದೇವಿ ದೇವಸ್ಥಾನ ಬಳಿ ನಡೆದ ಹೊಂಚು ದಾಳಿಯಲ್ಲಿ ವಾಂಗ್‌ಖೆಮ್ ಸಮರ್‌ಜಿತ್ ಎಂಬ ಪೊಲೀಸ್ ಅಧಿಕಾರಿಗೆ ಗುಂಡು ತಗುಲಿತ್ತು. ಅವರನ್ನು ಅಸ್ಸಾಂ ರೈಫಲ್ಸ್‌ನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಅವರು ಮೃತಪಟ್ಟರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಿಳೆಯರಿಂದ ರಸ್ತೆ ತಡೆ: ಮೋರೆ ಪಟ್ಟಣದಲ್ಲಿ ನಡೆದ ಗುಂಡಿನ ಕಾಳಗದಲ್ಲಿ ಪೊಲೀಸರ ಹತ್ಯೆ ಆಗಿದ್ದನ್ನು ಖಂಡಿಸಿ ಪಶ್ಚಿಮ ಇಂಫಾಲ್ ಜಿಲ್ಲೆಯ ಮಾಲೋಮ್ ಎಂಬಲ್ಲಿ ಭಾರಿ ಸಂಖ್ಯೆಯಲ್ಲಿ ಮಹಿಳೆಯರು ಪ್ರತಿಭಟನೆ ನಡೆಸಿದರು.

ಮತ್ತೆ ವಿಮಾನ ಹಾರಾಟದಲ್ಲಿ ವ್ಯತ್ಯಯ

ಮುಂಬೈ(ರಾಯಿಟರ್ಸ್): ದೇಶದ ಉತ್ತರ ಭಾಗದ ಹಲವೆಡೆ ಬುಧವಾರ ಕೂಡ ಶೀತ ಮಾರುತದ ಪರಿಣಾಮ ದಟ್ಟ ಮಂಜು ಕವಿದ ಪರಿಣಾಮ ನಾಲ್ಕನೇ ದಿನವೂ ವಿಮಾನಗಳ ಸಂಚಾರದಲ್ಲಿ ವ್ಯತ್ಯಯವಾಗಿತ್ತು.

ದೆಹಲಿ ವಿಮಾನ ನಿಲ್ದಾಣದಿಂದ ಹೊರಡಬೇಕಿದ್ದ 109 ವಿಮಾನಗಳು ತಡವಾಗಿ ಹಾರಾಟ ಆರಂಭಿಸಿದ್ದರೆ, 19 ವಿಮಾನಗಳ ಸಂಚಾರವನ್ನು ರದ್ದುಪಡಿಸ ಲಾಗಿತ್ತು ಎಂದು 'ಫ್ಲೈಟ್‌ರಾಡಾರ್24' ಜಾಲತಾಣದಲ್ಲಿ ವಿವರಿಸಲಾಗಿದೆ.

ಇಂಡಿಗೋ, ಎಂಐಎಎಲ್‌ಗೆ ₹1.80 ಕೋಟಿ ದಂಡ

ನವದೆಹಲಿ(ಪಿಟಿಐ): ವಿಮಾನಗಳ ಸಂಚರಿಸುವ ಮಾರ್ಗದ (ಟಾರ್ಮ್ಯಾಕ್) ಮೇಲೆ ಪ್ರಯಾಣಿಕರು ಆಹಾರ ಸೇವನೆ ಮಾಡಿದ ಘಟನೆಗೆ ಸಂಬಂಧಿಸಿ ವಿಮಾನಯಾನ ಭದ್ರತಾ ಸಂಸ್ಥೆ (ಬಿಸಿಎಎಸ್), ಇಂಡಿಗೊ ಸಂಸ್ಥೆಗೆ ₹1.20 ಕೋಟಿ ಹಾಗೂ ಎಂಐಎಎಲ್‌ಗೆ (ಮುಂಬೈ ಅಂತರರಾಷ್ಟ್ರೀಯ ವಿಮಾನನಿಲ್ದಾಣ ನಿಯಮಿತ) ಬುಧವಾರ ₹60 ಲಕ್ಷ ದಂಡ ವಿಧಿಸಿದೆ.

ವಿಮಾನನಿಲ್ದಾಣದಲ್ಲಿ ಗೊಂದಲದ ಪರಿಸ್ಥಿತಿ ನಿರ್ಮಾಣವಾಗಿದ್ದ ಸಂದರ್ಭದಲ್ಲಿ ತ್ವರಿತವಾಗಿ ಕ್ರಮ ಕೈಗೊಂಡು, ಪ್ರಯಾಣಿಕರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿರಲಿಲ್ಲ ಎಂಬ ಬಗ್ಗೆ ಕಾರಣ ನೀಡುವಂತೆ ಸೂಚಿಸಿ, ಇಂಡಿಗೊ ಮತ್ತು ಎಂಐಎಎಲ್‌ಗೆ ನೋಟಿಸ್ ಮಾಡಲಾಗಿದೆ ಎಂದು ಬಿಸಿಎಎಸ್ ತಿಳಿಸಿದೆ.

ಗುರುವಾಯೂರು, ತ್ರಿಪ್ರಯಾರ್ ದೇವಾಲಯಗಳಿಗೆ ಮೋದಿ ಭೇಟಿ

ಕೇರಳ: ಹಲವು ಯೋಜನೆಗಳಿಗೆ ಚಾಲನೆ

ಕೊಚ್ಚಿ/ ತ್ರಿಶ್ಶೂರ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಎರಡು ವಾರಗಳ ಅವಧಿಯಲ್ಲಿ ಎರಡನೇ ಬಾರಿ ಕೇರಳಕ್ಕೆ ಭೇಟಿ ನೀಡಿ ರೋಡ್ ಶೋ, ದೇವಾಲಯಗಳ ಭೇಟಿ ಹಾಗೂ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡರು.

ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯು ವಿರೋಧ ಪಕ್ಷಗಳ ಪ್ರಾಬಲ್ಯವಿರುವ ಕೇರಳದ ಮೇಲೆ ಹೆಚ್ಚಿನ ಗಮನ ನೀಡಲಿರುವುದನ್ನು ಪ್ರಧಾನಿ ಅವರ ಭೇಟಿ ಸ್ಪಷ್ಟಪಡಿಸಿದೆ ಎಂದು ವಿಶ್ಲೇಷಿಸಲಾಗಿದೆ.

ಮಂಗಳವಾರ ಸಂಜೆ ಕೊಚ್ಚಿಗೆ ಬಂದಿಳಿದ ಪ್ರಧಾನಿ, ರೋಡ್ ಶೋದಲ್ಲಿ ಭಾಗಿಯಾದರು. ಕೊಚ್ಚಿಯ ಕೆಪಿಸಿಸಿ ಜಂಕ್ಷನ್‌ನಿಂದ ನಡೆದ 1.3 ಕಿ.ಮೀ ದೂರದ ರೋಡ್ ಶೋ ವೇಳೆ ಬಿಜೆಪಿ ಕಾರ್ಯಕರ್ತರು ಮತ್ತು ಸ್ಥಳೀಯರು ರಸ್ತೆಯ ಎರಡೂ ಬದಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದರು. ಪ್ರಧಾನಿ ಅವರು ಜನವರಿ 3 ರಂದು ತ್ರಿಶ್ಶೂರ್‌ನಲ್ಲಿ ರೋಡ್ ಶೋ ಕೈಗೊಂಡಿದ್ದರು.

ಬುಧವಾರ ಇಡೀ ದಿನ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಬೆಳಿಗ್ಗೆ ಗುರುವಾಯೂರು ದೇವಸ್ಥಾನಕ್ಕೆ ಭೇಟಿ ನೀಡಿದ ಅವರು ವಿಶೇಷ ಪೂಜೆಯಲ್ಲಿ ಪಾಲ್ಗೊಂಡರು. ಆ ಬಳಿಕ ತ್ರಿಶ್ಶೂರ್‌ನ ತ್ರಿಪ್ರಯಾರ್ ಶ್ರೀ ರಾಮಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದರು.

ವಿವಿಧ ಯೋಜನೆಗಳಿಗೆ ಚಾಲನೆ: ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್‌ನಲ್ಲಿ ಹೊಸ ಸೌಲಭ್ಯಗಳು ಸೇರಿದಂತೆ ₹4,000 ಕೋಟಿ ಮೊತ್ತದ ಯೋಜನೆಗಳಿಗೆ ಪ್ರಧಾನಿ ಚಾಲನೆ ನೀಡಿದರು. ಅಂತರರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ನಿರ್ಮಿಸಿರುವ 310 ಮೀ. ಉದ್ದದ ನೌಕಾ ಜೆಟ್ಟಿ (ಡ್ರೈ ಡಾಕ್), ಹಡಗುಗಳ ದುರಸ್ತಿಗೆ ಸ್ಥಾಪಿಸಿರುವ ಇಂಟರ್‌ನ್ಯಾಷನಲ್ ಶಿಪ್ ರಿಪೇರ್ ಫೆಸಿಲಿಟಿ (ಐಎಸ್‌ಆರ್‌ಎಫ್) ಮತ್ತು ಐಒಸಿಎಲ್‌ನ ಎಲ್‌ಪಿಜಿ ಆಮದು ಟರ್ಮಿನಲ್ ಕೂಡಾ ಯೋಜನೆಯಲ್ಲಿ ಒಳಗೊಂಡಿವೆ.

ಕೇರಳದ ತ್ರಿಶ್ಶೂರ್ ಜಿಲ್ಲೆಯ ತ್ರಿಪ್ರಯಾರ್ ಶ್ರೀ ರಾಮಸ್ವಾಮಿ ದೇವಾಲಯದಲ್ಲಿ 'ಮಲಯಾಳ ರಾಮಾಯಣ' ಪ್ರದರ್ಶಿಸಿದ ಮಕ್ಕಳ ಜೊತೆ ಪ್ರಧಾನಿ ಮೋದಿ ಮಾತುಕತೆ ನಡೆಸಿದರು —ಪಿಟಿಐ ಚಿತ್ರ

> **ತ್ವರಿತಗತಿಯ ಅಭಿವೃದ್ಧಿ ಮತ್ತು ದೇಶದ ಭವಿಷ್ಯದ ಬಗ್ಗೆ ಸ್ಪಷ್ಟವಾದ ದೃಷ್ಟಿಕೋನ ಹೊಂದಿರುವ ಭಾರತದ ಏಕೈಕ ಪಕ್ಷ ಬಿಜೆಪಿ ಆಗಿದೆ**
> **ನರೇಂದ್ರ ಮೋದಿ,** ಪ್ರಧಾನಿ

- ಕೇರಳದ ಸಾಂಪ್ರದಾಯಿಕ ಉಡುಗೆ 'ಮುಂಡು' (ಧೋತಿ) ಮತ್ತು ಬಿಳಿ ಶಾಲು ಧರಿಸಿ ಗುರುವಾಯೂರು ದೇವಾಲಯದಲ್ಲಿ ಪ್ರಧಾನಿ ವಿಶೇಷ ಪೂಜೆ
- ನಟ ಹಾಗೂ ರಾಜಕಾರಣಿ ಸುರೇಶ್ ಗೋಪಿ ಪುತ್ರಿಯ ಮದುವೆ ಸಮಾರಂಭದಲ್ಲಿ ಭಾಗಿ
- ಇದೇ ಸಮಾರಂಭದಲ್ಲಿ ಪಾಲ್ಗೊಂಡಿದ್ದ ನಟರಾದ ಮಮ್ಮೂಟ್ಟಿ, ಮೋಹನ್‌ಲಾಲ್, ದಿಲೀಪ್ ಮತ್ತು ಖುಷ್ಬೂ ಜತೆ ಮೋದಿ ಮಾತುಕತೆ

ಈ ವೇಳೆ ಮಾತನಾಡಿ, 'ಭಾರತವು ಜಾಗತಿಕ ವ್ಯಾಪಾರದ ಪ್ರಮುಖ ಕೇಂದ್ರವಾಗುತ್ತಿರುವ ಈ ಸಮಯದಲ್ಲಿ ನಾವು ನಮ್ಮ ಜಲಸಾರಿಗೆಯ ಬಲವನ್ನು ಹೆಚ್ಚಿಸುವತ್ತ ಗಮನಹರಿಸುತ್ತಿದ್ದೇವೆ' ಎಂದರು.

ಪ್ರಧಾನಿ ಅವರು ಕೊಚ್ಚಿಯ ಮರೀನ್ ಡ್ರೈವ್‌ನಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಬೂತ್ ಮಟ್ಟದಲ್ಲಿ ಸ್ಥಾಪಿಸಿರುವ 'ಶಕ್ತಿ ಕೇಂದ್ರ'ಗಳ ಸುಮಾರು 6 ಸಾವಿರ ಉಸ್ತುವಾರಿಗಳು ಪಾಲ್ಗೊಂಡರು. ಭ್ರಷ್ಟಾಚಾರದ ದೊಡ್ಡ ಇತಿಹಾಸವನ್ನೇ ಹೊಂದಿರುವ ಎಲ್‌ಡಿಎಫ್ ಮತ್ತು ಯುಡಿಎಫ್‌ನ ದುರಾಡಳಿತದ ಬಗ್ಗೆ ಜನರಿಗೆ ಮನವರಿಕೆ ಮಾಡುವಂತೆ ಅವರು ಕಾರ್ಯಕರ್ತರಲ್ಲಿ ಕೋರಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ:9035492999/ 9663563555

ಇತರೆ

Medical

ಸಂಪೂರ್ಣ ಉಚಿತ ಚಿಕಿತ್ಸೆ ಕೊಡಲಾಗುವುದು. 19/01/2024 ರಿಂದ ಪ್ರಾರಂಭ. ಮಂಡಿ ನೋವು, ಬೆನ್ನು ನೋವು, ಕೀಲು ನೋವು, ವೆರಿಕೋಸ್ ವೇನ್ಸ್,ಮಾನಸಿಕ ಸಮಸ್ಯೆ, ತಲೆನೋವು, ಮೈಗ್ರೇನ್, ಭುಜದ ನೋವು,ಲಕ್ವಾ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಯಾವುದೇ ರೀತಿ ಔಷಧಿ ಅಥವಾ ಶಸ್ತ್ರ ಚಿಕಿತ್ಸೆ ಇಲ್ಲದೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿ ಯಿಂದ ಚಿಕಿತ್ಸೆ ಪಡೆಯಿರಿ. ವಿಳಾಸ: ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಸ್ಟೇಷನ್ ಎದುರು, ಬೆಂಗಳೂರು. ಮೊಬೈಲ್: 9019626612. ಸಮಯ ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ.

ರೆಂಟಲ್ ಪ್ರಾಪರ್ಟೀಸ್

Accommodation Available

General

BUILDING FOR RENT: Basement 2500 sqft, Ground 2800 sqft, 1st Floor 2800 sqft, at Padil Junction, Mangalore. Ph: 0820-2010057, 9535381537, 8549023257

ಪ್ರವಾಸ

Pilgrimage Tours

★ವಿಮಾನದಲ್ಲಿ★ 14.02.2024, 10.03.2024 6ದಿನಗಳು ಕಾಶಿ,ಪ್ರಯಾಗ, ಗಯಾ ಅಯೋಧ್ಯೆ. 10.04.2024 16ದಿನಗಳು ನೇಪಾಳ, ಮುಕ್ತಿನಾಥ,ಜನಕಪುರಿ. ಆರ್.ಗಾಂಧಿ ಟೂರ್ಸ್. 9945445809/ 9902433500

ಸುವರ್ಣ ಯಾತ್ರ. 8ದಿನಗಳು 21/02/2024.ಕಾಶಿ ವಿಶ್ವನಾಥ ಹಾಗೂ ಬಾಬಾ ವೈದ್ಯನಾಥ ಜ್ಯೋತಿರ್ಲಿಂಗ ಪ್ರವಾಸ. ಅಯೋಧ್ಯ. ತ್ರಿವೇಣಿ ಸಂಗಮದಲ್ಲಿ ಸ್ನಾನ, ಗಯಾ. ನೈಮಿಶರಣ್ಯ. 9480843945. 8088570044

ಭವಿಷ್ಯ

Astrology

★ಮಹಾಮಾಂತ್ರಿಕ ಜ್ಯೋತಿಷ್ಯ★ ವಿದ್ವಾನ್.ಗುರು ಶ್ರೀ.ದೇವಾನಂದ್ ರವರಿಂದ ಅಂಡ,ಪಿಂಡ,ಬ್ರಹ್ಮಾಂಡದ 100008 ಅತೀಂದ್ರಿಯ 888 ಚಾರಣಮಾರಣ ಸಂಮೋಹನ ಸ್ತಂಭನ,ವಶೀಕರಣ,ಉಚ್ಚಾಟನಾ ಕ್ರಿಯಾಕರ್ಮಗಳಿಂದ ಸಂಸಾರಿಕ ವೈಯಕ್ತಿಕ,ಆರ್ಥಿಕ,ಆರೋಗ್ಯ ಸಂಬಂಧಿಕ ಕರ್ಮಗಳ ಇಂದೇ ಪರಿಹಾರಕ್ಕೆ ಸಂಪರ್ಕಿಸಿ:9845005009

DH DECCAN HERALD ಪ್ರಜಾವಾಣಿ
Classifieds
More value, more impact
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 |
+91 9845114560 | +91 9900428036 |
+91 9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ನಾಗಾ ರಾಜಕೀಯ ಬಿಕ್ಕಟ್ಟು ಪರಿಹಾರಕ್ಕೆ ಯತ್ನಿಸದ ಮೋದಿ'

ಕೊಹಿಮಾ, ನಾಗಾಲ್ಯಾಂಡ್ (ಪಿಟಿಐ): 2015ರ ಒಪ್ಪಂದವಾಗಿ ಒಂಬತ್ತು ವರ್ಷಗಳು ಕಳೆದರೂ ನಾಗಾಲ್ಯಾಂಡ್‌ನ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಏನನ್ನೂ ಮಾಡಿಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬುಧವಾರ ಆರೋಪಿಸಿದರು.

ಮಣಿಪುರದಿಂದ ಮುಂಬೈವರೆಗೆ 'ಭಾರತ ಜೋಡೊ ನ್ಯಾಯ ಯಾತ್ರೆ' ಕೈಗೊಂಡಿರುವ ಅವರು, ರಾಜ್ಯದ ಮೊಕೊಕ್‌ಚುಂಗ್ ಪಟ್ಟಣದಲ್ಲಿ ರ‍್ಯಾಲಿ ನಡೆಸಿದರು. ನಾಗಾ ಜನರ ವಿಶ್ವಾಸ ಸಂಪಾದಿಸದೇ ಮತ್ತು ಅವರ ಜೊತೆ ಚರ್ಚಿಸದೇ ಸಮಸ್ಯೆಗೆ ಪರಿಹಾರ ನೀಡಲು ಸಾಧ್ಯವಿಲ್ಲ ಎಂದರು.

ಮೋದಿ ಅವರ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ನಿಮ್ಮ ಬಳಿ ಪರಿಹಾರವಿಲ್ಲದಿದ್ದರೆ, ಪರಿಹಾರ ಇದೆ ಎಂದು ಸುಳ್ಳು ಹೇಳಬೇಡಿ. ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡುವುದಾಗಿ ಹೇಳಿ' ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂಬತ್ತು ವರ್ಷಗಳ ಹಿಂದೆ ಮೋದಿ ಕೇವಲ ಪೊಳ್ಳು ಭರವಸೆ ನೀಡಿದ್ದರು ಎಂದರು. ದಶಕಗಳಷ್ಟು ಹಳೆಯದಾದ ನಾಗಾ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಲು ಕಾಂಗ್ರೆಸ್ ಬದ್ಧವಾಗಿದೆ ಎಂದರು.

ನಾಗಾಲ್ಯಾಂಡ್‌ಅನ್ನು ಭಾರತದಿಂದ ಬೇರ್ಪಡಿಸುವ ನಿಟ್ಟಿನಲ್ಲಿ 1947ರಿಂದಲೇ ಬಂಡಾಯ ಆರಂಭವಾಯಿತು. ಬಿಕ್ಕಟ್ಟು ಪರಿಹರಿಸುವ ದಿಸೆಯಲ್ಲಿ ನಾಗಾ ಬಂಡುಕೋರರ ಸಂಘಟನೆಯಾದ 'ನ್ಯಾಷನಲ್ ಸೋಶಿಯಲಿಸ್ಟ್ ಕೌನ್ಸಿಲ್ ಆಫ್ ನಾಗಾಲ್ಯಾಂಡ್' ಜೊತೆ ಮೋದಿ ನೇತೃತ್ವದ ಕೇಂದ್ರ ಸರ್ಕಾರವು 2015ರಲ್ಲಿ ಒಪ್ಪಂದಕ್ಕೆ ಸಹಿ ಮಾಡಿತ್ತು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನಾಗಾಲ್ಯಾಂಡ್‌ನ ಮೊಕೊಕ್‌ಚುಂಗ್ ಜಿಲ್ಲೆಯಲ್ಲಿ ಬುಧವಾರ ರ‍್ಯಾಲಿ ನಡೆಸಿದರು —ಪಿಟಿಐ ಚಿತ್ರ

> **ಬೇರೆ ರಾಜ್ಯಗಳ ಯುವಕರ ಜೊತೆ ನಾಗಾಲ್ಯಾಂಡ್ ಯುವಕರು ಹೇಗೆ ಸ್ಪರ್ಧಿಸುತ್ತಾರೆ. ಇಂಥ ರಸ್ತೆಗಳು ಇಲ್ಲಿಯ ಜನರ ಉತ್ತಮ ಭವಿಷ್ಯಕ್ಕೆ ದಾರಿಯಾಗುತ್ತವೆ ಎಂದು ಹೇಗೆ ನಿರೀಕ್ಷಿಸುವುದು?**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಹಿಂದಿನ ವರ್ಷಕ್ಕಿಂತ 20.80 ಲಕ್ಷದಷ್ಟು ಕುಸಿತ

ಚೀನಾ ಜನಸಂಖ್ಯೆ: ಮತ್ತೆ ಇಳಿಕೆ

ಬೀಜಿಂಗ್ (ಪಿಟಿಐ): ಚೀನಾದ ಜನಸಂಖ್ಯೆಯು ಸತತ ಎರಡನೇ ವರ್ಷವೂ ಇಳಿಕೆ ದಾಖಲಿಸಿದೆ. 2023ರಲ್ಲಿ ಚೀನಾದ ಜನಸಂಖ್ಯೆ 140.9 ಕೋಟಿಯಷ್ಟಾಗಿದ್ದು, ಹಿಂದಿನ ವರ್ಷಕ್ಕಿಂತ 20.80 ಲಕ್ಷದಷ್ಟು ಇಳಿಕೆಯಾಗಿದೆ ಎಂದು ಚೀನಾದ ರಾಷ್ಟ್ರೀಯ ಅಂಕಿ ಅಂಶಗಳ ಬ್ಯೂರೊ (ಎನ್‌ಬಿಎಸ್) ಬುಧವಾರ ಪ್ರಕಟಿಸಿದೆ.

ಚೀನಾದಲ್ಲಿ ಜನಸಂಖ್ಯೆಯು ಆರು ದಶಕಗಳಲ್ಲಿ 2022ರಲ್ಲಿ ಮೊದಲ ಬಾರಿಗೆ ಕುಸಿತ ಕಂಡಿತ್ತು.

ವಿಶ್ವಸಂಸ್ಥೆಯ ಜನಸಂಖ್ಯಾ ಅಂಕಿ ಅಂಶಗಳ ಪ್ರಕಾರ, ಭಾರತವು ಕಳೆದ ವರ್ಷ ಚೀನಾವನ್ನು ಹಿಂದಿಕ್ಕಿ 142.86 ಕೋಟಿ ಜನರೊಂದಿಗೆ ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರ ಎನಿಸಿಕೊಂಡಿದೆ.

ಕಳೆದ ವರ್ಷ 90.2 ಲಕ್ಷ ಶಿಶುಗಳು ಚೀನಾದಲ್ಲಿ ಜನಿಸಿದ್ದರೆ, 2022ರಲ್ಲಿ 95.6 ಲಕ್ಷ ಶಿಶುಗಳು ಜನಿಸಿದ್ದವು. ಅಂದರೆ ಜನನ ಪ್ರಮಾಣ ಶೇ 5.6ರಷ್ಟು ಕಡಿಮೆಯಾಗಿದೆ. 1949ರಿಂದೀಚೆಗೆ ಇದೇ ಮೊದಲ ಬಾರಿಗೆ ಜನನ ಪ್ರಮಾಣ ದೊಡ್ಡ ಪ್ರಮಾಣದಲ್ಲಿ ಇಳಿಕೆ ದಾಖಲಾಗಿದೆ. 2022ರಲ್ಲಿ ಸಾವಿರಕ್ಕೆ 6.77ರಷ್ಟಿದ್ದ ಜನನ ಪ್ರಮಾಣವು, 2023ರಲ್ಲಿ 6.39ಕ್ಕೆ ಕುಸಿದಿದೆ ಎಂಬುದು ಎನ್‌ಬಿಎಸ್ ಅಂಕಿ ಅಂಶಗಳಿಂದ ತಿಳಿದು ಬರುತ್ತದೆ.

ಅಂಕಿ ಅಂಶಗಳು

- **140.9 ಕೋಟಿ** — 2023ರಲ್ಲಿ ಚೀನಾದ ಒಟ್ಟಾರೆ ಜನಸಂಖ್ಯೆ
- **6.39** — ಜನನ ಪ್ರಮಾಣ
- **7.87** — ಮರಣ ಪ್ರಮಾಣ

ಚೀನಾದ ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷವು ಜನಸಂಖ್ಯೆ ನಿಯಂತ್ರಿಸಲು ಕೆಲ ವರ್ಷಗಳವರೆಗೆ ಜಾರಿಗೊಳಿಸಿದ್ದ ಒಂದು ಮಗು ನೀತಿಯ ಪರಿಣಾಮದಿಂದಾಗಿ ಈ ಪ್ರಮಾಣದಲ್ಲಿ ಇಳಿಕೆ ಕಂಡು ಬಂದಿದೆ ಎಂದು ತಜ್ಞರು ವಿಶ್ಲೇಷಿಸುತ್ತಾರೆ.

ಜನಸಂಖ್ಯೆಯ ಇಳಿಕೆ ಪ್ರಮಾಣವನ್ನು ಗುರುತಿಸಿದ್ದ ಚೀನಾವು 2021ರಲ್ಲಿ ಜನಸಂಖ್ಯೆ ನಿಯಂತ್ರಣ ನೀತಿಯಲ್ಲಿ ಕೆಲ ಸುಧಾರಣೆಗಳನ್ನು ತಂದಿತು. ಮೂರು ಮಕ್ಕಳನ್ನು ಹೊಂದಲು ಅವಕಾಶವನ್ನು ಕಲ್ಪಿಸುವ ನೀತಿಯನ್ನೂ ಅದು ಜಾರಿಗೊಳಿಸಿತು. ದೇಶದ ಹಲವು ನಗರ, ಪ್ರಾಂತ್ಯ ಮತ್ತು ಪ್ರದೇಶಗಳಲ್ಲಿ ಎರಡು ಅಥವಾ ಮೂರನೇ ಮಗುವನ್ನು ಹೊಂದುವ ಕುಟುಂಬಗಳಿಗೆ ವಿವಿಧ ರೀತಿಯ ಸಬ್ಸಿಡಿಗಳನ್ನು ಒದಗಿಸುವಂತಹ ಪ್ರೋತ್ಸಾಹದಾಯಕ ನೀತಿಗಳನ್ನು ಘೋಷಿಸಿತ್ತು.

2020 ಮತ್ತು 2022ರಲ್ಲಿ ಕೋವಿಡ್ ನಿಯಂತ್ರಿಸಲು ಜಾರಿಗೊಳಿಸಲಾಗಿದ್ದ ಕಠಿಣ ನೀತಿಗಳೂ ಜನಸಂಖ್ಯೆ ಇಳಿಕೆಗೆ ಮತ್ತೊಂದು ಕಾರಣ ಎಂದು ಹೇಳಲಾಗುತ್ತಿದೆ. ಚೀನಾದಲ್ಲಿ ಕಳೆದ ವರ್ಷ 1.1 ಕೋಟಿ ಜನರು ಮೃತಪಟ್ಟಿದ್ದು, ರಾಷ್ಟ್ರೀಯ ಮರಣ ಪ್ರಮಾಣ ಪ್ರತಿ ಸಾವಿರಕ್ಕೆ 7.87ರಷ್ಟಾಗಿದೆ ಎಂದು ಹಾಂಗ್‌ಕಾಂಗ್ ಮೂಲದ ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪೊಲೀಸ್ ಇಲಾಖೆಯ ನಿವೃತ್ತ ಶ್ವಾನಗಳಿಗೆ 'ವಿಶ್ರಾಂತಿ ಧಾಮ'

ಆನಂದ್ (ಪಿಟಿಐ): ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ ಶ್ವಾನಗಳು ವೃದ್ಧಾಪ್ಯ ಅಥವಾ ಇತರ ಕಾರಣಗಳಿಂದ ಕರ್ತವ್ಯ ನಿರ್ವಹಿಸಲು ಅನರ್ಹಗೊಂಡಾಗ, ಅವುಗಳ ಪಾಲನೆ, ಪೋಷಣೆಗಾಗಿ ಗುಜರಾತ್‌ನ ಆನಂದ್ ಜಿಲ್ಲೆಯಲ್ಲಿ 'ನಿವೃತ್ತ ಪೊಲೀಸ್ ಶ್ವಾನಗಳ ವಿಶ್ರಾಂತಿ ಧಾಮ'ವನ್ನು ಆರಂಭಿಸಲಾಗಿದೆ.

ಇಲ್ಲಿ ಈ ಶ್ವಾನಗಳಿಗೆ ವಸತಿ, ಆಹಾರ ಮತ್ತು ಆರೋಗ್ಯ ಸೌಲಭ್ಯಗಳು ದೊರೆಯಲಿವೆ ಎಂದು ಡಿಎಸ್‌ಪಿ ಜೆ.ಜೆ.ಚೌಧರಿ ಅವರು ಮಾಹಿತಿ ನೀಡಿದರು.

'ಪೊಲಿಸ್ ಇಲಾಖೆಯ ನಿವೃತ್ತ ಶ್ವಾನಗಳಿಗಾಗಿಯೇ ಸ್ಥಾಪಿಸಲಾಗಿರುವ ಈ ವಿಶ್ರಾಂತಿ ಧಾಮವು ದೇಶದಲ್ಲಿಯೇ ಮೊದಲನೇಯದು. ಪ್ರಸ್ತುತ ಇಲ್ಲಿ 16 ನಿವೃತ್ತ ಶ್ವಾನಗಳು, ಕರ್ತವ್ಯದಲ್ಲಿರುವ ಎರಡು ಮತ್ತು ತರಬೇತಿ ಪಡೆಯುತ್ತಿರುವ ಎರಡು ಶ್ವಾನಗಳು ಸೇರಿ ಒಟ್ಟು 20 ಶ್ವಾನಗಳಿವೆ' ಎಂದು ಅವರು ವಿವರಿಸಿದರು.

ಪೊಲೀಸ್ ಶ್ವಾನದಳದ ನಿವೃತ್ತ ಸದಸ್ಯರಿಗಾಗಿ ಇಲ್ಲಿ 23 ಕೊಠಡಿಗಳಿವೆ. ಅಲ್ಲದೆ ಕರ್ತವ್ಯದಲ್ಲಿರುವ ಶ್ವಾನಗಳಿಗೆ ಮೂರು ಕೊಠಡಿಗಳಿವೆ. ಆಹಾರ, ವೈದ್ಯಕೀಯ ಆರೈಕೆ ಒದಗಿಸುವ ಜತೆಗೆ ಸ್ವಚ್ಛತೆಗೆ ಒತ್ತು ನೀಡಲಾಗಿದೆ ಎಂದು ಈ ವಿಶೇಷ ಮನೆಯ ಉಸ್ತುವಾರಿಯೂ ಆಗಿರುವ ಚೌಧರಿ ತಿಳಿಸಿದರು.

ಇಲ್ಲಿ ಪ್ರತಿ ಶ್ವಾನಕ್ಕೆ ನಿತ್ಯ 700 ಗ್ರಾಂ ಹಾಲು, 170 ಗ್ರಾಂ ರೊಟ್ಟಿ, ಬೆಳಿಗ್ಗೆ ಒಂದು ಮೊಟ್ಟೆ, ಸಂಜೆ 280 ಗ್ರಾಂ ಕುರಿ ಮಾಂಸ, ತರಕಾರಿ ಮತ್ತು ಅನ್ನ ನೀಡಲಾಗುತ್ತದೆ ಎಂದು ಅವರು ವಿವರಿಸಿದರು.

ಇಲ್ಲಿರುವ ಎಲ್ಲ ಶ್ವಾನಗಳನ್ನು 15 ದಿನಕ್ಕೊಮ್ಮೆ ಪಶು ಆಸ್ಪತ್ರೆಯ ವೈದ್ಯರು ತಪಾಸಣೆ ನಡೆಸುತ್ತಾರೆ. ತುರ್ತು ಚಿಕಿತ್ಸೆಯ ಅಗತ್ಯವಿದ್ದರೆ ಕೂಡಲೇ ಆಸ್ಪತ್ರೆಗೆ ಕರೆದೊಯ್ಯಲು ವಾಹನ ವ್ಯವಸ್ಥೆಯೂ ಇಲ್ಲಿದೆ ಎಂದು ಅವರು ಹೇಳಿದರು.

ಶ್ವಾನಗಳನ್ನು ನಿತ್ಯ ಬೆಳಿಗ್ಗೆ, ಸಂಜೆ ಆಡಲು ಬಿಡಲಾಗುತ್ತದೆ. ಶನಿವಾರ, ಭಾನುವಾರ ಮತ್ತು ಸಾರ್ವಜನಿಕ ರಜಾ ದಿನಗಳಲ್ಲಿ ಈ ಶ್ವಾನಗಳ ಭೇಟಿ ಮಾಡಲು ಸಾರ್ವಜನಿಕರಿಗೆ ಅವಕಾಶ ನೀಡಲಾಗುತ್ತದೆ. ಆಗ ಜನರು ಇವುಗಳೊಂದಿಗೆ ಕಾಲ ಕಳೆಯಬಹುದು ಮತ್ತು ಅವುಗಳಿಗೆ ಆಹಾರ ನೀಡಬಹುದಾಗಿದೆ ಎಂದು ಚೌಧರಿ ಹೇಳಿದರು.

ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುವ ಶ್ವಾನಗಳು 8ರಿಂದ 10 ವರ್ಷಗಳ ಬಳಿಕ ನಿವೃತ್ತಿಯಾಗುತ್ತವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 1000-1100
ನಡುಗೋಲು 1250-1300
ರಾಶಿ 1350-1400
ರಾಶಿ ಉತ್ತಮ 1450-1500
ಹೆರಕಿದ್ದು 2000-2100
ಹಸಿರು ಸಾಧಾರಣ 1300-1400
ಹಸಿರು ಉತ್ತಮ 1800-1850
ಹಸಿರು ಅತಿ ಉತ್ತಮ 2200-2300
ಕಾಳು ಮೆಣಸು 580

ಬಂಟ್ವಾಳ
ಕೋಕ 18000-28500
ಹೊಸತು 28500-37000
ಹಳತು 42000-44500

ಕಾರ್ಕಳ
ಹೊಸತು 25000-37000
ಹಳತು 30000-44500

ಕುಮಟ
ಬೆಟ್ಟೆ 37261-43611
ಚಿಪ್ಪು 26899-33169
ಕೋಕ 19099-31199
ಫ್ಯಾಕ್ಟರಿ 11169-22769

ಹಳೆಚಾಲಿ 37109-38861
ಹೊಸಚಾಲಿ 32999-35815

ಶಿವಮೊಗ್ಗ
ಬೆಟ್ಟೆ 26169-55599
ಗೊರಬಲು 15133-37599
ರಾಶಿ 31089-49509
ಸರಕು 56669-79510

ಸಿದ್ದಾಪುರ
ಬಿಳಿಗೋಟು 31149-33709
ಚಾಲಿ 36899-39689
ಕೋಕ 31099-33500

ಹೊಸಚಾಲಿ 31699-34399
ಕೆಂಪುಗೋಟು 32000-34099
ರಾಶಿ 44369-49099
ತಟ್ಟಿಬೆಟ್ಟೆ 41609-48199

ಶಿರಸಿ
ಬೆಟ್ಟೆ 38099-45399
ಬಿಳಿಗೋಟು 28199-35168
ಚಾಲಿ 37099-40438
ಕೆಂಪುಗೋಟು 31660-35828
ರಾಶಿ 45699-49499

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	14,200	-	185.25 ಸೆಂಟ್ಸ್
ಎಸಿ	-	7,000	-	
ಆರ್‌ಪಿ	-	12,000	-	ಲಂಡನ್
ಆರ್‌ಸಿ	-	7,000	-	3,170 ಡಾಲರ್ಸ್

ಷೇರುಪೇಟೆ ವಹಿವಾಟು ▼1628



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ 22,032
ಇಂದಿನ ಅಂತ್ಯ 21,571
▼ 460
ದಿನದ ಕನಿಷ್ಠ 21,550

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ
ಬೆಂಗಳೂರು
100ಕ್ಕೆ ₹550
12 ಕ್ಕೆ ₹72
ಮೈಸೂರು
100ಕ್ಕೆ ₹550

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹9000-10500
ತಿಪಟೂರು ₹9000-10116
ತುರುವೇಕೆರೆ ₹10100-10100

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹156.50
ಆರ್‌ಎಸ್‌ಎಸ್-5 ₹150
ಗುಡ್ ಲಾಟ್ ₹133

ರಾಮನಗರ ರೇಷ್ಮೆಗೂಡು
ಮಿಶ್ರತಳಿ (ಸಿ.ಬಿ) ₹148-480
ದ್ವಿತಳಿ (ಬಿ.ವಿ) ₹299-590

ಒಂದೇ ದಿನ ಕರಗಿದ ಹೂಡಿಕೆದಾರರ ₹4.59 ಲಕ್ಷ ಕೋಟಿ ಸಂಪತ್ತು

ಷೇರುಪೇಟೆಯಲ್ಲಿ ಕರಡಿ ಕುಣಿತ

ನವದೆಹಲಿ (ಪಿಟಿಐ): ಷೇರುಪೇಟೆಯಲ್ಲಿ ಗೂಳಿ ಓಟಕ್ಕೆ ತೆರೆ ಬಿದ್ದಿದ್ದು, ಕರಡಿ ಕುಣಿತ ಆರಂಭವಾಗಿದೆ.

ಹೂಡಿಕೆದಾರರ ಉತ್ಸಾಹ ಕುಗ್ಗಿಸಿದ ಅಮೆರಿಕದ ಫೆಡರಲ್ ಬ್ಯಾಂಕ್‌ನ ಹಣಕಾಸು ನೀತಿ, ಮಧ್ಯಪ್ರಾಚ್ಯ ಬಿಕ್ಕಟ್ಟು ಹಾಗೂ ಜಾಗತಿಕ ಷೇರುಪೇಟೆಯಲ್ಲಿ ಮಾರಾಟದ ಒತ್ತಡದ ಕಾರಣಗಳಿಂದಾಗಿ ಬುಧವಾರ ಷೇರು ಮಾರುಕಟ್ಟೆಯಲ್ಲಿ ಸೂಚ್ಯಂಕಗಳು ಇಳಿಕೆಯ ಹಾದಿ ಹಿಡಿದವು.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ ಒಂದೂವರೆ ವರ್ಷದ ಕನಿಷ್ಠ ಮಟ್ಟಕ್ಕೆ ಕುಸಿತ ಕಂಡಿದ್ದು, ಹೂಡಿಕೆದಾರರ ಸಂಪತ್ತು ಒಂದೇ ದಿನ ₹4.59 ಲಕ್ಷ ಕೋಟಿ ಕರಗಿದೆ.

‘ಫೆಡರಲ್ ಬ್ಯಾಂಕ್‌ನ ಬಡ್ಡಿದರ ಕಡಿತದ ವಿಳಂಬವು ಹೂಡಿಕೆದಾರರ ಉತ್ಸಾಹವನ್ನು ಕುಗ್ಗಿಸಿದೆ. ಇದರಿಂದ ಮಾರುಕಟ್ಟೆಯು ಇಳಿಮುಖ ಕಂಡಿದೆ’ ಎಂದು ಮೆಹ್ತಾ ಈಕ್ವಿಟೀಸ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ (ಸಂಶೋಧನೆ) ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

ಸೆನ್ಸೆಕ್ಸ್ 1,628 ಅಂಶ (ಶೇ 2.23) ಇಳಿಕೆಯಾಗಿ 71,500 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ. ದಿನದ ವಹಿವಾಟಿನ ವೇಳೆ 1,699 ಅಂಶ (ಶೇ 2.32) ಕುಸಿದು 71,429 ಅಂಶ ಕನಿಷ್ಠ ಮಟ್ಟಕ್ಕೆ ಮುಟ್ಟಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 460 ಅಂಶ ಕಡಿಮೆಯಾಗಿ 21,571ಕ್ಕೆ ಕೊನೆಗೊಂಡಿದೆ.

ಬಿಎಸ್‌ಇ ಮಿಡ್ ಕ್ಯಾಪ್ ಗೇಜ್ ಶೇ 1.09 ಮತ್ತು ಸ್ಮಾಲ್ ಕ್ಯಾಪ್ ಶೇ 0.90ರಷ್ಟು ಇಳಿಕೆ ಕಂಡಿವೆ. ಐ.ಟಿ ಮತ್ತು ಟೆಕ್ ಲಾಭ ಕಂಡಿವೆ. ಹಣಕಾಸು ಸೇವೆ (ಶೇ 3.76), ಲೋಹ (ಶೇ 2.86), ಸರಕುಗಳು (ಶೇ 2.31), ಟೆಲಿ ಕಮ್ಯುನಿಕೇಷನ್ (ಶೇ 1.94) ಮತ್ತು ರಿಯಾಲ್ಟಿ (ಶೇ 1.47) ಸೂಚ್ಯಂಕಗಳು ಇಳಿದಿವೆ.

ಏಷ್ಯನ್ ಮಾರುಕಟ್ಟೆಯಲ್ಲಿ, ಸಿಯೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಕನಿಷ್ಠ ಮಟ್ಟದಲ್ಲಿ ಸ್ಥಿರಗೊಂಡವು. ಯುರೋಪಿಯನ್ ಮಾರುಕಟ್ಟೆ ಕೂಡ ವಹಿವಾಟಿನಲ್ಲಿ ಇಳಿಕೆ ಕಂಡಿತು. ಮಂಗಳವಾರ ಅಮೆರಿಕದ ಮಾರುಕಟ್ಟೆ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿತ್ತು.

ನಷ್ಟ ಕಂಡ ಕಂಪನಿಗಳು

ಟಾಟಾ ಸ್ಟೀಲ್, ಕೋಟಕ್ ಮಹೀಂದ್ರ ಬ್ಯಾಂಕ್, ಆ್ಯಕ್ಸಿಸ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಜೆಎಸ್‌ಡಬ್ಲ್ಯು ಸ್ಟೀಲ್, ಬಜಾಜ್ ಫಿನ್‌ಸರ್ವ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇಂಡಸ್‌ಇಂಡ್ ಬ್ಯಾಂಕ್‌ನ ಷೇರುಗಳು ನಷ್ಟ ಕಂಡಿವೆ.

ಎಚ್‌ಸಿಎಲ್ ಟೆಕ್ನಾಲಜೀಸ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸ್, ಇನ್ಫೊಸಿಸ್, ಟೆಕ್ ಮಹೀಂದ್ರ, ಟೈಟನ್, ನೆಸ್ಲೆ ಮತ್ತು ಪವರ್‌ಗ್ರಿಡ್ ಷೇರುಪೇಟೆ ನಷ್ಟ ಕಂಡರೂ ಲಾಭ ದಾಖಲಿಸಿವೆ.

ಎಚ್‌ಡಿಎಫ್‌ಸಿಗೆ ₹1 ಲಕ್ಷ ಕೋಟಿ ನಷ್ಟ

ನವದೆಹಲಿ (ಪಿಟಿಐ): ಷೇರುಪೇಟೆಯಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರುಗಳು ಇಳಿಕೆಯಾಗಿದ್ದು, ಕಂಪನಿಯ ಮಾರುಕಟ್ಟೆ ಮೌಲ್ಯವೂ ನಷ್ಟ ಕಂಡಿದೆ.

ಬಿಎಸ್‌ಇಯಲ್ಲಿ ಶೇ 8.46ರಷ್ಟು ಇಳಿಕೆ ಕಂಡು, ಪ್ರತಿ ಷೇರಿನ ಬೆಲೆ ₹1,536ಕ್ಕೆ ಮುಟ್ಟಿತ್ತು. ಎನ್‌ಎಸ್‌ಇಯಲ್ಲಿ ಷೇರಿನ ಬೆಲೆ ಶೇ 8.15ರಷ್ಟು ಕಡಿಮೆಯಾಗಿ, ಪ್ರತಿ ಷೇರಿಗೆ ₹1,542ಕ್ಕೆ ಕೊನೆಗೊಂಡಿತು. ಕಂಪನಿಯ ಮಾರುಕಟ್ಟೆ ಬಂಡವಾಳ (ಎಂ–ಕ್ಯಾಪ್) ₹1.07 ಲಕ್ಷ ಕೋಟಿ ನಷ್ಟ ಕಂಡಿದೆ.

2023ರ ಡಿಸೆಂಬರ್ ತ್ರೈಮಾಸಿಕದಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್ ₹17,258 ಕೋಟಿ ನಿವ್ವಳ ಲಾಭ ಗಳಿಸಿತ್ತು. ಆದರೆ, ಈ ಗಳಿಕೆಯು ಹೂಡಿಕೆದಾರರನ್ನು ಸೆಳೆಯಲು ವಿಫಲವಾಗಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಚಿನ್ನದ ದರ ₹400, ಬೆಳ್ಳಿ ₹600 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ ಮತ್ತು ಬೆಳ್ಳಿ ದರ ಇಳಿಕೆ ಆಗಿದೆ. ಚಿನ್ನದ ದರ 10 ಗ್ರಾಂ.ಗೆ ₹400 ಇಳಿಕೆಯಾಗಿ, ₹63,050ಕ್ಕೆ ಮಾರಾಟವಾಯಿತು.

ಬೆಳ್ಳಿ ಧಾರಣೆ ಕೆ.ಜಿಗೆ ₹600 ಕಡಿಮೆಯಾಗಿ, ₹75,800ಕ್ಕೆ ತಲುಪಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿದ್ದು, ದೇಶೀಯ ಮಾರುಕಟ್ಟೆಯ ಮೇಲೂ ಪರಿಣಾಮ ಬೀರಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,024 ಡಾಲರ್ ಮತ್ತು 22.70 ಡಾಲರ್‌ನಂತೆ ಮಾರಾಟವಾಗಿದೆ.

2024–25ರಲ್ಲಿ ಶೇ 7 ಜಿಡಿಪಿ ಪ್ರಗತಿ ನಿರೀಕ್ಷೆ: ಆರ್‌ಬಿಐ

ದಾವೋಸ್ (ಪಿಟಿಐ): ‘ಭಾರತದ ಆರ್ಥಿಕ ಬೆಳವಣಿಗೆ ದರವು (ಜಿಡಿಪಿ) 2024–25ನೇ ಹಣಕಾಸು ವರ್ಷದಲ್ಲಿ ಶೇ 7ರಷ್ಟು ಆಗಬಹುದುದೆಂದು ನಿರೀಕ್ಷಿಸಲಾಗಿದೆ’ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಭೆಯಲ್ಲಿ ಬುಧವಾರ ಭಾರತೀಯ ಕೈಗಾರಿಕಾ ಒಕ್ಕೂಟದಿಂದ ಹಮ್ಮಿಕೊಂಡಿದ್ದ ‘ಅಧಿಕ ಬೆಳವಣಿಗೆ, ಕಡಿಮೆ ಅಪಾಯ: ದಿ ಇಂಡಿಯಾ ಸ್ಟೋರಿ’ ವಿಷಯ ಕುರಿತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಈ ಹಣಕಾಸು ವರ್ಷದಲ್ಲಿ ದೇಶದ ಚಿಲ್ಲರೆ ಹಣದುಬ್ಬರವು ಸರಾಸರಿ ಶೇ.4.5ರಲ್ಲಿ ಇರಲಿದೆ’ ಎಂದರು. ಭಾರತದ ಆರ್ಥಿಕತೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಮಧ್ಯಮ ಮತ್ತು ದೀರ್ಘಾವಧಿಯ ರಚನಾತ್ಮಕ ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ ಎಂದು ಹೇಳಿದರು.

ಜಾಗತಿಕ ಮಟ್ಟದಲ್ಲಿ ತಲೆದೋರಿರುವ ನಿರುದ್ಯೋಗ, ಮಂದಗತಿಯ ಆರ್ಥಿಕ ಬೆಳವಣಿಗೆ ಹಾಗೂ ಹಣದುಬ್ಬರದ ನಡುವೆಯೂ ಭಾರತದ ಆರ್ಥಿಕತೆಯ ಚಿತ್ರಣವು ಉತ್ತಮ ಬೆಳವಣಿಗೆ ಮತ್ತು ಸ್ಥಿರತೆ ಪ್ರದರ್ಶಿಸಿದೆ. 2023–24ನೇ ಹಣಕಾಸು ವರ್ಷದಲ್ಲಿ ಜಿಡಿಪಿ ಶೇ 7.2ರಷ್ಟು ಬೆಳವಣಿಗೆ ಕಾಣಬಹುದು ಎಂದು ನಿರೀಕ್ಷಿಸಲಾಗಿದೆ ಎಂದರು.

ಚೀನಾ: ಶೇ 5.2 ದಾಖಲು

ಬೀಜಿಂಗ್ (ಪಿಟಿಐ): ಆರ್ಥಿಕ ಮಂದಗತಿ ಬೆಳವಣಿಗೆಯ ನಡುವೆಯೂ 2023ರಲ್ಲಿ ಚೀನಾ ಜಿಡಿಪಿಯು ಶೇ 5.2ರಷ್ಟು ಬೆಳವಣಿಗೆ ಕಂಡಿದೆ ಎಂದು ಚೀನಾದ ರಾಷ್ಟ್ರೀಯ ಸಾಂಖ್ಯಿಕ ಇಲಾಖೆ (ಎನ್‌ಬಿಎಸ್) ಹೇಳಿದೆ.

ಸರ್ಕಾರ ಅಂದಾಜಿಸಿದ್ದ ಶೇ 5ರಷ್ಟಕ್ಕಿಂತಲೂ ಹೆಚ್ಚು ಬೆಳವಣಿಗೆ ಕಂಡಿದೆ. ವಿಶ್ವದ ಎರಡನೇ ಅತಿದೊಡ್ಡ ಆರ್ಥಿಕತೆಯಾದ ಚೀನಾದ ಜಿಡಿಪಿ ಗಾತ್ರವು ಹಿಂದಿನ ವರ್ಷ ₹1,472 ಲಕ್ಷ ಕೋಟಿ ತಲುಪಿದೆ ಎಂದು ತಿಳಿಸಿದೆ.

‘ರಸಗೊಬ್ಬರದ ಕೊರತೆ ಇಲ್ಲ’

ನವದೆಹಲಿ (ಪಿಟಿಐ): ‘ಕೆಂಪು ಸಮುದ್ರದ ಬಿಕ್ಕಟ್ಟು ದೇಶದ ರಸಗೊಬ್ಬರ ಪೂರೈಕೆಯ ಮೇಲೆ ಪರಿಣಾಮ ಬೀರಿಲ್ಲ. ಖಾರೀಫ್ ಅವಧಿಗೆ ಅಗತ್ಯವಿರುವಷ್ಟು ರಸಗೊಬ್ಬರವನ್ನು ದಾಸ್ತಾನು ಮಾಡಲಾಗಿದೆ’ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಮನ್ಸುಖ್ ಮಾಂಡವೀಯ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸದ್ಯ 70 ಲಕ್ಷ ಟನ್ ಯೂರಿಯಾ, 20 ಲಕ್ಷ ಟನ್ ಡಿಎಪಿ, 10 ಲಕ್ಷ ಟನ್ ಎಂಒಪಿ (ಮ್ಯೂರೇಟ್ ಆಫ್ ಪೊಟ್ಯಾಷ್), 40 ಲಕ್ಷ ಟನ್ ಎನ್‌ಪಿಕೆ ಮತ್ತು 20 ಲಕ್ಷ ಟನ್ ಎಸ್‌ಎಸ್‌ಪಿ (ಸಿಂಗಲ್ ಸೂಪರ್ ಫಾಸ್ಫೇಟ್) ದಾಸ್ತಾನಿದೆ. ರಸಗೊಬ್ಬರದ ಕೊರತೆ ಎದುರಾಗಿಲ್ಲ’ ಎಂದರು.

ದೇಶದಲ್ಲಿ 2023–24ನೇ ಹಣಕಾಸು ವರ್ಷದಲ್ಲಿ ರಸಗೊಬ್ಬರದ ಮೇಲಿನ ಸಬ್ಸಿಡಿ ಮೊತ್ತವು ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 30ರಿಂದ 34ರಷ್ಟು ಇಳಿಕೆಯಾಗಲಿದೆ ಎಂದರು.

ಹಿಂದಿನ ಹಣಕಾಸು ವರ್ಷದಲ್ಲಿ ಸಬ್ಸಿಡಿ ಮೊತ್ತವನ್ನು ₹2.56 ಲಕ್ಷ ಕೋಟಿಗೆ ನಿಗದಿಪಡಿಸಲಾಗಿತ್ತು. ಪ್ರಸಕ್ತ ಹಣಕಾಸು ವರ್ಷದಲ್ಲಿ ₹1.70 ಲಕ್ಷ ಕೋಟಿಯಿಂದ ₹1.80 ಲಕ್ಷ ಕೋಟಿಗೆ ಇಳಿಕೆಯಾಗಲಿದೆ ಎಂದು ತಿಳಿಸಿದರು.

ಜಾಗತಿಕ ಮಟ್ಟದಲ್ಲಿ ಬೆಲೆ ಇಳಿಕೆ ಹಾಗೂ ಯೂರಿಯಾ ಆಮದು ಪ್ರಮಾಣ ಕಡಿಮೆಯಾಗಿರುವುದೇ ಇದಕ್ಕೆ ಕಾರಣ ಎಂದರು. ಕಳೆದ ವರ್ಷ 70 ಲಕ್ಷ ಟನ್‌ನಷ್ಟು ಯೂರಿಯಾ ಆಮದು ಮಾಡಿಕೊಳ್ಳಲಾಗಿತ್ತು. ಈ ಹಣಕಾಸು ವರ್ಷದಲ್ಲಿ 40ರಿಂದ 50 ಲಕ್ಷ ಟನ್ ಆಮದಿಗೆ ನಿರ್ಧರಿಸಲಾಗಿದೆ ಎಂದರು.

ವಿದೇಶದಲ್ಲಿ ಯುಪಿಐ ಬಳಕೆ ಗೂಗಲ್ ಪೇ ಜತೆ ಒಪ್ಪಂದ

ನವದೆಹಲಿ (ಪಿಟಿಐ): ವಿದೇಶಗಳಲ್ಲೂ ಯುಪಿಐ ಪಾವತಿ ಸೇವೆ ವಿಸ್ತರಣೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಪಾವತಿ ನಿಗಮದ (ಎನ್‌ಪಿಸಿಐ) ವಿಭಾಗವಾಗಿರುವ ಇಂಟರ್ ನ್ಯಾಷನಲ್ ಪೇಮೆಂಟ್ಸ್ ಲಿಮಿಟೆಡ್ ಮತ್ತು ಗೂಗಲ್ ಇಂಡಿಯಾ ಡಿಜಿಟಲ್ ಸರ್ವಿಸ್ (ಗೂಗಲ್ ಪೇ) ಒಪ್ಪಂದಕ್ಕೆ ಸಹಿ ಹಾಕಿವೆ.

ಇದರಿಂದ ಭಾರತೀಯ ಪ್ರವಾಸಿಗರು ವಿದೇಶದಲ್ಲಿ ಗೂಗಲ್ ಪೇ ಮೂಲಕ ಹಣ ಪಾವತಿಗೆ ಸುಲಭವಾಗಲಿದೆ. ವಿದೇಶಗಳಲ್ಲಿ ಪ್ರವಾಸಿಗರು ಎದುರಿಸುವ ನಗದು ಸಮಸ್ಯೆ ತಪ್ಪಲಿದ್ದು, ಹಣಕಾಸು ವಿನಿಮಯಕ್ಕೂ ಸಹಕಾರಿಯಾಗಲಿದೆ ಎಂದು ಹೇಳಲಾಗಿದೆ.

‘ಈ ಪಾಲುದಾರಿಕೆಯು ಭಾರತೀಯ ಪ್ರವಾಸಿಗರಿಗೆ ವಿದೇಶಿ ವಹಿವಾಟುಗಳನ್ನು ಸರಳಗೊಳಿಸಲಿದೆ. ಜತೆಗೆ ಡಿಜಿಟಲ್ ಪಾವತಿ ವ್ಯವಸ್ಥೆ ನಿರ್ವಹಿಸುವ ನಮ್ಮ ಜ್ಞಾನ ಮತ್ತು ಪರಿಣತಿಯನ್ನು ಇತರೆ ದೇಶಗಳಿಗೆ ವಿಸ್ತರಿಸಲು ಅನುವು ಮಾಡಿಕೊಡುತ್ತದೆ’ ಎಂದು ಎನ್‌ಐಪಿಎಲ್‌ನ ಸಿಇಒ ರಿತೇಶ್ ಶುಕ್ಲಾ ಅಭಿಪ್ರಾಯಪಟ್ಟಿದ್ದಾರೆ.

ಐಎಎನ್‌ಎಸ್: ಶೇ 76 ಷೇರು ಅದಾನಿ ಪಾಲು

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ನೇತೃತ್ವದ ಅದಾನಿ ಸಮೂಹವು ಐಎಎನ್‌ಎಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್‌ನಲ್ಲಿ ಶೇ 76ರಷ್ಟು ಷೇರುಗಳನ್ನು ಸ್ವಾಧೀನಕ್ಕೆ ಪಡೆಯುವ ಮೂಲಕ ಸುದ್ದಿಸಂಸ್ಥೆಯ ಮೇಲೆ ಹಿಡಿತ ಸಾಧಿಸಿದೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಶೇ 50.50ರಷ್ಟು ಷೇರುಗಳ ಮೇಲೆ ಒಡೆತನ ಸ್ಥಾಪಿಸಿತ್ತು. ಈಗ ಹೆಚ್ಚುವರಿಯಾಗಿ ಶೇ 25.50ರಷ್ಟು ಷೇರುಗಳನ್ನು ಖರೀದಿಸಿದೆ. ಇದಕ್ಕಾಗಿ ₹5 ಕೋಟಿ ವಿನಿಯೋಗಿಸಿದೆ.

ಜನವರಿ 16ರಂದು ನಡೆದ ಐಎಎನ್‌ಎಸ್ ನಿರ್ದೇಶಕರ ಮಂಡಳಿ ಸಭೆಯು ಷೇರು ಹಂಚಿಕೆಗೆ ಒಪ್ಪಿಗೆ ಸೂಚಿಸಿದೆ ಎಂದು ಅದಾನಿ ಕಂಪನಿ ತಿಳಿಸಿದೆ.

ಐಎಎನ್‌ಎಸ್‌ನ ಒಟ್ಟು ಷೇರು ಬಂಡವಾಳ ₹11 ಕೋಟಿ ಇದೆ. 2023–24ರ ಹಣಕಾಸು ವರ್ಷದಲ್ಲಿ ಕಂಪನಿಯು ₹11.86 ಕೋಟಿ ಲಾಭಗಳಿಸಿದೆ.

ಹುಂಡೈ ಮೋಟರ್ ಇಂಡಿಯಾ ಸಿಇಒ ಅನ್ ಸೂ ಕಿಮ್ ಅವರು ಗುರುಗ್ರಾಮದಲ್ಲಿ ಹೊಸ ಹುಂಡೈ ಕ್ರೆಟಾ ಕಾರನ್ನು ಬಿಡುಗಡೆ ಮಾಡಿದರು

ಹೊಸ ಹುಂಡೈ ಕ್ರೆಟಾ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಮುಖ ಕಾರು ತಯಾರಿಕಾ ಕಂಪನಿ ಹುಂಡೈ ಮೋಟರ್ಸ್ ತನ್ನ ಹೊಸ ಹುಂಡೈ ಕ್ರೆಟಾ ಕಾರುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಈ ಕಾರುಗಳ ಎಕ್ಸ್ ಷೋರೂಂ ಬೆಲೆ ₹10.99 ಲಕ್ಷದಿಂದ ಆರಂಭವಾಗಲಿದೆ. ಇ, ಎಎಕ್ಸ್, ಎಸ್, ಎಸ್(ಒ), ಎಸ್‌ಎಕ್ಸ್ ಮತ್ತು ಎಸ್‌ಎಕ್ಸ್ ಟೆಕ್ ಆವೃತ್ತಿಗಳಲ್ಲಿ ಕಾರುಗಳು ಲಭ್ಯವಿವೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಈ ಶ್ರೇಣಿಯ ಕಾರುಗಳು ಸುಧಾರಿತ ತಂತ್ರಜ್ಞಾನ ಹೊಂದಿದ್ದು, ಗ್ರಾಹಕರ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಒಳ ವಿನ್ಯಾಸವು ಆಕರ್ಷಕವಾಗಿದೆ ಎಂದು ತಿಳಿಸಿದೆ.

ಕರ್ನಾಟಕ–ಗೋವಾ ರಣಜಿ ಪಂದ್ಯ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ಹಾಗೂ ಗೋವಾ ತಂಡಗಳ ನಡುವೆ ಇದೇ 19ರಿಂದ ರಣಜಿ ಟ್ರೋಫಿ ಪಂದ್ಯಕ್ಕೆ ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣ ಸಜ್ಜಾಗಿದ್ದು, ಪ್ರವಾಸಿ ತಂಡ ಬುಧವಾರ ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿತು.

ಮಧ್ಯಾಹ್ನ 3.30ರ ಸುಮಾರಿಗೆ ನಾಯಕ ದರ್ಶನ್ ಮಿಸಾಳ್ ನೇತೃತ್ವದಲ್ಲಿ ಕ್ರೀಡಾಂಗಣಕ್ಕೆ ಬಂದ ಗೋವಾ ಆಟಗಾರರು ಸಂಜೆವರೆಗೆ ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿದರು. ಆರಂಭದಲ್ಲಿ ವ್ಯಾಯಾಮಗಳ ಮೂಲಕ ಮೈ ಹುರಿಗೊಳಿಸಿಕೊಂಡ ಆಟಗಾರರು ನಂತರ ಬ್ಯಾಟಿಂಗ್ ಮತ್ತು ಬೌಲಿಂಗ್ ಮಾಡಿದರು. ಬಲಗೈ ಬ್ಯಾಟರ್ ಸ್ನೇಹಲ್ ಕೌತಣಕರ, ಎಡಗೈ ಬ್ಯಾಟ್ಸ್‌ಮನ್ ಮಂಥನ್ ಕುತ್ಕರ್ ಹೆಚ್ಚು ಹೊತ್ತು ಬ್ಯಾಟಿಂಗ್ ಅಭ್ಯಸಿಸಿದರು.

ಗೋವಾ ತಂಡದಲ್ಲಿ ರಾಹುಲ್ ತ್ರಿಪಾಠಿ ಹಾಗೂ ಅರ್ಜುನ್ ತೆಂಡುಲ್ಕರ್ ಆಕರ್ಷಣೆಯಾಗಿದ್ದು, ಅವರು ನೆಟ್ಸ್‌ನಲ್ಲಿ ಕಾಣಿಸಿಕೊಳ್ಳಲಿಲ್ಲ.

ಆರ್‌ಸಿಬಿ ಆಟಗಾರ, ಆಲ್‌ರೌಂಡರ್ ಸುಯಶ್ ಪ್ರಭುದೇಸಾಯಿ ಗೋವಾ ತಂಡದಲ್ಲಿದ್ದಾರೆ. ಜೊತೆಗೆ ಕರ್ನಾಟಕ ಮೂಲದ ಕೃಷ್ಣಮೂರ್ತಿ ಸಿದ್ದಾರ್ಥ್ ಸದ್ಯ ಪ್ರವಾಸಿ ತಂಡದಲ್ಲಿ ಸ್ಥಾನ ಪಡೆದಿದ್ದು, ವಿಕೆಟ್ ಕೀಪಿಂಗ್ ಜೊತೆಗೆ ಬಲಗೈ ಬ್ಯಾಟರ್ ಆಗಿದ್ದಾರೆ. ಕರ್ನಾಟಕ ಆಟಗಾರರು ಸಂಜೆ ಮೈಸೂರಿಗೆ ಬಂದಿಳಿದಿದ್ದು, ಪಂದ್ಯದ ಮುನ್ನಾ ದಿನವಾದ ಗುರುವಾರ ಬೆಳಿಗ್ಗೆಯಿಂದಲೇ ಅಭ್ಯಾಸದಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಮೈದಾನದಲ್ಲಿ ಐದು ಪಿಚ್‌ಗಳಿದ್ದು, ಪಂದ್ಯಕ್ಕೆಂದು ಮಧ್ಯದ ಅಂಕಣವನ್ನು ಸಜ್ಜುಗೊಳಿಸುವ ಕಾರ್ಯ ನಡೆದಿದೆ.

ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಗೋವಾ ತಂಡದ ಆಟಗಾರರು ಅಭ್ಯಾಸ ನಡೆಸಿದರು ಪ್ರಜಾವಾಣಿ ಚಿತ್ರ/ಅನೂಪ್ ರಾಘ್‌ಟಿ.

ಕಠಿಣ ಪರೀಕ್ಷೆಯಲ್ಲಿ ಗೆದ್ದ ಜೊಕೊವಿಚ್

ಆಸ್ಟ್ರೇಲಿಯಾ ಓಪನ್: ಆನ್ಸ್ ಜೇಬರ್, ಕರೋಲಿನ್ ವೋಜ್ನಿಯಾಕಿ ನಿರ್ಗಮನ

ಮೆಲ್ಬರ್ನ್ (ಎಎಫ್‌ಪಿ): ಅನುಭವಿ ನೊವಾಕ್ ಜೊಕೊವಿಚ್ ಅವರು ಆಸ್ಟ್ರೇಲಿಯನ್ ಓಪನ್ ಎರಡನೇ ಸುತ್ತಿನ ಕಠಿಣ ಪರೀಕ್ಷೆಯಲ್ಲಿ ಬುಧವಾರ ಅಲೆಕ್ಸಿ ಪಾಪಿನ್ ವಿರುದ್ಧ ಗೆದ್ದು ನಿಟ್ಟುಸಿರುಬಿಟ್ಟರು. ಆದರೆ ಮಹಿಳಾ ಸಿಂಗಲ್ಸ್‌ನಲ್ಲಿ ಆರನೇ ಶ್ರೇಯಾಂಕದ ಆನ್ಸ್ ಜೇಬರ್ ಮತ್ತು ಮಾಜಿ ಚಾಂಪಿಯನ್ ಕರೋಲಿನ್ ವೋಜ್ನಿಯಾಕಿ ಅವರು ರಷ್ಯಾದ ಉದಯೋನ್ಮುಖ ಆಟಗಾರ್ತಿಯರೆದುರು ಸೋಲೊಪ್ಪಿಕೊಳ್ಳಬೇಕಾಯಿತು.

ಮೆಲ್ಬರ್ನ್ ಪಾರ್ಕ್‌ನಲ್ಲಿ 11ನೇ ಸಲ ಕಿರೀಟ ಧರಿಸುವ ಯತ್ನದಲ್ಲಿರುವ ಸರ್ಬಿಯಾದ ಸೂಪರ್ ಸ್ಟಾರ್ ಆಟಗಾರನಿಗೆ, ಆತಿಥೇಯ ದೇಶದ ಆಟಗಾರ ಪ್ರಬಲ ಹೋರಾಟ ನೀಡಿದರು. ಆದರೆ ಸುಲಭವಾಗಿ ಬಿಟ್ಟುಕೊಡದ ಸ್ವಭಾವಕ್ಕೆ ಹೆಸರಾಗಿರುವ ಜೊಕೊವಿಚ್ ಅಂತಿಮವಾಗಿ ಮೂರು ಗಂಟೆ ಸೆಣಸಾಡಿ 6–3, 4–6, 7–6 (7/4), 6–3 ರಲ್ಲಿ ಜಯಗಳಿಸಿದರು.

ಮೊದಲ ಸುತ್ತಿನಲ್ಲೂ 36 ವರ್ಷದ ಆಟಗಾರ ಕ್ರೊವೇಷ್ಯಾದ ಡಿನೊ ಪ್ರಿಝ್ಮಿಕ್ ಎದುರು ಒಂದು ಸೆಟ್ ಕಳೆದುಕೊಂಡಿದ್ದರು. ‘ನನಗೆ ಎದುರಾದ ಇಬ್ಬರೂ ಗುಣಮಟ್ಟದ ಆಟಗಾರರು. ಹೇಗೂ ಗೆಲುವಿನ ದಾರಿಕೊಂಡೆ. ಕೊನೆಗೆ ಅದೇ ಲೆಕ್ಕಕ್ಕೆ ಬರುವುದು’ ಎಂದು ದಾಖಲೆಯ 25ನೇ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿ ನಿರೀಕ್ಷೆಯಲ್ಲಿರುವ ಹಾಲಿ ಚಾಂಪಿಯನ್ ಹೇಳಿದರು. 2018ರ ನಂತರ ಅವರು ಒಮ್ಮೆಯೂ ಇಲ್ಲಿ ಸೋತಿಲ್ಲ.

ಸಬಲೆಂಕಾ ಮುನ್ನಡೆ: ಮಹಿಳಾ ವಿಭಾಗದ ಹಾಲಿ ಚಾಂಪಿಯನ್ ಅರಿನಾ ಸಬಲೆಂಕಾ 6–3, 6–2 ರಿಂದ 16 ವರ್ಷದ ಝೆಕ್ ಆಟಗಾರ್ತಿ ಬ್ರೆಂಡಾ ಫ್ರುವಿರ್ಟೊ ಅವರನ್ನು ಸದೆಬಡಿದರು. ಮಹಿಳಾ ವಿಭಾಗದಲ್ಲಿ ನಾಲ್ಕನೇ ಶ್ರೇಯಾಂಕದ ಕೊಕೊ ಗಾಫ್ (ಅಮೆರಿಕ), ಪುರುಷರ ವಿಭಾಗದಲ್ಲಿ ಯಾನಿಕ್ ಸಿನ್ನರ್, ಐದನೇ ಶ್ರೇಯಾಂಕದ ಆ್ಯಂಡ್ರಿ ರುಬ್ಲೇವ್ ಕೂಡ ಸುಲಭ ಗೆಲುವಿನೊಡನೆ ಮೂರನೇ ಸುತ್ತನ್ನು ತಲುಪಿದರು. ಕಳೆದ ವರ್ಷ ಫೈನಲ್‌ನಲ್ಲಿ ಸೋತಿದ್ದ ಸ್ಟೆಫಾನೊಸ್ ಸಿಸಿಪಸ್ ಕೂಡ ಮುನ್ನಡೆದರು.

ರಾಡ್ ಲೇವರ್ ಅರೇನಾದಲ್ಲಿ ನಡೆದ ಪಂದ್ಯದಲ್ಲಿ 16 ವರ್ಷದ ರಷ್ಯಾ ಆಟಗಾರ್ತಿ ಮಿರಾ ಆ್ಯಂಡ್ರೀವಾ 6–0, 6–2 ರಿಂದ ಜೇಬರ್ ಅವರನ್ನು 54 ನಿಮಿಷಗಳಲ್ಲಿ ಹಿಮ್ಮೆಟ್ಟಿಸಿದರು. 20 ವರ್ಷದ ಕ್ವಾಲಿಫೈರ್ ಟಿಮೊಫೀವಾ ಅವರೂ ಸ್ಫೂರ್ತಿಯುತ ಪ್ರದರ್ಶನ ನೀಡಿ 2018ರ ಚಾಂಪಿಯನ್ ವೋಜ್ನಿಯಾಕಿ ಅವರನ್ನು 1–6, 6–4, 6–1 ರಿಂದ ಸೋಲಿಸಿದರು.

ಅಮೆರಿಕ ಓಪನ್ ಚಾಂಪಿಯನ್ ಗಾಫ್ 7–6 (7/2), 6–2 ರಿಂದ ಸ್ವದೇಶದ ಕ್ಯಾರೊಲಿನ್ ಡೊಲಿಹಿಡ್ ಅವರನ್ನು ಹಿಮ್ಮೆಟ್ಟಿಸಿದರು.

ನೊವಾಕ್ ಜೊಕೊವಿಚ್ –ಎಎಫ್‌ಪಿ ಚಿತ್ರ

ಟೆನಿಸ್: ಅಂಕಿತಾಗೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ತಾರೆ ಅಂಕಿತಾ ರೈನಾ ಅವರು ಐಟಿಎಫ್ ಮಹಿಳಾ ಓಪನ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅವರೊಂದಿಗೆ ಋತುಜಾ ಭೋಸ್ಲೆ ಮತ್ತು ವೈದೇಹಿ ಚೌಧರಿ ಕೂಡ ಶುಭಾರಂಭ ಮಾಡಿದರು.

ಇಲ್ಲಿನ ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಅಂಕಿತಾ 1-6, 7-5, 6-1ರಿಂದ ಸ್ಲೋವಾಕಿಯಾದ ವಿಕ್ಟೋರಿಯಾ ಮೊರ್ವಯೋವಾ ವಿರುದ್ಧ ಗೆಲುವು ಸಾಧಿಸಿದರು.

ಋತುಜಾ ಅವರು ಮೊದಲ ಸುತ್ತಿನಲ್ಲಿ 0–6, 7–5, 7–5 ರಿಂದ ಜಪಾನ್‌ನ ಎರಿ ಶಿಮಿಜು ಅವರನ್ನು ಮಣಿಸಿದರು. ವೈದೇಹಿ ಅವರು 6-4, 6-2 ರಿಂದ ಗ್ರೀಸ್‌ನ ಸಪ್ಫೋ ಸಕೆಲ್ಲರಿಡಿ ಅವರನ್ನು ಹಿಮ್ಮೆಟ್ಟಿಸಿದರು. ಆದರೆ, ಭಾರತದ ಸೋಹಾ ಸಾದಿಕ್ ಮತ್ತು ಸುಹಿತಾ ಮರೂರಿ ಮುಗ್ಗರಿಸಿದರು.

ಫಿನ್ ಅಲೆನ್ ಮಿಂಚಿನ ಶತಕ, ಕಿವೀಸ್‌ಗೆ ಟಿ20 ಸರಣಿ

ವೆಲಿಂಗ್ಟನ್ (ಎಎಫ್‌ಪಿ): ಓಪನರ್ ಫಿನ್ ಅಲೆನ್ ಕೇವಲ 62 ಎಸೆತಗಳಲ್ಲಿ 137 ರನ್ ಚಚ್ಚಿದರು. ಅವರ ದಾಖಲೆಯ ಆಟದ ನೆರವಿನಿಂದ ನ್ಯೂಜಿಲೆಂಡ್ ತಂಡ ಡ್ಯುನೆಡಿನ್‌ನಲ್ಲಿ ಬುಧವಾರ ನಡೆದ ಮೂರನೇ ಟಿ20 ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು 45 ರನ್‌ಗಳಿಂದ ಸೋಲಿಸಿ ಸರಣಿ ಗೆಲುವನ್ನು ದಾಖಲಿಸಿತು.

ಐದು ಪಂದ್ಯಗಳ ಸರಣಿಯಲ್ಲಿ ನ್ಯೂಜಿಲೆಂಡ್ 3–0 ಮುನ್ನಡೆ ಪಡೆಯಿತು. ಅದು ಮೊದಲ ಎರಡು ಪಂದ್ಯಗಳನ್ನು 46 ಮತ್ತು 21 ರನ್‌ಗಳಿಂದ ಜಯಿಸಿತ್ತು. ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ನ್ಯೂಜಿಲೆಂಡ್ 7 ವಿಕೆಟ್‌ಗೆ 224 ರನ್ ಹೊಡೆದರೆ, ಪಾಕಿಸ್ತಾನ 7 ವಿಕೆಟ್‌ಗೆ 179 ರನ್ ಗಳಿಸಲಷ್ಟೇ ಶಕ್ತವಾಯಿತು.

ಎರಡನೇ ಪಂದ್ಯದಲ್ಲಿ 21 ಎಸೆತಗಳಲ್ಲಿ 46 ರನ್ ಬಾರಿಸಿದ್ದ ಅಲೆನ್, ತಮ್ಮ ಸ್ಫೋಟಕ ಇನಿಂಗ್ಸ್‌ನಲ್ಲಿ 16 ಸಿಕ್ಸರ್, ಐದು ಬೌಂಡರಿಗಳನ್ನು ಚಚ್ಚಿದರು. ಇದು ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ನ್ಯೂಜಿಲೆಂಡ್ ಆಟಗಾರನೊಬ್ಬನ ಗರಿಷ್ಠ ಮೊತ್ತ. ಈ ಹಿಂದೆ ಬ್ರೆಂಡನ್ ಮೆಕ್ಕಲಂ 123 ರನ್ ಗಳಿಸಿದ್ದು ಇದುವರೆಗಿನ ಅತ್ಯಧಿಕ ಎನಿಸಿತ್ತು. ಇನಿಂಗ್ಸ್ ಒದರಲ್ಲಿ 16 ಸಿಕ್ಸರ್ ಹೊಡೆದಿದ್ದ ಅಫ್ಘಾನಿಸ್ತಾನದ ಹಜ್ರತ್‌ಉಲ್ಲಾ ಝಝೈ ಅವರ ದಾಖಲೆಯನ್ನೂ ಅಲೆನ್ ಸರಿಗಟ್ಟಿದರು. ಮೂರು ಸಿಕ್ಸರ್‌ಗಳು ಮೈದಾನದ ಆಚೆ ಬಿದ್ದ ಕಾರಣ ಮೂರು ಬಾರಿ ಚೆಂಡುಗಳನ್ನು ಬದಲಿಸಬೇಕಾಯಿತು.

ಪಾಕ್ ಪರ ಬಾಬರ್ ಆಜಂ 37 ಎಸೆತಗಳಲ್ಲಿ 58 ರನ್ ಗಳಿಸಿದ್ದು ಗರಿಷ್ಠ ಮೊತ್ತ ಎನಿಸಿತು.

ಒಲಿಂಪಿಕ್ಸ್ ಮಹಿಳಾ ಅರ್ಹತಾ ಹಾಕಿ: ಸೆಮಿಫೈನಲ್ಸ್ ಇಂದು

ಜರ್ಮನಿ ವಿರುದ್ಧ ಭಾರತಕ್ಕೆ ಸವಾಲು

ರಾಂಚಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡಕ್ಕೆ ಈ ವರ್ಷದ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಥಾನ ಪಡೆಯಲು ಇನ್ನೊಂದು ಗೆಲುವಷ್ಟೇ ಬೇಕಿದೆ. ಗುರುವಾರ ನಡೆಯುವ ಎಫ್‌ಐಎಚ್ ಒಲಿಂಪಿಕ್ಸ್ ಹಾಕಿ ಅರ್ಹತಾ ಟೂರ್ನಿಯ ಸೆಮಿಫೈನಲ್‌ನಲ್ಲಿ ತನಗಿಂತ ಒಂದು ರ‍್ಯಾಂಕ್ ಮೇಲಿನ ಜರ್ಮನಿ ತಂಡವನ್ನು ಸೋಲಿಸಿದರೆ ಆತಿಥೇಯರಿಗೆ ಆ ಅವಕಾಶವಿದೆ.

ಗುಂಪು ಹಂತದಲ್ಲಿ ಅಮೆರಿಕ ಎದುರು ಮೊದಲ ಪಂದ್ಯವನ್ನು ಏಕೈಕ ಗೋಲಿನಿಂದ ಸೋತಿದ್ದ ಸವಿತಾ ಪೂನಿಯಾ ಬಳಗ ನಂತರ ಪುಟಿದೆದ್ದು ನ್ಯೂಜಿಲೆಂಡ್ ಮತ್ತು ಇಟಲಿ ತಂಡಗಳನ್ನು ಸೋಲಿಸಿ ‘ಬಿ’ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿತ್ತು. ಈಗ ಅದೇ ಗೆಲುವಿನ ಲಯದ ಜೊತೆ ಸಕಾರಾತ್ಮಕ ಮನೋಭಾವದಿಂದ ಜರ್ಮನಿ ವಿರುದ್ಧದ ಪಂದ್ಯದಲ್ಲಿ ಯಶಸ್ಸು ಗಳಿಸಿದಲ್ಲಿ ಪ್ಯಾರಿಸ್‌ಗೆ ಟಿಕೆಟ್ ಕಾದಿರಿಸಬಹುದು.

ಈ ಟೂರ್ನಿಯಲ್ಲಿ ಮೊದಲ ಮೂರು ಸ್ಥಾನ ಗಳಿಸಿದ ತಂಡಗಳು ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುತ್ತವೆ. ಒಂದೊಮ್ಮೆ ಭಾರತ ನಾಳೆಯ ಪಂದ್ಯದಲ್ಲಿ ಹಿನ್ನಡೆ ಕಂಡರೂ ಸೆಮಿಫೈನಲ್‌ನಲ್ಲಿ ಸೋತ ತಂಡಗಳು ನಡುವೆ ಶುಕ್ರವಾರ ನಡೆಯುವ (ಮೂರು ಮತ್ತು ನಾಲ್ಕನೇ ಸ್ಥಾನ ನಿರ್ಧಾರದ ಪಂದ್ಯದಲ್ಲಿ) ಗೆದ್ದಲ್ಲಿ ಆಗಲೂ ಅವಕಾಶ ಇರಲಿದೆ.

ಜರ್ಮನಿ ತಂಡ ‘ಎ’ ಗುಂಪಿನಲ್ಲಿ ಏಳು ಪಾಯಿಂಟ್ ಪಡೆದು ಅಗ್ರಸ್ಥಾನ ಪಡೆದಿದೆ. ಜಪಾನ್ ಕೂಡ ಅಷ್ಟೇ ಪಾಯಿಂಟ್ಸ್ ಪಡೆದರೂ, ಗೋಲು ಸರಾಸರಿಯಲ್ಲಿ ಎರಡನೇ ಸ್ಥಾನಕ್ಕೆ ಸರಿದಿತ್ತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಭಾರತ ಆರನೇ ಸ್ಥಾನದಲ್ಲಿದ್ದರೆ, ಜರ್ಮನಿ ಐದನೇ ಸ್ಥಾನದಲ್ಲಿದೆ. 2006ರಿಂದೀಚೆಗೆ ಜರ್ಮನಿ ವಿರುದ್ಧ ಭಾರತ ಆಡಿರುವ ಏಳು ಪಂದ್ಯಗಳಲ್ಲಿ ಎರಡರಲ್ಲಿ ಗೆದ್ದು, ಐದರಲ್ಲಿ ಸೋತಿದೆ. ಹೀಗಾಗಿ ಜರ್ಮನಿ ಉತ್ತಮ ಮನೋಬಲದೊಡನೆ ಕಣಕ್ಕಿಳಿಯಲಿದೆ.

ಅಮೆರಿಕ ಇನ್ನೊಂದು ಸೆಮಿಫೈನಲ್‌ನಲ್ಲಿ ಜಪಾನ್ ತಂಡವನ್ನು ಎದುರಿಸಲಿದೆ.

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ., ಮಂಡ್ಯ
ಅಂಚೆ ಪೆಟ್ಟಿಗೆ: 14, ಕೇಂದ್ರಕಛೇರಿ: ಮಾರ್ಕೆಟ್‌ರಸ್ತೆ, ಮಂಡ್ಯ– 571 401 (ಕರ್ನಾಟಕರಾಜ್ಯ)
E-mail:mdy_dccb@rediffmail.com website: www.mandyadccbank.com
ದೂರವಾಣಿ ಸಂಖ್ಯೆ : 08232:226010-226011

ಸಂಖ್ಯೆ:ಆಡಳಿತ:ಸಿಬ್ಬಂದಿ:ನೇಮಕಾತಿ:10:2023–24 ದಿನಾಂಕ: 18–01–2024

ನೇಮಕಾತಿ ಪ್ರಕಟಣೆ

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ಇದರಲ್ಲಿ ಖಾಲಿ ಇರುವ ಈ ಕೆಳಗಿನ ಒಂದು ಹುದ್ದೆಯ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ (ONLINE) ಮುಖಾಂತರ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ನೇಮಕಾತಿಗೆ ಸಂಬಂಧಿಸಿದ ಮಾಹಿತಿಗಳಾದ ಅರ್ಜಿ ನಮೂನೆ, ಅರ್ಜಿ ಸಲ್ಲಿಸುವ ವಿಧಾನ, ಮೀಸಲಾತಿ ವರ್ಗೀಕರಣ, ವಿದ್ಯಾರ್ಹತೆ, ವಯೋಮಿತಿ ಹಾಗೂ ಅರ್ಜಿ ಶುಲ್ಕ, ಸಲ್ಲಿಸಬೇಕಾದ ದಾಖಲೆಗಳು, ಆಯ್ಕೆ ವಿಧಾನ, ಸೂಚನೆಗಳು ಇತ್ಯಾದಿ ಎಲ್ಲಾ ಹೆಚ್ಚಿನ ವಿವರಗಳನ್ನು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ www.mandyadccbank.com ರಲ್ಲಿ ನೀಡಲಾಗಿರುತ್ತದೆ. **ಅರ್ಜಿಗಳನ್ನು ಖುದ್ದಾಗಿ/ ಅಂಚೆ/ ಕೋರಿಯರ್ ಇತ್ಯಾದಿಗಳ ಮೂಲಕ ಪ್ರತ್ಯೇಕವಾಗಿ ಕಳುಹಿಸಲು ಅವಕಾಶವಿಲ್ಲ.** ನೇಮಕಾತಿ ಹುದ್ದೆಯ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ಹುದ್ದೆಯ ಹೆಸರು	ವೇತನ ಶ್ರೇಣಿ	ನೇಮಕಾತಿ ಹುದ್ದೆಗಳ ಸಂಖ್ಯೆ
1	ಮಾಹಿತಿ ತಂತ್ರಜ್ಞಾನ ಮುಖ್ಯ ವ್ಯವಸ್ಥಾಪಕರು; ಗ್ರೇಡ್ I	ರೂ. 43100 – 83900	01
	ಒಟ್ಟು ನೇಮಕಾತಿ ಹುದ್ದೆಗಳ ಸಂಖ್ಯೆ		01

ಈ ಕುರಿತು ಹೆಚ್ಚಿನ ಮಾಹಿತಿಯು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ www.mandyadccbank.com ರಲ್ಲಿ ಲಭ್ಯವಿದ್ದು, ಆಸಕ್ತಿಯುಳ್ಳ ಅಭ್ಯರ್ಥಿಗಳು ಬ್ಯಾಂಕ್ ವೆಬ್‌ಸೈಟ್‌ಗೆ ಭೇಟಿ ನೀಡಿ ಆನ್‌ಲೈನ್ ಮೂಲಕ ನೇಮಕಾತಿಗೆ ಅರ್ಜಿಯನ್ನು ದಿನಾಂಕ: 18–01–2024 ರಿಂದ ದಿನಾಂಕ: 16–02–2024 ರವರೆಗೆ ಸಲ್ಲಿಸಬಹುದಾಗಿರುತ್ತದೆ.

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
ಸಹಿ/–ಸದಸ್ಯ ಕಾರ್ಯದರ್ಶಿ, ನೇಮಕಾತಿ ಸಮಿತಿ ಹಾಗೂ
ಮುಖ್ಯಕಾರ್ಯನಿರ್ವಹಣಾಧಿಕಾರಿ, ಮಂಡ್ಯ ಡಿಸಿಸಿ ಬ್ಯಾಂಕ್ ನಿ., ಮಂಡ್ಯ

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ., ಮಂಡ್ಯ
ಅಂಚೆ ಪೆಟ್ಟಿಗೆ: 14, ಕೇಂದ್ರಕಛೇರಿ: ಮಾರ್ಕೆಟ್‌ರಸ್ತೆ, ಮಂಡ್ಯ– 571 401 (ಕರ್ನಾಟಕರಾಜ್ಯ)
E-mail:mdy_dccb@rediffmail.com website: www.mandyadccbank.com
ದೂರವಾಣಿ ಸಂಖ್ಯೆ : 08232:226010-226011

ಸಂಖ್ಯೆ: ಆಡಳಿತ:ಸಿಬ್ಬಂದಿ:ನೇಮಕಾತಿ:09:2023–24 ದಿನಾಂಕ: 18–01–2024

ನೇಮಕಾತಿ ಪ್ರಕಟಣೆ

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ಇದರಲ್ಲಿ ಖಾಲಿ ಇರುವ ವಿವಿಧ ವೃಂದದ ಈ ಕೆಳಗಿನ 93 ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ (ONLINE) ಮುಖಾಂತರ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ನೇಮಕಾತಿಗೆ ಸಂಬಂಧಿಸಿದ ಮಾಹಿತಿಗಳಾದ ಅರ್ಜಿ ನಮೂನೆ, ಅರ್ಜಿ ಸಲ್ಲಿಸುವ ವಿಧಾನ, ಮೀಸಲಾತಿ ವರ್ಗೀಕರಣ, ವಿದ್ಯಾರ್ಹತೆ, ವಯೋಮಿತಿ ಹಾಗೂ ಅರ್ಜಿ ಶುಲ್ಕ, ಸಲ್ಲಿಸಬೇಕಾದ ದಾಖಲೆಗಳು, ಆಯ್ಕೆ ವಿಧಾನ, ಸೂಚನೆಗಳು ಇತ್ಯಾದಿ ಎಲ್ಲಾ ಹೆಚ್ಚಿನ ವಿವರಗಳನ್ನು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ www.mandyadccbank.com ರಲ್ಲಿ ನೀಡಲಾಗಿರುತ್ತದೆ. **ಅರ್ಜಿಗಳನ್ನು ಖುದ್ದಾಗಿ/ ಅಂಚೆ/ ಕೋರಿಯರ್ ಇತ್ಯಾದಿಗಳ ಮೂಲಕ ಪ್ರತ್ಯೇಕವಾಗಿ ಕಳುಹಿಸಲು ಅವಕಾಶವಿಲ್ಲ.** ನೇಮಕಾತಿ ಹುದ್ದೆಗಳ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ಹುದ್ದೆಯ ಹೆಸರು	ವೇತನ ಶ್ರೇಣಿ	ನೇಮಕಾತಿ ಹುದ್ದೆಗಳ ಸಂಖ್ಯೆ
1	ಕಿರಿಯ ಸಹಾಯಕರು	ರೂ. 30350 – 58250	70
2	ವಾಹನ ಚಾಲಕರು	ರೂ. 27650 – 52650	2
3	ಅಟೆಂಡರ್	ರೂ. 23500 – 47650	21
	ಒಟ್ಟು ನೇಮಕಾತಿ ಹುದ್ದೆಗಳ ಸಂಖ್ಯೆ		93

ಈ ಕುರಿತು ಹೆಚ್ಚಿನ ಮಾಹಿತಿಯು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ www.mandyadccbank.com ರಲ್ಲಿ ಲಭ್ಯವಿದ್ದು, ಆಸಕ್ತಿಯುಳ್ಳ ಅಭ್ಯರ್ಥಿಗಳು ಬ್ಯಾಂಕ್ ವೆಬ್‌ಸೈಟ್‌ಗೆ ಭೇಟಿ ನೀಡಿ ಆನ್‌ಲೈನ್ ಮೂಲಕ ನೇಮಕಾತಿಗೆ ಅರ್ಜಿಯನ್ನು ದಿನಾಂಕ: 18–01–2024 ರಿಂದ ದಿನಾಂಕ: 16–02–2024 ರವರೆಗೆ ಸಲ್ಲಿಸಬಹುದಾಗಿರುತ್ತದೆ.

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
ಸಹಿ/–ಸದಸ್ಯ ಕಾರ್ಯದರ್ಶಿ, ನೇಮಕಾತಿ ಸಮಿತಿ ಹಾಗೂ
ಮುಖ್ಯಕಾರ್ಯನಿರ್ವಹಣಾಧಿಕಾರಿ, ಮಂಡ್ಯ ಡಿಸಿಸಿ ಬ್ಯಾಂಕ್ ನಿ., ಮಂಡ್ಯ

ಪ್ರಜಾವಾಣಿ
ಭೋಜನ ಸಂಭ್ರಮ
ASSOCIATE SPONSORS
Ravi | Greenchef

ಬಾಯಲ್ಲಿ ನೀರೂರಿಸುವ ರುಚಿಕರ ಭಕ್ಷ್ಯಗಳು!
ಕೋಳಿ ಸಾರು ಮತ್ತು ಮಟನ್ ಬಿರಿಯಾನಿ

ನಮ್ಮ ಆನ್‌ಲೈನ್ ಶೋ – ಭೋಜನ ಸಂಭ್ರಮದಲ್ಲಿ , ಸ್ವಾದಿಷ್ಟ ಅಡುಗೆಗಳ ತಯಾರಿಯಲ್ಲಿ ನೀವೂ ಪಾಲ್ಗೊಳ್ಳಿ. ಪ್ರಸಿದ್ಧ ಶೆಫ್ ದಂಪತಿಗಳು, ಮುರಳಿ ಮತ್ತು ಸುಚಿತ್ರಾ ಅವರು, ರುಚಿಕರವಾದ ಕೋಳಿ ಸಾರು ಮತ್ತು ಮಟನ್ ಬಿರಿಯಾನಿ ತಯಾರಿಸುವುದನ್ನು ತಪ್ಪದೇ ವೀಕ್ಷಿಸಿ.

ವಿಡಿಯೊಗಳನ್ನು ವೀಕ್ಷಿಸಿ ಮತ್ತು ನಿಮ್ಮ ಸ್ವಂತ ಪಾಕವಿಧಾನವನ್ನು pv@prajavani.net ಗೆ ಕಳಿಸಿ.
ನಿಮ್ಮ ಪಾಕವಿಧಾನ ಪ್ರಜಾವಾಣಿಯಲ್ಲಿ ಮುದ್ರಿತವಾಗುವ ಅವಕಾಶ ಪಡೆಯಿರಿ.

ಈ ಕಾರ್ಯಕ್ರಮವನ್ನು ವೀಕ್ಷಿಸಲು bit.ly/bhojanaSambhramaS1
*ಷರತ್ತುಗಳು ಅನ್ವಯ.

ಭಾರತ ತಂಡಕ್ಕೆ ‘ಸೂಪರ್’ ಜಯ

ರೋಹಿತ್ ಶರ್ಮಾ ಶತಕ • ರೋಚಕ ಹಣಾಹಣಿಯಲ್ಲಿ ಮನಗೆದ್ದ ಅಫ್ಗಾನಿಸ್ತಾನ • ಹರಿದ ರನ್ ಹೊಳೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ರನ್‌ಗಳ ಹೊಳೆ ಹರಿಯಿತು. ಎರಡು ಸೂಪರ್ ಓವರ್‌ಗಳ ರೋಚಕ ರಸದೌತಣ ಉಣಬಡಿಸಿದ ಹಣಾಹಣಿಯಲ್ಲಿ ಆತಿಥೇಯ ಭಾರತ ಜಯಿಸಿತು. ಆದರೆ ಕ್ರಿಕೆಟ್ ಲೋಕದ ‘ಚಿಕ್ಕ ವಯಸ್ಸಿನ’ ತಂಡ ಅಫ್ಗಾನಿಸ್ತಾನದ ದಿಟ್ಟ ಹೋರಾಟ ಮನ ಗೆದ್ದಿತು.

ಅಫ್ಗನ್ ತಂಡವು ಭಾರತದ ಎದುರು ಆಡಿದ ಚೊಚ್ಚಲ ಟಿ20 ಸರಣಿ ಇದು. ಇದರಲ್ಲಿ ಆತಿಥೇಯ ಬಳಗವು 3–0ಯಿಂದ ಕ್ಲೀನ್‌ಸ್ವೀಪ್ ಜಯಸಾಧಿಸಿತು. ಮೊದಲೆರಡೂ ಪಂದ್ಯಗಳಲ್ಲಿ ಭಾರತ ಗೆದ್ದಿತ್ತು. ಆದ್ದರಿಂದ ಮೂರನೇ ಮತ್ತು ಕೊನೆಯ ಪಂದ್ಯಕ್ಕೆ ಅಷ್ಟೇನೂ ಮಹತ್ವ ಇರಲಿಲ್ಲ. ಆದರೆ ಅಫ್ಗನ್ ತಂಡದವರ ದಿಟ್ಟ ಹೋರಾಟದಿಂದಾಗಿ ಈ ಪಂದ್ಯವು ಕ್ರಿಕೆಟ್ ಇತಿಹಾಸದ ಪುಟಗಳಲ್ಲಿ ರೋಚಕ ಸೆಣಸಾಟವಾಗಿ ದಾಖಲಾಯಿತು.

ಇನ್ನೊಂದೆಡೆ ಭಾರತ ತಂಡದ ನಾಯಕ ರೋಹಿತ್ ಅವರ ಅಮೋಘ ಆಟದಿಂದಾಗಿ ಗೆಲುವು ಸಾಧ್ಯವಾಯಿತು. ಅಲ್ಲದೇ ಎರಡನೇ ಸೂಪರ್ ಓವರ್‌ನಲ್ಲಿ ರವಿ ಬಿಷ್ಣೋಯಿ ಸ್ಪಿನ್ ಮೋಡಿಯೂ ಜಯಕ್ಕೆ ಪ್ರಮುಖ ಕಾರಣವಾಯಿತು.

ಟಾಸ್ ಗೆದ್ದ ಭಾರತ ತಂಡವು ಬ್ಯಾಟಿಂಗ್ ಮಾಡಿ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 212 ರನ್ ಗಳಿಸಿತು. ರೋಹಿತ್ ಶರ್ಮಾ ಅಜೇಯ ಶತಕ ದಾಖಲಿಸಿದರು. ರಿಂಕು ಸಿಂಗ್ ಅಜೇಯ ಅರ್ಧಶತಕ ಹೊಡೆದರು. ಆದರೆ ದಿಟ್ಟ ತಿರುಗೇಟು ನೀಡಿದ ಅಫ್ಗನ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 212 ರನ್ ಗಳಿಸಿ ಟೈ ಮಾಡಿಕೊಂಡಿತು. ತಂಡದ ಆರಂಭಿಕ ಜೋಡಿ ರೆಹಮಾನುಲ್ಲಾ ಗುರ್ಬಾಜ್ (50 ರನ್) ಮತ್ತು ನಾಯಕ ಇಬ್ರಾಹಿಂ ಝದ್ರಾನ್ (50 ರನ್) ಮೊದಲ ವಿಕೆಟ್‌ಗೆ 93 ರನ್ ಸೇರಿಸಿದರು. ಗುಲ್ಬದೀನ್ ನೈಬ್ ಅಜೇಯ 55 ರನ್ ಗಳಿಸಿದರೆ, ಮೊಹಮ್ಮದ್ ನಬಿ 34 ರನ್ ಗಳಿಸಿದರು. ಇದರಿಂದಾಗಿ ಪಂದ್ಯ ಟೈ ಆಯಿತು.

ನಂತರ ನಡೆದ ಸೂಪರ್ ಓವರ್‌ನಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಅಫ್ಗನ್ ತಂಡವು 16 ರನ್ ಗಳಿಸಿತು. ಆದರೆ ಭಾರತ ತಂಡವೂ 16 ರನ್ ಗಳಿಸಿ ಸಮಬಲ ಸಾಧಿಸಿತು.

ಇದರಿಂದಾಗಿ ಎರಡನೇ ಸೂಪರ್ ಓವರ್ ಘೋಷಿಸಲಾಯಿತು. ಅದರಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು 2 ವಿಕೆಟ್‌ಗಳಿಗೆ 11 ರನ್ ಗಳಿಸಿತು. ಗುರಿ ಬೆನ್ನತ್ತಿದ ಅಫ್ಗನ್ ತಂಡಕ್ಕೆ ಸ್ಪಿನ್ನರ್ ರವಿ ಕಡಿವಾಣ ಹಾಕಿದರು. ಮೊದಲ ಎಸೆತದಲ್ಲಿ ಮೊಹಮ್ಮದ್ ನಬಿ ಮತ್ತು ಮೂರನೇ ಎಸೆತದಲ್ಲಿ ಗುರ್ಬಾಜ್ ವಿಕೆಟ್‌ಗಳನ್ನು ಗಳಿಸಿದರು.

ಪಂದ್ಯದಲ್ಲಿ ಒಟ್ಟು 468 ರನ್‌ಗಳು (ಸೂಪರ್ ಓವರ್‌ಗಳು ಸೇರಿ) ದಾಖಲಾದವು.

22 ರಿಂದ 212 ರನ್: ಭಾರತ ತಂಡವು 22 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತು. ಅಫ್ಗನ್ ಬೌಲರ್ ಫರೀದ್ ಅಹಮದ್ (20ಕ್ಕೆ3) ಅವರ ಬೌಲಿಂಗ್ ಮುಂದೆ ಅಗ್ರಕ್ರಮಾಂಕ ಕುಸಿಯಿತು. ಆಗಲೂ ಅಫ್ಗನ್ ಬಳಗದಲ್ಲಿ ಗೆಲುವಿನ ಆಸೆ ಚಿಗುರೊಡೆದಿತ್ತು.

ಆದರೆ ಈ ಸಂದರ್ಭದಲ್ಲಿ ಕ್ರೀಸ್‌ನಲ್ಲಿದ್ದ ನಾಯಕ ರೋಹಿತ್ ಅವರೊಂದಿಗೆ ಸೇರಿಕೊಂಡ ರಿಂಕು ಸಿಂಗ್ ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 190 ರನ್ ಗಳಿಸಿದರು. ರೋಹಿತ್ (ಅಜೇಯ 121; 69ಎ, 4X11, 6X8) ಟಿ20 ಕ್ರಿಕೆಟ್ ಮಾದರಿಯಲ್ಲಿ ಐದು ವರ್ಷಗಳ ನಂತರ ತಮ್ಮ ಖಾತೆಗೆ ಶತಕ ಸೇರಿಸಿಕೊಂಡರು. ಇದು ಅವರಿಗೆ ಐದನೇ ಶತಕ. ಇದರೊಂದಿಗೆ ಚುಟುಕು ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಶತಕ ಗಳಿಸಿದ ಸಾಧನೆ ಮಾಡಿದರು. ಗ್ಲೆನ್ ಮ್ಯಾಕ್ಸ್‌ವೆಲ್ (4) ಮತ್ತು ಸೂರ್ಯಕುಮಾರ್ ಯಾದವ್ (4) ಅವರನ್ನು ಹಿಂದಿಕ್ಕಿದರು. ಸರಣಿಯ ಮೊದಲೆರಡೂ ಪಂದ್ಯಗಳಲ್ಲಿ ರೋಹಿತ್ ಸೊನ್ನೆ ಸುತ್ತಿದ್ದರು. ಇಲ್ಲಿ ತಾವೆದುರಿಸಿದ ಏಳನೇ ಎಸೆತದಲ್ಲಿ ಅವರು ಖಾತೆ ತೆರೆದರು.

ಮೊದಲ ಸೂಪರ್ ಓವರ್‌ನಲ್ಲಿ ರೋಹಿತ್ 13 ಮತ್ತು ಎರಡನೇಯದ್ದರಲ್ಲಿ 11 ರನ್ ಹೊಡೆದರು.

ಇನಿಂಗ್ಸ್‌ನ ಮೊದಲ ಹತ್ತು ಓವರ್‌ಗಳಲ್ಲಿ ಭಾರತ ತಂಡವು ನಾಲ್ಕು ವಿಕೆಟ್‌ಗಳಿಗೆ 61 ರನ್ ಮಾತ್ರ ಗಳಿಸಿತ್ತು. ನಂತರದ ಹತ್ತು ಓವರ್‌ಗಳಲ್ಲಿ ರೋಹಿತ್ ಮತ್ತು ರಿಂಕು ರನ್ ಹೊಳೆ ಹರಿಸಿದರು. ಅದರಲ್ಲಿ ರಿಂಕು ಪಾಲು 69 ರನ್‌ಗಳು. ಅದರಲ್ಲೂ ಕೊನೆಯ ಓವರ್‌ನಲ್ಲಿ 36 ರನ್‌ಗಳು ಹರಿದುಬಂದವು. ಈ ಓವರ್‌ನಲ್ಲಿ ಒಟ್ಟು ಐದು ಸಿಕ್ಸರ್‌ಗಳು ಸಿಡಿದವು. ಇದರಲ್ಲಿ ಒಂದು ಫ್ರೀಹಿಟ್ ಕೂಡ ಇತ್ತು. ಕ್ರೀಡಾಂಗಣದಲ್ಲಿ 23 ಸಾವಿರ ಜನರು ಸೇರಿದ್ದರು

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 212 (ರೋಹಿತ್ ಶರ್ಮಾ ಔಟಾಗದೆ 121, ರಿಂಕು ಸಿಂಗ್ ಔಟಾಗದೆ 69, ಫರೀದ್ ಅಹಮದ್ 20ಕ್ಕೆ3) ಅಫ್ಗಾನಿಸ್ತಾನ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 212 (ರೆಹಮಾನುಲ್ಲಾ ಗುರ್ಬಾಜ್ 50, ಇಬ್ರಾಹಿಂ ಝದ್ರಾನ್ 50, ಗುಲ್ಬದೀನ್ ನೈಬ್ ಔಟಾಗದೆ 55, ಮೊಹಮ್ಮದ್ ನಬಿ 34, ವಾಷಿಂಗ್ಟನ್ ಸುಂದರ್ 18ಕ್ಕೆ3)

ಫಲಿತಾಂಶ: ಭಾರತಕ್ಕೆ ಸೂಪರ್ ಓವರ್ ಜಯ. 3–0ಯಿಂದ ಸರಣಿ ಜಯ. **ಪಂದ್ಯಶ್ರೇಷ್ಠ:** ರೋಹಿತ್ ಶರ್ಮಾ. ಸರಣಿ ಶ್ರೇಷ್ಠ: ಶಿವಂ ದುಬೆ

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಶತಕ ಬಾರಿಸಿ ಸಂಭ್ರಮಿಸಿದರು (ಎಡ ಚಿತ್ರ). ರಿಂಕು ಸಿಂಗ್ ಚೆಂಡನ್ನು ಬೌಂಡರಿಗೆ ಅಟ್ಟಿದರು. –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಭಾರತದ ಆಟಗಾರರ ಗರಿಷ್ಠ ಜೊತೆಯಾಟ (ಟಿ20)

ರನ್	ಆಟಗಾರ	ವಿರುದ್ಧ	ಸ್ಥಳ	ವರ್ಷ
190*	ರೋಹಿತ್ ಶರ್ಮಾ–ರಿಂಕುಸಿಂಗ್	ಅಫ್ಗಾನಿಸ್ತಾನ	ಬೆಂಗಳೂರು	2024
176	ಸಂಜು ಸ್ಯಾಮ್ಸನ್–ದೀಪಕ್ ಹೂಡಾ	ಐರ್ಲೆಂಡ್	ಡಬ್ಲಿನ್	2022
165	ರೋಹಿತ್ ಶರ್ಮಾ–ಕೆ.ಎಲ್. ರಾಹುಲ್	ಶ್ರೀಲಂಕಾ	ಇಂದೋರ್	2017
165	ಯಶಸ್ವಿ ಜೈಸ್ವಾಲ್–ಶುಭಮನ್ ಗಿಲ್	ವಿಂಡೀಸ್	ಲಾಡರ್‌ಹಿಲ್	2023

ಒಂದೇ ಓವರ್‌ನಲ್ಲಿ ದಾಖಲಾದ ಗರಿಷ್ಠ ರನ್ (ಟಿ20)

ರನ್	ಆಟಗಾರ	ಬೌಲರ್	ಸ್ಥಳ	ವರ್ಷ
36	ಯುವರಾಜ್ ಸಿಂಗ್ (ಭಾರತ)	ಸ್ಟುವರ್ಟ್ ಬ್ರಾಡ್ (ಇಂಗ್ಲೆಂಡ್)	ಡರ್ಬನ್	2007
36	ಕೀರನ್ ಪೊಲಾರ್ಡ್ (ವಿಂಡೀಸ್)	ಅಖಿಲ ಧನಂಜಯ (ಶ್ರೀಲಂಕಾ)	ಕೂಲಿಜ್	2021
36	ರೋಹಿತ್ ಶರ್ಮಾ–ರಿಂಕುಸಿಂಗ್ (ಭಾರತ)	ಕರೀಂ ಜನತ್ (ಅಫ್ಗಾನಿಸ್ತಾನ)	ಬೆಂಗಳೂರು	2024

ಕೊಹ್ಲಿ ಗೋಲ್ಡನ್ ಡಕ್; ಕ್ರೀಡಾಂಗಣ ಸ್ತಬ್ಧ

ಎಡಗೈ ವೇಗಿ ಫರೀದ್ ಅಹಮದ್ ಹಾಕಿದ ಮೂರನೇ ಓವರ್‌ನಲ್ಲಿ ಯಶಸ್ವಿ ಜೈಸ್ವಾಲ್ ಅವರು ಮೊಹಮ್ಮದ್ ನಬಿ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು. ಆಗ ಕ್ರೀಡಾಂಗಣದಲ್ಲಿದ್ದ ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಭ್ರಮ ಅಲೆಯಾಯಿತು. ಏಕೆಂದರೆ ಅಭಿಮಾನಿಗಳ ನೆಚ್ಚಿನ ವಿರಾಟ್ ಕೊಹ್ಲಿ ಬ್ಯಾಟಿಂಗ್‌ಗೆ ಬಂದರು.

ಇಡೀ ಕ್ರೀಡಾಂಗಣದಲ್ಲಿ ಕೇಕೆ, ಚಪ್ಪಾಳೆಗಳ ಸದ್ದಿನಿಂದ ತುಂಬಿತು. ಕೊಹ್ಲಿ.. ಕೊಹ್ಲಿ.. ಕೂಗು ಪ್ರತಿಧ್ವನಿಸಿತು. ಆದರೆ ಎದುರಿಸಿದ ಮೊದಲ ಎಸೆತದಲ್ಲಿ ನೇರವಾಗಿ ಸಿಕ್ಸರ್ ಎತ್ತುವ ವಿರಾಟ್ ಪ್ರಯತ್ನ ಫಲಿಸಲಿಲ್ಲ. ಮಿಡ್‌ಆಫ್‌ನಲ್ಲಿದ್ದ ನಬಿ ಓಡಿ ಬಂದು ಕ್ಯಾಚ್ ಪಡೆದರು. ಚಿನ್ನಸ್ವಾಮಿ ಕ್ರೀಡಾಂಗಣ ಸ್ತಬ್ಧವಾಯಿತು. ಕೊಹ್ಲಿ ಬ್ಯಾಟಿಂಗ್‌ನಲ್ಲಿ ವಿಫಲವಾದರೂ ಫೀಲ್ಡಿಂಗ್‌ನಲ್ಲಿ ಮಿಂಚಿದರು.

ಇಂಡಿಯಾ ಓಪನ್: ಕಿದಂಬಿ ಶ್ರೀಕಾಂತ್ ನಿರ್ಗಮನ

ಸಾತ್ವಿಕ್– ಚಿರಾಗ್ ಎರಡನೇ ಸುತ್ತಿಗೆ

ನವದೆಹಲಿ (ಪಿಟಿಐ): ಭಾರತದ ತಾರೆಗಳಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಬುಧವಾರ ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಶುಭಾರಂಭ ಮಾಡಿದರು. ಆದರೆ, ಸಿಂಗಲ್ಸ್‌ನಲ್ಲಿ ಕಿದಂಬಿ ಶ್ರೀಕಾಂತ್ ಮೊದಲ ಸುತ್ತಿನಲ್ಲಿ ಮುಗ್ಗರಿಸಿದರು.

ವಿಶ್ವದ ಎರಡನೇ ಕ್ರಮಾಂಕದ ಭಾರತದ ಜೋಡಿ 21-15, 19-21, 21-16ರಿಂದ ಚೀನಾ ತೈಪೆಯ ಫಾಂಗ್-ಚಿಹ್ ಲೀ ಮತ್ತು ಫಾಂಗ್-ಜೆನ್ ಲೀ ಅವರನ್ನು ಹಿಮ್ಮೆಟ್ಟಿಸಿತು.

ಶ್ರೀಕಾಂತ್‌ಗೆ ನಿರಾಸೆ: ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್ 22-24, 13-21ರಿಂದ ವಿಶ್ವದ 18ನೇ ಕ್ರಮಾಂಕದ ಲೀ ಚೆಯುಕ್ ಯಿಯು (ಹಾಂಗ್‌ಕಾಂಗ್) ವಿರುದ್ಧ ಪರಾಭವಗೊಂಡರು. ವಿಶ್ವ ಕ್ರಮಾಂಕದಲ್ಲಿ 20ನೇ ಸ್ಥಾನದಲ್ಲಿರುವ ಶ್ರೀಕಾಂತ್ ಅವರಿಗೆ ಈ ಸೋಲಿನಿಂದಾಗಿ ಪ್ಯಾರಿಸ್ ಒಲಿಂಪಿಕ್ಸ್ ಅರ್ಹತೆಯ ಹಾದಿ ಮತ್ತಷ್ಟು ಜಟಿಲವಾಗಿದೆ.

ಮಹಿಳೆಯರ ಡಬಲ್ಸ್‌ನಲ್ಲಿ ವಿಶ್ವದ 20ನೇ ಕ್ರಮಾಂಕದ ತನಿಶಾ ಕ್ರಾಸ್ಟೊ- ಅಶ್ವಿನಿ ಪೊನ್ನಪ್ಪ ಜೋಡಿ ಮೊದಲ ಸುತ್ತಿನಲ್ಲಿ 5-21, 21-18, 11-21ರಿಂದ ಥಾಯ್ಲೆಂಡ್‌ನ ಜೊಂಗ್‌ಕೋಲ್ಫಾನ್ ಕಿಟಿತಾರಾಕುಲ್ ಮತ್ತು ರವಿಂಡ ಪ್ರಜೊಂಗ್‌ಜೈ ಅವರಿಗೆ ಮಣಿಯಿತು.

ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ

ಐಸಿಸಿ ರ್‍ಯಾಂಕಿಂಗ್: ಅಕ್ಷರ್, ಜೈಸ್ವಾಲ್‌ಗೆ ಬಡ್ತಿ

ದುಬೈ (ಪಿಟಿಐ): ಭಾರತದ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಮತ್ತು ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರು ಐಸಿಸಿ ಪುರುಷರ ಟಿ20 ರ್‍ಯಾಂಕಿಂಗ್‌ನಲ್ಲಿ ಬಡ್ತಿ ಪಡೆದು, ಅಗ್ರ 10 ಆಟಗಾರರಲ್ಲಿ ಸ್ಥಾನ ಪಡೆದಿದ್ದಾರೆ.

ಬೌಲಿಂಗ್‌ನಲ್ಲಿ ಅಕ್ಷರ್ 5ನೇ ಸ್ಥಾನಕ್ಕೆ ಏರಿದ್ದು, ಬ್ಯಾಟಿಂಗ್‌ನಲ್ಲಿ ಜೈಸ್ವಾಲ್ 6ನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ. ಇದು ಇವರಿಬ್ಬರ ವೃತ್ತಿಜೀವನದ ಶ್ರೇಷ್ಠ ಸಾಧನೆಯಾಗಿದೆ. ಅಫ್ಗಾನಿಸ್ತಾನದ ವಿರುದ್ಧ ನಡೆಯುತ್ತಿರುವ ಟಿ20 ಸರಣಿಯ ಮೊದಲೆರಡು ಪಂದ್ಯಗಳಲ್ಲಿ ಇವರು ಉತ್ತಮ ಪ್ರದರ್ಶನ ನೀಡಿದ್ದರು.

ನ್ಯೂಜಿಲೆಂಡ್ ವಿರುದ್ಧ ಸತತ ಎರಡು ಅರ್ಧಶತಕ ಗಳಿಸಿದ ಪಾಕಿಸ್ತಾನದ ಸ್ಟಾರ್ ಬ್ಯಾಟರ್ ಬಾಬರ್ ಅಜಂ ಒಂದು ಸ್ಥಾನ ಮೇಲೇರಿ ನಾಲ್ಕನೇ ಸ್ಥಾನ ಪಡೆದಿದ್ದಾರೆ.

ಭಾರತದ ಸೂರ್ಯಕುಮಾರ್ ಯಾದವ್ ಬ್ಯಾಟಿಂಗ್‌ನಲ್ಲಿ ಅಗ್ರಸ್ಥಾನದಲ್ಲಿದ್ದರೆ, ಋತುರಾಜ್ ಗಾಯಕವಾಡ್ 9ನೇ ಸ್ಥಾನದಲ್ಲಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಭಾರತದ ರವಿ ಬಿಷ್ಣೋಯಿ 6ನೇ ಸ್ಥಾನ ಪಡೆದಿದ್ದಾರೆ.

ಯಶಸ್ವಿ ಜೈಸ್ವಾಲ್

ಅಕ್ಷರ್ ಪಟೇಲ್

‘ಪ್ರಗ್ಗು’ ದೇಶದ ಅಗ್ರಮಾನ್ಯ ಆಟಗಾರ

ವಿಜ್ಕ್ ಆನ್ ಝೀ (ನೆದರ್ಲೆಂಡ್ಸ್): ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ ಅವರನ್ನು ಟಾಟಾ ಸ್ಟೀಲ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಸೋಲಿಸಿದ ಭಾರತದ ಯುವ ತಾರೆ ಆರ್.ಪ್ರಜ್ಞಾನಂದ ಅವರು ರ್‍ಯಾಂಕಿಂಗ್‌ನಲ್ಲಿ ವಿಶ್ವನಾಥನ್ ಆನಂದ್ ಅವರನ್ನು ಹಿಂದೆಹಾಕಿ ಭಾರತದ ಅಗ್ರ ಕ್ರಮಾಂಕದ ಆಟಗಾರ ಗೌರವಕ್ಕೆ ಪಾತ್ರರಾದರು.

ಮಂಗಳವಾರ ತಡರಾತ್ರಿ ನಡೆದ ಪಂದ್ಯದಲ್ಲಿ 18 ವರ್ಷದ ‘ಪ್ರಗ್ಗು’, ಚೀನಾದ ಆಟಗಾರನನ್ನು ಸೋಲಿಸಿದ ನಂತರ ಅವರ ರೇಟಿಂಗ್ 2748.3ಕ್ಕೆ ಏರಿತು. ಆನಂದ್ ಅವರ ರೇಟಿಂಗ್ 2748 ಇದೆ. ವಿಶ್ವ ಚೆಸ್ ಸಂಸ್ಥೆ (ಫಿಡೆ) ಪ್ರತಿ ತಿಂಗಳ ಆರಂಭದಲ್ಲಿ ಪರಿಷ್ಕೃತ ರೇಟಿಂಗ್ ಪ್ರಕಟಿಸುತ್ತದೆ.

ಕಪ್ಪು ಕಾಯಿಗಳಲ್ಲಿ ಆಡಿ 62 ನಡೆಗಳಲ್ಲಿ ಗೆದ್ದ ಪ್ರಜ್ಞಾನಂದ, ಕ್ಲಾಸಿಕಲ್ ಮಾದರಿಯಲ್ಲಿ ವಿಶ್ವ ಚಾಂಪಿಯನ್ ಆಟಗಾರನನ್ನು ಸೋಲಿಸಿದ ಭಾರತದ ಎರಡನೇ ಆಟಗಾರ ಎನಿಸಿದರು. ಆನಂದ್ ಮೊದಲಿಗರು. ಪ್ರಜ್ಞಾನಂದ ಕಳೆದ ವರ್ಷದ ಟೂರ್ನಿಯಲ್ಲೂ ಲಿರೆನ್ ವಿರುದ್ಧ ಜಯಗಳಿಸಿದ್ದರು.

ಪ್ರಸ್ತುತ ಟಾಟಾ ಸ್ಟೀಲ್ ಟೂರ್ನಿಯಲ್ಲಿ ಅವರು 2.5 ಪಾಯಿಂಟ್ಸ್ ಸಂಗ್ರಹಿಸಿ ಮೂರನೇ ಸ್ಥಾನದಲ್ಲಿದ್ದಾರೆ.

ಭಾರತದ ಡಿ.ಗುಕೇಶ್ ಅವರನ್ನು ಸೋಲಿಸಿದ ಡಚ್ ಆಟಗಾರ ಅನಿಶ್ ಗಿರಿ 3.5 ಪಾಯಿಂಟ್ಸ್ ಪಡೆದು ಮೊದಲ ಸ್ಥಾನದಲ್ಲಿದ್ದಾರೆ. ಅಲಿರೇಝಾ ಫಿರೋಜಾ (3) ಎರಡನೆ ಸ್ಥಾನದಲ್ಲಿದ್ದಾರೆ.

ವಿದಿತ್ ಗುಜರಾತಿ ನಾಲ್ಕು ಸುತ್ತುಗಳಿಂದ ಎರಡು ಪಾಯಿಂಟ್ಸ್ ಕಲೆಹಾಕಿದ್ದಾರೆ.

‘ಇದು 13 ಸುತ್ತುಗಳ ಕಠಿಣ ಟೂರ್ನಿ. ನನ್ನ ಉತ್ತಮ ಆಟ ನೀಡುವ ಗುರಿಹೊಂದಿದ್ದೇನೆ’ ಎಂದು ಪ್ರಜ್ಞಾನಂದ ಹೇಳಿದರು.

ಪ್ರಜ್ಞಾನಂದ

ಫುಟ್‌ಬಾಲ್: ಎಫ್‌ಸಿ ಗೋವಾಕ್ಕೆ ಮಣಿದ ಬಿಎಫ್‌ಸಿ

ಭುವನೇಶ್ವರ (ಪಿಟಿಐ): ಇಂಜುರಿ ಅವಧಿಯಲ್ಲಿ (90 + 4) ಬ್ರೈಸನ್ ಫೆರ್ನಾಂಡಿಸ್ ಗಳಿಸಿದ ಗೋಲಿನಿಂದ ಎಫ್.ಸಿ. ಗೋವಾ ತಂಡ ಕಳಿಂಗ ಸೂಪರ್ ಕಪ್ ಫುಟ್‌ಬಾಲ್ ಟೂರ್ನಿ ‘ಡಿ’ ಗುಂಪಿನ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ತಂಡವನ್ನು ಬುಧವಾರ 1–0 ಗೋಲಿನಿಂದ ಸೋಲಿಸಿತು.

ಇಂಜುರಿ ಅವಧಿಯ ಕೊನೆಯ ಕ್ಷಣದಲ್ಲಿ ಮುಹಮ್ಮದ್ ನೆಮಿಲ್ ಅವರ ಕ್ರಾಸ್‌ನಲ್ಲಿ ಫೆರ್ನಾಂಡಿಸ್ ಚೆಂಡನ್ನು ಗೋಲಿನೊಳಕ್ಕೆ ಹೆಡ್ ಮಾಡಿದರು.

ಇದು ಗೋವಾ ತಂಡಕ್ಕೆ ಸತತ ಎರಡನೇ ಜಯದೊಡನೆ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿತು.
ಎರಡನೇ ಸೋಲಿನೊಡನೆ ಬೆಂಗಳೂರು ಎಫ್‌ಸಿ ಸವಾಲು ಈ ಟೂರ್ನಿಯಲ್ಲಿ ಕೊನೆಗೊಂಡಿತು.

ಪ್ಯಾಟ್, ಜೋಷ್ ದಾಳಿಗೆ ಕುಸಿದ ವಿಂಡೀಸ್

ಅಡಿಲೇಡ್ (ಎಪಿ): ತಲಾ ನಾಲ್ಕು ವಿಕೆಟ್ ಗಳಿಸಿದ ನಾಯಕ ಪ್ಯಾಟ್ ಕಮಿನ್ಸ್ (44ಕ್ಕೆ4) ಮತ್ತು ಜೋಷ್ ಹ್ಯಾಜಲ್‌ವುಡ್ (41ಕ್ಕೆ4) ದಾಳಿಯ ಮುಂದೆ ಬುಧವಾರ ಆರಂಭವಾದ ಮೊದಲ ಟೆಸ್ಟ್ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡವು 188 ರನ್‌ಗಳ ಸಾಧಾರಣ ಮೊತ್ತಕ್ಕೆ ಕುಸಿಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನ್ನಿಂಗ್ಸ್: ವೆಸ್ಟ್ ಇಂಡೀಸ್: 62.1 ಓವರ್‌ಗಳಲ್ಲಿ 188. ಆಸ್ಟ್ರೇಲಿಯಾ: 21 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 59.

ಕೀಟನ್ ಶತಕ, ಬೃಹತ್ ಮೊತ್ತದತ್ತ ಲಯನ್ಸ್

ಅಹಮದಾಬಾದ್ (ಪಿಟಿಐ): ಆರಂಭಿಕ ಆಟಗಾರ ಕೀಟನ್ ಜೆನ್ನಿಂಗ್ಸ್ (154) ಅಮೋಘ ಶತಕದ ನೆರವಿನಿಂದ ಇಂಗ್ಲೆಂಡ್ ಲಯನ್ಸ್ ತಂಡವು ಇಲ್ಲಿ ಬುಧವಾರ ಆರಂಭವಾದ ಭಾರತ ‘ಎ’ ವಿರುದ್ಧದ ನಾಲ್ಕು ದಿನಗಳ ಮೊದಲ ‘ಟೆಸ್ಟ್’ ಪಂದ್ಯದ ಒಂದನೇ ಇನಿಂಗ್ಸ್‌ನಲ್ಲಿ ಮೂರು ವಿಕೆಟ್‌ಗೆ 382 ರನ್ ಗಳಿಸಿದೆ.

ಭಾರತಕ್ಕೆ ಇಂದು ಉಜ್ಬೇಕ್ ಸವಾಲು

ಅಲ್ ರಯಾನ್ (ಪಿಟಿಐ): ಆಸ್ಟ್ರೇಲಿಯಾಕ್ಕೆ ಮೊದಲ ಪಂದ್ಯದಲ್ಲಿ ಮಣಿಯುವ ಮುನ್ನ ಕೆಚ್ಚೆದೆಯ ಪ್ರದರ್ಶನ ನೀಡಿದ್ದ ಭಾರತ ತಂಡ, ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ತನ್ನ ಎರಡನೇ ಲೀಗ್ ಪಂದ್ಯದಲ್ಲಿ ಉಜ್ಬೇಕಿಸ್ತಾನ ತಂಡವನ್ನು ಗುರುವಾರ ಎದುರಿಸಲಿದೆ.

ಪ್ರಶಸ್ತಿಗೆ ನೆಚ್ಚಿನ ತಂಡವಾದ ಆಸ್ಟ್ರೇಲಿಯಾಕ್ಕೆ ಜನವರಿ 13ರಂದು ನಡೆದ ಪಂದ್ಯದ ಮೊದಲ 50 ನಿಮಿಷ ಭಾರತ ಗೋಲು ನಿರಾಕರಿಸಿತ್ತು. ಆದರೆ ನಂತರ 0–2ರಿಂದ ಸೋತಿತ್ತು. ಉಜ್ಬೇಕಿಸ್ತಾನ ಮೊದಲ ಪಂದ್ಯದಲ್ಲಿ ಸಿರಿಯಾ ವಿರುದ್ಧ ಗೋಲಿಲ್ಲದೇ ಡ್ರಾ ಮಾಡಿಕೊಂಡಿತ್ತು.

ಉಜ್ಬೇಕ್ ತಂಡ ವಿಶ್ವ ಕ್ರಮಾಂಕದಲ್ಲಿ 68ನೇ ಸ್ಥಾನದಲ್ಲಿದೆ. ಭಾರತ 102ನೇ ಸ್ಥಾನದಲ್ಲಿದೆ.

ಚೀನಾ ಇನ್ನೊಂದು ಪಂದ್ಯದಲ್ಲಿ ಲೆಬನಾನ್ ವಿರುದ್ಧ ಗೋಲಿಲ್ಲದೇ ಡ್ರಾ ಮಾಡಿಕೊಂಡು ಅಪಾಯಕ್ಕೆ ಸಿಲುಕಿದೆ.

ಕ್ರಿಕೆಟ್: ಕರ್ನಾಟಕಕ್ಕೆ ಸುಲಭ ಜಯ

ಕಟಕ್: ಮಿಥಿಲಾ ವಿನೋದ್, ನಿಕಿ ಪ್ರಸಾದ್ ಮತ್ತು ವೃಂದಾ ದಿನೇಶ್ ಅವರ ಅರ್ಧಶತಕಗಳ ನೆರವಿನಿಂದ ಕರ್ನಾಟಕದ ವನಿತೆಯರ ತಂಡವು ಬಿಸಿಸಿಐ ಸೀನಿಯರ್ ಮಹಿಳೆಯರ ಏಕದಿನ ಕ್ರಿಕೆಟ್ ಟ್ರೋಫಿ ಟೂರ್ನಿಯಲ್ಲಿ ಬಿಹಾರ ತಂಡವನ್ನು ಮಣಿಸಿತು.

ಎಂಜಿಎಂ ಸ್ಕೂಲ್ ಅಫ್ ಸ್ಪೋರ್ಟ್ಸ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡವು 153 ರನ್‌ಗಳ ಸುಲಭ ಜಯ ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗೆ 259 ರನ್ ಗಳಿಸಿತು. ನಿಕಿ ಪ್ರಸಾದ್ (58; 93ಎ, 4x1), ವೃಂದಾ ದಿನೇಶ್ (52; 68ಎ, 4x6) ಮತ್ತು ಮಿಥಿಲಾ ವಿನೋದ್ (ಔಟಾಗದೆ 61; 34ಎ, 4x9, 6x1) ತಂಡಕ್ಕೆ ಉಪಯುಕ್ತ ಕಾಣಿಕೆ ನೀಡಿದರು. ಬಿಹಾರ ತಂಡದ ಪಿ. ಪ್ರಿಯಾ ಮತ್ತು ರಚನಾ ಸಿಂಗ್ ಕ್ರಮವಾಗಿ ನಾಲ್ಕು ಮತ್ತು ಎರಡು ವಿಕೆಟ್ ಪಡೆದರು.

ಗುರಿಯನ್ನು ಬೆನ್ನಟ್ಟಿದ ಬಿಹಾರ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗೆ 106 ರನ್ ಗಳಿಸಲಷ್ಟೇ ಶಕ್ತವಾಯಿತು.